ಶನಿವಾರ, ಆಗಸ್ಟ್ 27, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೋರಾ ನೋಟ

ಮುಂಬೈನಲ್ಲಿ ಶುಕ್ರವಾರ ನಡೆದ 'ಝಲಕ್ ದಿಖಲಾ ಜಾ' ಟಿ.ವಿ ರಿಯಾಲಿಟಿ ಷೋನ ಹತ್ತನೇ ಆವೃತ್ತಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ನೋರಾ ಫತೇಹಿ ಪಾಲ್ಗೊಂಡಿದ್ದರು

ಚಾಮರಾಜಪೇಟೆ ಈದ್ಗಾ ಮೈದಾನದಲ್ಲಿ ಕಾರ್ಯಕ್ರಮ ● ಹೈಕೋರ್ಟ್ ವಿಭಾಗೀಯ ಪೀಠದ ಆದೇಶ

ಗಣೇಶ ಪ್ರತಿಷ್ಠಾಪನೆ: ಸರ್ಕಾರಕ್ಕೆ ಅಧಿಕಾರ

ಪ್ರಜಾವಾಣಿ ವಾರ್ತೆ

ಸಾಂದರ್ಭಿಕ ಚಿತ್ರ

ಬೆಂಗಳೂರು: ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲು ಬಯಸುವವರಿಗೆ ಅನುಮತಿ ನೀಡುವ ಸಂಪೂರ್ಣ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ನೀಡಿ ಹೈಕೋರ್ಟ್ ಹಂಗಾಮಿ ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಆದೇಶಿಸಿದೆ.

ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ರಾಜ್ಯ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸಲ್ಲಿಸಿದ ಮೇಲ್ಮನವಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ಮತ್ತು ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

‘ಏಕಸದಸ್ಯ ನ್ಯಾಯಪೀಠ ನೀಡಿರುವ ನಿರ್ದೇಶನಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಆದಾಗ್ಯೂ, ಈದ್ಗಾ ಮೈದಾನದಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ಅನುಮತಿ ಕೋರಿ ಬೆಂಗಳೂರು ಜಿಲ್ಲಾಧಿಕಾರಿ ಸ್ವೀಕರಿಸಿರುವ ಮನವಿ ಪತ್ರಗಳನ್ನು ಇದೇ 31ರಿಂದ ಸೀಮಿತ ಅವಧಿಗೆ ಪರಿಗಣಿಸಿ ಸರ್ಕಾರ ಸೂಕ್ತ ಆದೇಶ ಹೊರಡಿಸಬಹುದು’ ಎಂದು ವಿಭಾಗೀಯ ನ್ಯಾಯಪೀಠ ಸ್ಪಷ್ಟಪಡಿಸಿದೆ.

‘ವಿಭಾಗೀಯ ನ್ಯಾಯಪೀಠ ವ್ಯಕ್ತಪಡಿಸುತ್ತಿರುವ ಈ ಆದೇಶದ ಅಭಿಪ್ರಾಯಗಳು ಕೇವಲ ಮಧ್ಯಂತರ ಪರಿಹಾರ ಕುರಿತ ಮನವಿಗೆ ಸಂಬಂಧಿಸಿದೆಯೇ ಹೊರತಾಗಿ ಏಕಸದಸ್ಯ ನ್ಯಾಯಪೀಠದ ಮುಂದಿರುವ ರಿಟ್ ಅರ್ಜಿ ಅಥವಾ ಈ ಮೇಲ್ಮನವಿಯ ಅಂಶಗಳಿಗೆ ಅನ್ವಯಿಸುವುದಿಲ್ಲ’ ಎಂದು ನ್ಯಾಯಪೀಠ ಹೇಳಿದೆ.

ಮೇಲ್ಮನವಿ ಯಾಕೆ?: 'ಮೈದಾನದ ಮಾಲೀಕತ್ವ ಕಂದಾಯ ಇಲಾಖೆಗೆ ಸೇರಿದೆ‘ ಎಂಬ ಸರ್ಕಾರದ ಆದೇಶವನ್ನು ಪ್ರಶ್ನಿಸಿ ವಕ್ಫ್ ಮಂಡಳಿಯ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಮತ್ತು ಬೆಂಗಳೂರು ಜಿಲ್ಲೆ ವಕ್ಫ್ ಸಲಹಾ ಸಮಿತಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ಏಕಸದಸ್ಯ ನ್ಯಾಯಪೀಠ, ಗುರುವಾರವಷ್ಟೇ (ಆ.25) ವಿಚಾರಣೆ ನಡೆಸಿ ಮಧ್ಯಂತರ ಆದೇಶ ಹೊರಡಿಸಿತ್ತು.

‘ಈದ್ಗಾ ಮೈದಾನದಲ್ಲಿ ಮುಸ್ಲಿಂ ಸಮುದಾಯದವರು ರಮ್ಜಾನ್ ಮತ್ತು ಬಕ್ರೀದ್ ದಿನದಂದು ಮೈದಾನದಲ್ಲಿ ಪಾರ್ಥನೆ ಸಲ್ಲಿಸಬಹುದು. ಈ ಎರಡು ದಿನಗಳನ್ನು ಹೊರತು ಪಡಿಸಿ ಬೇರಾವುದೇ ದಿನ ಪ್ರಾರ್ಥನೆಗೆ ಅವಕಾಶ ಇರುವುದಿಲ್ಲ. ಬಿಬಿಎಂಪಿ ಮತ್ತು ಸರ್ಕಾರ ಮೈದಾನದಲ್ಲಿ ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ ಆಚರಣೆಗೆ ಅನುಮತಿ ನೀಡಬಹುದು, ಮೈದಾನವನ್ನು ಆಟದ ಬಳಕೆಗೆ ಮಾತ್ರವೇ ಸೀಮಿತಗೊಳಿಸಬೇಕು’ ಎಂದು ಏಕಸದಸ್ಯ ನ್ಯಾಯಪೀಠ ನಿರ್ದೇಶಿಸಿತ್ತು.

‘ಬದ್ಧತೆ ಪ್ರದರ್ಶಿಸಿದ ಸರ್ಕಾರ’

‘ಯಥಾಸ್ಥಿತಿ ಕಾಪಾಡಿಕೊಳ್ಳಬೇಕು ಎಂದು ನಿನ್ನೆಯಷ್ಟೇ ಏಕಸದಸ್ಯ ನ್ಯಾಯಪೀಠ ನೀಡಿದ್ದ ಆದೇಶದಿಂದ ನಮಗೆ ಆಘಾತವಾಗಿತ್ತು. ಇವತ್ತು ಸರ್ಕಾರ ಈ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸುವ ಮೂಲಕ ತನ್ನ ಬದ್ಧತೆಯನ್ನು ಪ್ರದರ್ಶಿಸಿದೆ’ ಎಂದು ಚಾಮರಾಜಪೇಟೆ ನಾಗರಿಕರ ಒಕ್ಕೂಟದ ಅಧ್ಯಕ್ಷ ರಾಮೇಗೌಡ ಮತ್ತು ಜಂಟಿ ಕಾರ್ಯದರ್ಶಿ ಜೆ.ಎಸ್.ಶಶಾಂಕ ಹೇಳಿದರು.

‘ವಕ್ಫ್ ಮಂಡಳಿ ಸರ್ಕಾರದ ಅಧೀನದಲ್ಲಿರುವ ಸಂಸ್ಥೆ. ಆದರೆ ಮಂಡಳಿಯೇ ಸರ್ಕಾರದ ಮೇಲೆ ಕೇಸು ಹಾಕಿದೆ. ಆದ್ದರಿಂದ ಸರ್ಕಾರವು ಕೂಡಲೇ ಮಂಡಳಿಯ ಅಧ್ಯಕ್ಷ, ಕಾರ್ಯದರ್ಶಿ ಅಥವಾ ಸಿಇಒ ಅವರನ್ನು ಅಮಾನತು ಮಾಡಬೇಕು’ ಎಂದು ಆಗ್ರಹಿಸಿದರು.

‘ಧಾರ್ಮಿಕ ಸಹಿಷ್ಣುತೆ ಭಾರತದ ಮೂಲ ಲಕ್ಷಣ’

‘ಭಾರತ ಧಾರ್ಮಿಕ, ಭಾಷಾ, ಪ್ರಾದೇಶಿಕ ಮತ್ತು ವಿವಿಧ ವರ್ಗಗಳ ವೈಶಿಷ್ಟ್ಯತೆ ಹೊಂದಿರುವ ದೇಶ. ಧಾರ್ಮಿಕ ಸಹಿಷ್ಣುತೆ ಈ ದೇಶದ ನಾಗರಿಕತೆಯ ಮೂಲ ಲಕ್ಷಣವಾಗಿದೆ. ಭಾರತದ ಸಂವಿಧಾನವೂ ಸಮಾಜದ ವಿವಿಧ ವರ್ಗಗಳ ನಡುವೆ ಸಹೋದರತ್ವವನ್ನೇ ಸಲಹುತ್ತದೆ. ಪ್ರಕರಣದ ವಿಶೇಷ ಅಂಶಗಳನ್ನು ಪರಿಗಣಿಸಿಯೇ ಈ ಹಂತದಲ್ಲಿ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಮಾರ್ಪಾಡು ಮಾಡಲಾಗುತ್ತಿದೆ’ ಎಂದು ಹೈಕೋರ್ಟ್‌ನ ವಿಭಾಗೀಯ ನ್ಯಾಯಪೀಠವು ಹೇಳಿದೆ.

ಕೋರ್ಟ್ ಆದೇಶ ಪಾಲನೆ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆ ಮೈದಾನದ ಮಾಲಿಕತ್ವದ ಕುರಿತು ಹೈಕೋರ್ಟ್ ಮಧ್ಯಂತರ ಆದೇಶ ನೀಡಿದ್ದು, ನ್ಯಾಯಾಲಯದ ಆದೇಶ ಪಾಲಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಚಾಮರಾಜಪೇಟೆಯ ಕನ್ನಡ ಸಾಹಿತ್ಯ ಪರಿಷತ್ ಆವರಣದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಹೈಕೋರ್ಟ್ ವಿಭಾಗೀಯ ಪೀಠದ ಆದೇಶ ಹಿನ್ನೆಲೆಯಲ್ಲಿ ಚಾಮರಾಜಪೇಟೆ ಮೈದಾನದ ಬಗ್ಗೆ ಸರ್ಕಾರ ಸೂಕ್ತ ನಿರ್ಣಯ ಕೈಗೊಳ್ಳಲಿದೆ ಎಂದರು.

‘ನಮ್ಮ ದೇಶ ಸರ್ವಜನಾಂಗದ, ಸರ್ವಧರ್ಮೀಯರು ಇರುವ ಸ್ಥಳ. ಇವೆಲ್ಲ ಅಂಶಗಳ ಬಗ್ಗೆಯೂ ವಿಶ್ಲೇಷಣೆಯಾಗಿದೆ. ನ್ಯಾಯಾಲಯದ ಆದೇಶದ ಪರಿಪಾಲನೆ ಬಗ್ಗೆ ಚರ್ಚಿಸಲು ಶನಿವಾರ ಅಡ್ವೊಕೇಟ್ ಜನರಲ್ ಮತ್ತು ಕಂದಾಯ ಸಚಿವ ಜತೆ ಚರ್ಚಿಸಿ ಮುಂದಿನ ಕ್ರಮಗಳ ಬಗ್ಗೆ ನಿರ್ಣಯ ಕೈಗೊಳ್ಳಲಾಗುವುದು. ಸಮಾಜದಲ್ಲಿ ಶಾಂತಿಯನ್ನು ಕಾಪಾಡುವುದರ ಜೊತೆಗೆ ಎಲ್ಲರ ಮನದಾಳದ ಇಚ್ಛೆಯನ್ನು ಈಡೇರಿಸುವ ಕೆಲಸವನ್ನು ಸರ್ಕಾರ ಮಾಡುತ್ತದೆ’ ಎಂದು ಹೇಳಿದರು.

ಈ ಮೈದಾನದಲ್ಲಿ ಗಣೇಶೋತ್ಸವ ಆಚರಿಸುವ ಸಂಬಂಧ ನಾಗರಿಕರ ಒಕ್ಕೂಟ ಸೇರಿ ಹಲವು ಸಂಘಟನೆಗಳು ಅರ್ಜಿ ಸಲ್ಲಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ‘ನ್ಯಾಯಾಲಯದ ಆದೇಶವನ್ನು ಸಂಪೂರ್ಣವಾಗಿ ಗ್ರಹಿಸಿದ ನಂತರ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು’ ಎಂದರು.

ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ಗಣೇಶೋತ್ಸವ ಆಚರಣೆ ಕುರಿತಂತೆ ಹುಬ್ಬಳ್ಳಿ ನಗರಸಭೆ ಮತ್ತು ಸರ್ವಪಕ್ಷಗಳ ಸಭೆ ನಡೆಸಿ ಇದೇ 29 ರ ಬಳಿಕ ತೀರ್ಮಾನ ತೆಗೆದುಕೊಳ್ಳಲಾಗುವುದು. ಜಮೀನಿನ ಮಾಲೀಕತ್ವ ದೃಷ್ಟಿಯಿಂದ ಈ ವಿಚಾರ ಬೇರೆಯಾಗಿದ್ದು, ಇದಕ್ಕೆ ಸುಪ್ರೀಂಕೋರ್ಟ್‌ನ ಆದೇಶವಿದೆ. ಕಾನೂನು ಮತ್ತು ನ್ಯಾಯಾಲಯದ ಆದೇಶ ಪಾಲನೆ ಮಾಡಲಾಗುವುದು ಎಂದರು.

ವಿಘ್ನ ನಿವಾರಣೆ– ಸಚಿವ ಅಶೋಕ ವಿಶ್ವಾಸ: ‘ಕಾನೂನು– ಸುವ್ಯವಸ್ಥೆ, ನಾಗರಿಕರ ಹಿತಾಸಕ್ತಿ ಕಾಪಾಡುವುದು ಸರ್ಕಾರದ ಕರ್ತವ್ಯ. ಇಲ್ಲಿ ಗಣೇಶೋತ್ಸವ ಆಚರಿಸಲು ಇರುವ ವಿಘ್ನಗಳನ್ನು ನಿವಾರಿಸುವಂತೆ ವಿನಾಯಕನಲ್ಲಿ ಪ್ರಾರ್ಥಿಸುತ್ತೇನೆ’ ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದ್ದಾರೆ.

‘ಈ ಮೈದಾನದಲ್ಲಿ 75 ವರ್ಷಗಳಲ್ಲಿ ಮೊದಲ ಬಾರಿಗೆ ನಮ್ಮ ಸರ್ಕಾರ ಸ್ವಾತಂತ್ರ್ಯೋತ್ಸವ ಆಚರಿಸಿದೆ. ಇದು ಕಂದಾಯ ಇಲಾಖೆ ಜಾಗ ಆಗಿರುವುದರಿಂದ ಇಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆಗೂ ಅನುಮತಿ ನೀಡಲಿದ್ದೇವೆ’ ಎಂದೂ ಅವರು ತಿಳಿಸಿದ್ದಾರೆ.

‘ಧಾರ್ಮಿಕ ಆಚರಣೆ ಭಿಕ್ಷೆಯಲ್ಲ’

‘ಹಿಂದೂಗಳ ಧಾರ್ಮಿಕ ಆಚರಣೆ ಸ್ವಾತಂತ್ರ್ಯ ಯಾರೊಬ್ಬರ ಬಳಿ ಕೇಳಿ ಪಡೆಯುವ ಭಿಕ್ಷೆ ಅಲ್ಲ. ಅದು ಜನ್ಮಸಿದ್ಧ ಹಕ್ಕು ಎನ್ನುವುದನ್ನು ಹೈಕೋರ್ಟ್ ವಿಭಾಗೀಯ ಪೀಠ ತೀರ್ಪು ಎತ್ತಿ ಹಿಡಿದಿದೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

‘ಕಂದಾಯ ಇಲಾಖೆಗೆ ಸೇರಿದ್ದ ಆಟದ ಮೈದಾನದಲ್ಲಿ ಗಣೇಶೋತ್ಸವ ನಡೆಸಲು ಸಮಿತಿಗಳಿಗೆ ಅನುಮತಿ ನೀಡಲು ನಾನು ಸರ್ಕಾರಕ್ಕೆ ಈಗಾಗಲೇ ಪತ್ರ ಬರೆದಿದ್ದು, ಅದು ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಕೂಡಾ ಆಗಿತ್ತು. ವಿಭಾಗೀಯ ಪೀಠದ ತೀರ್ಪು ಕೂಡ ಆ ನಿಟ್ಟಿನಲ್ಲೇ ಇದೆ’ ಎಂದು ತಿಳಿಸಿದ್ದಾರೆ.

‘ಆಟದ ಮೈದಾನದಲ್ಲಿ ಯಥಾಸ್ಥಿತಿ ಕಾಪಾಡುವಂತೆ ಗುರುವಾರ ಹೈಕೋರ್ಟ್‌ನ ಏಕ ಸದಸ್ಯ ಪೀಠ ನೀಡಿದ್ದ ತೀರ್ಪಿನಿಂದ ನಿರಾಶರಾಗಿದ್ದ ನಮಗೆ ಇಂದಿನ ತೀರ್ಪು ಮತ್ತೊಮ್ಮೆ ನ್ಯಾಯಾಲಯದ ಮೇಲಿನ ನಂಬಿಕೆ ಹೆಚ್ಚುವಂತೆ ಮಾಡಿದೆ’ ಎಂದಿದ್ದಾರೆ.

ಸಿಇಸಿ ಶಿಫಾರಸು ತಿರಸ್ಕರಿಸಿದ ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಕಬ್ಬಿಣದ ಅದಿರು ಗಣಿಗಾರಿಕೆಯ ಮಿತಿಯನ್ನು ಸಂಪೂರ್ಣವಾಗಿ ಸಡಿಲಿಕೆ ಮಾಡಬೇಕು ಎಂಬ ಕೇಂದ್ರ ಉನ್ನತಾಧಿಕಾರ ಸಮಿತಿಯ (ಸಿಇಸಿ) ಶಿಫಾರಸನ್ನು ಸುಪ್ರೀಂ ಕೋರ್ಟ್ ಶುಕ್ರವಾರ ತಿರಸ್ಕರಿಸಿದೆ.

ಈ ಪ್ರಕರಣದಲ್ಲಿ ಅರ್ಜಿದಾರ ಸಂಸ್ಥೆಯಾಗಿರುವ ಸಮಾಜ ಪರಿವರ್ತನಾ ಟ್ರಸ್ಟ್‌ನ ಪರವಾಗಿ ಹಿರಿಯ ವಕೀಲ ಪ್ರಶಾಂತ್ ಭೂಷಣ್ ವ್ಯಕ್ತಪಡಿಸಿದ ಕಳವಳವನ್ನು ಗಮನಿಸಿ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಹಾಗೂ ಸಿ.ಟಿ.ರವಿಕುಮಾರ್ ಅವರನ್ನು ಒಳಗೊಂಡ ಪೀಠವು ಈ ನಿರ್ಧಾರಕ್ಕೆ ಬಂದಿತು.

‘ಒಂದು ವೇಳೆ ಗಣಿಗಾರಿಕೆಯ ಮಿತಿಯನ್ನು ಸಂಪೂರ್ಣವಾಗಿ ಸಡಿಲಿಸಿದರೆ ಕರ್ನಾಟಕದಲ್ಲಿ ಅನಿಯಂತ್ರಿತ ಗಣಿಗಾರಿಕೆ ಚಟುವಟಿಕೆಗೆ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ’ ಎಂದು ಪ್ರಶಾಂತ್ ಭೂಷಣ್ ಎಚ್ಚರಿಸಿದರು. ‘ಸುಸ್ಥಿರ ಅಭಿವೃದ್ಧಿ ಹಾಗೂ ನ್ಯಾಯದ ದೃಷ್ಟಿಯಿಂದ ಈ ಹಂತದಲ್ಲಿ ಅದಿರು ಉತ್ಪಾದನೆ ಮೇಲಿನ ಮಿತಿಯನ್ನು ತೆಗೆದು ಹಾಕುವುದು ಸರಿಯಲ್ಲ’ ಎಂದೂ ಅವರು ಹೇಳಿದರು.

ಬಳ್ಳಾರಿ ಜಿಲ್ಲೆಯಲ್ಲಿ ಸದ್ಯ ವಾರ್ಷಿಕ 28 ದಶಲಕ್ಷ ಟನ್ ಅದಿರು ಉತ್ಪಾದನೆಯ ಮಿತಿ ನಿಗದಿ ಮಾಡಲಾಗಿದೆ. ಅದನ್ನು 35 ದಶಲಕ್ಷ ಟನ್‌ಗೆ ಹೆಚ್ಚಿಸಲು ಸುಪ್ರೀಂ ಕೋರ್ಟ್ ಆದೇಶಿಸಿತು. ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ 7 ದಶಲಕ್ಷ ಟನ್‌ನಿಂದ 15 ದಶಲಕ್ಷ ಟನ್‌ಗೆ ಹೆಚ್ಚಿಸಲು ಆದೇಶ ನೀಡಿತು.

ಗಣಿ ಉದ್ಯಮಿಗಳ ಪರ ವಾದ ಮಂಡಿಸಿದ ಹಿರಿಯ ವಕೀಲ ದುಷ್ಯಂತ್ ದವೆ, ಅದಿರು ಉತ್ಪಾದನೆಯ ಮಿತಿಯನ್ನು ತೆಗೆದು ಹಾಕುವಂತೆ ಮನವಿ ಮಾಡಿದರು.

‘ಈ ಹಿಂದೆ ಅಕ್ರಮ ಗಣಿಗಾರಿಕೆಗಳು ನಡೆದಿದ್ದವು. ಆ ಬಳಿಕ ಅದಿರು ಉತ್ಪಾದನೆಯ ಮೇಲೆ ಮಿತಿ ಹೇರಲಾಗಿತ್ತು. ನ್ಯಾಯಾಲಯದ ಆದೇಶದ ಪ್ರಕಾರ ಸರ್ಕಾರ ಸುಧಾರಣಾ ಕ್ರಮಗಳನ್ನು ಕೈಗೊಂಡಿದ್ದರಿಂದ ಪರಿಸ್ಥಿತಿ ಸುಧಾರಣೆ ಆಗಿದೆ. ದಶಕದ ಹಿಂದೆ ಕೆಲವರು ಮಾಡಿದ ತಪ್ಪಿಗೆ ಈಗ ಎಲ್ಲ ಗಣಿ ಉದ್ಯಮಿಗಳು ದಂಡನೆಗೆ ಒಳಗಾಗುತ್ತಿದ್ದಾರೆ’ ಎಂದರು.

ಚುನಾವಣೆಗೆ ತಡೆ ನೀಡಲು ಸುಪ್ರೀಂ ಕೋರ್ಟ್ ನಕಾರ

ವಾರ್ಡ್ ಮರು ವಿಂಗಡಣೆ: ಹೈಕೋರ್ಟ್‌ನಲ್ಲಿ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಬಿಎಂಪಿ ವಾರ್ಡ್ ಮರು ವಿಂಗಡಣೆಯ ಸಿಂಧುತ್ವ ಪ್ರಶ್ನಿಸಿ ಸಲ್ಲಿಕೆಯಾಗಿರುವ ಎಲ್ಲ ಅರ್ಜಿಗಳ ಬಗ್ಗೆ ಹೈಕೋರ್ಟ್ ನಿರ್ಧಾರ ಕೈಗೊಳ್ಳಬಹುದು ಎಂದು ಹೇಳಿರುವ ಸುಪ್ರೀಂ ಕೋರ್ಟ್, ಬಿಬಿಎಂಪಿ ಚುನಾವಣಾ ಪ್ರಕ್ರಿಯೆಗೆ ತಡೆ ನೀಡುವುದಿಲ್ಲ ಎಂದು ಒತ್ತಿ ಹೇಳಿತು.

ಬಿಬಿಎಂಪಿ ಚುನಾವಣೆ ಕುರಿತ ಪ್ರಕರಣದ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಎಸ್.ಅಬ್ದುಲ್ ನಜೀರ್ ಹಾಗೂ ಜೆ.ಕೆ.ಮಹೇಶ್ವರಿ ಅವರನ್ನು ಒಳಗೊಂಡ ಪೀಠವು, ‘ರಿಟ್ ಅರ್ಜಿ ಹಾಗೂ ಸಂಬಂಧಿಸಿದ ವಿಷಯಗಳನ್ನು ಅರ್ಹತೆಯ ಮೇಲೆ ಹಾಗೂ ಕಾನೂನಿಗೆ ಅನುಸಾರವಾಗಿ ಹೈಕೋರ್ಟ್ ನಿರ್ಧರಿಸುವುದು ನ್ಯಾಯಸಮ್ಮತ ಹಾಗೂ ಸರಿಯಾದುದು ಎಂದು ನಾವು ಭಾವಿಸುತ್ತೇವೆ’ ಎಂದು ಹೇಳಿತು.

ಮಧ್ಯಂತರ ಆದೇಶವನ್ನು ಹೊರಡಿಸುವ ಕೋರಿಕೆಯನ್ನು ಹೈಕೋರ್ಟ್ ಪರಿಗಣಿಸಬಹುದು ಎಂದು ನ್ಯಾಯಪೀಠ ಸ್ಪಷ್ಟಪಡಿಸಿತು.

‘ವಾರ್ಡ್ ಮರುವಿಂಗಡಣೆಯ ಸಿಂಧುತ್ವ ಪ್ರಶ್ನಿಸಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಕೆಯಾಗಿರುವುದರಿಂದ ಚುನಾವಣೆ ನಡೆಸಲು ಸಾಧ್ಯವಾಗುತ್ತಿಲ್ಲ’ ಎಂದು ಹಿರಿಯ ವಕೀಲರಾದ ಮೀನಾಕ್ಷಿ ಅರೋರಾ ಹೇಳಿದರು. ‘ನಾವು ಚುನಾವಣೆಗೆ ತಡೆಯಾಜ್ಞೆ ನೀಡಿಲ್ಲ’ ಎಂದು ನ್ಯಾಯಪೀಠವು ಮೌಖಿಕವಾಗಿ ಹೇಳಿತು.

ಬಿಬಿಎಂಪಿ ಸದಸ್ಯರ ಅಧಿಕಾರದ ಅವಧಿ 2020ರ ಸೆಪ್ಟೆಂಬರ್‌ನಲ್ಲಿ ಮುಕ್ತಾಯಗೊಂಡಿದೆ. ಮರು ವಿಂಗಡಣೆ ಹಾಗೂ ಮೀಸಲಾತಿ ಕುರಿತು ಸಲ್ಲಿಕೆಯಾಗಿರುವ ಅರ್ಜಿಗಳನ್ನು ಕಾಲಮಿತಿಯಲ್ಲಿ ಹೈಕೋರ್ಟ್ ಇತ್ಯರ್ಥ ಮಾಡಬೇಕು ಎಂದು ಮೀನಾಕ್ಷಿ ಅರೋರಾ ಸೇರಿ ಹಲವರು ಅರ್ಜಿ ಸಲ್ಲಿಸಿದ್ದಾರೆ. ಕರ್ನಾಟಕ ಚುನಾವಣಾ ಆಯೋಗವು ಬಿಬಿಎಂಪಿ ಚುನಾವಣೆಯ ವೇಳಾಪಟ್ಟಿಯನ್ನು ಪ್ರಕಟಿಸಬೇಕು ಎಂದು ಅರೋರಾ ವಾದ ಮಂಡಿಸಿದರು.

ಈ ಪ್ರಕರಣವನ್ನು ನಿರ್ದಿಷ್ಟ ಕಾಲಮಿತಿಯೊಳಗೆ ಇತ್ಯರ್ಥಪಡಿಸುವಂತೆ ಹೈಕೋರ್ಟ್‌ಗೆ ನಿರ್ದೇಶನ ನೀಡಲು ಸಾಧ್ಯವಿಲ್ಲ ಎಂದು ಪೀಠ ಸ್ಪಷ್ಟಪಡಿಸಿತು.

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್, ‘ನಾವು ವಾರ್ಡ್ ಮರುವಿಂಗಡಣೆ ಸಿಂಧುತ್ವವನ್ನು ಪ್ರಶ್ನಿಸಿದ್ದೇವೆ. ಈ ಬಗ್ಗೆ ಸುಪ್ರೀಂ ಕೋರ್ಟ್‌ನಿಂದ ಸ್ಪಷ್ಟನೆ ಪಡೆಯುವಂತೆ ಹೈಕೋರ್ಟ್ ಹೇಳಿದೆ. ಬಿಜೆಪಿಗೆ ಅನುಕೂಲವಾಗುವಂತೆ ಮರು ವಿಂಗಡಣೆ ಪ್ರಕ್ರಿಯೆ ನಡೆಸಲಾಗಿದೆ’ ಎಂದರು.

ಕರ್ನಾಟಕ ಸರ್ಕಾರದ ಪರವಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹಾಜರಾಗಿ ವಾದ ಮಂಡಿಸಿದರು.

ಬಳಿಕ, ಪೀಠವು ವಿಚಾರಣೆಯನ್ನು ಎಂಟು ವಾರಗಳ ಕಾಲ ಮುಂದೂಡಿತು.

‘ಮೂರ್ತಿ ವಿಸರ್ಜನೆ: ಲೋಪ ಬೇಡ’

ಬೆಂಗಳೂರು: ಗಣೇಶ ಮೂರ್ತಿಗಳನ್ನು ವಿಸರ್ಜನೆ ಮಾಡುವ ವೇಳೆ ಯಾವುದೇ ರೀತಿಯ ವಿಘ್ನ ಅಥವಾ ಲೋಪ ಆಗದಂತೆ ವಿಸರ್ಜಿಸಲು ಹೆಚ್ಚುವರಿ ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಅಧಿಕಾರಿಗಳಿಗೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ಗಣೇಶ ಚತುರ್ಥಿ ಆಚರಣೆ ಸಂಬಂಧ ಅಧಿಕಾರಿಗಳೊಂದಿಗೆ ವರ್ಚುವಲ್ ಸಭೆ ನಡೆಸಿ ಮಾತ ನಾಡಿ, ‘ವಿಸರ್ಜನಾ ಸ್ಥಳದಲ್ಲಿ ಭದ್ರತಾ ದೃಷ್ಟಿಯಿಂದ ಪಾಲಿಕೆ ಅಧಿಕಾರಿಗಳು, ಮಾರ್ಷಲ್‌ಗಳ ನಿಯೋಜನೆ, ಬ್ಯಾರಿ ಕೇಡಿಂಗ್, ದೀಪಗಳ ಅಳವಡಿಕೆ, ಸಿಸಿಟಿವಿ, ಕ್ರೇನ್ ಸೇರಿ ಇನ್ನಿತರೆ ಅಗತ್ಯ ವ್ಯವಸ್ಥೆಗಳನ್ನು ಮಾಡಿಕೊಂಡು ಯಾವುದೇ ಸಮಸ್ಯೆ ಆಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದರು.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪಿಸಿಲು ಅನುಮತಿ ಪಡೆಯಲು 63 ಉಪ ವಿಭಾಗಗಳಲ್ಲಿ ಏಕಗವಾಕ್ಷಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. 24 ಗಂಟೆಯಲ್ಲಿ ಅನುಮತಿ ಪ್ರಕ್ರಿಯೆ ಮುಗಿಸಬೇಕು. ಮೂರ್ತಿ ವಿಸರ್ಜನೆಗೆ 421 ತಾತ್ಕಾಲಿಕ ಮೊಬೈಲ್ ಟ್ಯಾಂಕ್ ಮತ್ತು 37 ತಾತ್ಕಾಲಿಕ ಕಲ್ಯಾಣಿಗಳ ವ್ಯವಸ್ಥೆ ಮಾಡಲಾಗಿರುತ್ತದೆ. ಇನ್ನು ಅಗತ್ಯವಿರುವ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತುಷಾರ್ ಗಿರಿನಾಥ್ ಸೂಚನೆ ನೀಡಿದರು.

ಧೂಮಲೀಲೆ...! ನಗರದಲ್ಲಿ ಡೆಂಗಿ ಪ್ರಕರಣಗಳು ಹೆಚ್ಚುತ್ತಿದ್ದು, ಸೊಳ್ಳೆಗಳ ನಿಯಂತ್ರಣಕ್ಕೆ ಬಿಬಿಎಂಪಿ ಸಿಬ್ಬಂದಿ ಕಬ್ಬನ್ ಪಾರ್ಕ್‌ನಲ್ಲಿ ಫಾಗಿಂಗ್ ಮಾಡುತ್ತಿದ್ದ ದೃಶ್ಯ ಕಂಡುಬಂತು

ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಕೊರಗರಿಗೆ ಉಚಿತ ಆರೋಗ್ಯ ಸೌಲಭ್ಯ ರದ್ದು

ಹಳೆ ಬಾಕಿ ಪಾವತಿಗೆ ಆದೇಶ

● ಆದಿತ್ಯ ಕೆ.ಎ.

ಬೆಂಗಳೂರು: ಕೊರಗ ಸಮುದಾಯಕ್ಕೆ ಪ್ರತಿಷ್ಠಿತ ಖಾಸಗಿ ಆಸ್ಪತ್ರೆಗಳಲ್ಲಿ ಲಭಿಸುತ್ತಿದ್ದ ಉಚಿತ ಆರೋಗ್ಯ ಸೌಲಭ್ಯವನ್ನು ಏಪ್ರಿಲ್ 15ರಿಂದ ರಾಜ್ಯ ಸರ್ಕಾರ ರದ್ದುಗೊಳಿಸಿದೆ.

‘ಖಾಸಗಿ ಆಸ್ಪತ್ರೆಗಳ ಹಳೇ ಬಾಕಿ ಮಾತ್ರ ಮರು ಪಾವತಿಸಲಾಗುವುದು. ಮುಂದೆ ವೈದ್ಯಕೀಯ ವೆಚ್ಚ ಮರುಪಾವತಿಗೆ ಅವಕಾಶ ಇಲ್ಲ. ಹಳೇ ಬಾಕಿ ₹ 1.25 ಕೋಟಿ ಬಿಡುಗಡೆ ಮಾಡಲಾಗುವುದು’ ಎಂದು ಸಮಾಜ ಕಲ್ಯಾಣ ಇಲಾಖೆ ಉಪ ಕಾರ್ಯದರ್ಶಿ ಶಂಭುಲಿಂಗಪ್ಪ ಇತ್ತೀಚಿನ ಆದೇಶದಲ್ಲಿ ಸ್ಪಷ್ಟಪಡಿಸಿದ್ದಾರೆ.

ಕಂಗಾಲು: ಸರ್ಕಾರದ ನಿರ್ಧಾರದಿಂದ ಅಳಿವಿನ ಅಂಚಿನಲ್ಲಿರುವ ಬುಡಕಟ್ಟು ಸಮುದಾಯ ಕಂಗಾಲಾಗಿದೆ.

> **ಯೋಜನೆ ಮರುಜಾರಿಗೆ ಆಗ್ರಹಿಸಿ ಮತ್ತೆ ಹೋರಾಟ ನಡೆಸುತ್ತೇವೆ. ಸರ್ಕಾರ ನಿರ್ಲಕ್ಷ್ಯ ತೋರಿದರೆ ಭವಿಷ್ಯದಲ್ಲಿ ಈ ಜನಾಂಗವೇ ಕಣ್ಮರೆಯಾಗಲಿದೆ.**
>
> **ಸುಂದರ,** ಸಂಘಟನಾ ಕಾರ್ಯದರ್ಶಿ, ಬುಡಕಟ್ಟು ಮಹಾಸಭಾ

‘ಬುಟ್ಟಿ ಹೆಣೆಯುವುದು ಕುಲ ಕಸುಬು. ಪರಿಶಿಷ್ಟ ಪಂಗಡದ ನೈಜ ಬುಡಕಟ್ಟು ಸಮುದಾಯವಾಗಿರುವ ಕೊರಗರು ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ. ಶಿವಮೊಗ್ಗ, ಬೆಂಗಳೂರು, ಚಿಕ್ಕಮಗಳೂರು, ಹಾಸನ, ಕೊಡಗು ಜಿಲ್ಲೆಗಳಿಗೆ ಕೂಲಿ ಅರಸಿ ಕೆಲವು ಕುಟುಂಬಗಳು ವಲಸೆ ಹೋಗಿವೆ. ಉಚಿತ ಆರೋಗ್ಯ ಸೌಲಭ್ಯ ನಿರಾಕರಿಸಿದ್ದರಿಂದ ಗಂಭೀರ ಕಾಯಿಲೆಗೆ ಚಿಕಿತ್ಸೆ ಲಭಿಸದೆ ಕೆಲವು ದಿನಗಳ ಅಂತರದಲ್ಲಿ 12 ಮಂದಿ ಮೃತಪಟ್ಟಿದ್ದಾರೆ’ ಎಂದು ಅಲೆಮಾರಿ ಬುಡಕಟ್ಟು ಮಹಾಸಭಾದ ಸಂಘಟನಾ ಕಾರ್ಯದರ್ಶಿ ಸುಂದರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಜಿಲ್ಲಾ ಪಂಚಾಯಿತಿಗಳ ಮೂಲಕ ವಿತರಿಸಲಾಗಿದ್ದ ಆರೋಗ್ಯ ಕಾರ್ಡ್ ತೋರಿಸಿದರೆ ಖಾಸಗಿ ಆಸ್ಪತ್ರೆಯಲ್ಲಿ ತಕ್ಷಣ ಚಿಕಿತ್ಸೆ ದೊರೆಯುತ್ತಿತ್ತು. ಆದರೆ, ಆಯುಷ್ಮಾನ್ ಕಾರ್ಡ್‌ನಿಂದ ಈ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ಜಿಲ್ಲಾ ಸರ್ಜನ್ ಸಹಿ ಬೇಕಿದೆ. ಪ್ರಕ್ರಿಯೆ ಪೂರ್ಣಗೊಳಿಸುವ ವೇಳೆಗೆ ರೋಗಿಯ ಪ್ರಾಣ ಹೋಗಿರುತ್ತದೆ’ ಎಂದು ಆತಂಕ ವ್ಯಕ್ತಪಡಿಸಿದರು.

ಉಚಿತ ಆರೋಗ್ಯ ಸೌಲಭ್ಯ ಯೋಜನೆಯಡಿ ಈವರೆಗೆ ದಕ್ಷಿಣ ಕನ್ನಡದಲ್ಲಿ 192 ಮಂದಿ ಉಡುಪಿಯಲ್ಲಿ 29 ಮಂದಿ ಚಿಕಿತ್ಸೆ ಪಡೆದಿದ್ದಾರೆ.

ಸೋಂಕಿತರ ಪತ್ತೆ ಕಾರ್ಯಕ್ಕೆ ಆಶಾ ಕಾರ್ಯಕರ್ತೆಯರ ಬಳಕೆ

ಕೋವಿಡ್ ಕರ್ತವ್ಯಕ್ಕಿಲ್ಲ ‘ಪ್ರೋತ್ಸಾಹ’ ಧನ

● ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕೊರೊನಾ ಸೋಂಕಿತರ ಪತ್ತೆಯ ಜತೆಗೆ ಕೋವಿಡ್ ಲಸಿಕೆಯ ಬಗ್ಗೆ ಜಾಗೃತಿ ಮೂಡಿಸಲು ಶ್ರಮಿಸುತ್ತಿರುವ ಆಶಾ ಕಾರ್ಯಕರ್ತೆಯರಿಗೆ ರಾಜ್ಯ ಸರ್ಕಾರ ನಾಲ್ಕು ತಿಂಗಳಿಂದ ಪ್ರೋತ್ಸಾಹ ಧನ ಬಿಡುಗಡೆ ಮಾಡಿಲ್ಲ. ಇಷ್ಟಾಗಿಯೂ ಆರೋಗ್ಯ ಇಲಾಖೆ ಅಧಿಕಾರಿಗಳು ಕೋವಿಡ್ ಕರ್ತವ್ಯಕ್ಕೆ ಸೂಚಿಸುತ್ತಿರುವುದು ಅವರ ಅಸಮಾಧಾನಕ್ಕೆ ಕಾರಣವಾಗಿದೆ.

ರಾಜ್ಯದಲ್ಲಿ 42 ಸಾವಿರ ಆಶಾ ಕಾರ್ಯಕರ್ತೆಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ಕೋವಿಡ್ ಕಾಣಿಸಿ ಕೊಂಡ ಬಳಿಕ ಸೋಂಕಿತರ ಸಂಪರ್ಕ ಪತ್ತೆ, ಮನೆ–ಮನೆ ಸಮೀಕ್ಷೆ ಸೇರಿ ವಿವಿಧ ಜವಾಬ್ದಾರಿಗಳನ್ನು ಅವರಿಗೆ ವಹಿಸಲಾಗಿದೆ. ಕೋವಿಡ್ ಲಸಿಕೆಗೆ ಸಂಬಂಧಿಸಿದಂತೆ ಹಿರಿಯ ನಾಗರಿಕರು ಸೇರಿ ಫಲಾನುಭವಿಗಳನ್ನು ಆರೋಗ್ಯ ಕೇಂದ್ರಗಳಿಗೆ ಕರೆತರುವ ಹೊಣೆಯೂ ಇವರ ಮೇಲಿದೆ. ಸೋಂಕು ಪೂರ್ಣ ಪ್ರಮಾಣದಲ್ಲಿ ನಿಯಂತ್ರಣಕ್ಕೆ ಬಾರದೇ ಇದ್ದುದರಿಂದ ಅವರನ್ನು ಈಗಲೂ ಕೋವಿಡ್ ಸಂಬಂಧಿ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲಾಗುತ್ತಿದೆ.

ಕೋವಿಡ್ ಮೊದಲ ಮೂರು ಅಲೆಗಳ ಅವಧಿಯಲ್ಲಿ ಕೇಂದ್ರ ಸರ್ಕಾರವು ತಿಂಗಳಿಗೆ ತಲಾ ₹ 1 ಸಾವಿರ ನೀಡಿತ್ತು. 2022ರ ಮಾರ್ಚ್ ಬಳಿಕ ಈ ಪ್ರೋತ್ಸಾಹ ಧನವನ್ನು ಕೇಂದ್ರ ಸರ್ಕಾರ ಸ್ಥಗಿತಗೊಳಿಸಿದೆ. ರಾಜ್ಯದಲ್ಲಿ ಕೋವಿಡ್ ನಾಲ್ಕನೇ ಅಲೆಯ ಮುನ್ನೆಚ್ಚರಿಕೆ ಹಾಗೂ ಲಸಿಕೆ ವಿತರಣೆಗೆ ವೇಗ ಒದಗಿಸಲು ಅವರ ಸೇವೆಯನ್ನು ಆರು ತಿಂಗಳು ಮುಂದುವರಿಸಿದ್ದ ರಾಜ್ಯ ಸರ್ಕಾರ, ತಲಾ ₹1 ಸಾವಿರ ಪ್ರೋತ್ಸಾಹಧನ ಒದಗಿಸುವ ಬಗ್ಗೆ ಅಧಿಸೂಚನೆ ಹೊರಡಿಸಿತ್ತು. ಆದರೆ, ಕೋವಿಡ್ ಸೇವೆಯಲ್ಲಿ ನಿರತರಾಗಿರುವ ಆಶಾ ಕಾರ್ಯಕರ್ತೆಯರಿಗೆ ಈವರೆಗೂ ಪ್ರೋತ್ಸಾಹಧನ ಬಿಡುಗಡೆ ಮಾಡಿಲ್ಲ. ಇದರಿಂದಾಗಿ ಆಶಾ ಕಾರ್ಯಕರ್ತೆಯರು ಗೊಂದಲಕ್ಕೆ ಒಳಗಾಗಿದ್ದಾರೆ.

ಕೆಲಸ ಹಂಚಿಕೆ: ‘ಮನೆ ಮನೆ ಸಮೀಕ್ಷೆ ನಡೆಸುವ ಮೂಲಕ ಕೋವಿಡ್‌ಗೆ ಸಂಬಂಧಿಸಿದಂತೆ ಸಂಶಯಾಸ್ಪದ ವ್ಯಕ್ತಿಗಳನ್ನು ಗುರುತಿಸಿ, ಹತ್ತಿರದ ಆರೋಗ್ಯ ಕೇಂದ್ರಗಳಿಗೆ ಕರೆದೊಯ್ಯಲಾಗುತ್ತಿದೆ. ಮುನ್ನೆಚ್ಚರಿಕೆ ಡೋಸ್ ಪಡೆಯದವರಿಗೆ ಲಸಿಕೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಕೋವಿಡ್ ಪ್ರೋತ್ಸಾಹಧನ ಬಿಡುಗಡೆಯಾಗದಿದ್ದರೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲಕ ಕೋವಿಡ್ ಕರ್ತವ್ಯವನ್ನು ಹಂಚಿಕೆ ಮಾಡಲಾಗುತ್ತಿದೆ’ ಎಂದು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ರಾಜ್ಯ ಕಾರ್ಯದರ್ಶಿ ಡಿ. ನಾಗಲಕ್ಷ್ಮಿ ಬೇಸರ ವ್ಯಕ್ತಪಡಿಸಿದರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರು ದೂರವಾಣಿ ಸಂಪರ್ಕಕ್ಕೆ ಸಿಗಲಿಲ್ಲ.

‘ಆಶಾ ಕಾರ್ಯಕರ್ತೆಯರಿಗೆ ಹೆಚ್ಚುವರಿ ಹೊರೆ’

‘ಮನೆ ಮನೆ ಸಮೀಕ್ಷೆ ಸೇರಿ ವಿವಿಧ ಕರ್ತವ್ಯಗಳಿಗೆ ಆಶಾ ಕಾರ್ಯಕರ್ತೆಯರಿಗೆ ಆರೋಗ್ಯ ಇಲಾಖೆಯಿಂದ ಮೊಬೈಲ್ ಅಥವಾ ಟ್ಯಾಬ್ ನೀಡಿಲ್ಲ. ಆದರೂ ವಿವಿಧ ರೀತಿಯ ಸಮೀಕ್ಷೆಗಳನ್ನು ಮೊಬೈಲ್ ಆ್ಯಪ್ ಮೂಲಕ ನಡೆಸುವಂತೆ ಒತ್ತಾಯಿಸಲಾಗುತ್ತಿದೆ. ‘ಕೋವಿನ್’ ಪೋರ್ಟಲ್‌ನಲ್ಲಿ ಲಸಿಕೆ ಬಗ್ಗೆ ಮಾಹಿತಿ ದಾಖಲು ಸೇರಿ ವಿವಿಧ ಹೆಚ್ಚುವರಿ ಕೆಲಸಗಳನ್ನೂ ಮಾಡಿಸಿಕೊಳ್ಳಲಾಗುತ್ತಿದೆ. ಈ ಕೆಲಸಗಳನ್ನು ಮಾಡಲು ನಿರಾಕರಿಸಿದಲ್ಲಿ ಕೆಲಸದಿಂದ ತೆಗೆಯುವುದಾಗಿ ಅಧಿಕಾರಿಗಳು ಬೆದರಿಕೆ ಹಾಕುತ್ತಾರೆ’ ಎಂದು ಡಿ. ನಾಗಲಕ್ಷ್ಮಿ ಹೇಳಿದರು.

ಪ್ರೋತ್ಸಾಹಧನಕ್ಕೆ ಪ್ರಸ್ತಾವ ಸಲ್ಲಿಕೆ

‘ಕೋವಿಡ್ ಕರ್ತವ್ಯಕ್ಕೆ ಸಂಬಂಧಿಸಿ ಕೇಂದ್ರ ಸರ್ಕಾರದಿಂದ 2022ರ ಮಾರ್ಚ್‌ವರೆಗೆ ಪ್ರೋತ್ಸಾಹ ಧನ ನೀಡಲಾಗಿದೆ. ಕೋವಿಡ್ ನಾಲ್ಕನೇ ಅಲೆ ತಡೆ, ಲಸಿಕಾ ಅಭಿಯಾನಕ್ಕೆ ವೇಗ ಒದಗಿಸಲು ಅವರನ್ನು ತೊಡಗಿಸಿಕೊಳ್ಳಲಾಗುತ್ತಿದೆ. 2022ರ ಏಪ್ರಿಲ್‌ನಿಂದ ಆರು ತಿಂಗಳ ಅವಧಿಗೆ ಪ್ರೋತ್ಸಾಹಧನ ಮಂಜೂರಾತಿಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಆರೋಗ್ಯ ಇಲಾಖೆಯ ಅಧಿಕಾರಿ ತಿಳಿಸಿದರು.

ಸಚಿವರ ವಿರುದ್ಧದ ತನಿಖೆಗೆ ಗುಜರಾತ್ ಚುನಾವಣೆ ಕಾರಣ

ಅಧಿವೇಶನದಲ್ಲಿ ದೆಹಲಿ ಸಿ.ಎಂ ಕೇಜ್ರಿವಾಲ್ ವಾಗ್ದಾಳಿ

ನವದೆಹಲಿ (ಪಿಟಿಐ): ದೆಹಲಿಯ ಸಚಿವರ ಮೇಲೆ ಕೇಂದ್ರದ ತನಿಖಾ ಸಂಸ್ಥೆಗಳ ತನಿಖೆ ಮತ್ತು ಗುಜರಾತ್ ಚುನಾವಣೆ ನಡುವೆ ನೇರ ಸಂಬಂಧ ಇದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ವಿಧಾನಸಭೆಯ ವಿಶೇಷ ಅಧಿವೇಶನದಲ್ಲಿ ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಎಎಪಿಯ ಯಾವೊಬ್ಬ ಶಾಸಕನೂ ಪಕ್ಷದಿಂದ ದೂರ ಹೋಗಿಲ್ಲ ಎಂಬುದನ್ನು ದೃಢಪಡಿಸಲು ವಿಶ್ವಾಸಮತ ಸಾಬೀತು ಮಾಡುವುದಾಗಿಯೂ ಅವರು ಶುಕ್ರವಾರ ಹೇಳಿದ್ದಾರೆ.

‘ಬಿಜೆಪಿಯ ಗುಜರಾತ್ ಕೋಟೆಯು ಬಿರುಕು ಬಿಟ್ಟಿದೆ ಮತ್ತು ಅದು ಕುಸಿಯಲಾರಂಭಿಸಿದೆ. ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರಿಗೆ ಸೇರಿದ ಸ್ಥಳಗಳಲ್ಲಿ ಸಿಬಿಐ ನಡೆಸಿದ ಶೋಧಗಳಲ್ಲಿ ಒಂದು ಪೈಸೆಯೂ ಸಿಕ್ಕಿಲ್ಲ. ದೆಹಲಿ ಸರ್ಕಾರವನ್ನು ಉರುಳಿಸಲು ಸ್ಥಾಪಿತ ಹಿತಾಸಕ್ತಿಗಳು ಯತ್ನಿಸುತ್ತಿವೆ. ಮಣಿಪುರ, ಗೋವಾ, ಮಧ್ಯಪ್ರದೇಶ, ಬಿಹಾರ, ಅರುಣಾಚಲ ಪ್ರದೇಶ ಮತ್ತು ಮಹಾರಾಷ್ಟ್ರದ ರಾಜ್ಯ ಸರ್ಕಾರಗಳನ್ನು ಉರುಳಿಸಲಾಗಿದೆ. ಸರಣಿ ಹಂತಕ ಇಲ್ಲಿಯೂ ಕಾಣಿಸಿಕೊಂಡಿದ್ದಾನೆ’ ಎಂದು ಕೇಜ್ರಿವಾಲ್ ಸದನದಲ್ಲಿ ಹೇಳಿದರು.

ಜಿಎಸ್‌ಟಿ, ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆಯಿಂದ ದೊರೆತ ಹಣವನ್ನು ಶಾಸಕರ ಖರೀದಿಗೆ ಬಿಜೆಪಿ ಬಳಸಿದೆ. ಈವರೆಗೆ, ವಿವಿಧ ರಾಜ್ಯಗಳಲ್ಲಿ 277 ಶಾಸಕರನ್ನು ಬಿಜೆಪಿ ಖರೀದಿಸಿದೆ ಎಂದು ಅವರು ಹೇಳಿದರು.

ತಮ್ಮ ವಿರುದ್ಧ ‘ಕೇವಲ ಮೂಲ’ಗಳ ಆಧಾರದಲ್ಲಿ ಸಿಬಿಐ ದಾಖಲಿಸಿರುವ ಎಫ್‌ಐಆರ್ ‘ಸಂಪೂರ್ಣ ನಕಲಿ’ ಎಂದು ಮನೀಷ್ ಸಿಸೋಡಿಯಾ ಹೇಳಿದ್ದಾರೆ. ಇತರರು ಒಳ್ಳೆಯ ಕೆಲಸ ಮಾಡಿದರೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಸುರಕ್ಷಿತ ಭಾವ ಕಾಡತೊಡಗುತ್ತದೆ’ ಎಂದು ಸಿಸೋಡಿಯಾ ಟೀಕಿಸಿದ್ದಾರೆ.

ಅಬಕಾರಿ ನೀತಿ ಜಾರಿ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪದಲ್ಲಿ ಸಿಸೋಡಿಯಾ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದೆ.

ಗದ್ದಲ: ಬಿಜೆಪಿ ಶಾಸಕರು ಹೊರಕ್ಕೆ

ದೆಹಲಿ ವಿಧಾನಸಭೆಯ ವಿಶೇಷ ಅಧಿವೇಶನವು ಭಾರಿ ಗದ್ದಲಕ್ಕೆ ಸಾಕ್ಷಿಯಾಯಿತು. ಎಎಪಿ ಶಾಸಕರನ್ನು ಖರೀದಿಸಲು ಬಿಜೆಪಿ ಯತ್ನಿಸಿದೆ ಎಂದು ಆರೋಪಿಸಿ ಎಎಪಿ ಶಾಸಕರು ಬಿಜೆಪಿ ವಿರುದ್ಧ ಘೋಷಣೆಗಳನ್ನು ಕೂಗಿದರು. ಅಬಕಾರಿ ನೀತಿ ಜಾರಿ ಪ್ರಕ್ರಿಯೆಯಲ್ಲಿ ಅವ್ಯವಹಾರ ನಡೆದಿದೆ ಎಂದು ಬಿಜೆಪಿ ಶಾಸಕರು ಘೋಷಣೆ ಕೂಗಿದರು.

ಈ ಘೋಷಣೆಗಳ ಮಧ್ಯೆಯೇ, ಬಿಜೆಪಿಯ ಎಲ್ಲ ಶಾಸಕರನ್ನು ದಿನದ ಮಟ್ಟಿಗೆ ಸದನದಿಂದ ಹೊರಗೆ ಹಾಕಲು ಉಪ ಸ್ಪೀಕರ್ ರಾಖಿ ಬಿರ್ಲಾ ಅವರು ಸೂಚಿಸಿದರು. ವಿರೋಧ ಪಕ್ಷದ ಮುಖ್ಯ ಸಚೇತಕ ಅಜಯ್ ಮಹಾವರ್ ಅವರು ವಿಡಿಯೊ ಚಿತ್ರೀಕರಣ ಮಾಡುತ್ತಿದ್ದಾರೆ ಎಂದು ಎಎಪಿ ಶಾಸಕರೊಬ್ಬರು ಆರೋಪಿಸಿದ್ದು ಶಾಸಕರನ್ನು ಹೊರಗೆ ಹಾಕಲು ಕಾರಣ.

ಶಾಸಕರನ್ನು ಸಮಾಧಾನಪಡಿಸಲು ರಾಖಿ ಬಿರ್ಲಾ ಅವರು ಯತ್ನಿಸಿದರು. ಹಲವು ಬಾರಿ ಎಚ್ಚರಿಕೆ ನೀಡಿದರೂ ಸುಮ್ಮನಾಗದ ಎಎಪಿಯ ಶಾಸಕ ರಿತುರಾಜ್ ಅವರನ್ನೂ ಉಪಸ್ಪೀಕರ್ ಹೊರಕ್ಕೆ ಕಳುಹಿಸಿದರು.

ಎಎಪಿ ಶಾಸಕರನ್ನು ಖರೀದಿಸಲು ಬಿಜೆಪಿ ಹೇಗೆ ಯತ್ನಿಸುತ್ತಿದೆ ಎಂಬುದನ್ನು ಚರ್ಚಿಸಲು ಹಾಗೂ ಎಎಪಿ ಸರ್ಕಾರದ ಸಾಧನೆಗಳನ್ನು ಜನರ ಮುಂದಿಡಲು ವಿಶೇಷ ಅಧಿವೇಶನವನ್ನು ಕರೆಯಲಾಗಿತ್ತು.

ಹೊರಹಾಕಲಾದ ಬಿಜೆಪಿ ಶಾಸಕರು ವಿಧಾನಸಭೆಯ ಆವರಣದಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆಯ ಮುಂದೆ ಪ್ರತಿಭಟನೆ ನಡೆಸಿದರು. ಬಳಿಕ ಅವರು, ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರನ್ನು ಭೇಟಿಯಾಗಿ ದೂರು ನೀಡಿದರು.

> **ಎಎಪಿ ಶಿಕ್ಷಣದ ಕುರಿತೇ ಹೆಚ್ಚು ಮಾತಾಡುತ್ತದೆ. ಆದರೆ ಆ ಪಕ್ಷದ ಮುಖಂಡರ ಕೆಲಸದ ಚಾಲನಾ ಶಕ್ತಿ ಮದ್ಯ. ಅವರು ಶಾಲೆಗಳನ್ನು ತೆರೆದಿಲ್ಲ, ಬದಲಿಗೆ ಮದ್ಯದಂಗಡಿ ತೆರೆದಿದ್ದಾರೆ**
>
> **ಅನುರಾಗ್ ಠಾಕೂರ್,** ಕೇಂದ್ರ ಸಚಿವ

> **ಜನರ ಮೇಲೆ ಹೊರೆ ಹೇರಿರಲಿಲ್ಲ. ಹಾಗಿದ್ದರೂ ಅಬಕಾರಿ ನೀತಿ ಜಾರಿಯಲ್ಲಿ ಅವ್ಯವಹಾರ ನಡೆದಿದೆ ಎಂದು ಬಿಜೆಪಿ ಆಪಾದಿಸುತ್ತಿದೆ**
>
> **ಮನೀಷ್ ಸಿಸೋಡಿಯಾ**
> ದೆಹಲಿ ಉಪಮುಖ್ಯಮಂತ್ರಿ

ದತ್ತಾಂಶ ನಗದೀಕರಣ: ಟೆಂಡರ್ ಹಿಂಪಡೆದ ಐಆರ್‌ಸಿಟಿಸಿ

ನವದೆಹಲಿ: ಗ್ರಾಹಕರ ದತ್ತಾಂಶದ ನಗದೀಕರಣಕ್ಕಾಗಿ ಕರೆದಿದ್ದ ಟೆಂಡರ್ ಅನ್ನು ಭಾರತೀಯ ರೈಲ್ವೆ ಕೇಟರಿಂಗ್ ಹಾಗೂ ಪ್ರವಾಸೋದ್ಯಮ ನಿಗಮ (ಐಆರ್‌ಸಿಟಿಸಿ) ಹಿಂಪಡೆದಿದೆ.

ಗ್ರಾಹಕರ ದತ್ತಾಂಶದ ಸುರಕ್ಷತೆಯನ್ನು ನಿರ್ಲಕ್ಷಿಸಲಾಗುತ್ತಿದೆ ಎಂಬ ವ್ಯಾಪಕ ಟೀಕೆಗಳು ವ್ಯಕ್ತವಾದ ಬೆನ್ನಲ್ಲೇ, ಐಆರ್‌ಸಿಟಿಸಿ ಈ ಕ್ರಮ ಕೈಗೊಂಡಿದೆ.

ಕೇಂದ್ರ ಸರ್ಕಾರವು ‘ವೈಯಕ್ತಿಕ ಮಾಹಿತಿ ಸಂರಕ್ಷಣಾ ಮಸೂದೆ–2018’ ಅನ್ನು ಹಿಂಪಡೆದಿದೆ. ಈ ಕಾರಣಕ್ಕೆ ಗ್ರಾಹಕರ ದತ್ತಾಂಶ ನಗದೀಕರಣಕ್ಕಾಗಿ ಕರೆದಿದ್ದ ಟೆಂಡರನ್ನು ಹಿಂಪಡೆಯಲಾಗಿದೆ ಎಂದು ಐಆರ್‌ಸಿಟಿಸಿಯು ಷೇರು ವಿನಿಮಯ ಕೇಂದ್ರಕ್ಕೆ ತಿಳಿಸಿದೆ. ಪ್ರಯಾಣಿಕರು, ಪ್ರಯಾಣದ ದರ್ಜೆ, ಪಾವತಿ ವಿಧಾನ, ಸರಕು ಸೇವೆಗಳು ಮತ್ತು ವ್ಯಾಪಾರ ಮಾದರಿ ಗುರುತಿಸುವಿಕೆ, ಹೆಸರು, ವಯಸ್ಸು, ಮೊಬೈಲ್ ಸಂಖ್ಯೆ, ಲಿಂಗ, ವಿಳಾಸ, ಇಮೇಲ್-ಐಡಿ, ಪಾಸ್‌ವರ್ಡ್ ಸೇರಿದಂತೆ ಗ್ರಾಹಕರ ದತ್ತಾಂಶದ ನಗದೀಕರಣಕ್ಕೆ ಸಲಹೆ ನೀಡಲು ಕನ್ಸಲ್ಟಂಟ್ ನೇಮಕಕ್ಕಾಗಿ ಜುಲೈ 29 ರಂದು ಐಆರ್‌ಸಿಟಿಸಿ ಇ-ಟೆಂಡರ್ ಕರೆದಿತ್ತು.

ಪ್ರತಿಷ್ಠಿತ ಮಠದ ಪ್ರೌಢಶಾಲೆ ವಿದ್ಯಾರ್ಥಿನಿಯರ ದೂರು

ಸ್ವಾಮೀಜಿಯಿಂದ ನಿರಂತರ ಲೈಂಗಿಕ ಕಿರುಕುಳ

● ಕೆ.ನರಸಿಂಹಮೂರ್ತಿ

ಮೈಸೂರು: ನಾಡಿನ ಪ್ರತಿಷ್ಠಿತ ಮಠವೊಂದರ ಸ್ವಾಮೀಜಿ, ಮಠದ ಉಚಿತ ಹಾಸ್ಟೆಲ್‌ನಲ್ಲಿರುವ ಪ್ರೌಢಶಾಲೆ ವಿದ್ಯಾರ್ಥಿನಿಯರ ಮೇಲೆ ನಿರಂತರ ಲೈಂಗಿಕ ದೌರ್ಜನ್ಯವೆಸಗುತ್ತಿದ್ದಾರೆ ಎಂದು ಆರೋಪಿಸಿ, ದೌರ್ಜನ್ಯಕ್ಕೆ ಒಳಗಾದವರೆನ್ನಲಾದ ವಿದ್ಯಾರ್ಥಿನಿಯರಿಬ್ಬರು ನಗರದ ಮಹಿಳಾ ಸಾಂತ್ವನ ಮತ್ತು ಮಕ್ಕಳ ವಸತಿ ಕೇಂದ್ರವಾದ ಒಡನಾಡಿ ಸಂಸ್ಥೆಗೆ ಶುಕ್ರವಾರ ದೂರು ನೀಡಿದ್ದಾರೆ.

ದೂರು ಪಡೆದು, ಆಪ್ತ ಸಮಾಲೋಚನೆ ನಡೆಸಿರುವ ಸಂಸ್ಥೆಯು ಮಧ್ಯಾಹ್ನವೇ ಈ ಬಾಲಕಿಯರನ್ನು ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಿದೆ.

‘ಮಠ ನಡೆಸುವ ಪ್ರೌಢಶಾಲೆಯಲ್ಲೇ ಓದುತ್ತಿರುವ ವಿದ್ಯಾರ್ಥಿನಿಯರು ಸರದಿಯಂತೆ ಸ್ವಾಮೀಜಿ ಬಳಿಗೆ ಹೋಗಲು ಒಪ್ಪದಿದ್ದರೆ, ಹಾಸ್ಟೆಲ್ ವಾರ್ಡನ್ ಸೇರಿ ಕೆಲ ಸಿಬ್ಬಂದಿ ಅವಾಚ್ಯವಾಗಿ ನಿಂದಿಸಿ, ಕಿರುಕುಳ ನೀಡುತ್ತಾರೆ. ವಿದ್ಯಾರ್ಥಿನಿಯರು ಕಡ್ಡಾಯವಾಗಿ ಸ್ವಾಮೀಜಿ ಬೆಡ್‌ರೂಂಗೆ ಹೋಗಬೇಕು’ ಎಂದು ವಿದ್ಯಾರ್ಥಿನಿಯರು ಆಪ್ತ ಸಮಾಲೋಚನೆ ಸಂದರ್ಭದಲ್ಲಿ ಮಾಹಿತಿ ನೀಡಿದ್ದಾರೆ.

ನೆರವಿನ ನೆಪ: ‘ವಾರಕ್ಕೊಮ್ಮೆ ‘ಹಣ್ಣು ಮತ್ತು ಸಿಹಿಯ ಆಶೀರ್ವಾದ’ದ ನೆಪದಲ್ಲಿ ಏಕಾಂತಕ್ಕೆ ಕರೆಸಿಕೊಳ್ಳುವ ಸ್ವಾಮೀಜಿಯು, ಬಾಲಕಿಯರ ಕುಟುಂಬದ ಮಾಹಿತಿಯನ್ನು ಪಡೆಯುತ್ತಾರೆ. ಪೋಷಕರಿಗೆ ಕಷ್ಟವಿದ್ದರೆ ಅಗತ್ಯ ನೆರವು ಒದಗಿಸುವುದಾಗಿಯೂ ಭರವಸೆ ನೀಡುತ್ತಾರೆ. ನಂತರ ಲೈಂಗಿಕ ಉದ್ದೇಶಕ್ಕೆ ಬಳಸಿಕೊಳ್ಳುತ್ತಾರೆ’ ಎಂದೂ ವಿದ್ಯಾರ್ಥಿನಿಯರು ದೂರಿದ್ದಾರೆ.

‘ಕೈಮುಗಿದರೂ, ಕಾಲಿಗೆ ಬಿದ್ದರೂ ಸ್ವಾಮೀಜಿ ಬಿಡುವುದಿಲ್ಲ. ಖಾಸಗಿ ಅಂಗಗಳನ್ನು ಮುಟ್ಟುತ್ತಾರೆ. ದೌರ್ಜನ್ಯದ ಬಗ್ಗೆ ಯಾರಿಗಾದರೂ ತಿಳಿಸಿದರೆ, ಕೊಲೆ ಮಾಡುವುದಾಗಿ ಬೆದರಿಕೆ ಹಾಕುತ್ತಾರೆ. ಅನಾರೋಗ್ಯದ ನೆಪ ಹೇಳಿ ಕೆಲವರು ದೌರ್ಜನ್ಯದಿಂದ ತಪ್ಪಿಸಿಕೊಂಡಿದ್ದಾರೆ. ಕೆಲವರಿಗೆ ಹಣ್ಣು, ಸಿಹಿಯಲ್ಲಿ ಮತ್ತು ಬರಿಸುವ ಔಷಧಿ ಬೆರೆಸಿ, ಅವರು ಅರೆಪ್ರಜ್ಞಾವಸ್ಥೆಯಲ್ಲಿರುವಾಗಲೇ ಅತ್ಯಾಚಾರ ನಡೆಸಲಾಗಿದೆ’ ಎಂದೂ ದೂರಿದ್ದಾರೆ.

‘ಬಲವಂತದ ಲೈಂಗಿಕ ಕ್ರಿಯೆ ಮುಗಿದ ಬಳಿಕ ಸ್ವಾಮೀಜಿ ಸ್ವಚ್ಛತೆಗಾಗಿ ಟಿಶ್ಯು ಬಳಸುತ್ತಿದ್ದರು. ವಿದ್ಯಾರ್ಥಿನಿಯರಿಗೆ ಸ್ನಾನಗೃಹವನ್ನು ಬಳಸುವಂತೆ ಹೇಳುತ್ತಿದ್ದರು’ ಎಂಬ ಮಾಹಿತಿಯನ್ನೂ ನೀಡಿದ್ದಾರೆ.

‘ಕಿರುಕುಳವನ್ನು ಪ್ರಶ್ನಿಸಿದ ಕಾರಣಕ್ಕೇ ನಮ್ಮನ್ನು ಜುಲೈ ಕೊನೆಯ ವಾರ ಹಾಸ್ಟೆಲ್‌ನಿಂದ ಹೊರದಬ್ಬಿದರು. ನಾವು ಮನೆಗೂ ಹೋಗದೆ, ಬೆಂಗಳೂರಿನ ಸಂಬಂಧಿಕರ ಮನೆಗೆ ಹೋಗಿ ಮಾಹಿತಿ ನೀಡಲು ನಿರ್ಧರಿಸಿದೆವು. ಆದರೆ ಬೆಂಗಳೂರಿಗೆ ಹೋದ ಬಳಿಕ ಸಂಬಂಧಿಕರ ಬಳಿಗೆ ಹೋಗಲಿಲ್ಲ. ಆಟೊ ಚಾಲಕರೊಬ್ಬರು, ಕಾಟನ್‌ಪೇಟೆ ಪೊಲೀಸ್ ಠಾಣೆಗೆ ಕರೆದೊಯ್ದರು. ಅಲ್ಲಿಂದ ನಮ್ಮನ್ನು ಮತ್ತೆ ಪೋಷಕರ ಬಳಿಗೆ ಕಳಿಸಿದರು. ಪೋಷಕರು ಸ್ಥಳೀಯ ಜನಪ್ರತಿನಿಧಿಯೊಬ್ಬರನ್ನು ಭೇಟಿ ಮಾಡಿ ಅಲವತ್ತುಕೊಂಡರು. ಅವರ ಮೂಲಕ ಒಡನಾಡಿ ಸಂಸ್ಥೆಗೆ ಬಂದೆವು’ ಎಂದು ಬಾಲಕಿಯರು ಹೇಳಿದ್ದಾರೆ.

ಎಸ್‌ಪಿಗೂ ಮಾಹಿತಿ: ‘ರಾಜ್ಯದ ಗೌರವಾನ್ವಿತ ಮಠವೊಂದರ ಸ್ವಾಮೀಜಿ ಮೇಲೆ ಬಾಲಕಿಯರು ಆರೋಪ ಮಾಡಿದ್ದಾರೆ. ಈ ಕುರಿತು ಆ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಗಳಿಗೂ ಮಾಹಿತಿ ನೀಡಲಾಗಿದೆ’ ಎಂದು ಒಡನಾಡಿ ಸಂಸ್ಥೆಯ ಪರಶುರಾಂ ತಿಳಿಸಿದ್ದಾರೆ.

> **ಪೋಕ್ಸೊ ಕಾಯ್ದೆ ವ್ಯಾಪ್ತಿಯ ಪ್ರಕರಣದಲ್ಲಿ ವಿಳಂಬ ಮಾಡುವಂತಿಲ್ಲ. ಬಾಲಕಿಯರು ನಮ್ಮ ಬಳಿಗೆ ಬಂದ ಎರಡು ಗಂಟೆಯಲ್ಲಿ ಅವರನ್ನು ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಿದ್ದೇವೆ**
>
> **ಪರಶುರಾಂ**
> ‘ಒಡನಾಡಿ’ ಸಂಸ್ಥೆಯ ನಿರ್ದೇಶಕ

> **ಬಾಲಕಿಯರು ಸಮಿತಿ ಮುಂದೆ ಹಾಜರಾಗಿದ್ದಾರೆ. ತನಿಖೆ ನಡೆದಿದೆ**
>
> **ಸವಿತಾ,** ಮಕ್ಕಳ ಕಲ್ಯಾಣ ಸಮಿತಿ ಸದಸ್ಯೆ

ಶನಿವಾರ, ಆಗಸ್ಟ್ 27, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 238 | ಪುಟ 22
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಸವಾಲುಗಳ ನಡುವೆ ಅಂಟಾರ್ಕ್ಟಿಕಾ ಹಿಮಖಂಡಕ್ಕೆ ಪ್ರವಾಸ ಮಾಡಿ ಬಂದಿರುವ ಐಎಫ್ಎಸ್ ಮಹಿಳಾ ಅಧಿಕಾರಿಯೊಬ್ಬರ ಅನುಭವ ಕಥನ

ಕಾಂಗ್ರೆಸ್‌ನಲ್ಲೇ ಮುಂದುವರಿಯುವೆ: ಕೆ.ಎಚ್. ಮುನಿಯಪ್ಪ 6
ಚರ್ಚೆ ಸಿನಿಮಾಗಳನ್ನು ಬಹಿಷ್ಕರಿಸಿ ಎಂಬ ಅಭಿಯಾನಗಳು ಸರಿಯಾದ ನಡೆಯೇ?
ನಿಯಮ ಉಲ್ಲಂಘಿಸಿ ನೇಮಕ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,834 ▲	17,558 ▲	₹53,550 (ಬೆಂಗಳೂರು) ▲	₹57,300 (ಬೆಂಗಳೂರು) ▼	79.84 ▲

ಒಳ ಪುಟಗಳು

ಜೆಡಿಎಸ್ ಬೆಂಬಲಿಸಿ: ಜಿಟಿಡಿ 7
ಶಿಲ್ಪಕಲಾ ಅಕಾಡೆಮಿ: ಐವರು ಕಲಾವಿದರಿಗೆ ಗೌರವ ಪ್ರಶಸ್ತಿ 6
ಎಐಎಫ್ಎಫ್ ಮೇಲಿನ ಅಮಾನತು ಹಿಂಪಡೆದ ಫಿಫಾ 13

ಚರಂತಿಮಠ, ಸೇಡಂಗೂ ಬದಲಿ ನಿವೇಶನ

ನವದೆಹಲಿ: ಸುಪ್ರೀಂ ಕೋರ್ಟ್‌ನ ಆದೇಶ ಉಲ್ಲಂಘಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಬಿಜೆಪಿ ಶಾಸಕ ವೀರಣ್ಣ ಸಿ.ಚರಂತಿಮಠ, ಬಿಜೆಪಿ ಮುಖಂಡ ಬಸವರಾಜ ಪಾಟೀಲ ಸೇಡಂ ಹಾಗೂ ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಮಾಜಿ ಸದಸ್ಯ ಡಾ.ಎಂ. ನಾಗರಾಜ್ ಅವರಿಗೂ ಬದಲಿ ನಿವೇಶನ ಹಂಚಿಕೆ ಮಾಡಿದೆ. 4

ಚಿನಕುರಳಿ

ಪ್ರಕಾಶ್ ಶೆಟ್ಟಿ

ರಾಹುಲ್ ನಡೆ ಬಾಲಿಶ, ಅಪ್ರಬುದ್ಧ: ಗುಲಾಂ ನಬಿ ಟೀಕಾಪ್ರಹಾರ

‘ಕೈ’ಗೆ ಆಜಾದ್ ವಿದಾಯ

ಪ್ರಜಾವಾಣಿ ವಾರ್ತೆ



ನವದೆಹಲಿ: ಕಾಂಗ್ರೆಸ್ ನಾಯಕ ಗುಲಾಂ ನಬಿ ಆಜಾದ್ ಅವರು ಪಕ್ಷದಲ್ಲಿನ ತಮ್ಮ ಎಲ್ಲಾ ಹುದ್ದೆಗಳಿಗೆ ಮತ್ತು ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ. ಕಾಂಗ್ರೆಸ್ ಜತೆಗಿನ ತಮ್ಮ ಐವತ್ತು ವರ್ಷಗಳ ಸಂಬಂಧವನ್ನು ಕಡಿದುಕೊಂಡಿರುವ ಅವರು, ಪಕ್ಷದ ಇಂದಿನ ಎಲ್ಲಾ ದುಃಸ್ಥಿತಿಗೆ ರಾಹುಲ್ ಗಾಂಧಿ ಅವರೇ ಕಾರಣ ಎಂದು ಆರೋಪಿಸಿದ್ದಾರೆ. ರಾಹುಲ್ ಅವರನ್ನು ಬಾಲಿಶ, ಅಪ್ರಬುದ್ಧ ಎಂದು ಕರೆದಿದ್ದಾರೆ. ಸೋನಿಯಾ ಅವರನ್ನೂ ಆಜಾದ್ ಕಟುಮಾತುಗಳಿಂದ ಟೀಕಿಸಿದ್ದಾರೆ.

ಕಾಂಗ್ರೆಸ್‌ನ ‘ಭಾರತ ಜೋಡಿಸಿ ಯಾತ್ರೆ’ ಆರಂಭಕ್ಕೆ ಕೆಲವೇ ದಿನ ಉಳಿದಿರುವಾಗ ಆಗಿರುವ ಈ ಬೆಳವಣಿಗೆಯು ಪಕ್ಷಕ್ಕೆ ದೊಡ್ಡ ಹಿನ್ನಡೆ ಎಂದು ವಿಶ್ಲೇಷಿಸಲಾಗಿದೆ. ‘ಭಾರತ ಜೋಡಿಸಿ ಯಾತ್ರೆ ಆರಂಭಿಸುವುದಕ್ಕೂ ಮುನ್ನ, ಭಾರತದಾದ್ಯಂತ ಕಾಂಗ್ರೆಸ್ ಜೋಡಿಸಿ ಯಾತ್ರೆ ನಡೆಸಬೇಕು’ ಎಂದು ಆಜಾದ್ ವ್ಯಂಗ್ಯವಾಡಿದ್ದಾರೆ.

ಆಜಾದ್ ಅವರ ರಾಜೀನಾಮೆಯನ್ನು ಬೆಂಬಲಿಸಿ ಜಮ್ಮು–ಕಾಶ್ಮೀರ ಕಾಂಗ್ರೆಸ್‌ನ ಎಂಟು ಮುಖಂಡರು ರಾಜೀನಾಮೆ ಸಲ್ಲಿಸಿದ್ದಾರೆ. ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಚಿಕಿತ್ಸೆಗಾಗಿ ಲಂಡನ್‌ಗೆ ಹೋಗಿದ್ದಾರೆ. ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರ ಜತೆಯಲ್ಲಿದ್ದಾರೆ. ಈ ಸಂದರ್ಭದಲ್ಲೇ ಆಜಾದ್ ರಾಜೀನಾಮೆ ನೀಡಿದ್ದಾರೆ. ಐದು ಪುಟಗಳ ರಾಜೀನಾಮೆ ಪತ್ರವನ್ನು ಅವರು, ಸೋನಿಯಾ ನಿವಾಸಕ್ಕೆ ಕಳುಹಿಸಿದ್ದಾರೆ. ಆ ಪತ್ರವನ್ನು ಮಾಧ್ಯಮಗಳಿಗೂ ನೀಡಿದ್ದಾರೆ.

12ನೇ ಪುಟ ನೋಡಿ

‘ಸೋನಿಯಾ ನಾಮಕಾವಸ್ಥೆ ಅಧ್ಯಕ್ಷೆ’

ಸೋನಿಯಾ ಅವರು ಪಕ್ಷದ ನಾಮಕಾವಸ್ಥೆ ಅಧ್ಯಕ್ಷೆ ಅಷ್ಟೆ ಎಂದು ಆಜಾದ್ ಆರೋಪಿಸಿದ್ದಾರೆ. ‘ನೀವು ಪಕ್ಷದ ಅಧ್ಯಕ್ಷೆಯಾಗಿರುವುದು ನಾಮಕಾವಸ್ಥೆಗೆ ಮಾತ್ರ. ಪಕ್ಷಕ್ಕೆ ಸಂಬಂಧಿಸಿದ ಪ್ರಮುಖ ನಿರ್ಧಾರಗಳನ್ನು ರಾಹುಲ್ ಗಾಂಧಿ ಅಥವಾ ಅವರ ಭದ್ರತಾ ಸಿಬ್ಬಂದಿ ಅಥವಾ ಅವರ ಆಪ್ತ ಸಹಾಯಕರು ತೆಗೆದುಕೊಳ್ಳುತ್ತಿದ್ದಾರೆ’ ಎಂದು ಆಜಾದ್ ತಮ್ಮ ಪತ್ರದಲ್ಲಿ ಆರೋಪಿಸಿದ್ದಾರೆ. 2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋತ ನಂತರ ರಾಹುಲ್ ಅವರು ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಆನಂತರ ನೀವು ಪಕ್ಷದ ಮಧ್ಯಂತರ ಅಧ್ಯಕ್ಷೆಯಾಗಿ ಅಧಿಕಾರ ಸ್ವೀಕರಿಸಿದಿರಿ. ಆದರೆ, ಮೂರು ವರ್ಷಗಳ ನಂತರವೂ ನೀವೇ ಅಧ್ಯಕ್ಷರಾಗಿ ಮುಂದುವರಿಯುತ್ತಿದ್ದೀರಿ ಎಂದು ಆಜಾದ್ ಹೇಳಿದ್ದಾರೆ.

‘ಕೋಮುವಾದಿಗಳಿಗೆ ಸಹಕಾರ’

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕೋಮುವಾದದ ವಿರುದ್ಧ 3,500 ಕಿ.ಮೀ. ಉದ್ದದ ‘ಭಾರತ್ ಜೋಡೋ’ ಪಾದಯಾತ್ರೆ ಮಾಡುತ್ತಿದ್ದಾರೆ. ಈಗ ಪಕ್ಷ ತೊರೆದು ಹೋಗುವುದು ಕೋಮುವಾದದ ವಿರುದ್ಧದ ಹೋರಾಟವನ್ನು ದುರ್ಬಲಗೊಳಿಸಿದಂತೆ. ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡುವ ಸಮಯದಲ್ಲಿ ಪಕ್ಷ ತೊರೆದು ಹೋಗುವುದರಿಂದ ಅವರ ಬದ್ಧತೆಯ ಮೇಲೆ ಪ್ರಶ್ನೆ ಮೂಡುತ್ತದೆ. ಪರೋಕ್ಷವಾಗಿ ಕೋಮುವಾದಿ ಶಕ್ತಿಗಳಿಗೆ ಸಹಕರಿಸಿದಂತಾಗುತ್ತದೆ

ಮಲ್ಲಿಕಾರ್ಜುನ ಖರ್ಗೆ
ರಾಜ್ಯಸಭೆ ವಿರೋಧ ಪಕ್ಷದ ನಾಯಕ

ಕಾಂಗ್ರೆಸ್ ನಾಯಕತ್ವದ ವಿರುದ್ಧದ ವೈಯಕ್ತಿಕ ದಾಳಿಯು ಆಜಾದ್ ಅವರ ನಿಜವಾದ ಬಣ್ಣವನ್ನು ಬಯಲು ಮಾಡಿದೆ. ಆಜಾದ್ ಅವರ ಡಿಎನ್‌ಎ ‘ಮೋದಿಫೈಡ್’ ಆಗಿದೆ

ಜೈರಾಮ್ ರಮೇಶ್
ಕಾಂಗ್ರೆಸ್ ಹಿರಿಯ ನಾಯಕ

ರಾಜ್ಯಸಭೆಯಲ್ಲಿ ನಿಮ್ಮ ಸದಸ್ಯತ್ವದ ಅವಧಿ ಮುಗಿದ ಕೂಡಲೇ ಇವೆಲ್ಲಾ ಆರಂಭವಾಗಿದೆ. ಯಾವುದೇ ಹುದ್ದೆ ಇಲ್ಲದೆ ಒಂದು ಕ್ಷಣ ಇರಲೂ ನಿಮಗೆ ಸಾಧ್ಯವಿಲ್ಲವೇ?

ಪವನ್ ಖೇರಾ, ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ

ದೂರಿದರೆ ಎಫ್ಐಆರ್: ‘ಲೋಕಾ’ ಎಡಿಜಿಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಬರುವ ದೂರುಗಳನ್ನು ಸ್ವೀಕರಿಸಿ, ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ–1988ರ ಅಡಿಯಲ್ಲಿ ಎಫ್ಐಆರ್ ದಾಖಲಿಸಿ, ತನಿಖೆ ನಡೆಸುವಂತೆ ಲೋಕಾಯುಕ್ತದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಸಂಸ್ಥೆಯ ಪೊಲೀಸ್ ಅಧಿಕಾರಿಗಳಿಗೆ ಶುಕ್ರವಾರ ಸೂಚನೆ ನೀಡಿದ್ದಾರೆ.

ಈ ಸಂಬಂಧ ಹೊರಡಿಸಲಾಗಿರುವ ಸುತ್ತೋಲೆಯಲ್ಲಿ ಭ್ರಷ್ಟಾಚಾರ ನಿಗ್ರಹ ದಳವನ್ನು (ಎಸಿಬಿ) ರದ್ದುಗೊಳಿಸಿ ಹೈಕೋರ್ಟ್ ನೀಡಿರುವ ತೀರ್ಪನ್ನು ಉಲ್ಲೇಖಿಸಿರುವ ಲೋಕಾಯುಕ್ತ ಎಡಿಜಿಪಿ ಪ್ರಶಾಂತ್ ಕುಮಾರ್ ಠಾಕೂರ್, ‘ಈ ಪ್ರಕರಣದಲ್ಲಿ ಹೈಕೋರ್ಟ್ ಶಿಫಾರಸು ಮತ್ತು ನಿರ್ದೇಶನಗಳ ಕಾರಣದಿಂದ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ದೂರುಗಳನ್ನು ಸ್ವೀಕರಿಸಿ, ತನಿಖೆ ನಡೆಸುವಂತೆ ಸಂಸ್ಥೆಯ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಲು ಲೋಕಾಯುಕ್ತರು ನಿರ್ದೇಶನ ನೀಡಿದ್ದಾರೆ’ ಎಂದು ತಿಳಿಸಿದ್ದಾರೆ.

ಲೋಕಾಯುಕ್ತದ ಎಸ್‌ಪಿಗಳು, ಡಿವೈಎಸ್‌ಪಿಗಳು ಮತ್ತು ಪೊಲೀಸ್ ಇನ್‌ಸ್ಪೆಕ್ಟರ್‌ಗಳಿಗೆ ಈ ಸುತ್ತೋಲೆಯನ್ನು ರವಾನಿಸಲಾಗಿದೆ. ಲಂಚದ ಆರೋಪ, ಭ್ರಷ್ಟಾಚಾರ, ಅಧಿಕಾರ ದುರ್ಬಳಕೆಗೆ ಸಂಬಂಧಿಸಿದ ದೂರುಗಳನ್ನು ಸ್ವೀಕರಿಸಿ, ತನಿಖೆ ಆರಂಭಿಸುವ ಲೋಕಾಯುಕ್ತರ ನಿರ್ಧಾರದಂತೆ ಈ ಸುತ್ತೋಲೆ ಹೊರಡಿಸಲಾಗಿದೆ.

ಎಸಿಬಿ ರಚನೆಯ ಅಧಿಸೂಚನೆಯನ್ನು ರದ್ದುಗೊಳಿಸಿ ಆಗಸ್ಟ್ 11ರಂದು ತೀರ್ಪು ನೀಡಿದ್ದ ಹೈಕೋರ್ಟ್ ವಿಭಾಗೀಯ ಪೀಠ, ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ–1988ರ ಅಡಿಯಲ್ಲಿ ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಈ ಹಿಂದೆ ನೀಡಿದ್ದ ಅಧಿಕಾರವನ್ನು ಮರುಸ್ಥಾಪಿಸಿತ್ತು. ಎಸಿಬಿಯಲ್ಲಿ ತನಿಖಾ ಹಂತದಲ್ಲಿರುವ ಎಲ್ಲ ಪ್ರಕರಣಗಳನ್ನು ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಹಸ್ತಾಂತರ ಮಾಡುವಂತೆ ಆದೇಶಿಸಿತ್ತು.

ತನಿಖಾ ಹಂತದಲ್ಲಿರುವ ಪ್ರಕರಣಗಳನ್ನು ಎಸಿಬಿ ಅಧಿಕಾರಿಗಳು ಇನ್ನೂ ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಹಸ್ತಾಂತರ ಮಾಡಿಲ್ಲ. ಆದರೆ, ಹೊಸ ಪ್ರಕರಣಗಳಿಗೆ ಸಂಬಂಧಿಸಿದಂತೆ ರಾಜ್ಯದ ವಿವಿಧೆಡೆ ಲೋಕಾಯುಕ್ತ ಪೊಲೀಸ್ ಕಚೇರಿಗಳಿಗೆ ದೂರುಗಳು ಬರುತ್ತಿವೆ. ಅವುಗಳನ್ನು ಪರಿಶೀಲಿಸಿ ಲೋಕಾಯುಕ್ತ ಪೊಲೀಸರು ಮುಂದಿನ ಕ್ರಮ ಜರುಗಿಸುತ್ತಾರೆ ಎಂದು ಲೋಕಾಯುಕ್ತದ ಮೂಲಗಳು ತಿಳಿಸಿವೆ.

PRINCE JEWELLERY
GREAT FESTIVAL SALE
FLAT VALUE ADDITION 4.99%* ರಿಂದ ಪ್ರಾರಂಭ ಪ್ರಿನ್ಸ್ ಅಶ್ಯೂರ್ಡ್ ವ್ಯಾಲ್ಯೂ ಸಂಗ್ರಹಣೆಯ ಮೇಲೆ
7.5%* ರಿಯಾಯಿತಿ ಪ್ರಮಾಣೀಕೃತ ನೈಸರ್ಗಿಕ ವಜ್ರದ ಆಭರಣಗಳ ಮೇಲೆ ಪ್ರತಿ ಕ್ಯಾರೆಟ್‌ಗೆ
25%* ರಿಯಾಯಿತಿ ಬೆಳ್ಳಿ ವಸ್ತುಗಳ ಮೇಕಿಂಗ್ ಚಾರ್ಜ್‌ಗಳ ಮೇಲೆ



ಉಚಿತ* ಆಭರಣ ಖರೀದಿಯ ಮೇಲೆ ಹಬ್ಬದ ಸೀರೆ / ರಿಡೀಮ್ ಮಾಡಬಹುದಾದ ಉಡುಗೊರೆ ವೋಚರ್‌ಗಳು
ಪ್ರತಿ ಆಭರಣ ಖರೀದಿಯ ಮೇಲೆ ಗೃಹೋಪಕರಣ ವಸ್ತುಗಳು ಉಚಿತ*
Lowest market rate | Quality + collections you'll love | Best value on exchange | BIS 916 Hallmarked Gold | GIA Certified Diamonds
BENGALURU: 11th Main Road, Near Cosmopolitan Club, 3rd Block, Jayanagar. Ph: 080-4264 9999.
CHENNAI | COIMBATORE | THIRUVANANTHAPURAM
www.princejewellery.com Open on Sundays. Valet parking available.
*Terms and conditions apply. Offers not valid for coins, bullions, solitaires and exchange of diamond jewellery. Offer not valid on jewellery with wastage (VA) less than 10%. Offer cannot be clubbed with other offers and closure of purchase plan.

ಅವರು ನಿಮ್ಮ ಯಶಸ್ಸಿನ ಬಗ್ಗೆ ಕೇಳಿದಾಗ
ಅವರು ನಿಮ್ಮ ವಿಜಯೋತ್ಸವದ ಬಗ್ಗೆ ಪ್ರಶ್ನೆ ಮಾಡಿದಾಗ
ಸಿಂಪಲ್ ಆಗಿ ಹೇಳುವಿರಿ ದೊಡ್ಡ ಗೆಲುವು ಅಂದರೆ ನಾನು ನಾನೇ ಆಗಿರುವುದು
ನಾವು ನಾವಾಗೇ ಇರೋದು, ಒಂದು ವಿಶೇಷ ಫೀಲಿಂಗ್,
ಅದನ್ನಾಗಿಸುತ್ತೆ ಇನ್ನಷ್ಟು ವಿಶೇಷ... ಅಪರೂಪದ ಪ್ಲಾಟಿನಂ.
EVARA ಅಪರೂಪ, ನಿಮ್ಮಂತೆ
Explore www.ptevara.in
/PlatinumEvara
LOOK FOR PT950 - THE ASSURANCE OF 95% PURE PLATINUM, A MARK OF AUTHENTICITY AND PURITY. For authentic platinum jewellery and assured buyback ask for your platinum purity assurance card.
Available at: **Avenue Road:** Davanam Jewellers 43438383 | **Banashankari:** Tanishq 26691687 | Malabar Gold & Diamonds 49779916 | **Bannerghatta:** Tanishq 45612222 | Malabar Gold & Diamonds 41489916 | **Basaveshwaranagar:** Mukesh Jewellers 41287008 | **Commercial Street:** C. Krishniah Chetty & Sons 25588731 | Davanam Jewellers 41418181 | Sri Krishna Diamonds 40301111 | **Dickenson Road:** AVR Swarna Mahal Jewellers 25540007 | Bhima Jewellers 25065075 | Jos Alukkas Jewellery 25552280 | Joyalukkas 25093916 | Kalyan Jewellers 25550533 | Malabar Gold & Diamonds 41283916 | ORRA 41130100 | Sulthan Diamonds & Gold 25596916 | Tanishq 25550907 | **HBR Layout:** Bhima Jewellers 25447711 | **HSR Layout:** Malabar Gold & Diamonds 29913916 | **Hoodi:** Bhima Jewellers 8970796928 | **Jayanagar:** AVR Swarna Mahal Jewellers 26547007 | Bhima Jewellers 41301761 | C. Krishniah Chetty & Sons 66379822 | GRT Jewellers 22450777 | Jos Alukkas Jewellery 32942120 | Josco Jewellers 41666842 | Joyalukkas 26634448 | Kalyan Jewellers 26647733 | Khazana Jewellery 41539900 | Malabar Gold & Diamonds 41526916 | ORRA 9341903803 | Prince Jewellery 42649999 | Reliance Jewels 41681808 | Sulthan Diamonds & Gold 26534916 | Tanishq 65606561 | **Kammanahalli:** GRT Jewellers 25461515 | Kalyan Jewellers 8792851933 | Malabar Gold & Diamonds 25421916 | Tanishq 43078900 | **Kanakapura:** Tanishq 41177916 | **Koramangala:** Bhima Jewellers 25537762 | Malabar Gold & Diamonds 25522916 | Reliance Jewels 41244551 | Senco Gold & Diamonds 41141197 | Tanishq 45462222 | ORRA 9380062226 | **M G Road:** Abaran 25328600 | Joyalukkas 25589916 | **Malleswaram:** Bhima Jewellers 49767711 | C. Krishniah Chetty Jewellers 41001869 | Davanam Jewellers 41416161 | GRT Jewellers 22921515 | Joyalukkas 23466916 | Kalyan Jewellers 23360533 | Tanishq 23465402 | Malabar Gold & Diamonds 41535916 | **Marthahalli:** Bhima Jewellers 28546611 | GRT Jewellers 25401515 | Joyalukkas 25073800 | Kalyan Jewellers 46837079 | Malabar Gold & Diamonds 48514916 | Tanishq 43007773 | **Phoenix Market City:** Joyalukkas 49626678 | Kalyan Jewellers 49626533 | Malabar Gold & Diamonds 32325916 | ORRA 9686166916 | Senco Gold & Diamonds 67266340 | Tanishq 67266400 | **Rajaji Nagar:** Abaran 23598600 | Bhima Jewellers 23527712 | Jos Alukkas Jewellery 32956916 | Malabar Gold & Diamonds 49227916 | **Whitefield:** Tanishq 25018171 | **Yelahanka:** Tanishq 68137426 | **Forum Shanti Niketan Mall:** ORRA 7720082327 | **Forum Koramangala Mall:** ORRA 7710082442 | **J.P. Nagar:** Abaran 29908600 | **KR Puram:** GRT Jewellers 29901515 | **RR Nagar:** GRT Jewellers 23341515 | **Vijayanagar:** Praveen Jewels 40924995

ಶನಿವಾರದ ಉಷ್ಣಾಂಶ 28° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ ನಗರದಲ್ಲಿ ಮೋಡ ಕವಿದ ವಾತಾವರಣ. ಅಲ್ಲಲ್ಲಿ ಮಳೆ ಸಾಧ್ಯತೆ.

ಭಾನುವಾರ	ಸೋಮವಾರ	ಮಂಗಳವಾರ
29° 21°	29° 21°	29° 21°

ಸೂರ್ಯೋದಯ: 6:08 ಸೂರ್ಯಾಸ್ತ : 6:24 ಚಂದ್ರೋದಯ: ಬೆ. 5:10 ಚಂದ್ರಾಸ್ತ: ಸಂ. 5:09 ಶುಕ್ರವಾರದ ಹವಾಮಾನ : ಗರಿಷ್ಠ 28° ಕನಿಷ್ಠ 20°

ಪ್ರಜಾವಾಣಿ

ಯಶವಂತಪುರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,

ಪ್ರಧಾನ ಕಛೇರಿ: ನಂ. 61, 7ನೇ ಮುಖ್ಯ ರಸ್ತೆ, ಗೋಕುಲ 1ನೇ ಹಂತ, ಯಶವಂತಪುರ, ಬೆಂಗಳೂರು-560 022
E-mail: manager@yccs.co.in ದೂರವಾಣಿ: 080-23372744 ಮೊಬೈಲ್: 9449867653 /4
ಶಾಖೆ: ಕೆ.ಇ.ಸಿ. ಬಡಾವಣೆ ಮೊ: 9449867655
ಶಾಖೆ: ಅಟ್ಟೂರು ಬಡಾವಣೆ ದೂ.: 080-29522744 ಮೊ: 9449867651

48ನೇ ಸಾಮಾನ್ಯ ವಾರ್ಷಿಕ ಸರ್ವಸದಸ್ಯರ ಸಭೆಯ ತಿಳುವಳಿಕೆ ಪತ್ರ 2021-22 ನೋಟೀಸು

2021-22ನೇ ಸಾಲಿನ 48ನೇ ಸಾಮಾನ್ಯ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಸೊಸೈಟಿಯ ಅಧ್ಯಕ್ಷರಾದ ಶ್ರೀ ಮುನಿಸ್ವಾಮಿ ಎನ್. ರವರ ಘನ ಅಧ್ಯಕ್ಷತೆಯಲ್ಲಿ ದಿ. 28-08-2022ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ಶ್ರೀ ವೈ. ಮುನಿಸ್ವಾಮಪ್ಪ ಕಲ್ಯಾಣ ಮಂಟಪ ಯಶವಂತಪುರ, ಬೆಂಗಳೂರು-22 ಏರ್ಪಡಿಸಲಾಗಿದೆ. ಸದಸ್ಯರ ವಿಳಾಸಗಳಿಗೆ ಸರ್ವಸದಸ್ಯರ ಸಭೆಯ ಪತ್ರವನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ಒಂದು ವೇಳೆ ನೋಟೀಸ್ ತಲುಪದೇ ಇದ್ದಲ್ಲಿ ಇದನ್ನೇ ಸರ್ವಸದಸ್ಯರ ಸಭೆಯ ನೋಟೀಸ್ ಎಂದು ಪರಿಗಣಿಸಿ, ಸಭೆಗೆ ಭಾಗವಹಿಸಲು ಕೋರಲಾಗಿದೆ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ರಾಜೀವ್ ಎಸ್. ಎನ್. ವ್ಯವಸ್ಥಾಪಕರು

ನಗರ ಸಿವಿಲ್ ನ್ಯಾಯಾಲಯದ ಕಾರ್ಯಾಲಯ ಬೆಂಗಳೂರು

ಸಂ: ಆ.ವಿ॥ 46/2022(ಅನುಪಯುಕ್ತ ವಾಹನಗಳು) ದಿನಾಂಕ:22.08.2022

ಹರಾಜು ಪ್ರಕಟಣೆ

ನಗರ ಸಿವಿಲ್ ನ್ಯಾಯಾಲಯದ ದಾಸ್ತಾನಿನಲ್ಲಿರತಕ್ಕಂತಹ ಅನುಪಯುಕ್ತ ವಾಹನಗಳನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲು ದಿನಾಂಕ:22.09.2022ರ ಗುರುವಾರ ಮಧ್ಯಾಹ್ನ 12.30ಗಂಟೆಗೆ ನಗರ ಸಿವಿಲ್ ನ್ಯಾಯಾಲಯದ ಆವರಣದಲ್ಲಿ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲು ನಿರ್ಧರಿಸಲಾಗಿದೆ. ಬಹಿರಂಗ ಹರಾಜಿನಲ್ಲಿ ವಿಲೇವಾರಿ ಮಾಡತಕ್ಕಂತಹ ಅನುಪಯುಕ್ತ ವಾಹನಗಳು ಈ ಕೆಳಕಂಡಂತಿವೆ. (1) ಅನುಪಯುಕ್ತ ವಾಹನಗಳ ವಿವರ: **ಅಂಬಾಸಿಡರ್ ಕಾರ್ ನಂ.ಕೆಎ-01-ಜಿ3972 ಇಂಜಿನ್ ನಂ.3ಈಎಲ್ಎಸಿ 076238 ಚಾಸ್ಸಿ ನಂ.ಎಬಿಸಿ 862808.** ಪ್ರಮಾಣ: 01. ಅನುಪಯುಕ್ತ ಮತ್ತು ವಾಹನದ ಮಾರ್ಕೆಟ್ ಬೆಲೆ: **ರೂ.2,89,320/-.** ವಸ್ತು ಸ್ಥಿತಿ ಮತ್ತು ಕೊಂಡುಕೊಂಡ ದಿನಾಂಕ: **ಅನುಪಯುಕ್ತ ಮತ್ತು 21.03.2003.** ವಿಲೇವಾರಿ ಮಾಡುವ ವಿಧಾನ: **ಬಹಿರಂಗ ಹರಾಜು.** ಮುಖಬೆಲೆ ಪ್ರತಿ ವಾಹನಕ್ಕೆ: **ರೂ.22,000/-.** (2) ಅನುಪಯುಕ್ತ ವಾಹನಗಳ ವಿವರ: **ಮಾರುತಿ ವ್ಯಾನ್ ನಂ.ಕೆಎ-01-ಜಿ2410 ಇಂಜಿನ್ ನಂ. ಎಫ್8ಬಿ1ಎನ್1307543 ಚಾಸ್ಸಿ ನಂ.ಎಸ್‌ಟಿ911ಎನ್151984.** ಪ್ರಮಾಣ: 01. ಅನುಪಯುಕ್ತ ಮತ್ತು ವಾಹನದ ಮಾರ್ಕೆಟ್ ಬೆಲೆ: **ರೂ.1,77,500/-.** ವಸ್ತು ಸ್ಥಿತಿ ಮತ್ತು ಕೊಂಡುಕೊಂಡ ದಿನಾಂಕ: **ಅನುಪಯುಕ್ತ ಮತ್ತು 26.06.1996.** ವಿಲೇವಾರಿ ಮಾಡುವ ವಿಧಾನ: **ಬಹಿರಂಗ ಹರಾಜು.** ಮುಖಬೆಲೆ ಪ್ರತಿ ವಾಹನಕ್ಕೆ: **ರೂ.16,000/-.** (3) ಅನುಪಯುಕ್ತ ವಾಹನಗಳ ವಿವರ: **ಅಂಬಾಸಿಡರ್ ಕಾರ್ ನಂ.ಕೆಎ-01-ಜಿ3974 ಇಂಜಿನ್ ನಂ.3ಈಎಲ್‌ಸಿಬಿ 076566 ಚಾಸ್ಸಿ ನಂ.ಎಲ್‌ಸಿ 863138.** ಪ್ರಮಾಣ: 01. ಅನುಪಯುಕ್ತ ಮತ್ತು ವಾಹನದ ಮಾರ್ಕೆಟ್ ಬೆಲೆ: **ರೂ.2,89,320/-.** ವಸ್ತು ಸ್ಥಿತಿ ಮತ್ತು ಕೊಂಡುಕೊಂಡ ದಿನಾಂಕ: **ಅನುಪಯುಕ್ತ ಮತ್ತು 2003.** ವಿಲೇವಾರಿ ಮಾಡುವ ವಿಧಾನ: **ಬಹಿರಂಗ ಹರಾಜು.** ಮುಖಬೆಲೆ ಪ್ರತಿ ವಾಹನಕ್ಕೆ: **ರೂ.22,000/-.** (4) ಅನುಪಯುಕ್ತ ವಾಹನಗಳ ವಿವರ: **ಅಂಬಾಸಿಡರ್ ಕಾರ್ ನಂ.ಕೆಎ-42-ಜಿ99 ಇಂಜಿನ್ ನಂ.3ಈಎಲ್‌ಜೆಜಿ 106122 ಚಾಸ್ಸಿ ನಂ.ಎಕೆಜಿ 916360.** ಪ್ರಮಾಣ: 01. ಅನುಪಯುಕ್ತ ಮತ್ತು ವಾಹನದ ಮಾರ್ಕೆಟ್ ಬೆಲೆ: **ರೂ.3,91,934/-.** ವಸ್ತು ಸ್ಥಿತಿ ಮತ್ತು ಕೊಂಡುಕೊಂಡ ದಿನಾಂಕ: **ಅನುಪಯುಕ್ತ ಮತ್ತು 2007.** ವಿಲೇವಾರಿ ಮಾಡುವ ವಿಧಾನ: **ಬಹಿರಂಗ ಹರಾಜು.** ಮುಖಬೆಲೆ ಪ್ರತಿ ವಾಹನಕ್ಕೆ: **ರೂ.24,000/-.** ಸದರಿ ಅನುಪಯುಕ್ತ ವಾಹನಗಳು ನಗರ ಸಿವಿಲ್ ನ್ಯಾಯಾಲಯದ ಆವರಣದಲ್ಲಿರುತ್ತವೆ. ಅವುಗಳನ್ನು **ಬಹಿರಂಗ ಹರಾಜಿನ ದಿನದಂದು ಬೆಳಿಗ್ಗೆ 12.30 ಗಂಟೆಯ ನಂತರ** ಪರಿಶೀಲಿಸಬಹುದಾಗಿರುತ್ತದೆ. ಬಹಿರಂಗ ಹರಾಜಿನಲ್ಲಿ ಸಫಲರಾದವರು ಸ್ಥಳದಲ್ಲಿಯೇ ಹರಾಜಿನ ಬೆಲೆಯನ್ನು ಪಾವತಿಸಿ, ಸದರಿ ಅನುಪಯುಕ್ತ ವಾಹನಗಳ ನಮೂನೆ ನಂ.29-30 ಸೇಲ್ ರಶೀದಿಯ ನಮೂನೆಗಳನ್ನು ಸಲ್ಲಿಸಿ ತದನಂತರ ಅವುಗಳನ್ನು ವಾಪಸ್ ಪಡೆದುಕೊಂಡ ನಂತರ ವಾಹನಗಳನ್ನು ತೆಗೆದುಕೊಂಡು ಹೋಗತಕ್ಕದ್ದು. ಒಂದು ವೇಳೆ ಅನುಪಯುಕ್ತ ವಾಹನಗಳ ಮುಖಬೆಲೆಗಿಂತ ಕಡಿಮೆಯಾದಲ್ಲಿ ವಿಲೇಖನಾಧಿಕಾರಿಗಳು, ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರುರವರ ನಿರ್ಧಾರವು ಅಂತಿಮವಾಗಿರುತ್ತದೆ.

ಸಹಿ/-
ವಿಲೇಖನಾಧಿಕಾರಿಗಳು,
ನಗರ ಸಿವಿಲ್ ನ್ಯಾಯಾಲಯ
ಬೆಂಗಳೂರು.

ವಾಸಾಸಂಇ/ಉನಿ-ಸಿ.ಪಿ/1973/ಎಂಸಿಎ/2022-23

ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ನಿರ್ವಹಣಾ ಕಾರ್ಯ ಕೈಗೊಂಡಿರುವುದರಿಂದ ಇದೇ 28ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 2ಗಂಟೆ ಯವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಡಿಎಲ್‌ಎಫ್ ಅಪಾರ್ಟ್‌ಮೆಂಟ್, ಬೇಗೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆ ವ್ಯತ್ಯಯ ಉಂಟಾಗಲಿದೆ.

ಎರಡು ದಿನ ವಿಚಾರ ಸಂಕಿರಣ

ಬೆಂಗಳೂರು: ಜೈನ್ ಡೀಮ್ಡ್ ಟು ಬಿ ಯೂನಿವರ್ಸಿಟಿ ವತಿಯಿಂದ ಸೆಪ್ಟೆಂಬರ್ 2 ಮತ್ತು 3ರಂದು 'ಸುಸ್ಥಿರ ಅಭಿವೃದ್ಧಿಗಾಗಿ ಹೊಸತನದ ಹಾದಿಗಳು: ವ್ಯಾಪಾರ ನಿರ್ವಹಣೆ ಮತ್ತು ವಿಶ್ಲೇಷಣೆ' ಎಂಬ ವಿಷಯದ ಕುರಿತು ಎರಡು ದಿನಗಳ ಅಂತರರಾಷ್ಟ್ರೀಯ ವಿಚಾರಸಂಕಿರಣವನ್ನು ಹಮ್ಮಿಕೊಳ್ಳಲಾಗಿದೆ.

ಅತಿಥಿಗಳಾಗಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಮ್ಯಾನೇಜ್‌ಮೆಂಟ್ ಬೆಂಗಳೂರು (ಐಐಎಂ-ಬಿ) ತಾಂತ್ರಿಕ ನಿರ್ದೇಶಕ ಋಷಿಕೇಶ ಟಿ. ಕೃಷ್ಣನ್, ಎಕ್ಸಿಲಿಯಾ ಬ್ಯುಸಿನೆಸ್ ಸ್ಕೂಲ್ ಫ್ರಾನ್ಸ್‌ನ ಅಧ್ಯಾಪಕ ಅಮಿತಾಭ್ ಆನಂದ, ಜೈನ್ ಡೀಮ್ಡ್ ಟು ಬಿ ಯೂನಿವರ್ಸಿಟಿಯ ಕುಲಪತಿ ರಾಜ್ ಸಿಂಗ್, ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕೃತಕ ಅಂಗಾಂಗ ಮಾಪನ ಶಿಬಿರ ನಾಳೆ

ಬೆಂಗಳೂರು: ಕರ್ನಾಟಕ ಮಾರ್ವಾಡಿ ಸಮಾಜವು ಕೃತಕ ಅಂಗಾಂಗ ಮಾಪನ ಶಿಬಿರವನ್ನು ಭಾನುವಾರ ಬೆಳಿಗ್ಗೆ 10 ಗಂಟೆಗೆ ಜಯನಗರದ ಮಹಾರಾಜ ಅಗ್ರಸೇನ್ ಭವನದಲ್ಲಿ ಹಮ್ಮಿಕೊಂಡಿದೆ.

ಕಾಲು, ಮುಂಗೈ ಕಳೆದುಕೊಂಡವರು ಈ ಶಿಬಿರದಲ್ಲಿ ಭಾಗವಹಿಸಬಹುದಾಗಿದೆ. ಶಿಬಿರದಲ್ಲಿ ಅಂಗಾಂಗದ ಅಳತೆ ಪಡೆದು, ಕೃತಕ ಅಂಗಾಂಗವನ್ನು ಸೆ.25ಕ್ಕೆ ಉಚಿತವಾಗಿ ಒದಗಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕಕ್ಕೆ ಮೊ: 9886521885 ಅಥವಾ 9620000244

AIR FORCE SCHOOL HEBBAL

HQTC (U) AF, JC Nagar Post, Bengaluru - 06
(Under the aegis of the IAF Educational & Cultural Society)

WALK IN INTERVIEW

Interview for the appointment / empanelment of the following Regular / Contractual vacant posts will be conducted as per the following schedule :

Sl No	Vacant Posts	Date & Time
	CONTRACTUAL	
1	PGT History - 01	06 Sep 22, 0930Hrs
2	PGT Political Science - 01	06 Sep 22, 0930Hrs
3	PGT Commerce - 01	06 Sep 22, 0930Hrs
	REGULAR	
1	NTT - 03	07 Sep 22, 0930Hrs
2	Clerk - 01	07 Sep 22, 0930Hrs
3	Helpers (MTS) - 02	07 Sep 22, 0930Hrs
	EMPANELMENT	
1	PRT (General)	07 Sep 22, 0930Hrs

For application, QRs, pay scale & more details please log on to **www.afshebbal.ac.in**, for any other queries contact 9019667012

CHAIRMAN

ರೈಲು ಗಾಲಿ ಕಾರ್ಖಾನೆ

ಯಲಹಂಕ, ಬೆಂಗಳೂರು - 560 064
ವೆಬ್‌ಸೈಟ್: www.rwf.indianrailways.gov.in

Azadi Ka Amrit Mahotsav

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಡಬ್ಲ್ಯೂ/22-23/08 ದಿನಾಂಕ: 24/08/2022

ಇ-ಟೆಂಡರ್‌ಗಳು: ಭಾರತದ ರಾಷ್ಟ್ರಪತಿಯವರ ಪರವಾಗಿ ಉಪ ಮುಖ್ಯ ಇಂಜಿನಿಯರ್‌ರವರು http://www.ireps.gov.in (Works) ಆನ್‌ಲೈನ್ ಮೂಲಕ ಕೆಳಗೆ ತಿಳಿಸಿರುವ ಕೆಲಸಗಳಿಗೆ ಎಲೆಕ್ಟ್ರಾನಿಕ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ..

ಕ್ರಮ ಸಂಖ್ಯೆ	ಟೆಂಡರ್ ಸಂಖ್ಯೆ	ವಿವರ	ಅಂದಾಜು ವೆಚ್ಚ ರೂ.ಗಳಲ್ಲಿ
1	ಡಬ್ಲ್ಯೂ.496/ಆರ್‌ಡಬ್ಲ್ಯೂಎಫ್/ವೈಎನ್‌ಕೆ/997	ಆರ್‌ಡಬ್ಲ್ಯೂಎಫ್ ಕಾಲೋನಿಗಳಲ್ಲಿ ಹಾಗೂ ಕಾರ್ಖಾನೆ ಆವರಣಗಳಲ್ಲಿರುವ ಮರಗಳ ಕೊಂಬೆಗಳನ್ನು 24 ತಿಂಗಳು ಅವಧಿಗಾಗಿ ಟ್ರಿಮ್ಮಿಂಗ್/ಸಮ ಗೊಳಿಸುವುದು.	2057280.00
2	ಡಬ್ಲ್ಯೂ.496/ಆರ್‌ಡಬ್ಲ್ಯೂಎಫ್/ವೈಎನ್‌ಕೆ/998	ಆರ್‌ಡಬ್ಲ್ಯೂಎಫ್ ಕಾರ್ಖಾನೆ ಆವರಣದಲ್ಲಿ ಒಂದು ವರ್ಷದ ಅವಧಿಗಾಗಿ ಹಾಲಿಯಿರುವ ಸ್ಟ್ರಕ್ಚರ್‌ಗಳಿಗೆ ಹೆಚ್ಚುವರಿ ಸೇರ್ಪಡೆ, ಮಾರ್ಪಾಡು ಹಾಗೂ ಸುಧಾರಣೆ, ಕಟ್ಟಡಗಳ ಸಾಮಗ್ರಿ, ಇತ್ಯಾದಿ ಸರಬರಾಜು (ವಲಯ ಘಟಕ 2022-23).	13922136.43
3	ಡಬ್ಲ್ಯೂ.496/ಆರ್‌ಡಬ್ಲ್ಯೂಎಫ್/ವೈಎನ್‌ಕೆ/999	ಆರ್‌ಡಬ್ಲ್ಯೂಎಫ್ ಕಾರ್ಖಾನೆ ಆವರಣದ ಒಳಾಂಗಣದಲ್ಲಿ ಎಂ-ಲ್ಯಾಬ್‌ಗಾಗಿ ಉದ್ದೇಶಿತ ಹೆಚ್ಚುವರಿ ಪ್ರಯೋಗಾಲಯ ಉಪಕರಣ ಕೊಠಡಿ ಜೊತೆಗೆ ಮಹಿಳೆಯರ ಶೌಚಾಲಯ	4694177.08

ಕೊನೆಯ ದಿನಾಂಕ ಹಾಗೂ ಸಮಯ : 16/09/2022 ರ 11.00 ಗಂಟೆಗೆ.

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಡಬ್ಲ್ಯೂ/22-23/09 ದಿನಾಂಕ: 25/08/2022

4	ಡಬ್ಲ್ಯೂ.496/ಆರ್‌ಡಬ್ಲ್ಯೂಎಫ್/ವೈಎನ್‌ಕೆ/1000	ಆರ್‌ಡಬ್ಲ್ಯೂಎಫ್ ಕಾರ್ಖಾನೆ ಆವರಣದ ಒಳಾಂಗಣದಲ್ಲಿ ಪಶ್ಚಿಮ ಕಾಲೋನಿ ಎಸ್‌ಟಿಪಿ ಇಂದ ಪಂಪ್ ಹೌಸ್‌ವರೆಗೆ ಸಂಸ್ಕರಣ ನೀರು ಸರಬರಾಜಿಗಾಗಿ ಜಿಐ ಪೈಪ್‌ಲೈನ್ ಒದಗಿಸುವುದು	1377340.86

ಕೊನೆಯ ದಿನಾಂಕ ಹಾಗೂ ಸಮಯ : 19/09/2022 ರ 11.00 ಗಂಟೆಗೆ. ಟೆಂಡರ್ ಪ್ರಕಟಣೆಗಳನ್ನು ನಮ್ಮ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.

ಉಪ ಮುಖ್ಯ ಇಂಜಿನಿಯರ್

ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ: 1907
ಆಡಳಿತ ಕಛೇರಿ : ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18.
E-mail : gm@bccbl.co.in : Web : bccbl.co.in

116ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ನೋಟೀಸು

ಬ್ಯಾಂಕಿನ ಎಲ್ಲಾ ಸದಸ್ಯರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ದಿನಾಂಕ: 31.03.2022 ಕ್ಕೆ ಮುಕ್ತಾಯಗೊಂಡ (2021-22ನೇ ಸಾಲಿನ) 116ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ 11.09.2022ನೇ ಭಾನುವಾರ ಬೆಳಿಗ್ಗೆ: 10.00 ಗಂಟೆಗೆ ಸರಿಯಾಗಿ ಬ್ಯಾಂಕಿನ **ಪ್ರಧಾನ ಕಛೇರಿ / ಆಡಳಿತ ಕಛೇರಿ : ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018** ರ ಆವರಣದಲ್ಲಿ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಆವಲಹಳ್ಳಿ ಚಂದ್ರಪ್ಪ. ಆರ್. ರವರ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಾಡು ಮಾಡಲಾಗಿದೆ. ಮಾನ್ಯ ಸದಸ್ಯರುಗಳೆಲ್ಲರೂ ಸಕಾಲಕ್ಕೆ ಆಗಮಿಸಿ ಕಾರ್ಯ ಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ. ಈಗಾಗಲೇ ಸದಸ್ಯರ ವಿಳಾಸಗಳಿಗೆ ಸೂಚನಾ ಪತ್ರಗಳನ್ನು ಅಂಚೆ ಮೂಲಕ ಸಕಾಲದಲ್ಲಿ ಕಳುಹಿಸಲಾಗಿದೆ. ಒಂದು ವೇಳೆ ಸೂಚನಾ ಪತ್ರ ತಲುಪದೇ ಇದ್ದಲ್ಲಿ ಇದನ್ನೇ ಸೂಚನಾ ಪತ್ರ ಎಂದು ಪರಿಗಣಿಸಿ, ತಪ್ಪದೇ ಸಭೆಗೆ ಹಾಜರಾಗಬೇಕೆಂದು ಈ ಮೂಲಕ ಕೋರಲಾಗಿದೆ.

ಆವಲಹಳ್ಳಿ ಚಂದ್ರಪ್ಪ. ಆರ್
ಅಧ್ಯಕ್ಷರು

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಮಂಜುನಾಥ. ಪಿ, ಬಿ.ಕಾಂ., ಎ.ಡಿ.ಸಿ.ಬಿ,
ಪ್ರಧಾನ ವ್ಯವಸ್ಥಾಪಕರು (ಪ್ರಭಾರ)

ಸೂಚನೆ: ಸದಸ್ಯರನ್ನು ಸರ್ವಸದಸ್ಯರ ಮಹಾಸಭೆಯಲ್ಲಿ ಸದಸ್ಯತ್ವದ ಕಾರ್ಡುಗಳ ಮೂಲಕ ಗುರುತಿಸಲಾಗುವುದರಿಂದ ಸದಸ್ಯರು ತಪ್ಪದೇ ತಮ್ಮ ಸದಸ್ಯತ್ವದ ಕಾರ್ಡು (Membership Identity Card) ಗಳನ್ನು ತರಬೇಕಾಗಿ ವಿನಂತಿ.

ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560099.
ದೂ.: 080-27835122 ಫ್ಯಾಕ್ಸ್: 080-27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/14/2022-23 ದಿನಾಂಕ: 26.08.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ/ಗು	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ	ಷರಾ
1	ಎಂ. ಪವಿತ್ರ ಬಿನ್ ಎಲ್. ಮುನಿರೆಡ್ಡಿ ಮತ್ತು ಶ್ರೀ ಎಂ. ಪ್ರಭಾಕರ ಬಿನ್ ಎಲ್. ಮುನಿರೆಡ್ಡಿ	ಆನೇಕಲ್	ಕಸಬಾ	ತೆಲುಗರಹಳ್ಳಿ	68/7 (ಹಳೇ ಸ.ನಂ. 68/1)	0-20	ಕೃಷಿ	ವಾಣಿಜ್ಯ	
2	ಎಂ. ಪವಿತ್ರ ಬಿನ್ ಎಲ್. ಮುನಿರೆಡ್ಡಿ	ಆನೇಕಲ್	ಕಸಬಾ	ತೆಲುಗರಹಳ್ಳಿ	68/8	0-06.08	ಕೃಷಿ	ವಾಣಿಜ್ಯ	

ಷರಾ: ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಉದ್ಯೋಗವಕಾಶ ಸೃಷ್ಟಿಯಾಗುವುದೆಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೃಷಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/-,
ಸದಸ್ಯ-ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ವಾಪ್ರ/ಎಲ್‌ಸಿ/1983/2022-23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

IN THE COURT OF THE 4th ADDL. CIVIL JUDGE (J.D.) AT TUMAKURU.
O.S. No.215/2018

Plaintiff: BANK OF BARODA Tumakuru Branch, Tumakuru.
-V/S- Defendant: Smt. Gowramma & Others

PAPER PUBLICATION

Notice to Defendants in the above case

Defendant: (1) Smt. Gowramma W/o late Rudraiah alias D.K. Rudraiah, Aged about 72 years. (2) Smt. Anusuya W/o Hanumantharayappa, Aged about 57 years, (3) Miss Vijayamma D/o Late Rudraiah, Aged about 55 years, (4) Sri. Govindaraju S/o Late Rudraiah, Aged about 53 years, (5) Sri. Nagaraju S/o Late Rudraiah, Aged about 50 years, (6) Sri. Ramesh S/o Late Rudraiah, Aged about 47 years,(7) Sri.Venkatachalaiah S/o Late Rudraiah, Aged about 48 years, all are residing at Devarahosahalli Post, Nelamangala Taluk, Bangalore Rural District.

Whereas, the above plaintiff has instituted the above suit against the defendant for the recovery of loan amount of **Rs. 3,50,255.00 Bank Detail:** With reference to the above subject Name of the Bank: **Bank of Baroda, (Tumakuru Branch),** Place of the Branch: Tumakuru. **Account No. 31410500000015 and 31410600000394.**

The defendant in the above suit and the same is posted for your appearance on 07.09.2022 and at 11 a.m. before the Court of the 4th Addl. Civil Judge (JD) at Tumakuru. Therefore, you are hereby summoned to appear on the said date to answer the Petition, failing which the case will be heard and determined in yours absence by placing you as Ex-parte. Given under my hand and seal of this court this 20th day of August 2022.

By order of the Court,
sign/- Sheristedar (Admin)
Prl. Civil Judge & JMFC Tumkur.

Advocate for Petitioner:
Mohamed Afroze Ahamed Advocate & Legal advisor, Opp. SBI Bank, M.G. Road, Tumkur.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING

Commerical

Multiple Locations

WANTED JAYANAGAR J.P.Nagar, Koramangala, Banashankari, Sadashivanagar Bannerghatta Road, Kanakapura`Road Residential`and Commercial Properties`any measurement 2,000000/`to 500000000/ Contact Jeevitha Promotors and Builders: 9980761200.

Industrial & Factory

Rajajinagar

RAJAJINAGAR INDUSTRIAL ESTATE, WANTED IMMEDIATE PURCHASE, 1200 sqft to 2400 sqft. Land. Call: 7795183988

Sites

Anjanapura

WANTED BDA Site 60x40 any facing, any Block at Anjanapura, Bangalore. Contact 8660800061

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted. Contact: SAPTHAGIRI. 9900268073, 9448068073.

ANJANAPURA, BANASHANKARI 6th Stage, JP Nagar 8th & 9th Phase, Wanted BDA Sites, Any Measurement. 9845298419

Banashankari

BDA SITES Wanted, Arkavathy,Anjanapura, Banshankari 6th-Stg,Vishweshwaraiah, Kempegowda,Any-BDA Layout Contact: 9845062822 8660751654

WANTED BDA Sites BSK 6th Stage, Anjanapura, Kempegowda Layout, Vishweshwarya Layout, Jp Nagar 8th & 9th Phase, Arkavathi Layout, Narayana Nagar, BTM Layout, 20×30/ 30×40/ 40×60/ 50×80 Genuine Seller Only. NRI Buyers Contact: Surya Properties- 9880659555/ 9620682555

PUBLIC NOTICE

PUBLIC NOTICE

The Notice is hereby to the general public that my client Sri Arun Kumar S. S/o. Swamy Rao, Aged about: 62 years, R/at: No. 3199, H.A.L. 2nd Stage, ESI Hospital Road, Indiranagar, Bangalore - 560 038, my client purchased the immovable property from BDA, Bangalore on date: 05.02.2019 at now bearing Sy.No. 64/4, Kodigehalli Village, Nadaprabhu Kempegowda Layout, No. 76, Phase-K Sector, 1st Block measuring East to West: 09 meters, North to South: 6 meters, Total = 54 sq.mtrs. BDA allotted above this site registered No. 8273/1919-20 and also Allotment letter dated: 08.11.2019, was lost during the time of shifting home from the address No. 25, Second Street, Shivannashetty Garden, Near Ulsoor Lake, Bangalore - 560 008 dated: 13.05.2022 my client had lost / missing the BDA SALE DEED and BDA allotment letter, in this regard if any such person or persons has got my client both documents kindly surrender / inform below / above the mentioned the address within the period of 10 days from the date of publication of this notice.

Sd/- H.V. Ramachandra, Advocate
No. 237, 1st Main, Avalahalli, Mysore Road, Bangalore - 560 026. Mobile: 99006 35252, 98801 77325
Bangalore. Date: 27.08.2022

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PUBLIC NOTICE

Notice is hereby given that Mr. D. Purushotham Naidu, S/o D. Manikyam Naidu has agreed to sell us the 'Scheduled Property' mentioned hereunder free from all encumbrances. Any person having any right, title, interest, claim or demand of any nature whatsoever in respect of the said property, is hereby required to make the same known in writing along with documentary proof thereof, to the undersigned within 14 days from date of publication hereof, failing which the negotiations shall be completed, without any reference to such claims and the claims if any, shall be deemed to have been given up or waived.

'SCHEDULED PROPERTY'

All that piece and parcel of portion of property bearing Residential house list no 93, old no 93/6, Old Khata # 762, New CMC Khata No. 462 situated at Munnekolala Village, Varthur Hobli, Bangalore East Taluk, presently under BBMP limits measuring East to West 30 Feet and North to South 52 Feet in all measuring 1560 Sq. Ft and bounded on. **East by:** Private property **West by:** Portion of same property sold to Smt. Sridevi **North by:** 25 Feet Road **South by:** Rayasandra Munireddy's House.

Sd/- Sunitha N (Mob: 7406257779)
Venkatadri Nilayam, 1st Cross, Kaveri Layout, Marathahalli, Bangalore.
Place: Bangalore - Date: 27.08.2022

JOB OPPORTUNITIES

Accounts & Finance

REQD GRADUATES Fresher or Experienced Accounts and Admin. Location Bangalore. Send resume cv.goldrta@gmail.com. Immediate requirement.

Situation Required

WANTED
B.E MECH (Fresher)
ACCOUNTANT (Male)
QUALITY ENGINEER
Rush resume to alm.hr2005@gmail.com

Marketing & Sales

REQUIRED BSC/ BCom/BBA/ Diploma graduates for electronic company . domains: Accounts/ sales/Digital Marketing Apply @- info@siricomindia.com / whatsApp- 9900733844.

Multiple Vacancy

REQUIRED TEAMLEADER, Telecaller, & FieldExecutive For BankLoan collection. Direct recruitment to company Contact:- 9620206756, 9620200756.

Teachers/ Professors

WANTED EXPERIENCED Female`Teachers Head`Mistress &.HOD and_High School Science_Teacher Computer Knowledge with`office work &.LKG/UKG Teachers NEW`CAMBRIDGE HIGH`SCHOOL Bommanahalli, Bangalore-68. Contact:9448312549, 7899992107.

General

BANKING SECTOR Jobs. Office work, Field work. Telecaller Qualification: SSLC,PUC and Degree. Salary: 20k. 7483098280

Engg/ Production Technical

DIWAKAR SOLAR Jaipur requires an Auto Cad Operator with two year experience in solar designing for Bangalore. Contact: 94140 51705. SBL51705@GMAIL.COM

WANTED DESIGN Engineer with ME structures for structural consultancy firm at Gayathrinagar. Contact 9844061252

BUSINESS

Business Offers

Finance

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/9606701007

WANTED BUSINESS Partner Veg Hotel 1 Crore Investment Monthly Income 5 Lakhs Contact: 8892501007/ 9606701007

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call:7411265189

Business to Business

Finance

TIRED OF trading with different platforms. Experience completely new form of trading and secure gurantee income on your investment. We will give you best services and new way of trading. For more details visit- www.globalshippingandtrading.com Contact:9699500429/ 9324124538

PERSONAL

Lost

LOST
I, Vinod. Y. R/a #327, 10th cross, 6th main, M.S.R Nagar, Bengaluru-54, have lost the Original Sale Deed of Property bearing Document No./ Identification: DBP-1-07314-2011-12 CD No. DPBD258. dated: 30-12-2011 Site No. 65, Khatha No. 413, situated at Kasaba Hobli, Doddaballapur Taluk, while travelling.
Finders please
Contact : 6363643659

Change of Name

I, P SWAPNA, Flat- 302, 3rd floor, Narmada Complex, old Syno- 48/3, Naganathpura, Bengaluru-100, have changed my name to SWAPNA vide affidavit dated- 26/08/2022 before notary K.V. Mani

MORE Classifieds IN SUPPLEMENT

WEEKEND CORNER



I, D.C.Jagadish, Residing at No. 19, Bhagyachandra Siloak Enclave, 6th Cross, Hennur Main Road, Kalyananagar, Bengaluru-560043 have changed my name Son's Name from DANDU JAGADISH CHARAN to SAI CHARAN JAGADISH vide affidavit Dated: 25/08/2022 notary B.Seshagiri

I, SANJANA R/o, T12, Shivaganga Vallabha Apartment, Doddakallasandra, Uttarahalli, Bengaluru-62 have changed my name as SANJANA HIREMATH vide affidavit dated 25/08/22 before Notary L. Puttaraju, Bangalore

I, C SANTHOSH KUMAR alias SANTHOSH KUMAR C, residing at #4/1, near Venkateshwara Temple BNarayanapura, Dooravaninagar Bengaluru 560016, declare that both the names pertain to me and henceforth I shall be known as C SANTHOSH KUMAR only vide affidavit dated 25.08.2022 before Notary N. Peruvazhuthi, Bengaluru.

ಸಂಕ್ಷಿಪ್ತ ಸುದ್ದಿ

‘ಕಲರ್ ಫುಲ್ ಗಣೇಶ’ನಿಂದ ಬಹುಮಾನ

ಬೆಂಗಳೂರು: ‘ಕಲರ್ಸ್ ಕನ್ನಡ’ ಚಾನೆಲ್ ಗಣೇಶ ಹಬ್ಬದ ಸಂಭ್ರಮ ಹೆಚ್ಚಿಸಲು ಗಣೇಶನ ಬಗ್ಗೆ ಕೇಳುವ ಪ್ರಶ್ನೆಗೆ ಉತ್ತರ ನೀಡಿದರೆ ಬಹುಮಾನ ನೀಡುವ ಸ್ಪರ್ಧೆ ಆಯೋಜಿಸಿದೆ.

‘ಕಲರ್ ಫುಲ್ ಗಣೇಶ’ ಸ್ಪರ್ಧೆ ಆ.31ರವರೆಗೆ ನಡೆಯಲಿದ್ದು, ಪ್ರತಿದಿನ ಮಾತ್ರ ಅಲ್ಲ; ಪ್ರತಿ ಅರ್ಧ ಗಂಟೆಗೊಮ್ಮೆ ಒಂದು ಚೆಂದದ ಸೀರೆಯನ್ನು ಗೆಲ್ಲಬಹುದಾಗಿದೆ. ಸ್ಪರ್ಧೆ ನಡೆಯುವ ಅಷ್ಟೂ ದಿನ ಪ್ರಸಾರವಾಗುವ ಎಲ್ಲಾ ಧಾರಾವಾಹಿ ಮತ್ತು ರಿಯಾಲಿಟಿ ಶೋಗಳ ಕಡೆಯಲ್ಲಿ ಒಂದು ಪ್ರಶ್ನೆ ಕೇಳಲಾಗುವುದು. ಅದಕ್ಕೆ ಸರಿ ಉತ್ತರವನ್ನು ನೀವು ಎಸ್‌ಎಂಎಸ್ ಮೂಲಕ ಕಳುಹಿಸಬೇಕು. ಈ ಮೂಲಕ ಬಹುಮಾನ ಗೆಲ್ಲಬಹುದು ಎಂದು ಪ್ರಕಟಣೆ ತಿಳಿಸಿದೆ.

ಚಿತ್ರಕಲಾ ಪ್ರದರ್ಶನ

ಬೆಂಗಳೂರು: ಶಿಲ್ಪಾ ಶ್ರೀವಿಜಯ ಕಲಬುರಗಿ ಅವರ ಶಿಷ್ಯಂದಿರು ರಚಿಸಿರುವ ವೈವಿಧ್ಯಮಯ ಚಿತ್ರ ಕಲೆಗಳ ಪ್ರದರ್ಶನವನ್ನು ಆಗಸ್ಟ್ 27 (ಶನಿವಾರ) ಮತ್ತು 28 ರಂದು(ಭಾನುವಾರ) ಎಂ.ಜಿ ರಸ್ತೆಯಲ್ಲಿರುವ ಮೆಟ್ರೋ ಆರ್ಟ್ಸ್ ಸೆಂಟರ್‌ನಲ್ಲಿ ಬೆಳಿಗ್ಗೆ 11 ಗಂಟೆಯಿಂದ ಪ್ರದರ್ಶಿಸಲಾಗುವುದು.

ಡಿಕ್ಕಿ: ಮೂವರ ಸಾವು

ಚಿತ್ರದುರ್ಗ: ತಾಲ್ಲೂಕಿನ ಸೀಬಾರ ಸಮೀಪದ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಶುಕ್ರವಾರ ರಾತ್ರಿ ಕಾರು ಮತ್ತು ಲಾರಿ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಮೂವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಬೆಂಗಳೂರಿನ ರಾಜಾಜಿನಗರದ ಮನೀಷ್ (27), ಪತ್ನಿ ಸಿಂಚನಾ (24) ಹಾಗೂ ಸಹೋದರಿ ಭೂಮಿಕಾ (22) ಮೃತಪಟ್ಟವರು. ಲಾರಿ ಚಾಲಕ, ಗಿರಿಧರ್, ಆಶಾಗೆ ಗಾಯವಾಗಿದೆ.

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪ್ರಸ್ತುತಿ: ಉತ್ಸಾಹದಿಂದ ಪಾಲ್ಗೊಂಡ ಮಹಿಳೆಯರು, ಸಭಿಕರನ್ನು ರಂಜಿಸಿದ ಪಲ್ಲವಿ ಗಾಯನ

‘ಭೂಮಿಕಾ ಕ್ಲಬ್’: ನವೋಲ್ಲಾಸಕ್ಕೆ ಮುನ್ನುಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿನನಿತ್ಯದ ಜಂಜಾಟದ ಬದುಕಿಗೆ ಮುಕ್ತಿ ನೀಡಿ ಉಲ್ಲಾಸ, ಉತ್ಸಾಹ ತುಂಬುವ ಮೂಲಕ ಹೊಸತನದ ಸ್ಪರ್ಶ ನೀಡುವ ವೇದಿಕೆ ‘ಭೂಮಿಕಾ ಕ್ಲಬ್’ಗೆ ಶುಕ್ರವಾರ ಚಾಲನೆ ನೀಡಲಾಯಿತು.

'ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್' ಆರಂಭಿಸಿರುವ ‘ಭೂಮಿಕಾ ಕ್ಲಬ್’ ಮಹಿಳೆಯರಿಗಾಗಿಯೇ ರೂಪಿಸಿರುವ ವಿಶಿಷ್ಟ ಕಾರ್ಯಕ್ರಮ.

ಸಮಾನಮನಸ್ಕ ಸ್ನೇಹಿತೆಯರನ್ನು ಒಗ್ಗೂಡಿಸಲು ಮತ್ತು ಸ್ವಾವಲಂಬಿಯಾಗಿಸಲು ‘ಭೂಮಿಕಾ ಕ್ಲಬ್’ ಪ್ರೇರಣೆ ನೀಡಲಿದೆ. ಹೊಸತನ ಬಯಸುವ ಕ್ರಿಯಾಶೀಲ ಮನಸ್ಸುಗಳ ಜೀವನಶೈಲಿಯನ್ನು ಉತ್ಕೃಷ್ಟಗೊಳಿಸಲು ಹಾಗೂ ಹಣಕಾಸು, ಸೌಂದರ್ಯದ ಕುರಿತ ವಿಷಯಗಳ ಚರ್ಚೆ ಮತ್ತು ವಿಧ ಸ್ಪರ್ಧೆಗಳಿಗೆ ಇದು ವೇದಿಕೆಯಾಗಲಿದೆ.

‘ಭೂಮಿಕಾ ಕ್ಲಬ್’ನ ಲಾಂಛನ ಅನಾವರಣ ಮಾಡಿದ ನಟಿ ರಂಜನಿ ರಾಘವನ್, ‘ಮಹಿಳೆಯರಿಗಾಗಿ ರೂಪಿಸಿರುವ ಈ ಹೊಸ ವೇದಿಕೆ ಪ್ರೇರಣಾ ಶಕ್ತಿಯಾಗಿ ಬೆಳೆಯಲಿ. ಈ ಕ್ಲಬ್ ಪ್ರಯೋಜನವನ್ನು ಮಹಿಳೆಯರು ಪಡೆದುಕೊಳ್ಳಬೇಕು. ಸಾಮಾಜಿಕ ಗುಂಪುಗಳನ್ನು ರಚಿಸಿ, ಹೊಸ, ಹೊಸ ವಿಷಯಗಳ ಬಗ್ಗೆ ಚರ್ಚಿಸಬಹುದು’ ಎಂದು ಸಲಹೆ ನೀಡಿದರು.

‘ಪ್ರತಿಯೊಂದು ವಿಷಯದಲ್ಲಿ ಪುರುಷರ ದೃಷ್ಟಿಕೋನದಿಂದ ಚರ್ಚಿಸುವುದೇ ಹೆಚ್ಚು. ಇಂತಹ ಸನ್ನಿವೇಶ ಬದಲಾಯಿಸಿ, ಸಮಾಜದಲ್ಲಿ ಬದಲಾವಣೆ ತರಬೇಕು’ ಎಂಬ ಆಶಯ ವ್ಯಕ್ತಪಡಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ದಿ. ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸೀತಾರಾಮನ್ ಶಂಕರ್, ‘ಭೂಮಿಕಾ ಕ್ಲಬ್ ವತಿಯಿಂದ ಮುಂದಿನ ದಿನಗಳಲ್ಲಿ ಹಲವು ಚಟುವಟಿಕೆಗಳು ನಡೆಯಲಿವೆ’ ಎಂದು ತಿಳಿಸಿದರು.

‘ಮಳೆಗಾಲದಲ್ಲಿ ಆರೋಗ್ಯ ರಕ್ಷಣೆ’ ಕುರಿತು ವಿವರಿಸಿದ ಮಣಿಪಾಲ್ ಆಸ್ಪತ್ರೆಯ ತಜ್ಞ ವೈದ್ಯರಾದ ಡಾ. ಸುಚಿಸ್ಮಿತಾ ರಾಜಮಾನ್ಯ ಅವರು, ‘ಮಳೆಗಾಲದಲ್ಲಿ ಕೆಲವು ಸೋಂಕು ರೋಗಗಳು ಕಾಣಿಸಿಕೊಳ್ಳುತ್ತವೆ. ನೀರು ಮತ್ತು ಆಹಾರ ಕಲುಷಿತಗೊಳ್ಳುವುದು ಇದಕ್ಕೆ ಒಂದು ಪ್ರಮುಖ ಕಾರಣ. ಸ್ವಚ್ಛತೆ ಕಾಪಾಡಿಕೊಂಡು, ವ್ಯವಸ್ಥಿತವಾದ ಜೀವನ ಶೈಲಿ ಅಳವಡಿಸಿಕೊಳ್ಳಬೇಕು. ಅಗತ್ಯ ಇರುವ ಲಸಿಕೆಗಳನ್ನು ಪಡೆದುಕೊಳ್ಳಬೇಕು’ ಎಂದು ಸಲಹೆ ನೀಡಿದರು.

‘ಮಳೆಗಾಲದಲ್ಲಿ ಕೂದಲು ಮತ್ತು ತ್ವಚೆಯ ಆರೈಕೆ’ ಕುರಿತು ಉಪನ್ಯಾಸ ನೀಡಿದ ಮಣಿಪಾಲ್ ಆಸ್ಪತ್ರೆಯ ತಜ್ಞ ವೈದ್ಯರಾದ ಡಾ. ದೀಪಾ ಕೃಷ್ಣಮೂರ್ತಿ, ‘ಮಳೆಗಾಲದಲ್ಲಿ ಕಡಿಮೆ ಮೇಕ್‌ಅಪ್ ಮಾಡಿಕೊಂಡರೆ ಒಳ್ಳೆಯದು. ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಪೌಷ್ಟಿಕ ಆಹಾರ ಸೇವಿಸಬೇಕು ಮತ್ತು ಎಣ್ಣೆ ಪದಾರ್ಥಗಳನ್ನು ಸಾಧ್ಯವಾದಷ್ಟು ಕಡಿಮೆ ಮಾಡಬೇಕು’ ಎಂದು ತಿಳಿಹೇಳಿದರು.

‘ಹೇರ್‌ಡ್ರೈ ಅನ್ನು ಎಷ್ಟು ದಿನಗಳಿಗೊಮ್ಮೆ ಮಾಡಿಕೊಳ್ಳಬೇಕು’ ಎನ್ನುವ ಮಹಿಳೆಯೊಬ್ಬರ ಪ್ರಶ್ನೆಗೆ ಉತ್ತರಿಸಿದ ಅವರು, ‘ಹೈರ್ ಡ್ರೈ ಮಾಡಿಕೊಳ್ಳದಿರುವುದೇ ಉತ್ತಮ. ಸಾಧ್ಯವಾದಷ್ಟು ಕಡಿಮೆ ಮಾಡಿ. ಅದು ಕೂದಲಿಗೆ ಹಾನಿ ಮಾಡುವ ಸಾಧ್ಯತೆ ಇದೆ’ ಎಂದು ಸಲಹೆ ನೀಡಿದರು.

‘ಭೂಮಿಕಾ ಕ್ಲಬ್’ ಲಾಂಛನವನ್ನು ನಟಿ ರಂಜನಿ ರಾಘವನ್ ಅನಾವರಣಗೊಳಿಸಿದರು. ಟಿಪಿಎಂಎಲ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೀತಾರಾಮನ್ ಶಂಕರ್ ಇದ್ದರು –ಪ್ರಜಾವಾಣಿ ಚಿತ್ರ

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಹಿಳೆಯರು –ಪ್ರಜಾವಾಣಿ ಚಿತ್ರ

ತಾಜ್ ಹೋಟೆಲ್‌ನ ಬಾಣಸಿಗರಾದ ಆಂಡ್ರಿಯಾ ಜುಡಿತ್ ಡಯಾಸ್ ಕೇಕ್ ತಯಾರಿಸುವ ಕುರಿತು ಪ್ರಾತ್ಯಕ್ಷಿಕೆ ನೀಡಿದರು – ಪ್ರಜಾವಾಣಿ ಚಿತ್ರ

‘ಹೋರಾಟ ಮತ್ತೆ ಆರಂಭಿಸಬೇಕಾಗಿದೆ’



‘21ನೇ ಶತಮಾನದಲ್ಲೂ ಮಹಿಳೆಯರು ಸಮಾನತೆಗಾಗಿ ಹೋರಾಟ ನಡೆಸಬೇಕಾದ ಪರಿಸ್ಥಿತಿ ಸೃಷ್ಟಿಯಾಗಿರುವುದು ವಿಷಾದಕರ’ ಎಂದು ಖ್ಯಾತ ಗಾಯಕಿ ಎಂ.ಡಿ. ಪಲ್ಲವಿ ಹೇಳಿದರು.

‘ಭೂಮಿಕಾ ಕ್ಲಬ್’ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಸಮಾಜದಲ್ಲಿ ಮಹಿಳೆಯರಿಗೆ ಸಿಗಬೇಕಾದ ಪ್ರಾತಿನಿಧ್ಯ ಇನ್ನೂ ದೊರೆತಿಲ್ಲ. ಹೀಗಾಗಿ, ಮತ್ತೊಮ್ಮೆ ಹೋರಾಟ ನಡೆಸಬೇಕಾಗಿದೆ. ಈ ವೇದಿಕೆಯ ಮೂಲಕ ಮಹಿಳೆಯರು ಉದ್ಯಮಶೀಲರಾಗಲು ಮತ್ತು ಶೋಷಣೆಗೆ ಒಳಗಾದವರಿಗೆ ನೆರವಾಗಬೇಕು’ ಎಂದರು.

‘ನೋಡಯ್ಯ ಕ್ವಾಟೆ ಲಿಂಗವೇ....’ ಹಾಡುವ ಮೂಲಕ ಪಲ್ಲವಿ ಅವರು ಸಭಿಕರನ್ನು ರಂಜಿಸಿದರು.

ವೈವಿಧ್ಯಮಯ ಸ್ಪರ್ಧೆಯಲ್ಲಿ ವಿಜೇತರಾದ ಮಹಿಳೆಯರು

‘ಬೆಂಗಳೂರಿನ ಎರಡು ಪ್ರದೇಶಗಳ ಹೆಸರುಗಳನ್ನು ಒಗ್ಗೂಡಿಸಿ ‘ಮಾಲ್ಗುಡಿ’ ಎಂದು ಹೆಸರಿಡಲಾಯಿತು. ಈ ಪ್ರದೇಶಗಳ ಹೆಸರುಗಳೇನು?’

ಮಲ್ಲೇಶ್ವರ ಮತ್ತು ಬಸವನಗುಡಿ ಎಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಹಲವು ಮಹಿಳೆಯರು ಉತ್ತರ ನೀಡಿದರು. ಇಂತಹ ಹತ್ತಾರು ಪ್ರಶ್ನೆಗಳಿಗೆ ಉತ್ಸಾಹದಿಂದ ಉತ್ತರ ನೀಡಿದ ಮಹಿಳೆಯರು ಬಹುಮಾನಗಳನ್ನು ಪಡೆದರು.

ವೈಯಕ್ತಿಕ ಹಣಕಾಸು ಮತ್ತು ಹೂಡಿಕೆ ಕುರಿತು ಫಿನ್‌ಸೇಪ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಮೃಣ್ ಅಗರ್‌ವಾಲ್ ವಿವರಿಸಿದರು.

ಫ್ಯಾಷನ್ ಕುರಿತು ಶಚಿನಾ ಹೆಗ್ಗಾರ್, ಮೇಕಪ್ ಟಿಪ್ಸ್ ಕುರಿತು ಸುಶ್ಮಾ ನಾಣಯ್ಯ, ಅಡುಗೆ ಪಾಕ ವಿಧಾನಗಳ ಕುರಿತು ತಾಜ್ ಹೋಟೆಲ್‌ನ ಬಾಣಸಿಗರಾದ ಆಂಡ್ರಿಯಾ ಜುಡಿತ್ ಡಯಾಸ್ ಉಪನ್ಯಾಸಗಳನ್ನು ನೀಡಿದರು.

ಆಶ್ವಿನಿ ರವೀಂದ್ರ ಅವರು ಸ್ಟ್ಯಾಂಡ್–ಅಪ್ ಕಾಮಿಡಿ ಮಾಡಿ ರಂಜಿಸಿದರು.

ಬಿಡಿಎ ಆಯುಕ್ತ ರಾಜೇಶ್ ಗೌಡ ವರ್ಗಾವಣೆ

ಬೆಂಗಳೂರು: ಗೃಹ ಸಚಿವ ಆರಗ ಜ್ಞಾನೇಂದ್ರ ಸೇರಿದಂತೆ ಕೆಲವರಿಗೆ ಸುಪ್ರೀಂ ಕೋರ್ಟ್ ಆದೇಶ ಉಲ್ಲಂಘಿಸಿ ಬದಲಿ ನಿವೇಶನ ಹಂಚಿಕೆ ಮಾಡಿದ ಆರೋಪ ಎದುರಿಸುತ್ತಿರುವ ಐಎಎಸ್ ಅಧಿಕಾರಿ ರಾಜೇಶ್ ಗೌಡ ಎಂ.ಬಿ. ಅವರನ್ನು ಬಿಡಿಎ ಆಯುಕ್ತರ ಹುದ್ದೆಯಿಂದ ವರ್ಗಾವಣೆ ಮಾಡಲಾಗಿದೆ.

ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕುಮಾರ್ ನಾಯ್ಕ್ ಜಿ. ಅವರಿಗೆ ಬಿಡಿಎ ಆಯುಕ್ತರ ಹುದ್ದೆಯ ಹೆಚ್ಚುವರಿ ಪ್ರಭಾರ ನೀಡಲಾಗಿದೆ. ರಾಜೇಶ್ ಗೌಡ ಅವರಿಗೆ ಯಾವುದೇ ಹುದ್ದೆ ತೋರಿಸಿಲ್ಲ.

'ಬೆಂಗಳೂರಿನಲ್ಲಿ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿದ ಬಡಾವಣೆಗಳಲ್ಲಿ ಪರ್ಯಾಯ ನಿವೇಶನ ಹಂಚಿಕೆ ಮಾಡಬಾರದು. ಒತ್ತುವರಿದಾರರಿಂದ ವಶಪಡಿಸಿಕೊಂಡ ಜಮೀನಿನಲ್ಲಿ ನಿರ್ಮಿಸಿದ ನಿವೇಶನಗಳನ್ನೂ ಬದಲಿ ನಿವೇಶನವನ್ನಾಗಿ ಹಂಚಿಕೆ ಮಾಡಬಾರದು' ಎಂದು ಸುಪ್ರೀಂ ಕೋರ್ಟ್ 2021ರ ಅಕ್ಟೋಬರ್ 29ರಂದು ಆದೇಶ ಹೊರಡಿಸಿತ್ತು.

ಈ ಆದೇಶ ಉಲ್ಲಂಘಿಸಿ ಜ್ಞಾನೇಂದ್ರ ಸೇರಿದಂತೆ ಹಲವರಿಗೆ ಆರ್.ಎಂ.ವಿ. ಬಡಾವಣೆಯಲ್ಲಿ ಬದಲಿ ನಿವೇಶನ ಹಂಚಿಕೆ ಮಾಡಿದ್ದಾರೆ ಎಂದು ರಾಜೇಶ್ ಗೌಡ ಅವರನ್ನು ತರಾಟೆಗೆ ತೆಗೆದುಕೊಂಡಿದ್ದ ಸುಪ್ರೀಂ ಕೋರ್ಟ್, ಅವರನ್ನು ವರ್ಗಾವಣೆ ಮಾಡುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು.

ಸುಪ್ರೀಂ ಕೋರ್ಟ್ ಆದೇಶ ಉಲ್ಲಂಘಿಸಿದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಚರಂತಿಮಠ, ಸೇಡಂಗೂ ಬದಲಿ ನಿವೇಶನ

• ಮಂಜುನಾಥ ಹೆಬ್ಬಾರ್

ನವದೆಹಲಿ: ಸುಪ್ರೀಂ ಕೋರ್ಟ್‌ನ ಆದೇಶ ಉಲ್ಲಂಘಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಬಿಜೆಪಿ ಶಾಸಕ ವೀರಣ್ಣ ಸಿ.ಚರಂತಿಮಠ, ಬಿಜೆಪಿ ಮುಖಂಡ ಬಸವರಾಜ ಪಾಟೀಲ ಸೇಡಂ ಹಾಗೂ ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಸದಸ್ಯ ಡಾ.ಎಂ.ನಾಗರಾಜ್ ಅವರಿಗೂ ಬದಲಿ ನಿವೇಶನ ಹಂಚಿಕೆ ಮಾಡಿದೆ.

ನಗರಾಭಿವೃದ್ಧಿ ಇಲಾಖೆಯ ಉಪ ಕಾರ್ಯದರ್ಶಿ ಕೆ.ಎಸ್.ಜಗದೀಶ ರೆಡ್ಡಿ ಅವರ ಸಂಬಂಧಿ ರಾಮ ರೆಡ್ಡಿ ಗೀತಾ ರೆಡ್ಡಿ ಅವರಿಗೆ ಸಹ 40X60 ಅಡಿ ಅಳತೆಯ ಬದಲಿ ನಿವೇಶನ ಹಂಚಲಾಗಿದೆ.

ಪ್ರಜಾವಾಣಿ ವಿಶೇಷ

ಬೆಂಗಳೂರಿನಲ್ಲಿ ಪೆರಿಫೆರಲ್ ವರ್ತುಲ ರಸ್ತೆ ನಿರ್ಮಾಣದ ಕುರಿತ ವಿವಾದವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಈ ಯೋಜನೆಗೆ ಸಂಪನ್ಮೂಲವನ್ನು ಹೇಗೆ ಕ್ರೋಡೀಕರಣ ಮಾಡಲಾಗುತ್ತದೆ ಎಂದು ಪ್ರಾಧಿಕಾರವನ್ನು ಸುಪ್ರೀಂ ಕೋರ್ಟ್ ಪ್ರಶ್ನಿಸಿತ್ತು. ನಿವೇಶನಗಳನ್ನು ಮಾರಾಟ ಮಾಡಿ ಸಂಪನ್ಮೂಲ ಕ್ರೋಡೀಕರಣ ಮಾಡಲಾಗುವುದು ಎಂದು ಬಿಡಿಎ ಉತ್ತರಿಸಿತ್ತು. ಅಭಿವೃದ್ಧಿ ಹೊಂದಿದ ಬಡಾವಣೆಗಳಲ್ಲಿ ಸಾರ್ವಜನಿಕ ಹರಾಜಿನ ಮೂಲಕ ಮಾತ್ರ ನಿವೇಶನಗಳನ್ನು ಹಂಚಿಕೆ ಮಾಡಬೇಕು ಎಂದು ಸುಪ್ರೀಂ ಕೋರ್ಟ್ 2021ರ ಅಕ್ಟೋಬರ್ 29ರಂದು ಆದೇಶಿಸಿತ್ತು.

ಆದೇಶ ಉಲ್ಲಂಘಿಸಿ ಆರಗ ಜ್ಞಾನೇಂದ್ರ ಸೇರಿದಂತೆ ಹಲವರಿಗೆ ಪರ್ಯಾಯ ನಿವೇಶನಗಳನ್ನು ಹಂಚಿಕೆ ಮಾಡಿದ್ದ ಕಾರಣಕ್ಕೆ ಬಿಡಿಎ ಆಯುಕ್ತ ಎಂ.ಬಿ.ರಾಜೇಶ್‌ಗೌಡ ಅವರನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿತ್ತು, ಅವರ ವರ್ಗಾವಣೆಗೆ ನಿರ್ದೇಶಿಸಿತ್ತು. 'ಜಿ ಕೆಟಗರಿ ನಿವೇಶನ ಹಂಚಿಕೆಯೇ ಅಕ್ರಮ. ಈ ಅಕ್ರಮದಲ್ಲಿ ಬಿಡಿಎ ಕಾರ್ಯದರ್ಶಿ, ಉಪ ಕಾರ್ಯದರ್ಶಿಯೂ ಭಾಗಿಯಾಗಿದ್ದಾರೆ. ಅವರನ್ನು ವರ್ಗಾವಣೆ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತದೆ' ಎಂದೂ ನ್ಯಾಯಪೀಠವು ಹೇಳಿತ್ತು. 'ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ಸಂಬಂಧಿ ಹಾಗೂ ಬಿಜೆಪಿ ಶಾಸಕ ಅಭಯ ಪಾಟೀಲ ಅವರಿಗೂ ಆರ್‌ಎಂವಿ ಎರಡನೇ ಹಂತದಲ್ಲಿ ಬದಲಿ ನಿವೇಶನ ಹಂಚಿಕೆ ಕಡತ ಸಿದ್ಧವಾಗಿತ್ತು. ಈಗ ಸುಪ್ರೀಂ ಆದೇಶದಿಂದ ಇದಕ್ಕೆ ಕಡಿವಾಣ ಬಿದ್ದಿದೆ' ಎಂದು ಮೂಲಗಳು ತಿಳಿಸಿವೆ.

'ಕೆಂಪೇಗೌಡ ಬಡಾವಣೆ ಹಾಗೂ ಅರ್ಕಾವತಿ ಬಡಾವಣೆ ಬಿಟ್ಟು ಪೂರ್ಣ ಅಭಿವೃದ್ಧಿ ಹೊಂದಿದ ಬಡಾವಣೆಗಳಲ್ಲಿ ಹರಾಜಿನ ಮೂಲಕವೇ ನಿವೇಶನ ಹಂಚಬೇಕು ಎಂದು ಕೋರ್ಟ್ ನಿರ್ದೇಶನ ನೀಡಿದೆ. ಒಂದು ಪ್ರಕರಣದಲ್ಲಿ ಲೋಪ ಆಗಿದೆ. ಎಚ್‌ಎಸ್‌ಆರ್ ಬಡಾವಣೆಗಿಂತ ಮೊದಲು ಆರ್‌ಎಂವಿ ಬಡಾವಣೆ ನಿರ್ಮಾಣವಾಗಿತ್ತು. ಮುಂದೆ ಇಂತಹ ತಪ್ಪು ಘಟಿಸದಂತೆ ಎಚ್ಚರಿಕೆ ವಹಿಸಲು ಸೂಚಿಸಿದ್ದೇನೆ'' ಎಂದು ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ 'ಪ್ರಜಾವಾಣಿ'ಗೆ ತಿಳಿಸಿದರು.

ಆದೇಶ ಉಲ್ಲಂಘಿಸಿ ಯಾರಿಗೆಲ್ಲ ನಿವೇಶನ ಹಂಚಿಕೆ

ಆರಗ ಜ್ಞಾನೇಂದ್ರ: ಅವರಿಗೆ ಈ ಹಿಂದೆ ಎಚ್‌ಎಸ್‌ಆರ್ ಸೆಕ್ಟರ್ 3 ರಲ್ಲಿ 50x80 ಅಡಿ (ನಿವೇಶನ ಸಂಖ್ಯೆ 110/ಬಿ) ಜಿ ಕೆಟಗರಿ ನಿವೇಶನ ಹಂಚಲಾಗಿತ್ತು. ಅವರಿಗೆ 2019ರ ನವೆಂಬರ್ 28ರಂದು ಕ್ರಯಪತ್ರ ಮಾಡಿಕೊಡಲಾಗಿತ್ತು. ಈ ಪ್ರಕರಣ ಕೋರ್ಟ್ ಮೆಟ್ಟಿಲೇರಿತ್ತು. ಬಳಿಕ ಅವರಿಗೆ ಆರ್‌ಎಂವಿ ಎರಡನೇ ಹಂತದಲ್ಲಿ ಅಷ್ಟೇ ಅಳತೆಯ ಬದಲಿ ನಿವೇಶನ (ನಿವೇಶನ ಸಂಖ್ಯೆ 2) ನೀಡಲಾಗಿದೆ. 2021ರ ಡಿಸೆಂಬರ್ 8ರಂದು ಕ್ರಯಪತ್ರ ಮಾಡಿ ಕೊಡಲಾಗಿದೆ. ಎಚ್‌ಎಸ್‌ಆರ್ ಬಡಾವಣೆಯಲ್ಲಿ ಚದರ ಅಡಿಗೆ ಮಾರುಕಟ್ಟೆ ಬೆಲೆ ₹15 ಸಾವಿರ ಇದ್ದರೆ, ಆರ್‌ಎಂವಿ ಎರಡನೇ ಹಂತದಲ್ಲಿ ಚದರ ಅಡಿಗೆ ₹25 ಸಾವಿರ ಇದೆ. ಅರಗ ಅವರಿಗೆ ಹಂಚಿಕೆ ಮಾಡಿರುವ ನಿವೇಶನದ ಬೆಲೆ ₹9 ಕೋಟಿಯಿಂದ ₹10 ಕೋಟಿ ಆಗುತ್ತದೆ.

ಬಸವರಾಜ ಪಾಟೀಲ ಸೇಡಂ: ಅವರಿಗೆ ಈ ಹಿಂದೆ ಆರ್‌ಎಂವಿ ಎರಡನೇ ಹಂತದಲ್ಲಿ 50X80 ಅಡಿ ಅಳತೆಯ ನಿವೇಶನ ನೀಡಲಾಗಿತ್ತು. ಬದಲಿಯಾಗಿ ಆರ್‌ಎಂವಿ ಎರಡನೇ ಹಂತದಲ್ಲಿ ನಿವೇಶನ ಕೊಡಲಾಗಿದೆ. ಅವರಿಗೆ ಕ್ರಯಪತ್ರ ಮಾಡಿ ಕೊಟ್ಟದ್ದು 2022ರ ಏಪ್ರಿಲ್ 19ರಂದು.

ವೀರಣ್ಣ ಸಿ.ಚರಂತಿಮಠ: ಮೊದಲು ಅವರಿಗೆ ಆರ್‌ಎಂವಿ ಎರಡನೇ ಹಂತದಲ್ಲಿ 50X80 ಅಡಿಯ ನಿವೇಶನ (ಸಂಖ್ಯೆ 3) ಹಂಚಿಕೆ ಮಾಡಲಾಗಿತ್ತು. ಅವರಿಗೆ ಅದೇ ಬಡಾವಣೆಯಲ್ಲಿ 50X80 ಅಡಿ ಬದಲಿ ನಿವೇಶನವನ್ನು ನೀಡಲಾಗಿದ್ದು, 2022ರ ಫೆಬ್ರುವರಿ 3ರಂದು ಕ್ರಯಪತ್ರ ಮಾಡಿಕೊಡಲಾಗಿದೆ.

ಡಾ.ಎಂ.ನಾಗರಾಜ್: ಅವರಿಗೆ ಮೊದಲು ಆರ್‌ಎಂವಿ ಎರಡನೇ ಹಂತದಲ್ಲಿ 50X80 ಅಡಿಯ ಜಿ ಕೆಟಗರಿ ನಿವೇಶನ (ಸಂಖ್ಯೆ 5) ಹಂಚಲಾಗಿತ್ತು. ಅವರಿಗೆ ಅದೇ ಬಡಾವಣೆಯಲ್ಲಿ ಪರ್ಯಾಯ ನಿವೇಶನ ನೀಡಲಾಗಿದ್ದು, 2022ರ ಏಪ್ರಿಲ್ 8ರಂದು ಕ್ರಯಪತ್ರ ಮಾಡಿಕೊಡಲಾಗಿದೆ. ಎಬಿವಿಪಿಯಲ್ಲಿ ಗುರುತಿಸಿಕೊಂಡಿದ್ದ, ಹುಬ್ಬಳ್ಳಿಯ ನಾಗರಾಜ್ ಅವರನ್ನು 2008ರಲ್ಲಿ ಕೆಪಿಎಸ್‌ಸಿ ಸದಸ್ಯರಾಗಿ ನೇಮಕ ಮಾಡಲಾಗಿತ್ತು.

ಸಚಿವ ಜ್ಞಾನೇಂದ್ರ ವಿರುದ್ಧ ಲೋಕಾಯುಕ್ತಕ್ಕೆ ದೂರು

ಬೆಂಗಳೂರು: ಸುಪ್ರೀಂಕೋರ್ಟ್ ಆದೇಶ ಉಲ್ಲಂಘಿಸಿ ಬದಲಿ ನಿವೇಶನ ಹಂಚಿಕೆ ಮಾಡಿದ ಪ್ರಕರಣದಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ ಮತ್ತು ಬಿಡಿಎ ಆಯುಕ್ತರಾಗಿದ್ದ ಐಎಎಸ್ ಅಧಿಕಾರಿ ರಾಜೇಶ್ ಗೌಡ ಎಂ.ಬಿ. ವಿರುದ್ಧ ತನಿಖೆ ನಡೆಸುವಂತೆ ಆಮ್ ಆದ್ಮಿ ಪಕ್ಷದ ಮುಖಂಡ ಮಥಾಯಿ, ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದಾರೆ.

'ಅಭಿವೃದ್ಧಿ ಹೊಂದಿದ ಬಡಾವಣೆಗಳಲ್ಲಿನ ನಿವೇಶನಗಳು ಹಾಗೂ ಒತ್ತುವರಿದಾರರಿಂದ ವಶಕ್ಕೆ ಪಡೆದ ಜಮೀನಿನಲ್ಲಿ ನಿರ್ಮಿಸಿದ ನಿವೇಶನಗಳನ್ನು ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡುವುದನ್ನು ಕಡ್ಡಾಯಗೊಳಿಸಿ ಸುಪ್ರೀಂಕೋರ್ಟ್ 2021ರ ಅಕ್ಟೋಬರ್ 21ರಂದು ಆದೇಶ ಹೊರಡಿಸಿತ್ತು. ಈ ಆದೇಶ ಉಲ್ಲಂಘಿಸಿ ಆರ್.ಎಂ.ವಿ. ಬಡಾವಣೆಯಲ್ಲಿ ಆರಗ ಜ್ಞಾನೇಂದ್ರ ಅವರಿಗೆ ಬದಲಿ ನಿವೇಶನ ಹಂಚಿಕೆ ಮಾಡಲಾಗಿದೆ. ಗೃಹ ಸಚಿವರು ಬಿಡಿಎ ಆಯುಕ್ತರ ಮೇಲೆ ಪ್ರಭಾವ ಬೀರಿ ಬದಲಿ ನಿವೇಶನ ಪಡೆದಿದ್ದಾರೆ' ಎಂದು ಆರೋಪಿಸಿದ್ದಾರೆ.

ಜ್ಞಾನೇಂದ್ರ ರಾಜೀನಾಮೆಗೆ ಡಿ.ಕೆ. ಶಿವಕುಮಾರ್ ಆಗ್ರಹ

ಬೆಂಗಳೂರು: ಬಿಡಿಎ ಅಭಿವೃದ್ಧಿಪಡಿಸಿದ ಆರ್‌ಎಂವಿ ಬಡಾವಣೆಯಲ್ಲಿ ಸುಪ್ರೀಂಕೋರ್ಟ್ ಆದೇಶ ಉಲ್ಲಂಘಿಸಿ ಬದಲಿ ನಿವೇಶನ ಪಡೆದಿರುವ ಗೃಹ ಸಚಿವ ಆರಗ ಜ್ಞಾನೇಂದ್ರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜಕೀಯ ಒತ್ತಡ ಇಲ್ಲದೇ ಯಾವುದೇ ಅಧಿಕಾರಿಗಳು ಏನನ್ನೂ ಮಾಡಲು ಸಾಧ್ಯವಿಲ್ಲ. ಫಲಾನುಭವಿಗಳು, ಸರ್ಕಾರದ ಅಧಿಕಾರ ದುರ್ಬಳಕೆ ಮಾಡಿಕೊಂಡಿರುವುದು ಮೊದಲು ರಾಜೀನಾಮೆ ನೀಡಬೇಕು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ಸಮಸ್ಯೆಯನ್ನು ದೊಡ್ಡದು ಮಾಡಿಕೊಳ್ಳುವ ಮುನ್ನ ಫಲಾನುಭವಿಗಳನ್ನು ಸಂಪುಟದಿಂದ ಕೈಬಿಡಬೇಕು' ಎಂದು ಆಗ್ರಹಿಸಿದರು.

ಟ್ವಿಟರ್‌ನಲ್ಲೂ ವಾಗ್ದಾಳಿ: ಬಿಡಿಎ ಆಯುಕ್ತರ ವರ್ಗಾವಣೆಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿರುವುದಕ್ಕೆ ಸಂಬಂಧಿಸಿ 'ಪ್ರಜಾವಾಣಿ'ಯ ಶುಕ್ರವಾರದ ಸಂಚಿಕೆಯಲ್ಲಿ ಪ್ರಕಟವಾಗಿದ್ದ ವರದಿಯ ತುಣುಕನ್ನು ಕೆಪಿಸಿಸಿ ಅಧಿಕೃತ ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡಿದ್ದು, 'ಆರಗ ಜ್ಞಾನೇಂದ್ರ ಸೇರಿದಂತೆ ಅನೇಕ ವ್ಯಕ್ತಿಗಳಿಗೆ ನಿವೇಶನ ಹಂಚಿಕೆ ಅಕ್ರಮ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಬಿಡಿಎ ಆಯುಕ್ತರನ್ನು ವರ್ಗಾವಣೆ ಮಾಡಲಾಗಿದೆ. ಗೃಹ ಸಚಿವರ ವಿರುದ್ಧ ಕ್ರಮವೇನು' ಎಂದು ಪ್ರಶ್ನಿಸಿದೆ.

ಬಿಡಿಎ ಅಭಿವೃದ್ಧಿಯಲ್ಲಿ ಬೆಂಗಳೂರನ್ನು 'ಜಾಗತಿಕ ನಗರ' ಮಾಡಬೇಕಿತ್ತು. ಆದರೆ, ಬಿಜೆಪಿ ಆಡಳಿತದಲ್ಲಿ 'ಭ್ರಷ್ಟ ಅಭಿವೃದ್ಧಿ ಪ್ರಾಧಿಕಾರ' ಆಗಿದೆ ಎಂದು ಟೀಕಿಸಿದೆ.

ತುಮಕೂರು ವಿ.ವಿಯಲ್ಲಿ ಸಾವರ್ಕರ್ ಅಧ್ಯಯನ ಪೀಠ

ಪ್ರಜಾವಾಣಿ ವಾರ್ತೆ

ತುಮಕೂರು: ತುಮಕೂರು ವಿಶ್ವವಿದ್ಯಾನಿಲಯದಲ್ಲಿ ವಿನಾಯಕ ದಾಮೋದರ ಸಾವರ್ಕರ್ ಅಧ್ಯಯನ ಪೀಠ ಸ್ಥಾಪನೆ ಮಾಡಲು ವಿ.ವಿ ಸಿಂಡಿಕೇಟ್ ಸಭೆಯಲ್ಲಿ ಶುಕ್ರವಾರ ಒಪ್ಪಿಗೆ ನೀಡಲಾಗಿದೆ.

ಸಾವರ್ಕರ್ ಅಧ್ಯಯನ ಪೀಠ ಸ್ಥಾಪನೆ ಸಂಬಂಧ ಸಿಂಡಿಕೇಟ್ ಸದಸ್ಯ ಟಿ.ಡಿ. ವಿನಯ್ ಸಲ್ಲಿಸಿದ್ದ ಪ್ರಸ್ತಾಪಕ್ಕೆ ಸಭೆ ಒಮ್ಮತದಿಂದ ಒಪ್ಪಿಗೆ ನೀಡಲಾಯಿತು. ವಿನಯ್ ಅವರು ಈಗಾಗಲೇ ಈ ಪೀಠ ಸ್ಥಾಪನೆಗೆ ₹ 1 ಲಕ್ಷ ದೇಣಿಗೆ ನೀಡಿದ್ದಾರೆ.

ಮತ್ತೊಬ್ಬ ಸದಸ್ಯ ಎಚ್. ಪ್ರಸನ್ನ ಕುಮಾರ್ ವೈಯಕ್ತಿಕವಾಗಿ ₹25 ಸಾವಿರ ದೇಣಿಗೆ ನೀಡುವುದಾಗಿ ಸಭೆಯಲ್ಲಿ ತಿಳಿಸಿರುವುದಾಗಿ ಮೂಲಗಳು ಹೇಳಿವೆ.

ಈಗಾಗಲೇ, ವಿವಿಯಲ್ಲಿ ವಿವಿಧ 14 ಪೀಠ ಸ್ಥಾಪಿಸಲಾಗಿದ್ದು, ಈಗ ಸಾವರ್ಕರ್ ಅಧ್ಯಯನ ಪೀಠ ಸ್ಥಾಪನೆ ಪಡೆದಿದೆ. ತಿಗಳ ಜನಾಂಗದ ಅಧ್ಯಯನ ಪೀಠವನ್ನು ವಿ.ವಿಯಲ್ಲೇ ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಗಳರ ಸಮಾವೇಶದಲ್ಲಿ ಪ್ರಕಟಿಸಿದ್ದಾರೆ. ಇದು ಸ್ಥಾಪನೆಯಾದರೆ ಪೀಠಗಳ ಸಂಖ್ಯೆ ಮತ್ತಷ್ಟು ಹೆಚ್ಚಲಿವೆ.

ಆತ್ಮೀಯ ಶೇರುದಾರರೇ,

ನಿಮ್ಮ ಬ್ಯಾಂಕಿನ 98ನೇ ವಾರ್ಷಿಕ ಮಹಾಸಭೆಗೆ ತಮಗೆಲ್ಲರಿಗೂ ಆತ್ಮೀಯ ಸ್ವಾಗತ ಹಾಗೂ ನಿಮ್ಮ ನಿರಂತರ ಬೆಂಬಲ ಮತ್ತು ಪ್ರೋತ್ಸಾಹಕ್ಕಾಗಿ ವಿಶೇಷ ಕೃತಜ್ಞತೆಗಳು. 2021-22ರ ಹಣಕಾಸು ವರ್ಷದಲ್ಲಿ ನಿಮ್ಮ ಬ್ಯಾಂಕಿನ ಕಾರ್ಯನಿರ್ವಹಣೆಯನ್ನು ಪ್ರಸ್ತುತಪಡಿಸಲು ಮತ್ತು ಬ್ಯಾಂಕಿನ ಕೆಲವು ಉಪಕ್ರಮಗಳನ್ನು ಹಂಚಿಕೊಳ್ಳಲು ನಾನು ಸಂತೋಷಪಡುತ್ತೇನೆ.

ನಿಮಗೆಲ್ಲರಿಗೂ ತಿಳಿದಿರುವಂತೆ, ಸದರಿ ವರ್ಷವು ಅನೇಕ ಜಾಗತಿಕ ಅನಿಶ್ಚಿತತೆಗಳು, ಕೋವಿಡ್-19ರ ರೂಪಾಂತರಿಗಳು ಮತ್ತು ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳಿಂದಾಗಿ ಆರ್ಥಿಕತೆಯು ಪ್ರಕ್ಷುಬ್ಧತೆಯನ್ನು ಎದುರಿಸಬೇಕಾಯಿತು. ನಮ್ಮ ದೇಶದ ಆರ್ಥಿಕತೆಯೂ ಸಹ ಮೇಲಿನ ಎಲ್ಲ ಜಾಗತಿಕ ಅಡೆತಡೆಗಳಿಂದ ಪ್ರಭಾವಿತವಾಗಿದ್ದರೂ, ಸಮಯೋಚಿತ ನೀತಿ ನಿರೂಪಣೆಗಳಿಂದಾಗಿ ಚೇತರಿಸಿಕೊಂಡಿದ್ದಲ್ಲದೇ ಅಭಿವೃದ್ಧಿಯ ಪಥದತ್ತ ಮುಖ ಮಾಡಿದೆ. ಐಎಂಎಫ್ ವರದಿಯ ಪ್ರಕಾರ 2022-23ರ ಅವಧಿಯಲ್ಲಿ ಭಾರತವು ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಗಳಲ್ಲಿ ಒಂದಾಗಲಿದೆ ಹಾಗೂ ಆರ್‌ಬಿಐ ಕೂಡ 2022-23ರ ರಿಯಲ್ ಜಿಡಿಪಿ (GDP) ಬೆಳವಣಿಗೆಯನ್ನು ಶೇ. 7.2 ಎಂದು ಅಂದಾಜಿಸಿದೆ.

1. ಬ್ಯಾಂಕಿಂಗ್ ಉದ್ಯಮ:

ಭಾರತದ ಬ್ಯಾಂಕಿಂಗ್ ಕ್ಷೇತ್ರವನ್ನು ಕಠಿಣ ಪರಿಸ್ಥಿತಿಯನ್ನು ಎದುರಿಸಲು ಕ್ಷಮತೆಯುಳ್ಳದ್ದೆಂದೂ, ಸದೃಢ ಬಂಡವಾಳ ಹೊಂದಿದ್ದೆಂದೂ ಮತ್ತು ಉತ್ತಮವಾಗಿ ನಿಯಂತ್ರಿಸಲ್ಪಟ್ಟದ್ದೆಂದೂ ಭಾವಿಸಲಾಗಿದೆ. ಭಾರತದಲ್ಲಿ ಕೋವಿಡ್-19 ಕಡಿಮೆಯಾಗುತ್ತಿದ್ದು ಬ್ಯಾಂಕುಗಳು ತ್ವರಿತವಾಗಿ ಬೆಳವಣಿಗೆಯ ಹಾದಿ ಹಿಡಿದಿವೆ. ಬ್ಯಾಂಕ್‌ಗಳ ಹಣಕಾಸಿನ ಕಾರ್ಯಕ್ಷಮತೆಯು ಸಾಲದ ನಷ್ಟಗಳ ಸಂಭಾವ್ಯತೆಯನ್ನು ಕಡಿಮೆ ಮಾಡಿದೆ ಮತ್ತು ಎನ್‌ಪಿಎಗಳಲ್ಲಿನ ಇಳಿಕೆಯ ಪರಿಣಾಮವಾಗಿ ಆಸ್ತಿ ಗುಣಮಟ್ಟ ಮತ್ತು ನಿವ್ವಳ ಲಾಭದಲ್ಲಿ ವೃದ್ಧಿ ಗೋಚರಿಸುತ್ತಲಿದೆ.

2. ನಿಮ್ಮ ಬ್ಯಾಂಕಿನ ಕಾರ್ಯನಿರ್ವಹಣೆ:

ಕೋವಿಡ್-19ರ ಸಾಂಕ್ರಾಮಿಕದ ಪ್ರತಿಕೂಲ ಆರ್ಥಿಕ ಪರಿಣಾಮಗಳ ಹೊರತಾಗಿಯೂ ಬ್ಯಾಂಕ್‌ನ ಆರ್ಥಿಕತೆಯನ್ನು ಸಂರಕ್ಷಿಸಿ ಮತ್ತಷ್ಟು ಸುಧಾರಿಸಲು ನಿಮ್ಮ ಬ್ಯಾಂಕ್ ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ. ನಾವು ಈ ಸಂದರ್ಭದಲ್ಲಿ ಕೋವಿಡ್-19ರ ವ್ಯವಹಾರ ಸೂತ್ರವಾಗಿ 'ಸಂರಕ್ಷಿಸು, ಕ್ರೋಢೀಕರಿಸು ಮತ್ತು ಶಕ್ತಿಶಾಲಿಯಾಗಿ ಹೊರಹೊಮ್ಮು' (ಕನ್ಸರ್ವ್, ಕನ್ಸಾಲಿಡೇಟ್ ಅಂಡ್ ಎಮರ್ಜ್ ಸ್ಟ್ರಾಂಗರ್) ಎಂಬ ತತ್ವವನ್ನು ಅಳವಡಿಸಿಕೊಂಡಿದ್ದರ ಪರಿಣಾಮ ಇಂದು ನಿಮ್ಮ ಬ್ಯಾಂಕ್ ಕೋವಿಡ್ ಸಾಂಕ್ರಾಮಿಕದ ಅಡ್ಡಪರಿಣಾಮವನ್ನು ಮೆಟ್ಟಿನಿಂತು ಹೊಸ ಮಜಲುಗಳನ್ನು ಏರಿ ಮತ್ತಷ್ಟು ಸುದೃಢವಾಗಿ ಬೆಳೆದು ನಿಂತಿದೆ ಎಂದು ತಿಳಿಸಲು ಹರ್ಷಿಸುತ್ತೇನೆ.

ತತ್ಪರಿಣಾಮ ಸದರಿ ವರ್ಷದಲ್ಲಿ, ನಿಮ್ಮ ಬ್ಯಾಂಕ್, ಆರ್ಥಿಕ ಪರಿಸ್ಥಿತಿಗಳಲ್ಲಿನ ವಿವಿಧ ಸವಾಲುಗಳ ನಡುವೆಯೂ ಉತ್ತಮ ಬೆಳವಣಿಗೆಯನ್ನು ದಾಖಲಿಸುವುದರ ಜೊತೆಗೆ, ಕೆಳಗೆ ವಿವರಿಸಿದಂತೆ ಮೂಲಭೂತ ಅಂಶಗಳ ಸುಧಾರಣೆಯಲ್ಲಿ ಗಮನಾರ್ಹ ಸಾಧನೆಯನ್ನು ಮಾಡಿದೆ.

(i) ವ್ಯಾಪಾರ ವಹಿವಾಟು ಶೇ. 7.86ರಷ್ಟು ಬೆಳೆದು ₹ 1,37,169.99 ಕೋಟಿಗೆ ಏರಿಕೆಯಾಗಿದೆ. ವರ್ಷದಿಂದ ವರ್ಷಕ್ಕೆ ಶೇ. 6.25ರಷ್ಟು ಬೆಳವಣಿಗೆಯೊಂದಿಗೆ ₹ 80,386.85 ಕೋಟಿ ಠೇವಣಿಗಳು ಹಾಗೂ ಶೇ. 10.22ರಷ್ಟು ಬೆಳವಣಿಗೆಯೊಂದಿಗೆ ₹ 56,783.14 ಕೋಟಿ ನಿವ್ವಳ ಮುಂಗಡಗಳು ದಾಖಲಾಗಿವೆ. ಬ್ಯಾಂಕಿನ ಠೇವಣಿ ಹಾಗೂ ಮುಂಗಡದ ಅನುಪಾತ (CD Ratio) ಶೇ. 70.64ಕ್ಕೆ ಏರಿದೆ. (ii) ಬ್ಯಾಂಕ್ ಚಾಲ್ತಿ ಮತ್ತು ಉಳಿತಾಯ ಖಾತೆಗಳ (CASA) ಬೆಳವಣಿಗೆಯ ಮೇಲೆ ನಿರಂತರವಾಗಿ ಗಮನಹರಿಸಿದ್ದು ಕಾಸಾ (CASA) ಠೇವಣಿಗಳು ವರ್ಷದಿಂದ ವರ್ಷಕ್ಕೆ ಶೇ. 11.23 ರಷ್ಟು ಏರಿಕೆಯನ್ನು ದಾಖಲಿಸಿ ₹ 26,499.59 ಕೋಟಿಗಳಷ್ಟಾಗಿವೆ. ಇದು ಒಟ್ಟು ಠೇವಣಿಯ ಶೇ. 32.97ರಷ್ಟಿದ್ದು, (ಹಿಂದಿನ ವರ್ಷ ಶೇ. 31.49) ಹೊಸ ಮಜಲನ್ನು ತಲುಪಿದೆ. (iii) ನಿವ್ವಳ ಲಾಭವು 31.03.2022ರ ವರ್ಷಾಂತ್ಯದಲ್ಲಿ ಸಾರ್ವಕಾಲಿಕ ಗರಿಷ್ಠ ₹ 508.62 ಕೋಟಿಗಳಿಗೆ ತಲುಪಿ ಶೇ. 5.40ರ ವಾರ್ಷಿಕ ವೃದ್ಧಿಯನ್ನು ದಾಖಲಿಸಿದೆ. (iv) ಬಂಡವಾಳ ಪರ್ಯಾಪ್ತತಾ ಅನುಪಾತವು (CAR) ಭಾರತೀಯ ರಿಸರ್ವ್ ಬ್ಯಾಂಕ್ ಸೂಚಿಸಿದ್ದ ಶೇ. 11.50ರ ಕನಿಷ್ಠ ಮಟ್ಟಕ್ಕಿಂತ ಹೆಚ್ಚಿದ್ದು, ಅದು ಶೇ. 15.66ರ ದಾಖಲೆಯ ಮಟ್ಟದಲ್ಲಿದೆ. (v) ಹಣಕಾಸು ವರ್ಷ 2020-21ರಲ್ಲಿ ಶೇ. 69.99ರಷ್ಟಿದ್ದ ಪ್ರಾವಿಷನ್ ಕವರೇಜ್ ಅನುಪಾತವೂ (PCR) ಉತ್ತಮಗೊಂಡಿದ್ದು, 31.3.2022ಕ್ಕೆ ಶೇ. 73.47ಕ್ಕೆ ಏರಿಕೆಯಾಗಿದೆ. (vi) ಡಿಜಿಟಲ್ ಬ್ಯಾಂಕಿಂಗ್ ಮೂಲಕ ವಹಿವಾಟುಗಳು ಗರಿಷ್ಠ ಪ್ರಮಾಣದಲ್ಲಿ ನಡೆಯುತ್ತಿದ್ದು, 5 ವರ್ಷಗಳ ಹಿಂದಿನ ಶೇ. 53.06ಕ್ಕೆ ಹೋಲಿಸಿದರೆ ಮಾರ್ಚ್ 31, 2022ಕ್ಕೆ ಇದು ಶೇ. 93.22ರ ಗರಿಷ್ಠ ಮಟ್ಟವನ್ನು ತಲುಪಿದೆ. (vii) NIM (ನೆಟ್ ಇಂಟರೆಸ್ಟ್ ಮಾರ್ಜಿನ್) ಕೂಡ ಉತ್ತಮಗೊಳ್ಳುತ್ತಿದ್ದು ಸದರಿ ವರ್ಷಾಂತ್ಯಕ್ಕೆ ಶೇ. 3.18ರ ಹೊಸ ಮಜಲನ್ನು ತಲುಪಿದೆ. (viii) ಅಂತೆಯೇ ಸ್ಥೂಲ ಅನುತ್ಪಾದಕ ಸ್ವತ್ತುಗಳು (GNPA) ಮತ್ತು ನಿವ್ವಳ ಅನುತ್ಪಾದಕ ಸ್ವತ್ತುಗಳು (NNPA) ಕ್ರಮವಾಗಿ ಶೇ. 3.90 ಮತ್ತು ಶೇ. 2.42ಕ್ಕೆ ಇಳಿಕೆಯಾಗಿವೆ.

ಬ್ಯಾಂಕಿನ ಮೂಲಭೂತ ಅಂಶಗಳು ಉತ್ತಮ ಪ್ರಗತಿ ಕಾಣುತ್ತಿದ್ದು, ಇದು ಕಠಿಣ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸುವ ಬ್ಯಾಂಕಿನ ಕ್ಷಮತೆಯ ಸಂಕೇತವಾಗಿದೆ ಹಾಗೂ ಈ ಬೆಳವಣಿಗೆಗಳನ್ನು ಬಂಡವಾಳ ಮಾರುಕಟ್ಟೆಯೂ ಗಮನಿಸಿ ಪ್ರೋತ್ಸಾಹಿಸುತ್ತಿದೆ ಎಂಬುದು ಸಮಾಧಾನಕರ ಅಂಶ.

3. ಲಾಭಾಂಶ:

ಮಾರ್ಚ್ 31, 2022ಕ್ಕೆ ಕೊನೆಗೊಂಡ ವರ್ಷಕ್ಕೆ ಪ್ರತಿ ಈಕ್ವಿಟಿ ಶೇರಿನ ಮೇಲೆ ₹ 4ರಂತೆ (ಅಂದರೆ ಶೇ. 40) ಡಿವಿಡೆಂಡನ್ನು ಬ್ಯಾಂಕಿನ ನಿರ್ದೇಶಕರ ಮಂಡಳಿಯು ಪ್ರಸ್ತಾಪಿಸಿದೆ ಹಾಗೂ ಉದ್ದೇಶಿತ ಡಿವಿಡೆಂಡ್ ಪಾವತಿ ಅನುಪಾತವು ಹಿಂದಿನ ವರ್ಷದ ಶೇ. 11.60ಗೆ ಹೋಲಿಸಿದರೆ ಪ್ರಸಕ್ತ ವರ್ಷ ಶೇ. 24.47 ಇದ್ದು ನಿಮ್ಮ ಅನುಮೋದನೆಯೊಂದಿಗೆ ಅದನ್ನು ತ್ವರಿತವಾಗಿ ವಿತರಿಸಲಾಗುವುದು.

4. ವ್ಯವಹಾರ ಜಾಲ ವಿಸ್ತರಣೆ:

2021-22ರಲ್ಲಿ ಒಟ್ಟು 20 ಹೊಸ ಶಾಖೆಗಳನ್ನು ತೆರೆದು ಒಂದು ಶಾಖೆಯನ್ನು ವಿಲೀನಗೊಳಿಸಿ ಉತ್ತಮ ಜಾಗಕ್ಕೆ 13 ಶಾಖೆಗಳನ್ನು ಸ್ಥಳಾಂತರಿಸಲಾಯಿತು. 31.03.2022ಕ್ಕೆ ಒಂದು ವಿಸ್ತರಣಾ ಕೌಂಟರ್‌ನೊಂದಿಗೆ ಒಟ್ಟು 877 ಶಾಖೆಗಳು ಮತ್ತು 1192 ಎಟಿಎಂಗಳು/ಕ್ಯಾಶ್ ರಿಸೈಕ್ಲರ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಹೆಚ್ಚಿನ ವಹಿವಾಟುಗಳು ಈಗ ಡಿಜಿಟಲ್ ವ್ಯವಸ್ಥೆಗೆ ಪರಿವರ್ತಿತವಾಗಿರುವುದರಿಂದ ಬ್ಯಾಂಕ್‌ನ 'ಚಿಕ್ಕ ಸ್ಥಳಾವಕಾಶ; ಹೆಚ್ಚು ವ್ಯವಹಾರ' ಎಂಬ ದೃಷ್ಟಿಕೋನಕ್ಕೆ ಅನುಗುಣವಾಗಿ ಶಾಖಾ ಕಛೇರಿಗಳ ಮರುವಿನ್ಯಾಸ ಮತ್ತು ಸುಧಾರೀಕರಣವನ್ನು ಬ್ಯಾಂಕ್ ಕೈಗೊಂಡಿದೆ.

5. ವಿತ್ತೀಯ ಸೇರ್ಪಡೆಯ ಉಪಕ್ರಮಗಳು:

ಬ್ಯಾಂಕ್ ಗ್ರಾಮೀಣ ಪ್ರದೇಶದಲ್ಲಿ 200 ಶಾಖೆಗಳನ್ನು ಹೊಂದಿದ್ದು, 35 ಅಲ್ಟ್ರಾ ಸ್ಮಾಲ್ ಶಾಖೆಗಳನ್ನು (USBs) ಮತ್ತು 121 ಬಿಸಿನೆಸ್ ಕರೆಸ್ಪಾಂಡೆಂಟ್ (BC) ಏಜೆಂಟ್‌ಗಳ ಮೂಲಕ ಕರ್ನಾಟಕ, ಆಂಧ್ರಪ್ರದೇಶ ಮತ್ತು ಛತ್ತೀಸ್‌ಗಢ ರಾಜ್ಯಗಳಲ್ಲಿ ನಿಗದಿಪಡಿಸಲಾದ ಹಳ್ಳಿಗಳಲ್ಲಿ ಸೇವೆ ನೀಡುತ್ತಿದೆ. ನಿಮ್ಮ ಬ್ಯಾಂಕ್, ಭಾರತ ಸರಕಾರದ ನೇರ ನಗದು ವರ್ಗಾವಣೆ (DBT) ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದೆ. ಪ್ರಧಾನಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ (PMJJBY), ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆ (PMSBY), ಅಟಲ್ ಪಿಂಚಣಿ ಯೋಜನೆ (APY), ಪ್ರಧಾನಮಂತ್ರಿ ಸ್ವನಿಧಿ (PM SVANidhi) ಯೋಜನೆ, ಇತ್ಯಾದಿ ಸಾಮಾಜಿಕ ಭದ್ರತಾ ಯೋಜನೆಗಳ ಅನುಷ್ಠಾನದಲ್ಲಿ ಬ್ಯಾಂಕ್ ಪ್ರಮುಖ ಪಾತ್ರ ವಹಿಸುತ್ತಿದೆ.

6. ಆದ್ಯತಾ ವಲಯದ ಮುಂಗಡಗಳು:

ಬ್ಯಾಂಕಿನ ಆದ್ಯತಾ ವಲಯದ ಮುಂಗಡಗಳು ಮಾರ್ಚ್ 31, 2022ರ ವೇಳೆಗೆ ₹ 32,077.53 ಕೋಟಿಗಳಷ್ಟಿದ್ದು ಅಡ್ಜಸ್ಟೆಡ್ ನೆಟ್ ಬ್ಯಾಂಕ್ ಕ್ರೆಡಿಟ್‌ನ (ANBC) ಶೇ. 56.41ರಷ್ಟಿವೆ. ಕೃಷಿ ವಲಯದ ಸಾಲವು ₹ 10,473.56 ಕೋಟಿಗಳ ಮಟ್ಟವನ್ನು ತಲುಪಿದ್ದು ಎಎನ್‌ಬಿಸಿಯ ಶೇ. 18.42ರಷ್ಟಿವೆ. ಸದರಿ ವರ್ಷದಲ್ಲಿ ನಿಮ್ಮ ಬ್ಯಾಂಕ್ ಆದ್ಯತಾ ವಲಯ ಮತ್ತು ಕೃಷಿ ವಲಯದಲ್ಲಿ ಉತ್ತಮ ಸಾಧನೆ ಮಾಡಿದೆ ಎಂದು ತಿಳಿಸಲು ಹರ್ಷಿಸುತ್ತೇನೆ.

7. ಆಸ್ತಿ ಗುಣಮಟ್ಟ, ಕ್ರೆಡಿಟ್ ಮಾನಿಟರಿಂಗ್ ಮತ್ತು ಸಾಲ ವಸೂಲಾತಿ:

ಪ್ರಧಾನ ಕಚೇರಿಯಲ್ಲಿರುವ ಕ್ರೆಡಿಟ್ ಮಾನಿಟರಿಂಗ್ ವಿಭಾಗವು ಮರುಪಾವತಿ ಪ್ರಕ್ರಿಯೆಯನ್ನು ವ್ಯವಸ್ಥಿತವಾಗಿ ಮೇಲ್ವಿಚಾರಣೆ ಮಾಡುತ್ತಿದೆ ಮತ್ತು SMA (ಸ್ಪೆಷಲ್ ಮೆನ್ಶನ್ಡ್ ಎಕೌಂಟ್) ಖಾತೆಗಳನ್ನು ಕನಿಷ್ಠ ಮಟ್ಟಕ್ಕೆ ಇಳಿಸುವ ಗುರಿಯೊಂದಿಗೆ ಕಾರ್ಯ ನಿರ್ವಹಿಸುತ್ತಿದೆ. ಇದಲ್ಲದೆ, ಬ್ಯಾಂಕ್ ಒಂದು ಪ್ರತ್ಯೇಕ ರಿಸ್ಟ್ರಕ್ಚರ್ಡ್ ಅಡ್ವಾನ್ಸಸ್ ಮಾನಿಟರಿಂಗ್ ಸೆಲ್ (RAM ಸೆಲ್) ಅನ್ನು ಸಹ ರಚಿಸಿ ರಿಸ್ಟ್ರಕ್ಚರ್ಡ್ ಮುಂಗಡಗಳನ್ನು ಕಡಿಮೆಗೊಳಿಸುವ ಉದ್ದೇಶದಿಂದ ವಿವಿಧ ಕೇಂದ್ರಗಳಲ್ಲಿ 'ಆರ್-ಅದಾಲತ್' ಹೆಸರಿನ ಅದಾಲತ್‌ಗಳು/ಶಿಬಿರಗಳನ್ನು ನಡೆಸುತ್ತಿದೆ. ಸಾಲ ಮರುಪಾವತಿ ಮಾಡದ ಸಾಲಗಾರರನ್ನು ಸಂಧಾನದ ಪ್ರಕ್ರಿಯೆಗೆ ಕರೆತರುವ ಮೂಲಕ NPAಗಳ ಗರಿಷ್ಠ ವಸೂಲಾತಿಗೆ ಅಗತ್ಯವಿರುವ ಎಲ್ಲ ಕಾನೂನು ಸಮ್ಮತ ಕ್ರಮಗಳನ್ನೂ ನಿಮ್ಮ ಬ್ಯಾಂಕ್ ತೆಗೆದುಕೊಂಡಿದ್ದು ಈ ನಿಟ್ಟಿನಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ.

8. ಅಪಾಯ ನಿರ್ವಹಣೆ ಮತ್ತು ಅನುಪಾಲನಾ ಸಂಸ್ಕೃತಿ:

ಬ್ಯಾಂಕ್ ಸುಭದ್ರವಾದ ಅಪಾಯ ನಿರ್ವಹಣಾ (Risk Management) ವ್ಯವಸ್ಥೆ ಮತ್ತು ಅನುಸರಣೀಯ ಅನುಪಾಲನಾ ಸಂಸ್ಕೃತಿ (Compliance Culture)ಯನ್ನು ಹೊಂದಿದ್ದು ಬ್ಯಾಂಕಿಂಗ್ ವ್ಯವಹಾರದಲ್ಲಿ ಕಂಡುಬರುವ ಕ್ರೆಡಿಟ್ ರಿಸ್ಕ್, ಮಾರ್ಕೆಟ್ ರಿಸ್ಕ್, ಲಿಕ್ವಿಡಿಟಿ ರಿಸ್ಕ್, ಆಪರೇಷನ್ ರಿಸ್ಕ್ ಇತ್ಯಾದಿ ಅಪಾಯಗಳನ್ನು ನಿರ್ವಹಿಸಲು ದಕ್ಷ ಕಾರ್ಯತಂತ್ರವನ್ನು ಹೊಂದಿದೆ. ಬ್ಯಾಂಕ್‌ನ ಆಡಳಿತ ಮಂಡಳಿಯ ರಿಸ್ಕ್ ಕ್ಯಾಪಿಟಲ್ ಮ್ಯಾನೇಜ್‌ಮೆಂಟ್ ಕಮಿಟಿ (RCMC) ಯ ಮೂಲಕ ಅಪಾಯದ ಆಯಾಮಗಳನ್ನು ಕಾಲಕಾಲಕ್ಕೆ ಪರಿಶೀಲಿಸಿ ಅವುಗಳ ಪರಿಣಾಮಕಾರಿ ನಿರ್ವಹಣೆಗಾಗಿ ನೀತಿಗಳು ಮತ್ತು ಮಾರ್ಗೋಪಾಯಗಳನ್ನು ವಿಶ್ಲೇಷಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ರಿಸ್ಕ್ ಮ್ಯಾನೇಜ್‌ಮೆಂಟ್ ಪ್ರಕ್ರಿಯೆಗಳು ಮತ್ತು ರಿಸ್ಕ್ ಮ್ಯಾನೇಜ್‌ಮೆಂಟ್ ವಿಭಾಗದಲ್ಲಿ ಅಳವಡಿಸಿದ QMS ಪ್ರಕ್ರಿಯೆಗಳಿಗೆ ನಿಮ್ಮ ಬ್ಯಾಂಕ್ ISO 9001:2015 ಪ್ರಮಾಣೀಕರಣದ ಮಾನ್ಯತೆ ಪಡೆದಿದೆ ಎಂಬುದು ಹೆಮ್ಮೆಯ ವಿಷಯ. ಇದಲ್ಲದೆ, ನಿಮ್ಮ ಬ್ಯಾಂಕ್ ಎಲ್ಲ ಅಂಶಗಳಲ್ಲೂ ಅನುಪಾಲನಾ (Compliance) ಸಂಸ್ಕೃತಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದೆ.

9. ಹೂಡಿಕೆದಾರರ ಸಂಪರ್ಕ ಕೇಂದ್ರ (Investor Relation Cell):

ಬ್ಯಾಂಕ್‌ನ ಪ್ರಧಾನ ಕಚೇರಿಯಲ್ಲಿರುವ 'ಹೂಡಿಕೆದಾರರ ಸಂಪರ್ಕ ಕೇಂದ್ರ,'ವು ಕಾರ್ಪೊರೇಟ್ ಮಾಹಿತಿಯನ್ನು ಕಾಲಕಾಲಕ್ಕೆ ಸ್ವಯಂ ಪ್ರೇರಿತವಾಗಿ ಶೇರುದಾರರಿಗೆ ತಲುಪಿಸಿ, ಶೇರುದಾರರ ಸಮಸ್ಯೆಗಳಿಗೂ ಸ್ಪಂದಿಸಿ ಅದರ ಪರಿಹಾರ ಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ನಿಮ್ಮ ಬ್ಯಾಂಕ್ ಇತ್ತೀಚೆಗೆ ಹೂಡಿಕೆದಾರರೊಂದಿಗೆ ವಿವಿಧ ವಿಷಯಗಳ ಕುರಿತು ಪರಿಣಾಮಕಾರಿಯಾಗಿ ಸಂವಹನ ನಡೆಸಲು ಮತ್ತು ಕಾಲಕಾಲಕ್ಕೆ ಕಾರ್ಪೊರೇಟ್ ಮಾಹಿತಿಯ ಪ್ರಸಾರಕ್ಕಾಗಿ ಐಆರ್ (IR) ಏಜೆನ್ಸಿಯೊಂದನ್ನೂ ನೇಮಿಸಿಕೊಂಡಿದೆ.

ಐತಿಹಾಸಿಕ ಪರಿವರ್ತನಾ ಪ್ರಕ್ರಿಯೆ

ಕರ್ನಾಟಕ ಬ್ಯಾಂಕ್ ಲಿಮಿಟೆಡ್‌ನ
ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಆಗಿರುವ
ಶ್ರೀ ಮಹಾಬಲೇಶ್ವರ ಎಂ.ಎಸ್. ರವರು
ದಿನಾಂಕ 26.08.2022 ರಂದು ನಡೆದ
ಶೇರುದಾರರ 98ನೇ ವಾರ್ಷಿಕ ಮಹಾಸಭೆಯಲ್ಲಿ
ಮಾಡಿದ ಭಾಷಣದ ಸಾರಾಂಶ

10. ಪ್ರಶಸ್ತಿಗಳು ಮತ್ತು ಪುರಸ್ಕಾರಗಳು:

ಬ್ಯಾಂಕಿನ ಕಾರ್ಯವೈಖರಿಯನ್ನು ವಿವಿಧ ಹೆಸರಾಂತ ಸಂಸ್ಥೆಗಳು ಗುರುತಿಸಿರುವುದು ನಮಗೆ ಸಂತೋಷ ತಂದಿದೆ. ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆಯುವ ತನ್ನ ಸಂಪ್ರದಾಯವನ್ನು ಮುಂದುವರೆಸುತ್ತಾ, ನಿಮ್ಮ ಬ್ಯಾಂಕ್ ಕಳೆದ ಆರ್ಥಿಕ ವರ್ಷದಲ್ಲಿ ದಾಖಲೆ ಸಂಖ್ಯೆಯ ರಾಷ್ಟ್ರ-ಅಂತಾರಾಷ್ಟ್ರೀಯ ಮಟ್ಟದ 25 ಪ್ರಶಸ್ತಿಗಳಿಗೆ ಭಾಜನವಾಗಿದೆ. ಇದಲ್ಲದೆ, ವಿವಿಧ ಸಂಸ್ಥೆಗಳಿಂದ ಐದು ಪ್ರಶಸ್ತಿಗಳೂ ನನ್ನನ್ನು ಅರಸಿ ಬಂದಿವೆ ಎಂದು ವಿನಮ್ರತೆಯಿಂದ ತಿಳಿಸಲು ಬಯಸುತ್ತೇನೆ.

11. 'KBL-VIKAAS' (ಕೆಬಿಎಲ್ ವಿಕಾಸ್) - ಸಮಗ್ರ ಪರಿವರ್ತನೆಯ ಮಹತ್ವಾಕಾಂಕ್ಷೆಯ ಪಯಣ:

'KBL-VIKAAS' ಪರಿಕಲ್ಪನೆಯಡಿಯಲ್ಲಿ 'ಭವಿಷ್ಯದ ಡಿಜಿಟಲ್ ಬ್ಯಾಂಕ್' ಆಗುವ ಸಂಕಲ್ಪದ ನಿಮ್ಮ ಬ್ಯಾಂಕ್‌ನ ಪರಿವರ್ತನೆಯ ಪಯಣ ಯೋಜಿತ ರೀತಿಯಲ್ಲಿ ಮುನ್ನಡೆಯುತ್ತಿದ್ದು, ಬ್ಯಾಂಕ್ ಅನೇಕ ಗಮನಾರ್ಹ ಸಾಧನೆಗಳನ್ನು ಮಾಡಿದೆ.

ನಾಲ್ಕು ವರ್ಷಗಳ ಹಿಂದೆಯೇ 'ಡಿಜಿಟಲೀಕರಣ'ದ ಅಗತ್ಯವನ್ನು ಮನಗಂಡು ಬ್ಯಾಂಕ್‌ನ ಎರಡನೆಯ ಶತಮಾನದ ದಿಗ್ವಿಜಯಕ್ಕೆ ಬ್ಯಾಂಕನ್ನು ಸಜ್ಜುಗೊಳಿಸಲು ಆಯ್ದ ಅಧಿಕಾರಿಗಳ ಚಿಂತನ-ಮಂಥನ ಗೋಷ್ಠಿಯನ್ನು ಏರ್ಪಡಿಸಿ ಬದಲಾವಣೆಯಾಗಬೇಕಾದ ಕ್ಷೇತ್ರಗಳನ್ನು ಗುರುತಿಸಿದೆವು. ಪರಿವರ್ತನೆಯನ್ನು ಅನುಷ್ಠಾನಕ್ಕೆ ತರಲು ಬೇಕಾದ ಕಾರ್ಯತಂತ್ರವನ್ನು ನಿರ್ಧರಿಸಲು 16.06.2017ರಂದು ನಿರ್ದೇಶಕ ಮಂಡಳಿಯ ಸಭೆಯನ್ನು ನಡೆಸಿ ಕೂಲಂಕಷ ಚರ್ಚೆಯ ಬಳಿಕ ಕೆ.ಬಿ.ಎಲ್. ವಿಕಾಸ್ 1.0 ಎಂಬ ಪರಿಕಲ್ಪನೆಯಡಿಯಲ್ಲಿ ನಿಮ್ಮ ಬ್ಯಾಂಕ್‌ನ ಸಮಗ್ರ ಪರಿವರ್ತನೆಗಾಗಿ ಕಟಿಬದ್ಧರಾದೆವು. ನಮ್ಮ ಈ ಚಾರಿತ್ರಿಕ ಪಯಣಕ್ಕೆ ಸಲಹೆಗಾರರಾಗಿ M/s ಬೋಸ್ಟನ್ ಕನ್ಸಲ್ಟಿಂಗ್ ಗ್ರೂಪ್ (ಬಿಸಿಜಿ) ಸಂಸ್ಥೆಯನ್ನು ಗೊತ್ತುಪಡಿಸಲಾಯಿತು. ಬ್ಯಾಂಕ್‌ನ ಎಲ್ಲ ಉದ್ಯೋಗಿಗಳನ್ನು ಬದಲಾವಣೆಯ ಹರಿಕಾರರೆಂದು ಗುರುತಿಸಿ ಅವರನ್ನು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡುದರ ಪರಿಣಾಮ ಈ ಸಮಗ್ರ ಪರಿವರ್ತನೆಯ ಕನಸು ನನಸಾಗುವಂತಾಯಿತು. ವಿವಿಧ ಟೌನ್ ಹಾಲ್ ಸಭೆಗಳು, ಕ್ಲಸ್ಟರ್ ಸಭೆಗಳು ಇತ್ಯಾದಿಗಳ ಮೂಲಕ ಇಡೀ ಉದ್ಯೋಗಿ ಸಮೂಹವು ಒಂದು ತಂಡವಾಗಿ ಈ ಪರಿಕಲ್ಪನೆಯನ್ನು ತಮ್ಮದಾಗಿಸಿಕೊಂಡವು. ಹೊಸ ಆಲೋಚನೆಗಳು ಮತ್ತು ಪರಿಕಲ್ಪನೆಗಳನ್ನು ಬ್ಯಾಂಕ್ ತನ್ನ ಕೆಳಸ್ತರದಿಂದಲೇ ಕ್ರೋಢೀಕರಿಸಿ ಅವುಗಳನ್ನು ಸಾಕಾರಗೊಳಿಸುವತ್ತ ಶತಮಾನದ ಪರಿವರ್ತನೆಯ ಈ ಮಹಾಪಯಣದಲ್ಲಿ ಒಂದು ತಂಡವಾಗಿ ಸಾಗಿದೆ ಎಂದು ತಿಳಿಸಲು ಹರ್ಷಿಸುತ್ತೇನೆ.

ಈ ಪರಿವರ್ತನಾ ಪಯಣದ ಚಾಲನೆಗಾಗಿಯೇ ಮುಖ್ಯ ಪರಿವರ್ತನಾ ಅಧಿಕಾರಿ (ಚೀಫ್ ಟ್ರಾನ್ಸ್‌ಫಾರ್ಮೇಶನ್ ಆಫೀಸರ್)ಯ ನೇಮಕವಾಯಿತು; ತತ್ಸಂಬಂಧಿ ಟ್ರಾನ್ಸ್‌ಫಾರ್ಮೇಶನ್ ಸೆಲ್ ಎಂಬ ಪ್ರತ್ಯೇಕ ವಿಭಾಗವನ್ನೂ ಸ್ಥಾಪಿಸಲಾಯಿತು. ಮುಖ್ಯ ಕಛೇರಿಯಲ್ಲಿ ನಡೆಯುತ್ತಿದ್ದ ದೈನಂದಿನ 'ಇಂಪ್ಯಾಕ್ಟ್ ಸೆಂಟರ್ ಮೀಟಿಂಗ್' (ICM), ಶಾಖೆಗಳು/ಕಚೇರಿಗಳಲ್ಲಿನ ದೈನಂದಿನ 'ಹಡಲ್ ಸಭೆ', ಪಾಕ್ಷಿಕ 'ಸ್ಟೀರಿಂಗ್ ಕಮಿಟಿ ಸಭೆಗಳು' (SCM), ಮತ್ತು ನಿರ್ದೇಶಕ ಮಂಡಳಿ ನಡೆಸುವ ತ್ರೈಮಾಸಿಕ ಪರಿಶೀಲನಾ ಸಭೆಗಳು ತಪ್ಪದೆ ನಡೆದವು. ಪರಿವರ್ತನಾ ಪಯಣದಲ್ಲಿ ನಡೆದ ದಾರಿಯನ್ನು, ತೆಗೆದುಕೊಂಡ ನಿರ್ಧಾರಗಳನ್ನು ಆಗಾಗ ಪರಿಶೀಲಿಸುತ್ತ ಬಂದೆವು. ಈ ಪ್ರಕ್ರಿಯೆಯಲ್ಲಿ, ನನ್ನ ತಂಡವು ನನ್ನನ್ನು ನಿರಾಶೆಗೊಳಿಸಲಿಲ್ಲ ಮತ್ತು ಸಂಸ್ಥೆಯ ಭವಿಷ್ಯದ ಬೆಳವಣಿಗೆಯ ದೃಷ್ಟಿಯಲ್ಲಿ ಕಾಲಕ್ಕೆ ತಕ್ಕಂತೆ ಸ್ಪಂದಿಸಿ ಕಾಲದ ಪರೀಕ್ಷೆಯಲ್ಲಿ ಗೆದ್ದು ಬಂದು ತನ್ನ ಬದ್ಧತೆಯನ್ನು ಪ್ರದರ್ಶಿಸಿತು ಎಂಬುದು ಗಮನಾರ್ಹ ವಿಷಯ.

ಬ್ಯಾಂಕ್ ಇದುವರೆಗೆ 1000 ICM (ಇಂಪ್ಯಾಕ್ಟ್ ಸೆಂಟರ್ ಮೀಟಿಂಗ್)ಗಳು, 100 SCM (ಸ್ಟೀರಿಂಗ್ ಕಮಿಟಿ ಸಭೆ)ಗಳನ್ನು ನಡೆಸಿದೆ. ನವೆಂಬರ್ 2017 ರಿಂದ ಪರಿವರ್ತನಾ ಪಯಣಕ್ಕೆ ಸಂಬಂಧಿಸಿದ ದಾಖಲೆಯ 21 'ರಿವ್ಯೂ ನೋಟ್'ಗಳನ್ನು ಬ್ಯಾಂಕ್‌ನ ಆಡಳಿತ ಮಂಡಳಿ ಪರಿಶೀಲಿಸಿದೆ. ನಮ್ಮ ಈ ಪಯಣದ ಪ್ರತಿಹಂತದಲ್ಲೂ ಕಲಿಕೆ, ಕೌಶಲ್ಯಾಭಿವೃದ್ಧಿ, ಪರಿಷ್ಕರಣೆ, ವಿಮರ್ಶೆ ನಡೆದಿವೆ. ಎಲ್ಲೆಲ್ಲಿ ಕೊರತೆಯನ್ನು ಕಂಡೆವೋ ಅವೆಲ್ಲವನ್ನೂ ಸರಿಪಡಿಸುವ ಕಾರ್ಯಗಳಲ್ಲದೆ ಹೊಸ ಕೌಶಲಗಳನ್ನು ತಮ್ಮದಾಗಿಸಿಕೊಳ್ಳುವ ಪ್ರಕ್ರಿಯೆಯೂ ನಡೆದಿದೆ. ಇಲ್ಲಿ ಪಡೆದ ಯಶಸ್ಸುಗಳನ್ನು ಸಂಭ್ರಮಿಸಿ ಮತ್ತು ವೈಫಲ್ಯಗಳನ್ನು ಆತ್ಮಾವಲೋಕನ ಮಾಡಿಕೊಳ್ಳುವ ಪ್ರಕ್ರಿಯೆಗಳೂ ನಡೆದವು. ಕೆಬಿಎಲ್ ವಿಕಾಸ್ ಪಯಣದಲ್ಲಿ ಪರಿವರ್ತನೆ ಕಂಡ ಬಹುಮುಖ್ಯ ಕ್ಷೇತ್ರಗಳೆಂದರೆ; ಮುಂಗಡ, ಮಾನವ ಸಂಪನ್ಮೂಲ, ಇನ್‌ಫಾರ್ಮೇಶನ್ ಟೆಕ್ನಾಲಜಿ ಮತ್ತು ಕಸ್ಟಮರ್ ಎಕ್ಸ್‌ಪೀರಿಯನ್ಸ್ ವಿಭಾಗಗಳು.

ಈ ಪರಿವರ್ತನೆಯ ಪಯಣದ ಇತರ ಪ್ರಮುಖ ಮೈಲಿಗಲ್ಲುಗಳೆಂದರೆ: ಮಾರಾಟ ಮತ್ತು ಮಾರ್ಕೆಟಿಂಗ್ ಸಂಸ್ಕೃತಿಯಲ್ಲಿ ಉದ್ಯೋಗಿಗಳ ಮನಸ್ಥಿತಿಯ ಬದಲಾವಣೆ, ಸಂವಹನ ಮತ್ತು ಪ್ರಸ್ತುತಿ ಕೌಶಲ್ಯಗಳ ಸುಧಾರಣೆ, 'ಬ್ಯಾಂಕ್ ಮೊದಲು' ಎಂಬ ಮನೋಭಾವ, 'ಒನ್ ಬ್ಯಾಂಕ್, ಒನ್ ಟೀಮ್' ಎಂಬ ಭಾವ. ವ್ಯವಹಾರದ ನಿಯಮಿತ ಪರಿಶೀಲನೆಗಾಗಿ ಹೊಸ ಮಾದರಿಯ ಪರಿಚಯ ಅಂದರೆ, (i) ದತ್ತಾಂಶಗಳನ್ನು (ಡಾಟಾ) ಬಳಸಿಕೊಂಡು ನ್ಯೂನತೆಗಳನ್ನು ಗುರುತಿಸುವುದು. (ii) ಮೂಲಭೂತ ಕಾರಣಗಳನ್ನು ತಿಳಿದುಕೊಳ್ಳುವುದು. (iii) ಸರಿಪಡಿಸಬೇಕಾದ ಅಂಶಗಳ ಕುರಿತು ಚರ್ಚಿಸುವುದು ಮತ್ತು ಮಾಹಿತಿ ಹಂಚಿಕೊಳ್ಳುವುದು. (iv) ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಗುರುತಿಸುವುದು ಮತ್ತು (v) ಆ ಕ್ರಮಗಳಿಗೆ ಕಾಲಮಿತಿ ನಿರ್ಧರಿಸಿ ಅನುಷ್ಠಾನಗೊಳಿಸುವುದು. ಸ್ವಯಂಚಾಲಿತ ಡ್ಯಾಶ್‌ಬೋರ್ಡ್‌ಗಳು, ಡಿಜಿಟಲ್ ಸೆಂಟರ್ ಆಫ್ ಎಕ್ಸಲೆನ್ಸ್ (DCoE) ಸ್ಥಾಪನೆ, ಸಾಲಗಳ ಡಿಜಿಟಲ್ ಅಂಡರ್‌ರೈಟಿಂಗ್, ಡಿಜಿಟಲ್ ಮಾರ್ಕೆಟಿಂಗ್, ಡಿಜಿ ಶಾಖೆ, ಡಿಜಿ ಸೆಂಟರ್, ಕಾಗದರಹಿತ ಪರಿಶೀಲನಾ ಪ್ರಕ್ರಿಯೆ, ಡಾಕ್ಯುಮೆಂಟ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (ಡಿಎಂಎಸ್), ಪರ್ಫಾರ್ಮೆನ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (ಪಿಎಂಎಸ್), ಲೀಡ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (ಎಲ್‌ಎಂಎಸ್), ಇಸಿಡಿಎಸ್ (ನೌಕರರ ವೃತ್ತಿ ಅಭಿವೃದ್ಧಿ ಮತ್ತು ಸಂತೃಪ್ತಿ ವ್ಯವಸ್ಥೆ), ಸಾಮರ್ಥ್ಯ ವೃದ್ಧಿ, ಸಾಂಸ್ಥಿಕ ರಚನೆಯಲ್ಲಿ ಪ್ರಮುಖ ಪರಿಷ್ಕರಣೆಯಾಗಿ - COO, CBO, CTrO, CD&MO, RSEs ಹುದ್ದೆಗಳ ರಚನೆಯೊಂದಿಗೆ ಸೇಲ್ಸ್ ಆಫೀಸರ್ಸ್, CMOಗಳ ನಿಯೋಜನೆ ಇತ್ಯಾದಿ. ಹೊಸ ಶೃಂಗ ವ್ಯವಸ್ಥೆಯಾದ (Verticals) ಕ್ರೆಡಿಟ್ ಮಾರ್ಕೆಟಿಂಗ್, ಆರ್ಥಿಕ ಮತ್ತು ಸಂಶೋಧನಾ ವಿಭಾಗ, ಪರಿವರ್ತನಾ ವಿಭಾಗ, ತೆರಿಗೆ ವಿಭಾಗ, ಕೇಂದ್ರೀಕೃತ ಸಮನ್ವಯ ವಿಭಾಗ, ಕೇಂದ್ರೀಕೃತ ಸಾಲ ಮಂಜೂರಾತಿ ಕೇಂದ್ರ (CLSC), ಕೇಂದ್ರೀಕೃತ ಸಾಲ ಮಂಜೂರಾತಿ ಪ್ರಕ್ರಿಯಾ ಕೇಂದ್ರಗಳು (CLPHs) ಮಾತ್ರವಲ್ಲದೆ ಫಿನ್‌ಟೆಕ್‌ಗಳು ಮತ್ತು ಸ್ಟಾರ್ಟ್‌ಅಪ್‌ಗಳೊಂದಿಗೆ ಪಾಲುದಾರಿಕೆಯೂ ಪ್ರಮುಖವಾದ ಪರಿವರ್ತನೆಗಳು.

ಡಿಜಿಟಲ್ ಟಚ್ ಪಾಯಿಂಟ್‌ಗಳ ಹೆಚ್ಚಳದೊಂದಿಗೆ ಡಿಜಿಟಲ್ ವ್ಯವಹಾರದ ಪ್ರಮಾಣವು ಶೇ. 93ಕ್ಕೆ ತಲುಪಿದೆ. ರಿಟೇಲ್/MSME ಸಾಲ ಉತ್ಪನ್ನಗಳನ್ನು ಡಿಜಿಟಲ್ ಅಂಡರ್‌ರೈಟಿಂಗ್ ಮೂಲಕ ತಾತ್ವಿಕ ಅನುಮೋದನೆಗಾಗಿ ಸನ್ನದ್ಧಗೊಳಿಸಲಾಗಿದೆ; ಶೇ. 70ಕ್ಕಿಂತ ಹೆಚ್ಚು ಅರ್ಹ ಉಳಿತಾಯ ಖಾತೆಗಳನ್ನು ಈಗ ಡಿಜಿಟಲ್ ವ್ಯವಸ್ಥೆಯ ಮೂಲಕ ತೆರೆಯಲಾಗುತ್ತಿದೆ. ಸೋಷಿಯಲ್ ಮೀಡಿಯಾ, ವೆಬ್‌ಸೈಟ್, ಮೊಬೈಲ್ ಮತ್ತು ಇಂಟರ್ನೆಟ್ ಬ್ಯಾಂಕಿಂಗ್ ಮತ್ತು ಎಟಿಎಂಗಳ ಮೂಲಕ ಡಿಜಿಟಲ್ ಮಾರ್ಕೆಟಿಂಗ್ ಅಭಿಯಾನಗಳು, ಹ್ಯಾಶ್‌ಟ್ಯಾಗ್‌ಗಳ ಮೂಲಕ ಬ್ರ್ಯಾಂಡಿಂಗ್ ಬ್ಲಾಗ್‌ಗಳು, ಸಿಎಸ್‌ಆರ್ ಚಟುವಟಿಕೆಗಳ ವೀಡಿಯೊಗಳನ್ನು ಪ್ರಸ್ತುತಪಡಿಸುವುದು ಮತ್ತು ಗ್ರಾಹಕರ ಅನುಭವ/ಅಭಿಪ್ರಾಯಗಳ ಪ್ರಕಟಣೆ ಇತ್ಯಾದಿಗಳನ್ನ ನಡೆಸಲಾಗುತ್ತಿದೆ. ಗ್ರಾಹಕರ ಅಗತ್ಯಗಳು ಮತ್ತು ನಮ್ಮ ಉತ್ಪನ್ನಗಳ ಪರಿಣಾಮಕಾರಿತ್ವವನ್ನು ಅರ್ಥಮಾಡಿಕೊಳ್ಳಲು ಗ್ರಾಹಕ ಸಮೀಕ್ಷೆಗಳನ್ನೂ ಸಹ ಆಗಾಗ್ಗೆ ನಡೆಸಲಾಗುತ್ತಿದೆ.

KBL-VIKAAS 1.0 ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ, ಬ್ಯಾಂಕ್‌ನ ಪ್ರತಿಯೊಂದು ವಿಭಾಗಗಳೂ KBL-VIKAAS 2.0ರ ಅಡಿಯಲ್ಲಿ ತರಬೇಕಾದ ಬದಲಾವಣೆಯ ಉಪಕ್ರಮಗಳನ್ನು ಗುರುತಿಸಿ ನಿಮ್ಮ ಬ್ಯಾಂಕ್ 'ಡಿಜಿಟಲ್ ಬ್ಯಾಂಕ್' ಆಗಿ ಪರಿವರ್ತಿತವಾಗಲು KBL NxT ಪರಿಕಲ್ಪನೆಯಡಿ ದಾಪುಗಾಲಿನ ಹೆಜ್ಜೆಯನ್ನು ಹಾಕುತ್ತಿದೆ. ಬ್ಯಾಂಕ್‌ನ ಸಂಪೂರ್ಣ ಸ್ವಾಮ್ಯದ ಹಣಕಾಸೇತರ ಅಂಗಸಂಸ್ಥೆಯಾದ 'ಕೆಬಿಎಲ್ ಸರ್ವಿಸಸ್ ಲಿಮಿಟೆಡ್'ನ್ನು ನಿಮ್ಮ ಬ್ಯಾಂಕ್ ಪ್ರಾರಂಭಿಸಿದ್ದರ ಪರಿಣಾಮ ಮುಂಬರುವ ವರ್ಷಗಳಲ್ಲಿ ಬ್ಯಾಂಕ್‌ನ ಕಾರ್ಯಕ್ಷಮತೆ ವೃದ್ಧಿಸಲು ಇದು ಸಹಕಾರಿಯಾಗಲಿದೆ.

ಈ ಪರಿವರ್ತನೆಯು ಸರ್ವರನ್ನೊಳಗೊಂಡ ನಿರಂತರ ಪಯಣ ಎಂಬುದು ಸರ್ವವೇದ್ಯ. ಇದು ವಿಕಾಸಮುಖಿಯಾದ ಸೃಜನಶೀಲ ಪಯಣವೂ ಹೌದು. 'ಭವಿಷ್ಯದ ಡಿಜಿಟಲ್ ಬ್ಯಾಂಕ್' ಆಗಿ ನಿಮ್ಮ ಬ್ಯಾಂಕನ್ನು ತನ್ನ ಎರಡನೆಯ ಶತಮಾನದ ಪರಿಕ್ರಮಕ್ಕೆ ಸಜ್ಜುಗೊಳಿಸುತ್ತಿದ್ದೇವೆಂದು ನಿವೇದಿಸಲು ಹೆಮ್ಮೆಪಡುತ್ತೇನೆ ಹಾಗೂ ಈ ಹಿನ್ನೆಲೆಯಲ್ಲಿ KBL-VIKAAS ನಿಮ್ಮ ಬ್ಯಾಂಕಿನ ಪ್ರಮುಖ ಐತಿಹಾಸಿಕ ಘಟನೆಯಾಗಿ ಗುರುತಿಸಲ್ಪಟ್ಟಿದೆ ಎಂಬುದೂ ಸರ್ವವಿದಿತ.

12. ಮಾನವ ಸಂಪನ್ಮೂಲ ನಿರ್ವಹಣೆ:

ನಿಮ್ಮ ಬ್ಯಾಂಕ್ ತನ್ನ ಉದ್ಯೋಗಿಗಳ ಸಂತೃಪ್ತಿ, ಕೌಶಲ್ಯ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಚಟುವಟಿಕೆಗಳಿಗೆ ಗಣನೀಯ ಪ್ರಾಮುಖ್ಯತೆಯನ್ನು ನೀಡುತ್ತಿದೆ. ಪರ್ಫಾರ್ಮೆನ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (PMS) ಅನ್ನು ಕಾರ್ಯಗತಗೊಳಿಸುವ ಮೂಲಕ ಬ್ಯಾಂಕ್ ಉದ್ಯೋಗಿಗಳ ಕೆರಿಯರ್ ಅಂಡ್ ಡೆವಲಪ್‌ಮೆಂಟ್ ಸಿಸ್ಟಮ್ ಅನ್ನು (ECDS) ಪರಿಚಯಿಸಿದೆ. ಎಲ್ಲ ಹಂತಗಳಲ್ಲಿ ಭವಿಷ್ಯದ ನಾಯಕರುಗಳನ್ನು ಗುರುತಿಸಿ ಸಜ್ಜುಗೊಳಿಸಲು ಬ್ಯಾಂಕ್ ಟ್ಯಾಲೆಂಟ್ ಮ್ಯಾನೇಜ್‌ಮೆಂಟ್ ಕಮಿಟಿ (TMC) ಅನ್ನು ಸಹ ರಚಿಸಿದೆ.

13. ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (CSR):

CSR ಅಡಿಯಲ್ಲಿ ಬ್ಯಾಂಕಿನ ಸಾಮಾಜಿಕ ಚಟುವಟಿಕೆಗಳು- ಶಿಕ್ಷಣ, ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಯೋಜನೆಗಳು, ಪರಂಪರೆಯ ಸಂರಕ್ಷಣೆ, ಕೆರೆಗಳ ಪುನರುಜ್ಜೀವನ, ಹಸಿರು ಉಪಕ್ರಮಗಳು, ಶಾಲೆಗಳು, ಗ್ರಾಮೀಣ ಪ್ರದೇಶಗಳಿಗೆ ಮೂಲಸೌಕರ್ಯಗಳನ್ನು ಒದಗಿಸುವುದು ಮುಂತಾದ ರಾಷ್ಟ್ರೀಯ ಆದ್ಯತೆಗಳಿಗೆ ಅನುಗುಣವಾಗಿ ವಿವಿಧ ವಿಷಯಗಳ ಮೇಲೆ ಗಮನಹರಿಸಲಾಗಿದೆ. ಸದರಿ ವರ್ಷದಲ್ಲಿ, ನಿಮ್ಮ ಬ್ಯಾಂಕ್ ತನ್ನ CSR ಉಪಕ್ರಮಗಳ ಅಡಿಯಲ್ಲಿ 247 ಯೋಜನೆಗಳಿಗೆ ಸುಮಾರು ₹ 1167.27 ಲಕ್ಷ ಮಂಜೂರು ಮಾಡಿದೆ. ಬೋರ್ಡ್ ಮಟ್ಟದ 'ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಸಮಿತಿ'ಯು ನಿಮ್ಮ ಬ್ಯಾಂಕಿನ ಸಿಎಸ್‌ಆರ್ ಚಟುವಟಿಕೆಗಳನ್ನು 'ಸಿಎಸ್‌ಆರ್ ಸಪೋರ್ಟ್ ಗ್ರೂಪ್ ಆಫ್ ಎಕ್ಸಿಕ್ಯೂಟಿವ್'ಗಳ ಮೂಲಕ ಮೇಲ್ವಿಚಾರಣೆ ಮಾಡಿ ಅನುಷ್ಠಾನಗೊಳಿಸುತ್ತಿದೆ.

14. ಪರಿಸರ, ಸಾಮಾಜಿಕ ಮತ್ತು ಆಡಳಿತ (ESG):

ಪರಿಸರ, ಸಮಾಜ, ಗ್ರಾಹಕರು, ಉದ್ಯೋಗಿಗಳು ಮತ್ತು ಸಮುದಾಯದ ಮೇಲೆ ಸಕಾರಾತ್ಮಕ ಪರಿಣಾಮ ಬೀರುವ ತನ್ನ ಬದ್ಧತೆಯನ್ನು ನಿಮ್ಮ ಬ್ಯಾಂಕ್ ಯಾವಾಗಲೂ ಉಳಿಸಿಕೊಂಡಿದೆ. ESGಯು ನಮಗೆ ಸದಾ ಆದ್ಯತೆಯ ಕ್ಷೇತ್ರವಾಗಿದ್ದು ಇದು ನಮ್ಮ ಜವಾಬ್ದಾರಿಯುತ ವ್ಯವಹಾರದ ಸಂಕೇತವಾಗಿದೆ.

15. ಸಂಸ್ಥಾಪಕರಿಗೆ ಗೌರವ:

ಬ್ಯಾಂಕ್‌ನ ಸಂಸ್ಥಾಪಕರಿಗೆ ಗೌರವ ಸಲ್ಲಿಕೆಯ ಸಂಪ್ರದಾಯದ ಮುಂದುವರಿಕೆಯಾಗಿ, ಫೆಬ್ರವರಿ 18, 2022ರಂದು, ಬ್ಯಾಂಕ್ ತನ್ನ ಪ್ರಧಾನ ಕಛೇರಿಯಲ್ಲಿ ತನ್ನ ಸಂಸ್ಥಾಪಕರ ದಿನವನ್ನು ಆಚರಿಸಿತು. ಸಮಾರಂಭದ ಮುಖ್ಯ ಅತಿಥಿಯಾಗಿ ನವದೆಹಲಿಯ ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರಾದ ಗೌರವಾನ್ವಿತ ನ್ಯಾಯಮೂರ್ತಿ ಶ್ರೀ ಎಸ್ ಅಬ್ದುಲ್ ನಜೀರ್ ಅವರಿಂದ ಸಂಸ್ಥಾಪಕರ ದಿನದ ಉಪನ್ಯಾಸದ ನಂತರ ಕರ್ನಾಟಕ ಶಾಸ್ತ್ರೀಯ ಸಂಗೀತದ ಕೊಳಲುವಾದನ ಕಾರ್ಯಕ್ರಮ ಸಹ ಬ್ಯಾಂಕಿನ ಅಭಿಮಾನಿಗಳನ್ನು ರಂಜಿಸಿತು.

16. KBL@ 100: ಶತಮಾನೋತ್ಸವ ವರ್ಷ 2023-2024:

ಮುಂಬರುವ ವರ್ಷವು ಬ್ಯಾಂಕ್‌ನ ಶತಮಾನೋತ್ಸವ ಆಚರಣೆಗಳ ದೃಷ್ಟಿಯಿಂದ ಬ್ಯಾಂಕಿನ ಎಲ್ಲ ಪಾಲುದಾರರಿಗೆ ಹಾಗೂ ಹಿತೈಷಿಗಳಿಗೆ ಸಂತೋಷದಾಯಕ ವರ್ಷವಾಗಿರುತ್ತದೆ. ನಿಮ್ಮ ಬ್ಯಾಂಕ್ ಫೆಬ್ರವರಿ 18, 2023ರಂದು ತನ್ನ ಶತಮಾನೋತ್ಸವ ವರ್ಷಕ್ಕೆ ಕಾಲಿಡುತ್ತದೆ. ಬ್ಯಾಂಕ್‌ನ ಎರಡನೇ ಶತಮಾನದ ಪ್ರಯಾಣಕ್ಕೆ ಬಲವಾದ ಅಡಿಪಾಯವನ್ನು ಹಾಕುವ ಯೋಜನೆಯೊಂದಿಗೆ, KBL-VIKAAS 2.0 ಅಡಿಯಲ್ಲಿ KBL NxT ಉಪಕ್ರಮಗಳನ್ನು ಒಳಗೊಂಡಂತೆ ಪರಿವರ್ತನೆಯ ಚಟುವಟಿಕೆಗಳ ಸಹಾಯದಿಂದ ಸುದೃಢವಾದ ಡಿಜಿಟಲ್ ಬ್ಯಾಂಕ್ ಆಗಿ ಹೊರಹೊಮ್ಮುವುದು ನಮ್ಮ ಉದ್ದೇಶ. ಈ ಸಂಭ್ರಮವನ್ನು ಸ್ಮರಣೀಯ ಮತ್ತು ಸಾರ್ಥಕವಾಗಿಸಲು ವಿವಿಧ ಶತಮಾನೋತ್ಸವ ಕೇಂದ್ರಿತ ಸಿಎಸ್‌ಆರ್ ಉಪಕ್ರಮಗಳನ್ನು ಸಹ ಬ್ಯಾಂಕ್ ಗುರುತಿಸಿದೆ. ನಾವು ಸಂಪತ್ತು ನಿರ್ವಹಣಾ ಸೇವೆ (Wealth Management Services) ಹಾಗೂ ಸಾಗರೋತ್ತರ ಪ್ರತಿನಿಧಿ ಕಚೇರಿ ತೆರೆಯಲೂ ಯೋಜಿಸುತ್ತಿದ್ದೇವೆ. ನೂರು ವರ್ಷಗಳ ಸಾಧನಾಪಥವನ್ನು ಪ್ರಸ್ತುತಪಡಿಸುವ 'ಶತಮಾನೋತ್ಸವ ಸಂಚಿಕೆ'ಗೂ ಪ್ರಯತ್ನ ಸಾಗಿದೆ. ನಿಮ್ಮ ಬ್ಯಾಂಕ್ ತನ್ನ ಮಂಗಳೂರಿನ ಪ್ರಧಾನ ಕಚೇರಿ ಕಟ್ಟಡದ ಸಮೀಪದಲ್ಲಿ 'ಶತಮಾನೋತ್ಸವ ಭವನ' ನಿರ್ಮಾಣವನ್ನು ಪ್ರಾರಂಭಿಸಿದ್ದು, ಕೋಲ್ಕತ್ತಾ, ತುಮಕೂರು ಮತ್ತು ಉಡುಪಿಯಲ್ಲಿ ಸ್ವಂತ ಪ್ರಾದೇಶಿಕ ಕಚೇರಿಗಳ ಕಟ್ಟಡಗಳ ನಿರ್ಮಾಣ ಕೂಡ ಪ್ರಗತಿಯಲ್ಲಿದ್ದು ಶತಮಾನೋತ್ಸವ ವರ್ಷದಲ್ಲಿ ಉದ್ಘಾಟನೆಗೊಳ್ಳಲಿವೆ. ಇದರ ಜೊತೆ ಜೊತೆಗೆ ಕೆಲವು 'ಹಸಿರು ಉಪಕ್ರಮ'ಗಳೊಂದಿಗೆ ಬ್ಯಾಂಕ್ ಇನ್ನೂ ಹಲವಾರು ಯೋಜನೆಗಳನ್ನು ರೂಪಿಸಲಿದೆ.

17. ಮುನ್ನೋಟ - ಸವಾಲುಗಳು ಮತ್ತು ಮುಂದಿನ ದಾರಿ:

ಮುಂಬರುವ ವರ್ಷಗಳಲ್ಲಿ ಬೆಳವಣಿಗೆಯ ಪಥವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯಲು ಮುಖ್ಯವಾಗಿ ಈ ಕೆಳಗಿನ ಕ್ಷೇತ್ರಗಳ ಮೇಲೆ ಗಮನಹರಿಸಲಾಗಿದೆ:
(i) ಎಲ್ಲ ಬ್ಯಾಂಕಿಂಗ್ ಕ್ಷೇತ್ರಗಳಲ್ಲಿ ಡಿಜಿಟಲ್ ಸಾಮರ್ಥ್ಯಗಳನ್ನು ಮತ್ತಷ್ಟು ಬಲಪಡಿಸಿ ಗ್ರಾಹಕರ ಡಿಜಿಟಲ್ ಬ್ಯಾಂಕಿಂಗ್ ಅನುಭವವನ್ನು ಹೆಚ್ಚಿಸಲು 'KBL NxT' ಪರಿಕಲ್ಪನೆಯ ಅಡಿಯಲ್ಲಿ ನಮ್ಮ ಪರಿವರ್ತನಾ ಪ್ರಯಾಣ KBL-VIKAAS 2.0 ಅನ್ನು ಆದ್ಯತೆಯ ಮೇರೆಗೆ ಕಾರ್ಯಗತಗೊಳಿಸುವುದು. (ii) ರಾಜ್ಯಗಳು ಮತ್ತು ಕೇಂದ್ರ ಸರಕಾರದ ಏಜೆನ್ಸಿಗಳು, ಸಂಸ್ಥಾಪನೆಗಳು, ಸರ್ಕಾರಿ ಉದ್ಯಮಗಳ ಜತೆಗೆ ವ್ಯವಹಾರವನ್ನು ಕುದುರಿಸಲು ಆದ್ಯತೆ. (iii) ಆಸ್ತಿ ಗುಣಮಟ್ಟ ಮತ್ತು ಬಂಡವಾಳ ವೃದ್ಧಿಗೆ ಆದ್ಯತೆ. (iv) ಎನ್‌ಪಿಎ ಪ್ರಮಾಣವನ್ನು ಇನ್ನಷ್ಟು ತಗ್ಗಿಸಲು ಸರ್ವಪ್ರಯತ್ನ. (v) ಕಾಸಾ (CASA) ಮತ್ತು ಇತರ ಠೇವಣಿ (RTD) ಮೇಲೆ ಗಮನ ಕೇಂದ್ರೀಕರಿಸುವ ಮೂಲಕ 'ಕಾಸ್ಟ್-ಲೈಟ್' ಪೋರ್ಟ್‌ಫೋಲಿಯೊವನ್ನು ಬೆಳೆಸುವುದು. (vi) ಅಂಗಸಂಸ್ಥೆ 'ಕೆಬಿಎಲ್ ಸರ್ವಿಸಸ್ ಲಿಮಿಟೆಡ್'ನಿಂದ ಸೇವೆಗಳ ಪರಿಣಾಮಕಾರಿ ನಿಯೋಜನೆಯ ಮೂಲಕ ಆಡಳಿತಾತ್ಮಕ ವೆಚ್ಚವನ್ನು ನಿಯಂತ್ರಿಸುವುದು. (vii) ಫಿನ್‌ಟೆಕ್‌ಗಳು ಮತ್ತು ಸ್ಟಾರ್ಟ್‌ಅಪ್‌ಗಳೊಂದಿಗೆ ಪರಿಣಾಮಕಾರಿ ಸಹಭಾಗಿತ್ವಗಳನ್ನು ಹೊಂದುವುದು ಮತ್ತು ಡಿಜಿಟಲ್ ವಿಧಾನಗಳ ಮೂಲಕ ವ್ಯಾಪಾರವನ್ನು ಹೆಚ್ಚಿಸುವುದು. (viii) ನಿಮ್ಮ ಬ್ಯಾಂಕನ್ನು ಭಾರತದಲ್ಲಿ ಅತ್ಯಂತ ಮೆಚ್ಚುಗೆ ಪಡೆದ ಬ್ಯಾಂಕಿಂಗ್ ಸಂಸ್ಥೆಗಳಲ್ಲಿ ಒಂದನ್ನಾಗಿ ಮಾಡುವುದು.

ಹೀಗೆ ಸರ್ವಾಂಗೀಣ ಅಭಿವೃದ್ಧಿಯ ನಿಟ್ಟಿನಲ್ಲಿ ನಿಮ್ಮ ಬ್ಯಾಂಕ್ ತನ್ನ ಸಾಂಸ್ಥಿಕ ಮೌಲ್ಯಗಳಿಗೆ ಮತ್ತು ಸಂಸ್ಥಾಪಕರ ಆಶಯಕ್ಕೆ ಬದ್ಧವಾಗಿ ಮುನ್ನಡೆಯುತ್ತಿದೆ ಎಂದು ತಿಳಿಸಲು ಹರ್ಷಿಸುತ್ತೇನೆ.

18. ಕೃತಜ್ಞತಾಪೂರ್ವಕ ಸ್ಮರಣೆಗಳು:

ಪ್ರಬುದ್ಧ ಸಲಹೆ, ಮಾರ್ಗದರ್ಶನ ಮತ್ತು ನಿರಂತರ ಬೆಂಬಲಕ್ಕಾಗಿ ನಮ್ಮ ಸನ್ಮಾನ್ಯ ಅಧ್ಯಕ್ಷರಾದ ಶ್ರೀ ಪಿ. ಪ್ರದೀಪ್ ಕುಮಾರ್ ಮತ್ತು ಗೌರವಾನ್ವಿತ ನಿರ್ದೇಶಕರ ಮಂಡಳಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು. ಭಾರತೀಯ ರಿಸರ್ವ್ ಬ್ಯಾಂಕ್, ಭಾರತೀಯ ಬ್ಯಾಂಕ್‌ಗಳ ಸಂಘ, ಸೆಬಿ, ಸ್ಟಾಕ್ ಎಕ್ಸ್‌ಚೇಂಜ್‌ಗಳು ಮತ್ತು ಇತರ ನಿಯಂತ್ರಕ/ಶಾಸನಬದ್ಧ ಸಂಸ್ಥೆಗಳು/ಕೇಂದ್ರ ಮತ್ತು ರಾಜ್ಯ ಸರಕಾರಗಳ ನಿರಂತರ ಮಾರ್ಗದರ್ಶನ ಮತ್ತು ಬೆಂಬಲಕ್ಕೆ ನಾನು ಆಭಾರಿಯಾಗಿದ್ದೇನೆ. ದಣಿವರಿಯದ ಪ್ರಯತ್ನಗಳಿಂದ ಒಂದು ಉತ್ತಮ ತಂಡವಾಗಿ ಕಾರ್ಯನಿರ್ವಹಿಸುತ್ತಿರುವ ಬ್ಯಾಂಕಿನ ಹಿರಿಯ ಅಧಿಕಾರಿಗಳು, ಎಲ್ಲ ಸಿಬ್ಬಂದಿಗಳು, AIKBEA ಮತ್ತು KBOO ಸಂಘಟನೆಗಳ ಮುಖಂಡರು, ಎಲ್ಲ ಗ್ರಾಹಕರು, ಹಿತೈಷಿಗಳು ಮತ್ತು ಎಲ್ಲ ಪಾಲುದಾರರಿಗೆ ನನ್ನ ಧನ್ಯವಾದಗಳು. ಬ್ಯಾಂಕಿನ ಬೆಳವಣಿಗೆಯಲ್ಲಿ ವಿಶೇಷ ಕೊಡುಗೆ ನೀಡಿದ ಶೇರುದಾರರಿಗೆ, ನಿಮ್ಮ ನಿರಂತರ ಬೆಂಬಲಕ್ಕಾಗಿ ಮತ್ತೊಮ್ಮೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಮತ್ತು ಮುಂಬರುವ ವರ್ಷಗಳಲ್ಲೂ ನಿಮ್ಮ ಸಂಪೂರ್ಣ ಸಹಕಾರವನ್ನು ನಿರೀಕ್ಷಿಸುತ್ತೇನೆ.

ಎಲ್ಲರಿಗೂ ಧನ್ಯವಾದಗಳು.

(ಟಿಪ್ಪಣಿ : ಇದು ವಾರ್ಷಿಕ ಮಹಾಸಭೆಯ ನಡಾವಳಿಯ ಅಧಿಕೃತ ದಾಖಲೆ ಅಲ್ಲ)

Follow us on : / KarnatakaBank

ಕರ್ಣಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 CIN: L85110KA1924PLC001128 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com

ಪರಿಸರ ಸ್ನೇಹಿ ಗಣೇಶ ಸಂಭ್ರಮ

10 ಸಾವಿರ ಮೂರ್ತಿಗಳ ತಯಾರಿಕೆಗೆ ಸಿದ್ಧತೆ ● ಮಂಡಳಿಯಿಂದ ಗಿನ್ನಿಸ್ ದಾಖಲೆ ಗುರಿ

ಪರಿಸರ ಸ್ನೇಹಿ ಗಣೇಶ ಮೂರ್ತಿ ಅಭಿಯಾನ

ಪ್ರಸಕ್ತ ವರ್ಷ ರಾಜ್ಯದಲ್ಲಿ 'ಪರಿಸರ ಸ್ನೇಹಿ ಗಣೇಶ ಹಬ್ಬ-2022' ಆಚರಿಸಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸಚಿವ ಆನಂದ್ ಸಿಂಗ್ ಅವರ ನೇತೃತ್ವದಲ್ಲಿ ವಿಶೇಷ ಅಭಿಯಾನವನ್ನು ಹಮ್ಮಿಕೊಂಡಿದೆ.

ಮಂಡಳಿಯು ಪ್ರತಿ ವರ್ಷವೂ ಪರಿಸರ ಸ್ನೇಹಿ ಗಣೇಶ ಹಬ್ಬ ಆಚರಣೆಯನ್ನು ಮಾಡುವ ಕುರಿತಂತೆ ಸಾರ್ವಜನಿಕರು, ಶಾಲಾ ಕಾಲೇಜು ವಿದ್ಯಾರ್ಥಿಗಳಲ್ಲಿ ನಿರಂತರವಾಗಿ ಜಾಗೃತಿ ಮೂಡಿಸುತ್ತಿದೆ. ಈ ವರ್ಷವೂ ಜೇಡಿಮಣ್ಣಿನೊಂದಿಗೆ ವಿವಿಧ ಹೂವು ಹಾಗೂ ಔಷಧಿ ಗಿಡಗಳ ಬೀಜಗಳನ್ನು ಮಿಶ್ರಣ ಮಾಡಿ ಮೂರ್ತಿಗಳನ್ನು ತಯಾರಿಸಲಿದೆ. ಈ ಮೂಲಕ ವಿಶಿಷ್ಟ ಹಾಗೂ ವಿಭಿನ್ನವಾಗಿ ಗಣೇಶ ಹಬ್ಬವನ್ನು ಆಚರಿಸುವ ಮೂಲಕ 'ಗಿನ್ನಿಸ್' ದಾಖಲೆಯನ್ನು ಸ್ಥಾಪಿಸಲು ಮಂಡಳಿಯು ಪಣ ತೊಟ್ಟಿದೆ. ಶ್ರೀ ವಿದ್ಯಾರಣ್ಯ ಯುವಕರ ಸಂಘದ (ರಿ) ಸಹಯೋಗದೊಂದಿಗೆ ರಾಜ್ಯವ್ಯಾಪಿ ಈ ಅಭಿಯಾನವನ್ನು ನಡೆಸಲಾಗುತ್ತಿದೆ.

ಸಾರ್ವಜನಿಕರು, ಶಾಲಾ –ಕಾಲೇಜು ವಿದ್ಯಾರ್ಥಿಗಳು, ಸರ್ಕಾರೇತರ ಸಂಘ ಸಂಸ್ಥೆಗಳು, ಆಸಕ್ತ ಸಾರ್ವಜನಿಕರನ್ನು ಒಳಗೊಂಡಂತೆ ವಿವಿಧ ಹೂವು ಹಾಗೂ ಔಷಧಿ ಗಿಡಗಳ ಬೀಜಗಳನ್ನು ಮಿಶ್ರ ಮಾಡಿದ ಜೇಡಿಮಣ್ಣಿನಿಂದ ಹತ್ತು ಸಾವಿರ ಗಣೇಶ ಮೂರ್ತಿಗಳನ್ನು ತಯಾರಿಸುವ ಮೂಲಕ ಸಾರ್ವಜನಿಕರಲ್ಲಿ ರಾಸಾಯನಿಕ ಬಣ್ಣಲೇಪಿತ ಮೂರ್ತಿಗಳನ್ನು ಬಳಸದೆ ನೈಸರ್ಗಿಕವಾದ ಜೇಡಿಮಣ್ಣಿನ ಮೂರ್ತಿಗಳನ್ನು ಬಳಸಿ ಪರಿಸರ ರಕ್ಷಣೆ ಹಾಗೂ ಜಲಮಾಲಿನ್ಯ ತಡೆಗೆ ಮುಂದಾಗುವಂತೆ ಜಾಗೃತಿ ಮೂಡಿಸಲಾಗುತ್ತದೆ.

ಇದೇ ಆಗಸ್ಟ್ 28ರಂದು ಮಧ್ಯಾಹ್ನ ಮೂರು ಗಂಟೆಗೆ ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ನಡೆಯಲಿರುವ ಅಭಿಯಾನದಲ್ಲಿ ಪರಿಸರ ರಾಯಭಾರಿಯಾಗಿರುವ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಪಾಲ್ಗೊಳ್ಳಲಿದ್ದಾರೆ. ಈ ಅಭಿಯಾನದಲ್ಲಿ ತಯಾರಿಸಲಾಗುವ ಮೂರ್ತಿಗಳನ್ನು ಸಾರ್ವಜನಿಕರು ತಮ್ಮ ಮನೆಗಳಲ್ಲಿ 'ಗಣೇಶ ಚತುರ್ಥಿ' ಯಂದು ಪ್ರತಿಷ್ಠಾಪಿಸಿ, ಬಳಿಕ ಪರಿಸರಸ್ನೇಹಿಯಾದ ಕ್ರಮದ ಲ್ಲಿಯೇ ಮಣ್ಣಿನ ಕುಂಡಗಳಲ್ಲಿ ಮೂರ್ತಿಯನ್ನು ವಿಸರ್ಜಿಸಬೇಕು ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸಾರ್ವಜನಿಕರಲ್ಲಿ ಮನವಿ ಮಾಡಿದೆ.

10 ಲಕ್ಷ ಅರಿಶಿಣ ಗಣೇಶ ಅಭಿಯಾನ: ಕಳೆದ ವರ್ಷ 10 ಲಕ್ಷ ಅರಿಶಿಣ ಗಣೇಶ ನಿರ್ಮಿಸಿ ವಿಶ್ವ ದಾಖಲೆಯನ್ನು ನಿರ್ಮಿಸಲಾಗಿತ್ತು. ಅಲ್ಲದೆ, ಅರಿಶಿಣ ಗಣಪತಿ ತಯಾರಿಕೆ ಮತ್ತು ಅದರ ಮಹತ್ವವನ್ನು ಕುರಿತು ಅರಿವು ಮೂಡಿಸಲು ಮಂಡಳಿ ತನ್ನ ವೆಬ್‌ಸೈಟ್‌ನಲ್ಲಿ ಅಪ್ಲೋಡ್ ಮಾಡಿದ್ದ ವಿಡಿಯೋವನ್ನು ಕಳೆದ ವರ್ಷ ಒಂದು ಕೋಟಿ ಜನರು ವೀಕ್ಷಣೆ ಮಾಡಿದ್ದು ವಿಶೇಷವಾಗಿತ್ತು.

ಗಣಪನನ್ನು ಪೂಜಿಸಿ ವೃಕ್ಷವನ್ನು ವೃದ್ಧಿಸಿ ಭೂತಾಯಿಯ ಬೆಳಗಿಸಿ

ಬೆಂಗಳೂರಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಪರಿಸರ, ಪ್ರವಾಸೋದ್ಯಮ ಮತ್ತು ಜೀವಿಶಾಸ್ತ್ರ ಸಚಿವರಾದ ಆನಂದ್ ಸಿಂಗ್ ಅವರು ಉದ್ಘಾಟಿಸಿದರು. ಈ ವೇಳೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

ಮೂರ್ತಿ ವಿಸರ್ಜನೆ ವೇಳೆ ಮುಂಜಾಗ್ರತೆ

- ಪಿಒಪಿ ಬದಲಾಗಿ ಜೇಡಿ ಮಣ್ಣಿನಿಂದ ತಯಾರಿಸಲಾಗಿರುವ ಗಣೇಶನನ್ನು ಮಾತ್ರ ಕೂರಿಸಿ
- ಪ್ರಸಾದವನ್ನು ನೀಡಲು ಪ್ಲಾಸ್ಟಿಕ್ ತಟ್ಟೆ, ಪ್ಲೇಟ್, ಬಳಸಬೇಡಿ. ಪ್ಲಾಸ್ಟಿಕ್ ಅನ್ನು ಎಲ್ಲೆಂದರಲ್ಲಿ ಎಸೆಯುವುದರಿಂದ ಪರಿಸರ ಮಾಲಿನ್ಯವಾಗಲಿದೆ.
- ಶಬ್ಧ ಮಾಲಿನ್ಯವನ್ನು ನಿಯಂತ್ರಿಸಿ
- ವಿಗ್ರಹವನ್ನು ವಿಸರ್ಜಿಸುವಾಗ ಜೊತೆಯಲ್ಲಿ ಹೂವು, ಆಹಾರ ಪದಾರ್ಥಗಳು ಹಾಗೂ ಇನ್ನಿತರ ವಸ್ತುಗಳನ್ನು ವಿಸರ್ಜಿಸಬೇಡಿ. ಇದರಿಂದ ಜಲಮಾಲಿನ್ಯ ಉಂಟಾಗಲಿದೆ.
- ರಾಸಾಯನಿಕ ಬಣ್ಣ ಲೇಪಿತ ಗಣೇಶನನ್ನು ಕೂರಿಸಬೇಡಿ.
- ಗಣೇಶನ ಅಲಂಕಾರಕ್ಕೆ ನೈಸರ್ಗೀಕವಾದ ಹೂವುಗಳನ್ನೇ ಬಳಸಿ. ಪ್ಲಾಸ್ಟಿಕ್ ಹೂವುಗಳು, ನೀರಿನಲ್ಲಿ ಕರಗದ, ಮಣ್ಣಿನೊಂದಿಗೆ ಬೆರೆಯದ ವಸ್ತುಗಳಿಂದ ತಯಾರಿಸಲಾದ ಅಲಂಕಾರಿ ವಸ್ತುಗಳನ್ನು ಬಳಸಬೇಡಿ.
- ಏಕಬಳಕೆ ಪ್ಲಾಸ್ಟಿಕ್ ಉತ್ಪನ್ನಗಳನ್ನು ತ್ಯಜಿಸಿ, ಪರಿಸರ ಹಾನಿ ತಪ್ಪಿಸಿ
- ಸರ್ಕಾರ ಹಾಗೂ ಸ್ಥಳೀಯ ಆಡಳಿತಗಳು ನಿಗದಿಪಡಿಸಿರುವ ಕಲ್ಯಾಣಿಗಳು /ನೀರಿನ ಟ್ಯಾಂಕ್‌ಗಳಲ್ಲಿ ಮಾತ್ರವೇ ಗಣೇಶನ ವಿಗ್ರಹವನ್ನು ವಿಸರ್ಜಿಸಿ.

ಗಣೇಶ ಮೂರ್ತಿಗಳನ್ನು ವಿಸರ್ಜಿಸುವ ಕ್ರಮವು ಪರಿಸರ ಸ್ನೇಹಿಯಾಗಿರಲಿ. ಗಣೇಶ ಮೂರ್ತಿಗಳ ವಿಸರ್ಜನೆಗೆ ಸಾರ್ವಜನಿಕವಾಗಿ ಒಂದೇ ವಿಸರ್ಜನಾ ಟ್ಯಾಂಕ್ ಅಥವಾ ಕುಂಡವನ್ನು ಬಳಸಿ. ಈ ಮೂಲಕ ಜಲಮಾಲಿನ್ಯವಾಗದಂತೆ ಜಾಗ್ರತೆ ವಹಿಸಬಹುದು. ಮನೆಯಲ್ಲಿಯೇ ಒಂದು ಬಕೆಟ್ ನೀರಿನಲ್ಲಿ ಗಣೇಶ ಮೂರ್ತಿಯನ್ನು ವಿಸರ್ಜನೆ ಮಾಡುವ ಮೂಲಕ ಸಾರ್ವಜನಿಕವಾಗಿ ನೂಕು ನುಗ್ಗಲು ಉಂಟಾಗುವುದನ್ನು ತಪ್ಪಿಸಬಹುದು.

ಆನಂದ್ ಸಿಂಗ್, ಪರಿಸರ ಮತ್ತು ಜೀವಿಶಾಸ್ತ್ರ, ಪ್ರವಾಸೋದ್ಯಮ ಸಚಿವ

ಪರಿಸರ ಮಾಲಿನ್ಯ ತಡೆ: ಗುರಿ ಒಂದು, ಕ್ರಮ ಹಲವು

ಪರಿಸರ ಮಾಲಿನ್ಯ ನಿಯಂತ್ರಣ ಕುರಿತ ಜಾಗೃತಿ ಈ ಹೊತ್ತಿನ ಆದ್ಯತೆಯಾಗಬೇಕು. ವಿವಿಧ ರೀತಿಯಲ್ಲಿ ಆಗುತ್ತಿರುವ ಪರಿಸರ ಮಾಲಿನ್ಯಗಳಿಂದ ಜಗತ್ತು ತಲ್ಲಣಗೊಳ್ಳುತ್ತಿದೆ. ಮಾಲಿನ್ಯ ಹೀಗೇ ಮುಂದುವರಿದರೆ ಮುಂದಿನ ಕೆಲವೇ ವರ್ಷಗಳಲ್ಲಿ ಜಗತಿನ ಅಶುದ್ಧ ಗಾಳಿ, ನೀರಿನಿಂದಲೇ ಆವೃತವಾಗಲಿದೆ. ಪರಿಸರವನ್ನು ರಕ್ಷಿಸಲು ಮಾಲಿನ್ಯಕ್ಕೆ ಕಡಿವಾಣ ಹಾಕಬೇಕಾದದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆ. ವಾಯು, ಜಲ, ಮತ್ತು ಶಬ್ಧ ಮಾಲಿನ್ಯವನ್ನು ನಿಯಂತ್ರಿಸಲು ಮಂಡಳಿ ಕೈಗೊಂಡಿರುವ ಕ್ರಮಗಳು ಇಲ್ಲಿವೆ.

ರಾಜ್ಯ ಸರ್ಕಾರದ ಅಧೀನದಲ್ಲಿರುವ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಈ ಕಾರ್ಯಕ್ಕೆ ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ ಖಾತೆ ಸಚಿವರಾದ ಆನಂದ್ ಸಿಂಗ್ ಅವರು ಇನ್ನಷ್ಟು ವೇಗ ನೀಡಿದ್ದಾರೆ.

ಪರಿಸರ ಹಾಗೂ ಜೀವಿಗಳ ಆರೋಗ್ಯಕ್ಕೆ ಮಾರಕವಾಗಿರುವ ಇ-ತ್ಯಾಜ್ಯಗಳ ವೈಜ್ಞಾನಿಕ ವಿಂಗಡಣೆ ಹಾಗೂ ಸಂಸ್ಕರಣೆ, ವಿಲೇವಾರಿಗೆ ವಿನೂತನ ತಂತ್ರಜ್ಞಾನಗಳ ಅಳವಡಿಕೆ ಹಾಗೂ ಏಕ ಬಳಕೆ ಪ್ಲಾಸ್ಟಿಕ್ ಸೇರಿದಂತೆ ಹಲವು ದಿಟ್ಟ ಕ್ರಮಗಳನ್ನು ಕೈಗೊಳ್ಳುವ ಮೂಲಕ ಆನಂದ್ ಸಿಂಗ್ ಅವರು ಮಂಡಳಿಯಲ್ಲಿ ಅಭಿವೃದ್ಧಿ ಮತ್ತು ಬದಲಾವಣೆಯ ಹೊಸ ಶಕೆಯನ್ನೇ ಆರಂಭಿಸಿದ್ದಾರೆ.

ಗಣೇಶ ಹಬ್ಬದ ಸಂದರ್ಭದಲ್ಲಿ ರಾಸಾಯನಿಕ ಬಣ್ಣಗಳನ್ನು ಬಳಸಿ ರೂಪಿಸಲಾಗುವ ಮೂರ್ತಿಗಳಿಂದ ಉಂಟಾಗುವ ಜಲಮಾಲಿನ್ಯವನ್ನು ತಡೆಯಲು ಪರಿಸರಸ್ನೇಹಿ ಗಣೇಶ ಮೂರ್ತಿಗಳ ಬಳಕೆ ಹಾಗೂ ಮಾಲಿನ್ಯದ ಪರಿಣಾಮಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಹಾಗೂ ರಾಜ್ಯದಲ್ಲಿ ಕಲುಷಿತಗೊಂಡಿರುವ 17 ನದಿಗಳ ಪುನಶ್ಚೇತನಕ್ಕೆ ವಿಶೇಷ ಕಾರ್ಯಕ್ರಮವು ಒಳಗೊಂಡಂತೆ ಮಾಲಿನ್ಯ ನಿಯಂತ್ರಣ ಮಂಡಳಿ ಸಚಿವರ ನೇತೃತ್ವದಲ್ಲಿ ಹಲವು ಕಾರ್ಯಕ್ರಮಗಳನ್ನು ಕೈಗೊಂಡಿದೆ.

ಈ ಪೈಕಿ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪರಿಸರ ಸ್ನೇಹಿಯಾಗಿ ದೀಪಾವಳಿ ಹಬ್ಬವನ್ನು ಆಚರಿಸುವ ಜಾಗೃತಿ ಮೂಡಿಸುವುದು ಮತ್ತು ಪರಿಸರಕ್ಕೆ ಹಾನಿಯುಂಟು ಮಾಡುವ ಕೈಗಾರಿಕೆಗಳಿಗೆ ನೋಟಿಸ್ ನೀಡಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಮಾಡುವ ನಿಟ್ಟಿನಲ್ಲಿಯೂ ಸಚಿವರು ಕೈಗೊಂಡಿರುವ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿದ್ದು, ಶ್ಲಾಘನೀಯವೂ ಆಗಿದೆ.

ರಾಜ್ಯದ 17 ನದಿ ಪುನರುಜ್ಜೀವನ

ರಾಜ್ಯದಲ್ಲಿ ಮಾಲಿನ್ಯಗೊಂಡಿರುವ 17 ನದಿ ಮೂಲಗಳ ಪುನರುಜ್ಜೀವನಕ್ಕಾಗಿ ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯು ಪಣ ತೊಟ್ಟಿದೆ. ಈ ನಿಟ್ಟಿನಲ್ಲಿ 2021-22ನೇ ಸಾಲಿನಲ್ಲಿ ರಾಜ್ಯದ 17 ನದಿಗಳ ಪಾತ್ರದಲ್ಲಿ ತಪಾಸಣೆ ನಡೆಸಲಾಗಿದೆ. ಪ್ರತಿಯೊಂದು ಕಲುಷಿತಗೊಂಡ ನದಿಗೂ ಒಂದು ಪ್ರತ್ಯೇಕ ಕಾರ್ಯಕ್ರಮ ರೂಪಿಸಿದೆ.

ಪ್ರತಿ ನದಿಯಲ್ಲಿನ ನೀರಿನ ಗುಣಮಟ್ಟವನ್ನು ಸತತವಾಗಿ ಪರೀಕ್ಷಿಸಲಾಗುತ್ತಿದೆ. ಪುನಶ್ಚೇತನ ಕಾರ್ಯಕ್ರಮವನ್ನು ಪ್ರಾರಂಭಿಸಲು ಸೂಕ್ತವೆಂದು ತುಂಗಭದ್ರಾ ನದಿಯನ್ನು ಗುರುತಿಸಲಾಗಿದೆ. ಈ ಕಾರ್ಯಕ್ಕೆ ಪ್ರಾಶಸ್ತ್ಯ ನೀಡಲಾಗಿದೆ. ಇಲ್ಲಿ ನಾಲ್ಕು ರಿಯಲ್ ಟೈಮ್ ವಾಟರ್ ಕ್ವಾಲಿಟಿ ಮಾನಿಟರಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲಾಗಿದೆ. ಅವುಗಳ ಕಾರ್ಯದ ಬಗ್ಗೆ ಮೇಲ್ವಿಚಾರಣೆಯನ್ನು ಮಾಡಲಾಗುತ್ತದೆ. ಅಲ್ಲದೆ, ಈ ಕಾರ್ಯದ ಮೇಲ್ವಿಚಾರಣೆಗಾಗಿ ರಾಜ್ಯಮಟ್ಟದ ನದಿ ಪುನಶ್ಚೇತನ ಸಮಿತಿಯನ್ನು ರಚಿಸಲಾಗಿದೆ.

ನದಿಗಳಿಗೆ ಅಪಾಯಕಾರಿ ತ್ಯಾಜ್ಯವನ್ನು ಹರಿಸುವ ಕಾರ್ಖಾನೆಗಳನ್ನು ಗುರುತಿಸಿ ಅವುಗಳಿಗೆ ನೋಟಿಸ್ ಅನ್ನು ನೀಡಲಾಗಿದೆ. ತ್ಯಾಜ್ಯ ಸುರಿಯುವ ಸ್ಥಳಗಳನ್ನು ಗುರುತಿಸಿ, ಅಲ್ಲಿ ಕಟ್ಟೆಚ್ಚರವನ್ನು ವಹಿಸುವ ಸಂಬಂಧ ಸ್ಥಳೀಯ ಆಡಳಿತಗಳ ಜತೆಗೆ ಸಂಪರ್ಕದಲ್ಲಿದ್ದು, ತ್ಯಾಜ್ಯ ಸುರಿಯುವುದು ಮತ್ತು ಕಲುಷಿತವನ್ನು ನದಿಗೆ ಸೇರಿಸುವುದನ್ನು ಗುರುತಿಸಿ ಅವರ ಕ್ರಮಕ್ಕೆ ಶಿಫಾರಸು ಮಾಡಲಾಗುತ್ತಿದೆ.

ಹಸಿರು ದೀಪಾವಳಿ ಆಚರಣೆ: ಹಸಿರು ದೀಪಾವಳಿ ಅಭಿಯಾನದಿಂದಾಗಿ ವಾಯುಮಾಲಿನ್ಯ ನಿಯಂತ್ರಿಸುವ ಕಾರ್ಯದಲ್ಲಿ ಮಂಡಳಿಯ ಪ್ರಯತ್ನವು ಯಶಸ್ವಿಯಾಗಿದೆ. ಪ್ರಮುಖವಾಗಿ ಆಕಾಶವಾಣಿ/ಎಫ್.ಎಂ ರೇಡಿಯೋ ಸೇರಿದಂತೆ ಸಾಮಾಜಿಕ ಜಾಲತಾಣವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಮಂಡಳಿಯು ಹಸಿರು ದೀಪಾವಳಿ ಆಚರಿಸುವಂತೆ ಸಾರ್ವಜನಿಕರಿಗೆ ಉತ್ತೇಜನ ನೀಡಲಿದ್ದು, ಇದಕ್ಕಾಗಿ ಸಂವೇದನೆ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು.

ಹಸುವಿನ ಸಗಣಿ ಮತ್ತು ಜೇಡಿಮಣ್ಣು ಬಳಸಿ ತಯಾರಿಸಲಾದ ಲಕ್ಷಾಂತರ ದೀಪಗಳನ್ನು ಸಾರ್ವಜನಿಕರಿಗೆ ವಿತರಿಸಲಾಯಿತು. ಪರಿಣಾಮ ದೀಪಾವಳಿ ವೇಳೆ ರಾಜ್ಯದಲ್ಲಿ ಶೇಕಡ 30ರಷ್ಟು ಶಬ್ಧ, ವಾಯುಮಾಲಿನ್ಯವನ್ನು ಕಡಿಮೆಗೊಳಿಸಲು ಸಹಕಾರಿಯಾಯಿತು.

ಏಕ ಬಳಕೆ ಪ್ಲಾಸ್ಟಿಕ್‌ಗೆ ಕಡಿವಾಣ, ನಿಷೇಧ ದೇಶದಲ್ಲಿ ಕರ್ನಾಟಕವೇ ಮೊದಲು.

ಕೇಂದ್ರ ಸರ್ಕಾರವು ಇತ್ತೀಚೆಗಷ್ಟೇ ಏಕ ಬಳಕೆಯ ಪ್ಲಾಸ್ಟಿಕ್ ನಿಷೇಧ ಆದೇಶ ಹೊರಡಿಸಿದೆ. ಪ್ಲಾಸ್ಟಿಕ್ ನಿಷೇಧ ಮಾಡಿದ ರಾಜ್ಯಗಳಲ್ಲಿ ಕರ್ನಾಟಕವೇ ಮೊದಲು ಎಂಬುದು ಹೆಗ್ಗಳಿಕೆಯಾಗಿದೆ. ಪ್ಲಾಸ್ಟಿಕ್ ನಿಯಂತ್ರಣಕ್ಕೆ ಮೊದಲಿನಿಂದಲೂ ಹಲವು ಕ್ರಮ ಕೈಗೊಳ್ಳುತ್ತಿದೆ.

ಕೆಎಸ್‌ಪಿಸಿಬಿ ನೇತೃತ್ವದಲ್ಲಿ 1999ರಲ್ಲಿ ಮೊದಲ ಬಾರಿಗೆ 20 ಮೆಕ್ರಾನ್‌ಗಿಂತ ತೆಳ್ಳಗಿರುವ ಪ್ಲಾಸ್ಟಿಕ್ ಬ್ಯಾಗ್ ಹಾಗೂ ಪುನರ್ ಬಳಕೆ ಪ್ಲಾಸ್ಟಿಕ್ ಕವರ್‌ಗಳಲ್ಲಿ ಆಹಾರ ಪದಾರ್ಥ ಶೇಖರಿಸುವುದನ್ನು ನಿಷೇಧಿಸಲಾಯಿತು. 2011ರಲ್ಲಿ 40 ಮೆಕ್ರಾನ್‌ಗಿಂತ ತೆಳ್ಳಗಿರುವ ಪ್ಲಾಸ್ಟಿಕ್ ಬ್ಯಾಗ್ ಹಾಗೂ ಕ್ಯಾರಿ ಬ್ಯಾಗ್‌ಗಳ ಮೇಲೆ ತಯಾರಿಸುವ ಕಂಪನಿ ವಿವರಗಳನ್ನು ಕಡ್ಡಾಯವಾಗಿ ನಮೂದಿಸುವಂತೆ ಆದೇಶಿಸಲಾಗಿತ್ತು. 2016ರಲ್ಲಿ ಪ್ಲಾಸ್ಟಿಕ್ ಬ್ಯಾಗ್‌ಗಳ ಗಾತ್ರವನ್ನು 50 ಮೆಕ್ರಾನ್‌ಗೆ ಹೆಚ್ಚಿಸಲಾಗಿತ್ತು. ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಯಲ್ಲಿ ಸ್ಥಳೀಯ ಸಂಸ್ಥೆಗಳು, ಗ್ರಾಮ ಪಂಚಾಯಿತಿಗಳ ಹೊಣೆಗಾರಿಕೆ ನಿಗದಿಪಡಿಸಲಾಯಿತು.

ಮಾಲಿನ್ಯ ನಿಯಂತ್ರಣ: ಮಂಡಳಿಯ ಹೆಜ್ಜೆ ಗುರುತುಗಳು

- ರಾಜ್ಯದಲ್ಲಿ ಕೈಗಾರಿಕಾ ಕಲುಷಿತ ನೀರನ್ನು ಸಾಮಾನ್ಯ ಶುದ್ಧೀಕರಣ ಘಟಕಗಳು ಹಾಗೂ ಅಪಾಯಕಾರಿ ತ್ಯಾಜ್ಯ ವಸ್ತುಗಳನ್ನು ಸುರಕ್ಷಿತ ವಿಲೇವಾರಿ ಘಟಕಗಳಿಗೆ ಸಾಗಣೆ ಮಾಡುವ ವಾಹನಗಳನ್ನು ಮಾಪನ ಮಾಡಲು 75 ವಾಹನಗಳಿಗೆ ಜಿಪಿಎಸ್ ಆಧರಿತ ಟ್ರ್ಯಾಕಿಂಗ್ ಸಿಸ್ಟಮ್‌ಗಳ ಅಳವಡಿಕೆ.
- ಜಿಪಿಎಸ್ ತಂತ್ರಜ್ಞಾನದ ಸರ್ವರ್‌ಗಳೊಂದಿಗೆ ಬೆಂಗಳೂರಿನ ಮಂಡಳಿಯ ಕೇಂದ್ರ ಕಚೇರಿಯಲ್ಲಿ ಸಂಯೋಜಿತ ಇಂಟಿಗ್ರೇಟೆಡ್ ಕಮಾಂಡ್ ಕಂಟ್ರೋಲ್ ಸೆಂಟರ್ ಸ್ಥಾಪನೆ.
- ಸಿಇಪಿಟಿಗಳ ಅಗತ್ಯ ಮತ್ತು ಪ್ರಾಮುಖ್ಯತೆ ಪರಿಗಣಿಸಿ ರಾಜ್ಯದಾದ್ಯಂತ 10 ಘಟಕಗಳ ಸ್ಥಾಪನೆ. ಇವುಗಳ ಸ್ಥಾಪಿತ ಸಾಮರ್ಥ್ಯ 5875 ಕೆಎಲ್‌ಡಿ (ದಿನಕ್ಕೆ ಕಿಲೊ ಲೀಟರ್)
- ಮಂಡಳಿಯು ಉದ್ದಿಮೆಗಳಿಗೆ ನೀಡುವ ಸ್ಥಾಪನಾ ಸಮ್ಮತಿ ಪತ್ರ ಅಥವಾ ಕಾರ್ಯಾಚರಣೆ ಸಮ್ಮತಿ ಪತ್ರ ನೀಡುವ ಅವಧಿ ಕಡಿತ.
- ಹಸಿರು ಪ್ರವರ್ಗದ ಉದ್ದಿಮೆಗಳಿಗೆ 15 ದಿನಗಳಲ್ಲಿ, ಕಿತ್ತಳೆ ಪ್ರವರ್ಗದ ಉದ್ದಿಮೆಗಳಿಗೆ 30 ದಿನ, ಸಣ್ಣ ಮತ್ತು ಮಧ್ಯಮ ವರ್ಗದ ಕೆಂಪು ಪ್ರವರ್ಗದ ಉದ್ದಿಮೆಗಳಿಗೆ 40 ದಿನ ಹಾಗೂ ದೊಡ್ಡ ಪ್ರವರ್ಗದ ಉದ್ದಿಮೆಗಳಿಗೆ 60 ದಿನಗಳಲ್ಲಿ ಸಮ್ಮತಿ ಪತ್ರ ನೀಡಿಕೆ.
- ಎಲ್ಲ ಸಾಮಾನ್ಯ ಕೊಳಚೆ ನೀರಿನ ಘಟಕಗಳಲ್ಲಿ ಡಿಜಿಟಲ್ ಮೀಟರ್‌ಗಳನ್ನು ಅಳವಡಿಸಲಾಗಿದೆ. ಇದರಿಂದಾಗಿ ಕೊಳಚೆ ನೀರು ಮತ್ತು ಶುದ್ಧೀಕರಿಸಿದ ನೀರಿನ ಪ್ರಮಾಣ ತಿಳಿಯಲು ಸಹಕಾರಿ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್



ಇ–ತ್ಯಾಜ್ಯ ನಿಯಂತ್ರಣ, ಪ್ಲಾಸ್ಟಿಕ್ ನಿಷೇಧ ಹಾಗೂ ಪರಿಸರ ರಕ್ಷಣೆಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಸೇರಿದಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಹಲವು ಕ್ರಮಗಳನ್ನು ಕೈಗೊಂಡಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇಲಾಖೆಯ ಪ್ರತಿಯೊಂದು ಯೋಜನೆಗಳಿಗೂ ಪ್ರೋತ್ಸಾಹಿಸುತ್ತಿದ್ದಾರೆ. ಕೇಂದ್ರ ಪರಿಸರ ಖಾತೆ ಸಚಿವರಾದ ಭೂಪೇಂದ್ರ ಯಾದವ್ ಅವರೂ ತ್ವರಿತವಾಗಿ ಸ್ಪಂದಿಸುತ್ತಿದ್ದಾರೆ.

ಆನಂದ್ ಸಿಂಗ್, ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಅತ್ಯಂತ ಸಂದರವಾದ ದೃಶ್ಯ ಪ್ರಕೃತಿ. ಪರಿಸರವನ್ನು ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ. ಸುಂದರವಾದ ಪರಿಸರವನ್ನು ನೋಡಲು ಅದರ ರಕ್ಷಣೆಯೂ ಅಗತ್ಯ. ಪರಿಸರ ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಸಾಧಿಸಲು ಎಲ್ಲ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಡಾ.ಶಾಂತ್ ಎ.ತಿಮ್ಮಯ್ಯ, ಅಧ್ಯಕ್ಷರು, ಕೆಎಸ್‌ಪಿಸಿಬಿ

ಏಕಬಳಕೆ ಪ್ಲಾಸ್ಟಿಕ್ ನಿಷೇಧ

ಸಚಿವ ಆನಂದ್ ಸಿಂಗ್ ಅವರು ಪ್ಲಾಸ್ಟಿಕ್ ನಿಷೇಧಕ್ಕೆ ಸಂಬಂಧಿಸಿ ಹಲವು ಸಭೆಗಳನ್ನು ನಡೆಸಿದ್ದಾರೆ, ಈ ನಿಟ್ಟಿನಲ್ಲಿ ಹಲವು ಕ್ರಮಕೈಗೊಂಡಿದ್ದಾರೆ. ಕೇಂದ್ರ ಸರ್ಕಾರದ ಸೂಚನೆಯಂತೆ ಮಂಡಳಿಯು ಜುಲೈ 1ರಿಂದ ಜಾರಿಗೆ ಬರುವಂತೆ ರಾಜ್ಯದಾದ್ಯಂತ ಏಕ ಬಳಕೆಯ ಪ್ಲಾಸ್ಟಿಕ್ (ಸಿಂಗಲ್ ಯೂಸ್ ಪ್ಲಾಸ್ಟಿಕ್-ಎಸ್‌ಯುಪಿ) ವಸ್ತುಗಳ ಉತ್ಪಾದನೆ, ವಿತರಣೆ, ಮಾರಾಟ ಮತ್ತು ಬಳಕೆಯನ್ನು ನಿಷೇಧಿಸಿದೆ. ನಿಷೇಧದ ಆದೇಶವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕೆಎಸ್‌ಪಿಸಿಬಿ ಕ್ರಮಕೈಗೊಂಡಿದೆ.

ಇ–ತ್ಯಾಜ್ಯಕ್ಕೆ ಕಡಿವಾಣ: ಮಾಲಿನ್ಯ ನಿಯಂತ್ರಣ ಮಂಡಳಿ ಆದ್ಯತೆ

ಪರಿಸರಕ್ಕೆ ಮಾರಕವಾಗಿರುವ ಇ-ತ್ಯಾಜ್ಯ ವೈಜ್ಞಾನಿಕ ವಿಂಗಡಣೆ ಹಾಗೂ ಸಂಸ್ಕರಣೆ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕಟ್ಟುನಿಟ್ಟಿನ ನಿಗಾವಹಿಸಿದೆ.

ಹಲವು ಮಾದರಿ ಎಲೆಕ್ಟ್ರಾನಿಕ್ ವಸ್ತುಗಳ ಮರುಬಳಕೆ ಸಾಧ್ಯವಿದ್ದರೂ ಸಮರ್ಪಕವಾಗಿ ವಿಂಗಡಣೆಯಾಗದೆ ಅಥವಾ ನಿರ್ಲಕ್ಷ್ಯದಿಂದ ಇತರ ತ್ಯಾಜ್ಯಗಳ ಜತೆಗೆ ಸೇರ್ಪಡೆಯಾಗುತ್ತಿದೆ. ಸೀಸ, ಪಾದರಸ, ಕ್ಯಾಡ್ಮಿಯಮ್, ಕ್ರೋಮಿಯಂ, ಬ್ರೋಮಿನೇಟೆಡ್ ಮತ್ತು ಕ್ಲೋರಿನೇಟೆಡ್ ಸಂಯುಕ್ತಗಳನ್ನು ಒಳಗೊಂಡ ಇ-ತ್ಯಾಜ್ಯ ಮಾನವನ ಆರೋಗ್ಯ ಮತ್ತು ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಈ ಹಿನ್ನೆಲೆಯಲ್ಲಿ ತ್ಯಾಜ್ಯದಿಂದ ಆಗುವ ಹಾನಿ ತಪ್ಪಿಸಲು ಮಂಡಳಿಯು 2016 ಅ.1ರಿಂದ ಇ-ತ್ಯಾಜ್ಯ ನಿಯಮ ಜಾರಿಗೆ ತಂದಿದೆ.

ಕರ್ನಾಟಕದಲ್ಲಿ ಹಿಂದಿನಿಂದಲೂ ಪರಿಸರ ಕುರಿತು ಕಾಳಜಿ ಹೆಚ್ಚಿದೆ. ನಗರೀಕರಣದ ಪರಿಣಾಮ ಸಾರ್ವಜನಿಕರಲ್ಲಿ ಜನರಲ್ಲಿ ಒಲವು ಕಡಿಮೆಯಾಗುತ್ತಿದೆ. ಇದಕ್ಕಾಗಿ ಮಂಡಳಿಯ ವತಿಯಿಂದ ನಿರಂತರವಾಗಿ ಜಾಗೃತಿ ಮೂಡಿಸಲಾಗುತ್ತಿದೆ.

ಶ್ರೀನಿವಾಸುಲು, ಸದಸ್ಯ ಕಾರ್ಯದರ್ಶಿ, ಕೆಎಸ್‌ಪಿಸಿಬಿ

ಯಾವ ವಸ್ತುಗಳಿಗೆಲ್ಲ ನಿಷೇಧ?

ಇಯರ್ ಬಡ್, ಬಲೂನ್, ಕ್ಯಾಂಡಿ, ಐಸ್‌ಕ್ರೀಮ್‌ಗಳಿಗೆ ಬಳಸುವ ಪ್ಲಾಸ್ಟಿಕ್ ಕಡ್ಡಿಗಳು, ಪ್ಲೇಟ್‌ಗಳು, ಕಪ್‌ಗಳು, ಗ್ಲಾಸ್‌ಗಳು, ಚಮಚ, ಚಾಕುಗಳು, ಟ್ರೇಗಳು, ಸ್ವಿಟ್ ಬಾಕ್ಸ್, ಆಮಂತ್ರಣ ಪತ್ರಿಕೆ, ಸಿಗರೇಟ್ ಪ್ಯಾಕೆಟ್‌ಗಳಿಗೆ ಬಳಸುವ ಪ್ಯಾಕೇಜಿಂಗ್ ವಸ್ತುಗಳು, 100 ಮೆಕ್ರಾನ್‌ಗಿಂತ ಕಡಿಮೆ ಇರುವ ಬ್ಯಾನರ್‌ಗಳು, ಕ್ಯಾರಿಬ್ಯಾಗ್, ಅಲಂಕಾರಕ್ಕಾಗಿ ಬಳಸುವ ಥರ್ಮಾ ಕೋಲ್‌ಗಳು, ಪ್ಲಾಸ್ಟಿಕ್ ಧ್ವಜ ನಿಷೇಧಿಸಲಾಗಿದೆ.

ಯಾರಿಗೆ, ಎಷ್ಟು ದಂಡ?

ಯಾರು	1ನೇ ಬಾರಿ	2ನೇಬಾರಿ	3ನೇ ಬಾರಿ
ಉತ್ಪಾದಕರು	5,000	10,000	20,000
ಚಿಲ್ಲರೆ ವ್ಯಾಪಾರಿಗಳು	2,000	5,000	10,000
ಬೀದಿಬದಿ ವ್ಯಾಪಾರಿಗಳು	200	500	1,000

ಬೆಂಗಳೂರು ಗ್ರಾಮಾಂತರದ ದಾಬಸ್‌ಪೇಟೆಯಲ್ಲಿರುವ ಕೈಗಾರಿಕಾ ತ್ಯಾಜ್ಯದ ಕರ್ನಾಟಕ ವೇಸ್ಟ್ ಮ್ಯಾನೇಜ್‌ಮೆಂಟ್ ಪ್ರದೇಶಕ್ಕೆ ಸಚಿವ ಆನಂದ್ ಸಿಂಗ್ ಭೇಟಿ ನೀಡಿ ಪರಿಶೀಲಿಸಿದರು.

ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಗತಿ ಪರಿಶೀಲನೆ ನಂತರ ಮಂಡಳಿಯ ವಾರ್ಷಿಕ ವರದಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಸಚಿವರಾದ ಆನಂದ್ ಸಿಂಗ್ ಮತ್ತು ಇತರೆ ಅಧಿಕಾರಿಗಳು ಇದ್ದಾರೆ

2021ರ ಅವಧಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರಾಜ್ಯದಾದ್ಯಂತ ಇ-ತ್ಯಾಜ್ಯ ಸಂಗ್ರಹ ಅಭಿಯಾನ ಆರಂಭಿಸಿದ್ದು, 50 ಇ-ತ್ಯಾಜ್ಯ ಸಂಗ್ರಹ ತೊಟ್ಟಿಗಳನ್ನು ಇರಿಸಿದೆ.

ಇ-ತ್ಯಾಜ್ಯ ಉತ್ಪಾದಿಸುವ ಸಂಸ್ಥೆಗಳು, ನಿರ್ವಹಣೆ ಮಾಡುವ ಸಂಸ್ಥೆಗಳ ಮೇಲೆ ಮಾಲಿನ್ಯ ನಿಯಂತ್ರಣ ಮಂಡಳಿ ಹದ್ದಿನ ಕಣ್ಣಿಟ್ಟಿದೆ.

ರಾಜ್ಯದಲ್ಲಿ ಇ-ತ್ಯಾಜ್ಯದ ಆವಿಷ್ಕಾರವನ್ನು ಕೈಗೊಳ್ಳಲು ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಗೆ (ಎಂಪ್ರಿ) ಮಂಡಳಿ ಕಾರ್ಯಾದೇಶವನ್ನು ನೀಡಿದೆ. ಇ-ತ್ಯಾಜ್ಯವನ್ನು ಅಸಮರ್ಪಕವಾಗಿ ವಿಲೇವಾರಿ ಮಾಡಿದವರಿಗೆ ದಂಡವನ್ನು ವಿಧಿಸಲಾಗುತ್ತಿದೆ.

ರಾಜಧಾನಿಯಲ್ಲಿ ಬಿಬಿಎಂಪಿ ಸಹಯೋಗದಲ್ಲಿ ಅಭಿಯಾನವನ್ನು ನಡೆಸಿ, 'ಬಿ-ರೆಸ್ಪಾನ್ಸಿಬಲ್' ಸ್ವಯಂ ಸೇವಾಸಂಸ್ಥೆ ಸಹಯೋಗದಲ್ಲಿ ಅಭಿಯಾನ ನಡೆಸಲಾಗಿದೆ. ಇ-ತ್ಯಾಜ್ಯ ವಿಲೇವಾರಿ ಬಗ್ಗೆ ಜಾಗೃತಿ ಮೂಡಿಸುವ ಬೀದಿ ನಾಟಕಗಳನ್ನು ಪ್ರದರ್ಶಿಸಲಾಗುತ್ತಿದೆ.

ಪರಿಸರ ಮಾಲಿನ್ಯ ತಗ್ಗಿಸಲು ಕೆಎಸ್‌ಪಿಸಿಬಿ ಉಪಕ್ರಮ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ವಿವಿಧ ಉಪಕ್ರಮಗಳ ಮೂಲಕ ಮಾಲಿನ್ಯ ಮುಕ್ತ ವಾತಾವರಣ ಮೂಡಿಸಲು ಟೊಂಕ ಕಟ್ಟಿದೆ. ಕರ್ನಾಟಕದಲ್ಲಿ ಹಿಂದಿನಿಂದಲೂ ಪರಿಸರ ಕುರಿತು ಕಾಳಜಿ ಹೆಚ್ಚಿದೆ. ನಗರೀಕರಣದಿಂದಾಗಿ ಈ ಅಂಶದತ್ತ ಜನರ ಒಲವು ಕಡಿಮೆಯಾಗುತ್ತಿದೆ. ಇದಕ್ಕಾಗಿ ಮಂಡಳಿ ವತಿಯಿಂದ ನಿರಂತರವಾಗಿ ಜನಜಾಗೃತಿ ಮೂಡಿಸಲಾಗುತ್ತಿದೆ.

ಐಐಎಸ್ಸಿ, ಎನ್‌ಜಿಆರ್‌ಐನಿಂದ ಅಧ್ಯಯನ: ಬೆಂಗಳೂರು ನಗರದಲ್ಲಿ ವಾಯುಮಾಲಿನ್ಯದ ವಿವಿಧ ಮೂಲಗಳನ್ನು ಗುರುತಿಸಿ ಅಗತ್ಯ ನಿಯಂತ್ರಣಾ ಕ್ರಮ ಕೈಗೊಳ್ಳಲು CSTEPವತಿಯಿಂದ Source Apportionment Study ಅಧ್ಯಯನ ನಡೆಸಲಾಗುತ್ತಿದೆ. ಪೀಣ್ಯ ಕೈಗಾರಿಕಾ ಪ್ರದೇಶದ ಅಂತರ್ಜಲ ಮಾಲಿನ್ಯದ ಪರಿಮಿತಿಯನ್ನು ಅಳೆಯಲು ಅಧ್ಯಯನ ನಡೆಸಲು ಯೋಜಿಸಿದೆ. ಈ ಅಧ್ಯಯನಕ್ಕಾಗಿ ಐಐಎಸ್‌ಸಿ ಹಾಗೂ ಹೈದರಾಬಾದ್‌ನಲ್ಲಿ ಎನ್‌ಜಿಆರ್‌ಐ ಸಂಸ್ಥೆಗಳನ್ನು ಗುರುತಿಸಲಾಗಿದೆ.

ಜಾಗೃತಿಗೆ ತಂತ್ರಜ್ಞಾನ ಬಳಕೆ: ಪರಿಸರ ರಕ್ಷಿಸಲು ತಳಮಟ್ಟದವರೆಗೂ ತಲುಪುವ ಜಾಗೃತಿ ಪ್ರಮುಖ ಅಂಶವಾಗಿದೆ. ಹೀಗಾಗಿ, ತಂತ್ರಜ್ಞಾನವನ್ನು ಸಮರ್ಪಪವಾಗಿ ಬಳಸಿಕೊಂಡು ಜನರನ್ನು ತಲುಪುವ ಯೋಜನೆ ರೂಪಿಸಲಾಗಿದೆ. ಮೊಬೈಲ್ ಕ್ಯಾಮೆರಾದ ಮೂಲಕ ಸ್ಟ್ರಿಪ್ ಅನ್ನು ಸ್ಕ್ಯಾನ್ ಮಾಡಿದಲ್ಲಿ ವಿಡಿಯೋ ವೀಕ್ಷಿಸುವ ತಂತ್ರಜ್ಞಾನ ಬಳಕೆ ಮಾಡಿಕೊಳ್ಳಲಾಗುತ್ತಿದೆ.

ಪರಿಸರ ಪ್ರಜ್ಞೆ ಒಳಗೊಂಡಿರುವ ವಿಡಿಯೋಗಳನ್ನು ಅಳವಡಿಸಿ ಜಾಗೃತಿ ಮೂಡಿಸಲಾಗುತ್ತಿದೆ. ಇದು ಆಸಕ್ತಿದಾಯಕವಾಗಿದೆ. ಅಲ್ಲದೆ, ಹೆಚ್ಚಿನ ಸಂಖ್ಯೆಯಲ್ಲಿ ತಲುಪು ನೆರವಾಗುತ್ತಿದೆ.

ಕನ್ಸೆಂಟ್ ಮೇಳ ಆಯೋಜನೆ: ರಾಜ್ಯದ ಅತಿ ಸಣ್ಣ ಹಾಗೂ ಮಧ್ಯಮ ವರ್ಗದ ಕೈಗಾರಿಕೆಗಳ ವಿಶ್ವಾಸವನ್ನು ಹೆಚ್ಚಿಸಲು ಹಾಗೂ ತೊಂದರೆ ರಹಿತ ನೊಂದಣಿ ಕಾರ್ಯವನ್ನು ಕೈಗೊಳ್ಳಲು ಮಂಡಳಿಯು ಕನ್ಸೆಂಟ್ ಮೇಳವನ್ನು ಆಯೋಜಸಿತ್ತು. ಈ ಮೇಳದಲ್ಲಿ ಕಾರ್ಯಾಚರಣೆಯಲ್ಲಿರುವ ಉದ್ದಿಮೆಗಳು ಸುಲಭವಾಗಿ ಸಮ್ಮತಿ ಪತ್ರ ಪಡೆಯುವ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಈ ಮೂಲಕ ಇಲಾಖೆ ವತಿಯಿಂದ ರಾಜ್ಯದ ಅತಿ ಸಣ್ಣ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳ ವಿಶ್ವಾಸ ಹೆಚ್ಚಿಸಲು ಕ್ರಮಕೈಗೊಳ್ಳಲಾಗಿದೆ.

ಆರೋಗ್ಯ ಕೇಂದ್ರಕ್ಕೆ ಬಲ • 16 ತಪಾಸಣೆಗಳು, ಆ್ಯಪ್‌ನಲ್ಲೇ ವಿವರ ದಾಖಲು

‘ಸ್ಮಾರ್ಟ್ ಕ್ಲಿನಿಕ್’ ಆರಂಭಕ್ಕೆ ಬೇಕು ಸಮಯ, ವೈದ್ಯರು

• ಆರ್. ಮಂಜುನಾಥ್

ಬೆಂಗಳೂರು: ಸ್ಮಾರ್ಟ್ ಸಿಟಿ ಯೋಜನೆ ಯಡಿ ಡಿಜಿಟಲ್ ರೂಪದಲ್ಲಿ ವೈದ್ಯರ ಜೊತೆ ಸಂಪರ್ಕ ಸಾಧಿಸುವ ವ್ಯವಸ್ಥೆ ‘ಸ್ಮಾರ್ಟ್ ವರ್ಚ್ಯುಯಲ್ ಕ್ಲಿನಿಕ್’. ಇದನ್ನು ಬಿಬಿಎಂಪಿ ವ್ಯಾಪ್ತಿಯ 27 ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲೂ ಆರಂಭಿಸಲು ಯೋಜಿಸಲಾಗಿದೆ. ಇದು ಇನ್ನೂ ನೀಲನಕ್ಷೆಯ ಹಂತದಲ್ಲೇ ಇದೆ. ಪ್ರಾಯೋಗಿಕವಾಗಿ ಕೋಣನಕುಂಟೆಯಲ್ಲಿ ಆರಂಭಿಸಿದ್ದರೂ ಇನ್ನೂ ಯಾರಿಗೂ ತಲುಪಿಲ್ಲ.

ಪ್ರಾಥಮಿಕ ಆರೈಕೆಯನ್ನು ಸದೃಢ ಗೊಳಿಸಿ, ವಿಶ್ವದರ್ಜೆಯ ಪ್ರಾಥಮಿಕ ಆರೋಗ್ಯ ಸೌಲಭ್ಯವನ್ನು ಸಮಾಜದ ಎಲ್ಲ ಸಮುದಾಯಕ್ಕೂ ಒದಗಿಸಬೇಕು ಎಂಬ ಮೂಲ ಉದ್ದೇಶ ‘ಸ್ಮಾರ್ಟ್ ವರ್ಚ್ಯುಯಲ್ ಕ್ಲಿನಿಕ್’. ಸಣ್ಣಪುಟ್ಟ ಚಿಕಿತ್ಸೆಗೆ ಆಸ್ಪತ್ರೆಗೇ ಹೋಗಬೇಕಾದ ಅಗತ್ಯ ಇರುವುದಿಲ್ಲ. ‘ಸ್ಮಾರ್ಟ್ ವರ್ಚ್ಯುಯಲ್ ಕ್ಲಿನಿಕ್’ಗೆ ಬರಲಿರುವ ರೋಗಿಯ ಎಲ್ಲ ವಿವರಗಳನ್ನು ಮೊಬೈಲ್ ಆ್ಯಪ್ ಮೂಲಕ ದಾಖಲಿಸಲಾಗುತ್ತದೆ. ಇಲ್ಲಿರುವ ವೈದ್ಯ ಸಿಬ್ಬಂದಿ 16 ತಪಾಸಣೆಗಳನ್ನು ಮಾಡುವ ವ್ಯವಸ್ಥೆ ಹೊಂದಲಿದ್ದಾರೆ. ಈ ಕ್ಲಿನಿಕ್‌ನಿಂದಲೇ ವಿಡಿಯೊ ಕಾನ್ಫರೆನ್ಸ್ ಮೂಲಕ ‘ಸೆಂಟ್ರಲ್ ಕ್ಲಿನಿಕಲ್ ಕಮ್ಯಾಂಡ್ ಸೆಂಟರ್’ಗೆ ಸಂಪರ್ಕಿಸಲಾಗುತ್ತದೆ. ಇಲ್ಲಿ 20 ತಜ್ಞವೈದ್ಯರಿರುತ್ತಾರೆ. ರೋಗಿಯ ಅಗತ್ಯಕ್ಕನುಸಾರವಾಗಿ ತಪಾಸಣೆ ನಡೆಸಲು ವೈದ್ಯರು ಸಿಬ್ಬಂದಿಗೆ ಸೂಚಿಸುತ್ತಾರೆ. ಸಲಹೆ ಹಾಗೂ ಚಿಕಿತ್ಸೆಯನ್ನು ವಿವರಿಸುತ್ತಾರೆ. ಕ್ಲಿನಿಕ್‌ನಲ್ಲಿರುವ ಸಿಬ್ಬಂದಿ ಈ ವಿವರಗಳ ಡಿಜಿಟಲೀಕರಣವನ್ನೂ ಮಾಡುತ್ತಾರೆ.

ಹೆಚ್ಚಿನ ಚಿಕಿತ್ಸೆ ಬೇಕಿದ್ದರೆ ವೈದ್ಯರು ಸೂಚಿಸುವ ಆಸ್ಪತ್ರೆಗೆ ತೆರಳಬಹುದು. ರೋಗಿ ಅಲ್ಲಿಗೆ ಹೋಗುವ ಮುನ್ನ ಅವರ ವಿವರವೆಲ್ಲವೂ ಆ ಆಸ್ಪತ್ರೆಗೆ ರವಾನೆಯಾಗಿರುತ್ತದೆ. ಅಂದರೆ, ಎಲ್ಲವೂ ಡಿಜಿಟಲ್ ಆಗಿರುವುದರಿಂದ ವೈದ್ಯ ಸಿಬ್ಬಂದಿಗೆ ಕೋಡ್ ಮೂಲಕ ಎಲ್ಲ ಮಾಹಿತಿ ಲಭ್ಯವಾಗುತ್ತದೆ. ಸಮುದಾಯದ ಆಸ್ಪತ್ರೆಗಳಿಗೆ ಸಣ್ಣ ಚಿಕಿತ್ಸೆಗೂ ರೋಗಿಗಳು ಹೋಗುವುದು ಈ ವ್ಯವಸ್ಥೆಯಿಂದ ಕಡಿಮೆಯಾಗುತ್ತದೆ. ಆದರೆ, ಇದಿನ್ನೂ ಆರಂಭವಾಗಲು ಸಾಕಷ್ಟು ತಿಂಗಳುಗಳೇ ಬೇಕು. ಆರಂಭವಾದರೂ ತಜ್ಞವೈದ್ಯರು ಇಲ್ಲಿಗೆ ನೇಮಕವಾಗಬೇಕು.

ಡಿಜಿಟಲ್ ಮೂಲಸೌಕರ್ಯ: ಬಿಬಿಎಂಪಿ ವ್ಯಾಪ್ತಿಯಲ್ಲಿ ಆರೋಗ್ಯ ಕ್ಷೇತ್ರಕ್ಕೆ ಡಿಜಿಟಲ್ ಮೂಲಸೌಕರ್ಯವನ್ನು ‘ಸ್ಮಾರ್ಟ್ ಸಿಟಿ’ ಒದಗಿಸಿದೆ. ಕೋವಿಡ್ ಸಮಯದಲ್ಲಿ ರೋಗಿಗಳ ನಿಗಾವಹಿಸಲು 211 ಲ್ಯಾಪ್‌ಟಾಪ್, 3,337 ಟ್ಯಾಬ್ಲೆಟ್‌ಗಳನ್ನು ಆಶಾ ಕಾರ್ಯಕರ್ತೆಯರಿಗೆ ನೀಡ ಲಾಗಿದೆ. ಡೆಸ್ಕ್‌ಟಾಪ್, ಪ್ರಿಂಟರ್ಸ್, ಬಾರ್‌ಕೋಡ್ ಪ್ರಿಂಟರ್‌ಗಳನ್ನೂ ಒದಗಿಸಲಾಗಿದೆ. ಇದಕ್ಕಾಗಿ ₹ 10.83 ಕೋಟಿ ವೆಚ್ಚ ಮಾಡಲಾಗಿದೆ.

‘ಸ್ಮಾರ್ಟ್ ವರ್ಚ್ಯುಯಲ್ ಕ್ಲಿನಿಕ್’ ವೈಶಿಷ್ಟ್ಯಗಳೇನು?



- ಮಾಡ್ಯುಲರ್, ಕ್ಲೌಡ್ ಟೆಕ್ನಾಲಜಿ ಪ್ಲಾಟ್‌ಫಾರ್ಮ್
- ಪ್ರತಿಯೊಂದು ವಿಧಾನಸಭೆ ಕ್ಷೇತ್ರದಲ್ಲಿ ಒಂದು ಕ್ಲಿನಿಕ್
- ರೋಗಿಗಳ ನೋಂದಣಿ, ವೈದ್ಯರೊಂದಿಗೆ ಸಮಯ ನಿಗದಿ
- ಪ್ರತಿಯೊಂದು ಕ್ಲಿನಿಕ್‌ನಲ್ಲಿ 16 ರೀತಿಯ ತಪಾಸಣೆಗಳಿಗೆ ಉಪಕರಣಗಳು

ಯಾವುದಕ್ಕೆ ಎಷ್ಟು ವೆಚ್ಚ?

₹21.65 ಕೋಟಿ — ವರ್ಚ್ಯುಯಲ್ ಕ್ಲಿನಿಕ್

₹10.83 ಕೋಟಿ — ಡಿಜಿಟಲ್ ಹೆಲ್ತ್ ಮೂಲಸೌಕರ್ಯ ಬಿಬಿಎಂಪಿ

₹10.65 ಕೋಟಿ — ಬೆಂಗಳೂರು ವಿಕ್ಟೋರಿಯ ಆಸ್ಪತ್ರೆಯಲ್ಲಿ ಕ್ಯಾಂಪಸ್ ಅಭಿವೃದ್ಧಿ

₹33.33 ಕೋಟಿ — ಆಸ್ಪತ್ರೆಗಳಿಗೆ ಉಪಕರಣ

₹2 ಕೋಟಿ — ಪ್ರೊಜೆಕ್ಟ್ ರಶ್ಮಿ

ವಿಕ್ಟೋರಿಯ ಆಸ್ಪತ್ರೆಗೆ ನೀಡಲಾಗಿರುವ ಎಲೆಕ್ಟ್ರಿಕ್ ವಾಹನಗಳು ದೂಳು ಹಿಡಿದಿವೆ

ಮತ್ತಷ್ಟು ಬೇಡಿಕೆ

‘ಉದ್ಯೋಗಸ್ಥ ಮಹಿಳೆಯರಿಗೆ ಉದ್ಯೋಗ ಸ್ಥಳದಲ್ಲಿ ಸೌಕರ್ಯ ಕಲ್ಪಿಸಿರುವ ‘ಪ್ರಾಜೆಕ್ಟ್ ರಶ್ಮಿ’ಯನ್ನು ಮೂರು ಕಡೆ ಅಂದರೆ, ಪೊಲೀಸ್ ಆಯುಕ್ತರ ಕಚೇರಿ, ಲೋಕೋಪಯೋಗಿ ಇಲಾಖೆ ಕಟ್ಟಡ ಹಾಗೂ ಹೈಕೋರ್ಟ್ ಆವರಣದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಇನ್ನೂ ಹಲವು ಕಡೆ ಇಂತಹ ವ್ಯವಸ್ಥೆ ಬೇಕೆಂದು ಬೇಡಿಕೆ ಬಂದಿದೆ’ ಎಂದು ಸ್ಮಾರ್ಟ್ ಸಿಟಿ ಯೋಜನೆಯ ಜಂಟಿ ವ್ಯವಸ್ಥಾಪಕ ನಿರ್ದೇಶಕಿ ಎನ್. ಸುಶೀಲಮ್ಮ ತಿಳಿಸಿದರು.

ದೂಳು ತುಂಬಿದ ವಾಹನಗಳು

ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿ ಮೂಲಸೌಕರ್ಯಗಳನ್ನು ಒದಗಿಸಲು ‘ಸ್ಮಾರ್ಟ್ ಸಿಟಿ’ ₹10.65 ಕೋಟಿಯನ್ನೇ ವೆಚ್ಚ ಮಾಡಿದೆ. ಪ್ರವೇಶ ದ್ವಾರ, ರಸ್ತೆ, ಪಾದಚಾರಿ ಮಾರ್ಗ, ಪಾರ್ಕಿಂಗ್ ಸ್ಥಳ, ಉದ್ಯಾನ ಅಭಿವೃದ್ಧಿ ಮಾಡಿದೆ. ಇದಲ್ಲದೆ, ರೋಗಿಗಳು, ವಿಐಪಿಗಳು ಬಂದಾಗ ಉಪಯೋಗಿಸಬಹುದಾದ 5 ಎಲೆಕ್ಟ್ರಿಕ್ ವಾಹನಗಳನ್ನೂ ನೀಡಿದೆ. ಇವುಗಳೆಲ್ಲವನ್ನೂ ಆಸ್ಪತ್ರೆಗೆ ನೀಡಲಾಗಿದೆ. ಆದರೆ, ಈ ವಾಹನಗಳನ್ನು ಉಪಯೋಗಿಸದೆ, ದೂಳು ತುಂಬಿಕೊಂಡಿವೆ.

ವಾಣಿ ವಿಲಾಸ ಆಸ್ಪತ್ರೆಗೆ ₹18.40 ಕೋಟಿ ಮೌಲ್ಯದ ಉಪಕರಣಗಳನ್ನು ನೀಡಲಾಗಿದೆ. ಕಿದ್ವಾಯಿ, ವಿಕ್ಟೋರಿಯಾ, ರಾಜೀವ್ ಗಾಂಧಿ ಆಸ್ಪತ್ರೆಗಳಿಗೆ ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಉಪಕರಣಗಳನ್ನು ಈಗಾಗಲೇ ಒದಗಿಸಲಾಗಿದೆ. ಅಲ್ಲದೆ, ಲಿಫ್ಟ್, ರ್‍ಯಾಂಪ್‌ಗಳನ್ನೂ ಒದಗಿಸಲಾಗುತ್ತಿದೆ. ಕಿದ್ವಾಯ್ ಆಸ್ಪತ್ರೆಯಲ್ಲಿ ಜಿನೊಮಿಕ್ ಲ್ಯಾಬ್ ಸ್ಥಾಪಿಸಲಾಗುತ್ತಿದೆ.



ಪೊಲೀಸ್ ಆಯುಕ್ತರ ಕಚೇರಿ ಆವರಣದಲ್ಲಿರುವ ‘ಪ್ರಾಜೆಕ್ಟ್ ರಶ್ಮಿ’ ಕೊಠಡಿ

ಉದ್ಯೋಗಸ್ಥ ಮಹಿಳೆಯರಿಗೆ ‘ಪ್ರಾಜೆಕ್ಟ್ ರಶ್ಮಿ’

• ಸುಕೃತ ಎಸ್.

ಮಹಿಳೆಯರಿಗೆ ಅವರು ಉದ್ಯೋಗ ಮಾಡುವ ಸ್ಥಳದಲ್ಲಿ ಹೈಟೆಕ್ ವ್ಯವಸ್ಥೆಯನ್ನು ‘ಪ್ರಾಜೆಕ್ಟ್ ರಶ್ಮಿ’ ಒದಗಿಸುತ್ತಿದೆ. ಇಲ್ಲಿ ಶೌಚಾಲಯ, ಮಗುವಿಗೆ ಹಾಲುಣಿಸುವ ಕೊಠಡಿ, ವಿಶ್ರಾಂತಿ ಕೊಠಡಿ, ಟಿ.ವಿ ನೋಡಲು, ಕೇರಂ, ಚೆಸ್ ಮುಂತಾದ ಕ್ರೀಡೆಗಳನ್ನಾಡುವ ಕೊಠಡಿ ಇದೆ. ಜೊತೆಗೆ ಇಲ್ಲಿ ಪತ್ರಿಕೆ, ನಿಯತಕಾಲಿಕಾಲಿಕಗಳನ್ನು ಓದುವ ಅವಕಾಶವೂ ಇದೆ. ವಿಶಾಲವಾದ ಅಡಿಗೆಕೋಣೆಯೂ ಇದ್ದು, ಊಟ ಮಾಡುವುದಕ್ಕಾಗಿ ಕೊಠಡಿಯ ವ್ಯವಸ್ಥೆಯೂ ಇದೆ. ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯೂ ಇದೆ.

ಪೊಲೀಸ್ ಆಯುಕ್ತರ ಕಚೇರಿ ಆವರಣದಲ್ಲಿ ‘ಪ್ರಾಜೆಕ್ಟ್ ರಶ್ಮಿ’ ವ್ಯವಸ್ಥೆ ಇದೆ. ಮಹಿಳೆಯರು ಇಲ್ಲಿನ ವ್ಯವಸ್ಥೆ ಬಗ್ಗೆ ಅನುಭವ ಹಂಚಿಕೊಂಡರು...

‘ಮನೆಗಿಂತ ಹೆಚ್ಚು ಸಮಯ ಕಚೇರಿಯಲ್ಲಿಯೇ ಕಳೆಯುವುದರಿಂದ, ವಿಶೇಷವಾಗಿ ಮಹಿಳೆಯರಿಗೆ ಇಂಥದೊಂದು ಕೊಠಡಿಯ ಅವಶ್ಯಕತೆ ಇರುತ್ತದೆ. ಇಂಥದ್ದೊಂದು ವ್ಯವಸ್ಥೆ ನಮಗೆ ಖುಷಿ ತಂದಿದೆ’ ಎನ್ನುತ್ತಾರೆ ಅಪರಾಧ ವಿಭಾಗದ ಸಿಬ್ಬಂದಿ ತನುಜಾ.

‘ಋತುಚಕ್ರದ ಸಮಯದಲ್ಲಿ ಸಹಕಾರಿಯಾಗಲು ಪ್ಯಾಡ್ ವೆಂಡಿಂಗ್ ಮಷೀನ್ ವ್ಯವಸ್ಥೆಯೂ ಇದೆ. ಚಳಿಗಾಲ, ಮಳೆಗಾಲದಲ್ಲಿ ಆರೋಗ್ಯ ಹದಗೆಡುವುದು ಸಾಮಾನ್ಯ. ಆದ್ದರಿಂದ ಕುಡಿಯಲು ಬಿಸಿ ನೀರಿನ ಸೌಲಭ್ಯ ಇದ್ದರೆ ಉತ್ತಮವಾಗುತ್ತಿತ್ತು’ ತಾಜ್ ಹೇಳಿದರು.

ಸುದ್ದಿ 2 ನಿಮಿಷ

‘ರೈತ ಶಕ್ತಿ ಶೀಘ್ರವೇ ಜಾರಿ’

ಬೆಂಗಳೂರು: 2022–23 ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದ್ದ ಕೃಷಿ ಯಾಂತ್ರೀಕರಣದಡಿ ಡೀಸೆಲ್‌ಗೆ ಸಹಾಯಧನ ನೀಡುವ ‘ರೈತ ಶಕ್ತಿ’ ಯೋಜನೆಯನ್ನು ಸದ್ಯವೇ ಜಾರಿಗೊಳಿಸುವುದಾಗಿ ಕೃಷಿ ಸಚಿವ ಬಿ.ಸಿ.ಪಾಟೀಲ ಹೇಳಿದ್ದಾರೆ.

ಈ ಯೋಜನೆಯಡಿ ರೈತರಿಗೆ ಒಂದು ಎಕರೆಗೆ ₹250 ರಂತೆ ಗರಿಷ್ಠ ಐದು ಎಕರೆಗೆ ಒಟ್ಟು ₹1,250 ಡಿಬಿಟಿ ಮೂಲಕ ಸಹಾಯಧನ ಪಾವತಿಸಲಾಗುವುದು. ಇದರಿಂದ ಕೃಷಿ ಉಪಕರಣಗಳ ಮೂಲಕ ಆಹಾರ ಧಾನ್ಯಗಳ ಉತ್ಪಾದಕತೆಯನ್ನು ಹೆಚ್ಚಿಸಲು ಅನುಕೂಲವಾಗುತ್ತದೆ ಎಂದು ಅವರು ಹೇಳಿದ್ದಾರೆ.

ಇದಕ್ಕಾಗಿ ರೈತರು ನೋಂದಣಿಗಾಗಿ ಇರುವ (FRUITS) ಪೋರ್ಟಲ್‌ನಲ್ಲಿ ಹೆಸರು ನೋಂದಾಯಿಸಬೇಕು. ಕಿಸಾನ್ ತಂತ್ರಾಂಶದ ಮೂಲಕ ಹಣವನ್ನು ರೈತರ ಸೀಡೆಡ್ ಬ್ಯಾಂಕ್ ಅಥವಾ ಅಂಚೆ ಖಾತೆಗಳಿಗೆ ನೇರ ವರ್ಗಾವಣೆ ಮಾಡಲಾಗುವುದು. ಈ ಯೋಜನೆಗೆ ರೈತರು ಪ್ರತ್ಯೇಕವಾಗಿ ವೈಯಕ್ತಿಕ ಅರ್ಜಿ ಸಲ್ಲಿಸುವ ಅವಶ್ಯ ಇಲ್ಲ ಎಂದು ಅವರು ಹೇಳಿದ್ದಾರೆ.

ಪಕ್ಷ ಸಂಘಟನೆ: ಪ್ರಧಾನಿ–ಬಿಎಸ್‌ವೈ ಚರ್ಚೆ

ನವದೆಹಲಿ: ಬಿಜೆಪಿ ಕೇಂದ್ರ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರು ಪ್ರಧಾನಿ ನರೇಂದ್ರ ಮೋದಿ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಶುಕ್ರವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿದರು. ಈ ವೇಳೆ, ಕರ್ನಾಟಕದಲ್ಲಿನ ರಾಜಕೀಯ ಬೆಳವಣಿಗೆಗಳು ಹಾಗೂ ಪಕ್ಷ ಸಂಘಟನೆ ಬಗ್ಗೆ ನಾಯಕರು ಚರ್ಚಿಸಿದರು.

ಪ್ರಧಾನಿ ಮೋದಿ ಅವರನ್ನು ಸಂಜೆ 5 ಗಂಟೆಗೆ ಯಡಿಯೂರಪ್ಪ ಭೇಟಿ ಮಾಡಿದರು. ‘ಪ್ರಧಾನಿ ಅವರೊಂದಿಗೆ 20 ನಿಮಿಷಗಳ ಕಾಲ ಮಾತುಕತೆ ನಡೆಸಿದೆ. ರಾಜ್ಯದ ರಾಜಕೀಯ ಪರಿಸ್ಥಿತಿ ಕುರಿತು ಚರ್ಚಿಸಲಾಯಿತು. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುವ ಬಗ್ಗೆಯೂ ಸಮಾಲೋಚನೆ ನಡೆಸಲಾಯಿತು’ ಎಂದು ಯಡಿಯೂರಪ್ಪ ಸುದ್ದಿಗಾರರಿಗೆ ತಿಳಿಸಿದರು.

‘ಪ್ರಧಾನಿ ಅವರು ಸೆಪ್ಟೆಂಬರ್ 2ರಂದು ಮಂಗಳೂರಿಗೆ ಬರುತ್ತಿದ್ದಾರೆ. ಲಕ್ಷ ಜನರನ್ನು ಸೇರಿಸಿ ಕಾರ್ಯಕ್ರಮ ಮಾಡುತ್ತಿದ್ದೇವೆ. ಸಾಮೂಹಿಕ ನಾಯಕತ್ವದಲ್ಲಿ ರಾಜ್ಯ ಪ್ರವಾಸ ಮಾಡಲು ನಿಶ್ಚಯಿಸಲಾಗಿದೆ. ಎಲ್ಲ ಜಿಲ್ಲೆಗಳಲ್ಲಿ ಪ್ರವಾಸ ಮಾಡುತ್ತೇವೆ’ ಎಂದು ಅವರು ತಿಳಿಸಿದರು.

‘ಕರ್ನಾಟಕದಲ್ಲಿ ಪಕ್ಷದ ಬೆಳವಣಿಗೆಯಲ್ಲಿ ಯಡಿಯೂರಪ್ಪ ಪಾತ್ರ ಮಹತ್ವದ್ದು. ಅವರ ಮಹತ್ವ ಗುರುತಿಸಿ ಕೇಂದ್ರ ಮಟ್ಟದಲ್ಲಿ ಮಹತ್ವದ ಸ್ಥಾನಮಾನ ನೀಡಲಾಗಿದೆ. ಪಕ್ಷ ಸಂಘಟನೆಗೆ ಯಡಿಯೂರಪ್ಪ ಅವರು ಹೆಚ್ಚಿನ ಸಮಯ ಮೀಸಲಿಡಬೇಕು ಎಂದು ಪ್ರಧಾನಿ ಅವರು ಸೂಚಿಸಿದರು’ ಎಂದು ಮೂಲಗಳು ತಿಳಿಸಿವೆ.

ಯಡಿಯೂರಪ್ಪ ಅವರು ನಡ್ಡಾ ಅವರನ್ನೂ ಭೇಟಿ ಮಾಡಿ ಸಮಾಲೋಚಿಸಿದರು.

ಇದೇ 29ಕ್ಕೆ ಹೈಕೋರ್ಟ್ ರಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್‌ನ ಬೆಂಗಳೂರು ಪ್ರಧಾನ ಪೀಠ, ಧಾರವಾಡ ಮತ್ತು ಕಲಬುರಗಿ ಪೀಠಗಳಿಗೆ ಆಗಸ್ಟ್ 29ರಂದು ರಜೆ ಘೋಷಿಸಲಾಗಿದೆ.

ಇದೇ 27 ಮತ್ತು 28 ಹೈಕೋರ್ಟ್‌ನ ರಜಾ ದಿನಗಳು. 29ರ ಕೆಲಸದ ದಿನವನ್ನೂ ರಜೆ ಎಂದು ಘೋಷಿಸಲಾಗಿದ್ದು, ಇದರ ಬದಲಿಗೆ ಅಕ್ಟೋಬರ್ 15ರಂದು ಕೆಲಸದ ದಿನ ಎಂದು ಘೋಷಿಸಲಾಗಿದೆ.

ಇದೇ 30ರಂದು ಸ್ವರ್ಣಗೌರಿ ವ್ರತದ ನಿಮಿತ್ತ ರಜೆ. 31ರಂದು ಗಣೇಶ ಚತುರ್ಥಿ ರಜೆ. ಈ ಸರಣಿ ರಜೆಗಳಿಂದಾಗಿ ಹೈಕೋರ್ಟ್ ಕಲಾಪಗಳು ಸೆಪ್ಟೆಂಬರ್ 1ರಂದು ಪುನರಾರಂಭವಾಗಲಿವೆ.

ಮೇ ತಿಂಗಳಿಂದ 20 ಸಾವಿರ ಗುಂಡಿ ಮುಚ್ಚಲಾಗಿದೆ: ಬಿಬಿಎಂಪಿ

ಅತಿ ಮಳೆಯಿಂದ ರಸ್ತೆಗುಂಡಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿ ವ್ಯಾಪ್ತಿಯಲ್ಲಿ ಮೇ ತಿಂಗಳಿನಿಂದ ಈವರೆಗೆ 20 ಸಾವಿರ ರಸ್ತೆಗುಂಡಿಗಳನ್ನು ಮುಚ್ಚಿದ್ದೇವೆ. ಆದರೆ, ಇತ್ತೀಚೆಗೆ ಅತಿ ಹೆಚ್ಚು ಮಳೆಯಾಗಿರುವುದರಿಂದ ರಸ್ತೆಗುಂಡಿಗಳು ಇನ್ನೂ ಹೆಚ್ಚಾಗಿವೆ. ಮಳೆಯಿಂದ ಗುಂಡಿ ಮುಚ್ಚಲೂ ತೊಂದರೆಯಾಗುತ್ತಿದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

‘ಘಟಕದಲ್ಲಿ ಡಾಂಬರು ಮಿಕ್ಸ್ ಮಾಡಿ ಇಡಲೂ ಮಳೆಯಿಂದ ಅಡ್ಡಿಯಾಗಿದೆ. ಕೋಲ್ಡ್ ಮಿಕ್ಸ್‌ನಿಂದ ರಸ್ತೆ ಗುಂಡಿ ಮುಚ್ಚಲು ವ್ಯವಸ್ಥೆ ಮಾಡುತ್ತಿದ್ದೇವೆ. ಹವಾಮಾನ ಸರಿಹೋದರೆ 40 ಲೋಡ್ ಮಿಕ್ಸ್‌ನಿಂದ ಗುಂಡಿಗಳನ್ನು ತುಂಬಲು ಯೋಜಿಸಲಾಗಿದೆ. ಪ್ರಮುಖ ರಸ್ತೆಗಳನ್ನು ಮುಚ್ಚಲಾಗುತ್ತಿದೆ. ವಾರ್ಡ್ ರಸ್ತೆಗಳಲ್ಲೂ ಗುಂಡಿ ಮುಚ್ಚಲು ಎಂಜಿನಿಯರ್ ಹಾಗೂ ಏಜೆನ್ಸಿಗಳೊಂದಿಗೆ ಮಾತುಕತೆ ನಡೆಸಲಾಗಿದೆ. ರಸ್ತೆ ಗುಂಡಿ ಮುಚ್ಚಲು ಈ ವರ್ಷ ₹25 ಕೋಟಿಯಿಂದ 30 ಕೋಟಿ ವೆಚ್ಚ ಮಾಡಲಾಗುತ್ತಿದೆ’ ಎಂದರು.

‘ಪ್ಲಾಸ್ಟಿಕ್ ನಿಷೇಧ ಮಾಡಲು ಉತ್ಪಾದಕರ ಮೇಲೆ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಗಿದೆ. ಯಾರು ನಿಷೇಧಿತ ಪ್ಲಾಸ್ಟಿಕ್ ತಯಾರು ಮಾಡುತ್ತಿದ್ದಾರೋ ಅವರಿಗೆ ಟ್ರೇಡ್ ಲೈಸೆನ್ಸ್ ರದ್ದು ಮಾಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದರು.

‘ರಸ್ತೆಯಲ್ಲಿ ಕಸ ಹಾಕುವ ಬ್ಲ್ಯಾಕ್ ಸ್ಪಾಟ್‌ಗಳು ಇತ್ತೀಚೆಗೆ ಕಡಿಮೆ ಆಗಿವೆ. ಕೆಲವರು ರಸ್ತೆಯಲ್ಲಿ ಏಕೆ ಕಸ ಹಾಕುತ್ತಿದ್ದಾರೆ ಎಂಬುದನ್ನು ನೋಡುತ್ತಿದ್ದೇವೆ. ಅಂಗಡಿ ಮಾಲೀಕರೊಂದಿಗೆ ಮಾತನಾಡಿ, ಎಲ್ಲೆಲ್ಲೋ ಕಸ ಹಾಕದಂತೆ ಮನವಿ ಮಾಡಿಕೊಳ್ಳಲಾಗುತ್ತದೆ. ನಾಗರಿಕರಿಗೂ ಅರಿವು ಮೂಡಿಸಲಾಗುತ್ತದೆ. ದಂಡ ಹಾಕುವುದೇ ಮುಖ್ಯವಲ್ಲ’ ಎಂದು ಹೇಳಿದರು.

‘ಕಲಾಸಿಪಾಳ್ಯ ಮಾರುಕಟ್ಟೆಯನ್ನು ಸ್ಥಳಾಂತರಿಸುವ ನಿರ್ಣಯ ಸ್ವಾಗತಾರ್ಹ. ಇದರಿಂದ ಕಸದ ಸಮಸ್ಯೆ, ಸಂಚಾರ ದಟ್ಟಣೆ ನಿಯಂತ್ರಣವಾಗುತ್ತದೆ’ ಎಂದು ಹೇಳಿದರು.

ಒಳಚರಂಡಿಯಿಂದ ಕೆರೆಗೆ ತ್ಯಾಜ್ಯ: ಒಳಚರಂಡಿ ವ್ಯವಸ್ಥೆ 110 ಹಳ್ಳಿಗಳಲ್ಲಿ ಸರಿಯಾಗಿ ಇಲ್ಲದಿರುವುದರಿಂದ ಕೆರೆಗಳಿಗೆ ಒಳಚರಂಡಿ ನೀರು ಹರಿಯುತ್ತಿದೆ. ಹೀಗಾಗಿ ಕೆರೆ ನೀರು ಕಲ್ಮಶವಾಗುತ್ತಿದೆ. ಒಳಚರಂಡಿ ವ್ಯವಸ್ಥೆ ಪೂರ್ಣಗೊಂಡ ನಂತರ ಯಾವುದೇ ರೀತಿಯ ಕಲ್ಮಶ ಹರಿಯದಂತೆ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಗಮನಕ್ಕೆ ಬಂದಿರಲಿಲ್ಲ

‘ರೋಷನ್ ಬೇಗ್ ಭೂ ಕಬಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಬಿಎಂಪಿಯಿಂದ ಮಾಹಿತಿ ರವಾನೆಯಾಗಿಲ್ಲ ಎಂಬ ದೂರಿದೆ. ನಮಗೆ ಪತ್ರ ಬಂದಿದ್ದರ ಮಾಹಿತಿ ಇಲ್ಲ. ಈಗ ಗಮನಕ್ಕೆ ಬಂದಿದೆ. ಮಾಹಿತಿ ಒದಗಿಸದಿರುವುದು ತಪ್ಪೇ. ಅದು ಪತ್ರ ಎಲ್ಲಿದೆ ಎಂದು ಪರಿಶೀಲಿಸಿ, ವಾರ, 10 ದಿನದಲ್ಲಿ ಕಳುಹಿಸಿಕೊಡುತ್ತೇವೆ. ಅಧಿಕಾರಿಗಳ ಮಾಹಿತಿ ಕೇಳಿದ್ದಾರೆ ಅಷ್ಟೇ. ಅದರ ಹೆಸರು, ವಿಳಾಸ ಕೇಳಿದ್ದಾರೆ. ಅದನ್ನು ಕೊಡುತ್ತೇವೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಕೇಂದ್ರ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಹ್ಯಾಕಥಾನ್ ಸ್ಪರ್ಧೆಗೆ ಡಿಆರ್‌ಡಿಒದ ನಿವೃತ್ತ ಡೈರೆಕ್ಟರ್ ಜನರಲ್ ಡಾ.ಅ.ಅತೀತನ್ ಚಾಲನೆ ನೀಡಿದರು

ತಾಂತ್ರಿಕ ಮಹಾವಿದ್ಯಾಲಯದಲ್ಲಿ ‘ಹ್ಯಾಕಥಾನ್’ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಮಾನವ ಸಂಪನ್ಮೂಲ ಮಂತ್ರಾಲಯದ ಆವಿಷ್ಕಾರ ಘಟಕ ಮತ್ತು ಅಖಿಲ ಭಾರತ ತಾಂತ್ರಿಕ ಪರಿಷತ್ (ಎಂಸಿಐಡಿ) ಸಹಯೋಗದಲ್ಲಿ ನಗರದ ಕೆ.ಆರ್.ಪುರಂದ ಕೇಂದ್ರ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಹ್ಯಾಕಥಾನ್ ಸ್ಪರ್ಧೆ ಹಮ್ಮಿಕೊಳ್ಳಲಾಗಿತ್ತು.

ದೇಶದ 45 ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ ನಡೆದಿದ್ದು, ರಾಜ್ಯದಲ್ಲಿ ಕೇಂದ್ರ ತಾಂತ್ರಿಕ ಮಹಾವಿದ್ಯಾಲವು ಈ ಸ್ಪರ್ಧೆ ಆಯೋಜನೆಗೆ ಆಯ್ಕೆಗೊಂಡಿತ್ತು.

30 ತಂಡಗಳು ಭಾಗವಹಿಸಿದ್ದವು. 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ದೇಶದ ವಿವಿಧ ಭಾಗಗಳಿಂದ ಸ್ಪರ್ಧಿಸಿದ್ದರು.

ಡಿಆರ್‌ಡಿಒದ ನಿವೃತ್ತ ಡೈರೆಕ್ಟರ್ ಜನರಲ್ ಡಾ.ಜಿ.ಅತೀತನ್ ಮಾತನಾಡಿ, ‘ಜೀವನದಲ್ಲಿ ಗುರಿ ಇರಬೇಕು. ಅದನ್ನು ಸಾಧಿಸುವ ಬಯಕೆ ಸಹ ಇರಬೇಕು. ಮನೋಸ್ಥೈರ್ಯ ಬೆಳೆಸಿಕೊಳ್ಳಬೇಕು. ಆಗ ಮಾತ್ರ ನೀವು ಅಂದುಕೊಂಡಿದ್ದನ್ನು ಸಾಧಿಸಲು ಸಾಧ್ಯ ಆಗಲಿದೆ’ ಎಂದು ಹೇಳಿದರು.

ವಿಪ್ರೊ ಸಂಸ್ಥೆಯ ಕಾರ್ಯಕ್ರಮ ನಿರ್ದೇಶಕ ಡಾ.ಯು.ಚಂದ್ರಶೇಖರ್ ಅವರು, ‘ವಿಜ್ಞಾನ ಹಾಗೂ ತಂತ್ರಜ್ಞಾನದ ಸಮ್ಮಿಲನದಿಂದ ಜಗತ್ತು ತುಂಬಾ ಮುಂದುವರಿಯುತ್ತಿದೆ’ ಎಂದು ಹೇಳಿದರು.

ಕೇಂಬ್ರಿಡ್ಜ್ ಸಮೂಹ ವಿದ್ಯಾಸಂಸ್ಥೆ ಮುಖ್ಯಸ್ಥ ಡಿ.ಕೆ.ಮೋಹನ್, ಮಹಾವಿದ್ಯಾಲಯದ ಪ್ರಾಂಶುಪಾಲೆ ಡಾ.ಜಿ. ಇಂದುಮತಿ ಹಾಜರಿದ್ದರು.

ಚಿತ್ರಾವಳಿ

ಬೆಂಗಳೂರಿನ ಹುಳಿಮಾವಿನಲ್ಲಿ ವೈಷ್ಣೋಮ ಜಯಂತಿ ಅಂಗವಾಗಿ ವಿಶೇಷ ಪೂಜೆ, ರಥೋತ್ಸವಕ್ಕೆ ಚಂದ್ರಶೇಖರನಾಥ ಸ್ವಾಮೀಜಿ ಅವರು ಚಾಲನೆ ನೀಡಿದರು. ಟ್ರಸ್ಟಿ ರಾಕೇಶ್ ದುಗಲ್ ಇತರರು ಹಾಜರಿದ್ದರು.

ಬೆಂಗಳೂರಿನ ಕವಯಿತ್ರಿ ಮತ್ತು ಅನುವಾದಕಿ ಡಾ. ಉಷಾರಾಣಿ ರಾವ್ ಅವರ ಕನಕದಾಸರ ತಾತ್ವಿಕ ಮತ್ತು ಸಾಮಾಜಿಕ ಚಿಂತನೆಗಳ ಪ್ರೇರಿತ ಖಂಡಕಾವ್ಯ ‘ಕವಿತಾ ಕೀ ಆಂಚ್ ಮೇ ಪಿಘಲತಾ ಅಂಧೇರಾ’ಕ್ಕೆ ಹೈದರಾಬಾದ್‌ನ ಸಾಹಿತ್ಯ ಗರಿಮ ಪುರಸ್ಕಾರ ಸಂಸ್ಥೆಯಿಂದ 2019ನೆಯ ಸಾಹಿತ್ಯ ಪುರಸ್ಕೃತ ಗರಿಮ ಪ್ರಶಸ್ತಿಯನ್ನು ಈಚೆಗೆ ಹೈದರಾಬಾದ್‌ನಲ್ಲಿ ಪ್ರದಾನ ಮಾಡಲಾಯಿತು. ಹೈದರಾಬಾದ್ ವಿವಿ ಉಪ ಕುಲಪತಿ ಪ್ರೊ. ಕೆ.ಎಸ್ ಸರ್ ರಾಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಸಂಸ್ಥಾಪಕರಾದ ಡಾ. ಅಹಲ್ಯಾ ಮಿಶ್ರಾ ಮತ್ತಿತರರು ಇದ್ದರು.

ಶಿಕ್ಷಣ ಇಲಾಖೆ ಭ್ರಷ್ಟಾಚಾರ: ಪ್ರಧಾನಿಗೆ ದೂರು

ಬೆಂಗಳೂರು: ಶಿಕ್ಷಣ ಇಲಾಖೆಯ ಅಧಿಕಾರಿಗಳ ಮಿತಿ ಮೀರಿದ ಭ್ರಷ್ಟಾಚಾರ, ಕಿರುಕುಳದ ಪರಿಣಾಮ ರಾಜ್ಯದ ಹಲವು ಖಾಸಗಿ ಶಾಲೆಗಳು ಮುಚ್ಚುವ ಸ್ಥಿತಿ ತಲುಪಿವೆ ಎಂದು ಆರೋಪಿಸಿ ನೋಂದಾಯಿತ ಅನುದಾನ ರಹಿತ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಸಂಘ (ರುಪ್ಸಾ) ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದಿದೆ.

ಲಂಚ ಕೊಡದೇ ಶಾಲೆಗಳ ಮಾನ್ಯತೆ ನವೀಕರಣ ಮಾಡುತ್ತಿಲ್ಲ. ಆರ್‌ಟಿಇ ಶುಲ್ಕ ಬಿಡುಗಡೆ ಮಾಡಿಲ್ಲ. ಅನ್ಯ ಪಠ್ಯಕ್ರಮ ಅನುಸರಿಸಲು ಎನ್‌ಒಸಿ ಕೊಡುತ್ತಿಲ್ಲ. ದಾಖಲೆಗಳ ಪರಿಶೀಲನೆ ನೆಪದಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡಿ, ವಸೂಲಿ ದಂಧೆ ನಡೆಸುತ್ತಿದ್ದಾರೆ. ಸಚಿವರಿಗೆ ನೀಡಿದ ಮನವಿಗಳು ಕಸದ ಬುಟ್ಟಿ ಸೇರಿವೆ ಎಂದು ಪತ್ರದಲ್ಲಿ ದೂರಿದ್ದಾರೆ.

ಪಾಕ್‌ನಲ್ಲಿ ತುರ್ತು ಸ್ಥಿತಿ

ಇಸ್ಲಾಮಾಬಾದ್ (ಪಿಟಿಐ): ಭಾರಿ ಮಳೆ, ಪ್ರವಾಹದಿಂದಾಗಿ ಅಪಾರ ಸಾವು–ನೋವು ಸಂಭವಿಸಿರುವ ಕಾರಣ ಪಾಕಿಸ್ತಾನ ಸರ್ಕಾರ ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ಘೋಷಿಸಿದೆ. ಪ್ರವಾಹದಿಂದಾಗಿ ಈವರೆಗೆ 937 ಜನರು ಸಾವನ್ನಪ್ಪಿದ್ದಾರೆ.

ನಗರದಲ್ಲಿ ಇಂದು

17ನೇ ಸಾರ್ವಜನಿಕ ಶ್ರೀಕೃಷ್ಣ ಜನ್ಮಾಷ್ಟಮಿ ಉತ್ಸವ: ಶ್ರೀಕೃಷ್ಣ ದೇವರ ಪ್ರತಿಷ್ಠಾಪನೆ, ಧ್ವಜಾರೋಹಣ, ಗೋಪೂಜೆ, ಬೆಳಿಗ್ಗೆ: 9.30, ಕೃಷ್ಣ ಸಂಕೀರ್ತನೆ, ಬೆಳಿಗ್ಗೆ 10.30, ಭರತ ನಾಟ್ಯ ಸ್ಪರ್ಧೆ, ಮಧ್ಯಾಹ್ನ 3.30, ವಸ್ತು ಶೋಧನೆ, ಸಂಜೆ 5, ಮೂರು ಚಕ್ರದ ಸೈಕಲ್ ಸ್ಪರ್ಧೆ, ಸಂಜೆ 6, ಸಾಂಸ್ಕೃತಿಕ ಕಾರ್ಯಕ್ರಮಗಳು, ಬಹುಮಾನ ವಿತರಣೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 7, ಆಯೋಜನೆ: ಶ್ರೀಕೃಷ್ಣ ಜನ್ಮಾಷ್ಟಮಿ ಟ್ರಸ್ಟ್, ಸ್ಥಳ: ನರಸಿಂಹರಾಜ ಕಾಲೊನಿ, ಬಸವನಗುಡಿ.

ಪರಿಸರಸ್ನೇಹಿ ಮಣ್ಣಿನ ಗಣೇಶ ಕಾರ್ಯಾಗಾರ: ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಭಾಗವಾಗಿ ಕಾರ್ಯಕ್ರಮ, ಆಯೋಜನೆ: ಬಿ–ಪ್ಯಾಕ್, ಸ್ಥಳ: ಹಿರಿಯ ಪ್ರಾಥಮಿಕ ಶಾಲೆ, ಲಗ್ಗೆರೆ, ಬೆಳಿಗ್ಗೆ 9

ಗಾಯನ, ಹಾಸ್ಯ, ರಸಪ್ರಶ್ನೆ ಮತ್ತು ಕವಿಗೋಷ್ಠಿ: ಅತಿಥಿಗಳು: ವಿ. ಮಲ್ಲಿಕಾರ್ಜುನಯ್ಯ, ಅಧ್ಯಕ್ಷತೆ: ಸದಾನಂದ, ಆಯೋಜನೆ: ಸಹಮತ, ಸ್ಥಳ: ನ.323, ಹೇಮ ಸದನ, ಸಿಕ್ಯುಎಎಲ್ ಬಡಾವಣೆ, ಸಹಕಾರನಗರ, ಬೆಳಿಗ್ಗೆ 10

ಬೆಂಗಳೂರು ಕಾವ್ಯ ಉತ್ಸವ: ಉದ್ಘಾಟನೆ: ದೀಪ್ತಿ ನಾವಲ್, ಆಯೋಜನೆ: ಆಟಾ ಗಲಾಟ, ಬೆಳಿಗ್ಗೆ 10. ಪ್ರತಿಭಾ ನಂದ ಕುಮಾರ್ ಅವರ ‘ಅವನ ಮುಖ ಮರೆತು ಹೋಗಿದೆ’ ಪುಸ್ತಕ ಬಿಡುಗಡೆ: ಮಧ್ಯಾಹ್ನ 1.15, ‘ಬೇಗ ಪ್ರೀತ್ಸು ನನ್ನ’ ಪುಸ್ತಕ ಬಿಡುಗಡೆ: ಸಂಜೆ 5.45 ಸ್ಥಳ: ದಿ ಲೀಲಾ ಪ್ಯಾಲೆಸ್, ಓಲ್ಡ್ ಏರ್‌ಪೋರ್ಟ್ ರಸ್ತೆ

ಕೃಷ್ಣ ಜಯಂತಿ ಉತ್ಸವ: ಎಸ್.ಟಿ ಸೋಮಶೇಖರ್, ಪಿ. ಜಿ. ಆರ್ ಸಿಂಧ್ಯಾ, ಡಾ.ಸಿ.ಎನ್ ಮಂಜುನಾಥ್, ಅಧ್ಯಕ್ಷತೆ: ಗೀತಾ ರಾಮಾನುಜನ್, ಆಯೋಜನೆ: ಜಿ.ಆರ್ ಎಜುಕೇಷನಲ್ ಇನ್‌ಸ್ಟಿಟ್ಯೂಟ್, ಕನಕಪುರ ರಸ್ತೆ, ಬೆಳಿಗ್ಗೆ 10

15ನೇ ವಾರ್ಷಿಕೋತ್ಸವ ಸಮಾರಂಭ: ಅಧ್ಯಕ್ಷತೆ: ಎನ್.ಆರ್ ಪಂಡಿತಾರಾಧ್ಯ, ಅತಿಥಿಗಳು: ಜಯಪ್ರಕಾಶ್ ಶೆಟ್ಟಿ ಉಪ್ಪಳ, ವೂಡೇ.ಪಿ ಕೃಷ್ಣ, ಭರತ್ ಜಟಾಂಗಿ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್, ಕುವೆಂಪು ರಂಗಮಂದಿರ, ಶೇಷಾದ್ರಿಪುರ, ಬೆಳಿಗ್ಗೆ 10

ಅಕ್ಷರ ಯೋಗ: ಪ್ರಸ್ತುತಿ: ಹಿಮಾಲಯನ್ ಅಕ್ಷರ್ 2 ನಿಮಿಷಗಳ ಉಸಿರು ಬಿಗಿಹಿಡಿದಿಟ್ಟುಕೊಳ್ಳುವ ಧನುರಾಸನವನ್ನು ಗಿನ್ನಿಸ್ ವಿಶ್ವ ದಾಖಲೆಗಾಗಿ ಪ್ರದರ್ಶನ, ಆಯೋಜನೆ: ಅಕ್ಷರ ಯೋಗ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರ, ಸ್ಥಳ: ತರಹುಣಿಸೆ, ಜಾಲ ಹೋಬಳಿ, ಯಲಹಂಕ, ಬೆಳಿಗ್ಗೆ 10.30 ಮತ್ತು ಮಧ್ಯಾಹ್ನ 2

ರವಿ ಮರಿಯಪ್ಪ ಅವರ ಕವನ ಸಂಕಲನ ‘ಯಶೋಧರ ಪೂರ್ಣಿಮಾ’ ಬಿಡುಗಡೆ ಸಮಾರಂಭ: ಅತಿಥಿಗಳು: ಭಂತೆ ಮಾತಾ ಮೈತ್ರೇಯಾ, ರಾಜಶೇಖರ ಮಠಪತಿ, ಹಾ.ರಾ ಮಹೇಶ್, ಆಂಟೋನಿ ದಾಸ್, ರವೀಂದ್ರನಾಥ್ ಸಿರಿವರ, ಆಯೋಜನೆ: ಸಿರಿವರ ಪ್ರಕಾಶನ, ಸ್ಥಳ: ನಯನ ಸಭಾಂಗಣ, ಬೆಳಿಗ್ಗೆ 10.30

ಕಾಲೇಜು ದಿನ ಆಚರಣೆ: ಅತಿಥಿಗಳು: ಡಾ.ಸಿ.ಎನ್ ಅಶ್ವತ್ಥನಾರಾಯಣ, ಉದಯ್.ಬಿ ಗುರುಡಾಚಾರ್, ಅಧ್ಯಕ್ಷತೆ: ಜೀಯಾವುಲ್ಲಾ ಷರೀಫ್, ಆಯೋಜನೆ: ಅಬ್ಬಾಸ್ ಖಾನ್ ಕಾಲೇಜ್ ಫಾರ್ ವುಮೆನ್, ಕಬ್ಬನ್‌ಪೇಟೆ, ಬೆಳಿಗ್ಗೆ 11

ಶಾಸ್ತ್ರೀಯ ಮತ್ತು ಜಾನಪದ ಸಂಗೀತ ಉತ್ಸವ: ಬಂಗಾಳಿ ಜಾನಪದ ಗೀತೆಗಳ ಪ್ರಸ್ತುತಿ: ಬೆಳಿಗ್ಗೆ 11: ಹಿಮಾದ್ರಿ ದೇವಿ, ಸಂಜೆ: 5.15ಕ್ಕೆ ಕರ್ನಾಟಕ ಸಂಗೀತ ಗಾಯನ: ಸುಧಾ ರಘುನಂದನ್, ಆಯೋಜನೆ: ಮ್ಯೂಸಿಕ್ ಎಕ್ಸ್‌ಪೀರಿಯನ್ಸ್ ಮ್ಯೂಸಿಯಂ, ಸ್ಥಳ: ಎಂ.ಎಲ್.ಆರ್. ಕನ್ವೆನ್ಷನ್ ಸೆಂಟರ್ ಮತ್ತು ಐಎಂಇ ಮ್ಯೂಸಿಯಂ

ಸುಧಾ ರಘುನಂದನ್

ಶ್ರಾವಣ ಮಾಸೋತ್ಸವ ಹಾಗೂ ಶ್ರಾವಣ ಕಡೇ ಶನಿವಾರ: ಅತಿಥಿಗಳು: ಕೆ. ಗೋಪಾಲಯ್ಯ, ಹೇಮಲತಾ ಗೋಪಾಲಯ್ಯ, ಅನ್ನದಾನ, ಆಯೋಜನೆ: ಸತ್ಯಶನೈಶ್ವರಸ್ವಾಮಿ ದೇವಸ್ಥಾನ, ಸ್ಥಳ: ನಂದಿನಿ ಬಡಾವಣೆ, ಮಧ್ಯಾಹ್ನ 12

ರಾಜ್ಯ ಮಟ್ಟದ ಅಂತರ ಕಾಲೇಜು ಪುರಷರ ಮತ್ತು ಮಹಿಳಾ ಕಬಡ್ಡಿ ಹಾಗೂ ಖೋಖೋ ಪಂದ್ಯಾವಳಿ ಸಮಾರೋಪ ಸಮಾರಂಭ: ಅತಿಥಿಗಳು: ಎಲ್. ಜಯಂತಿ, ಪಿ.ಸಿ ಕೃಷ್ಣಸ್ವಾಮಿ, ಎಸ್. ಮಂಜುನಾಥ್, ಎಚ್.ಸಿ. ಗೋಪಾಲ್, ವೈ. ವೆಂಕಟೇಶಪ್ಪ, ಆಯೋಜನೆ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಮಧ್ಯಾಹ್ನ 1

ಎಂ.ಎಚ್. ಕೃಷ್ಣಯ್ಯನವರಿಗೆ ನುಡಿನಮನ: ಚಾಲನೆ: ಎಂ. ನರಸಿಂಹ, ಅತಿಥಿಗಳು: ಎ.ಜೆ ಸದಾಶಿವ, ಹಂ.ಪ. ನಾಗರಾಜಯ್ಯ, ಜಿ. ರಾಮಕೃಷ್ಣ, ಬೈರಮಂಗಲ ರಾಮೇಗೌಡ, ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಉದಯಭಾನು ಕಲಾಸಂಘ, ಸ್ಥಳ: ಉದಯಭಾನು ಸಾಂಸ್ಕೃತಿಕ ಭವನ, ರಾಮಕೃಷ್ಣಮಠ ಬಡಾವಣೆ, ಕೆಂಪೇಗೌಡನಗರ, ಬೆಳಿಗ್ಗೆ 10.30

ಪದವಿ ಪ್ರದಾನ ಸಮಾರಂಭ: ಉದ್ಘಾಟನೆ: ಕೆ.ಸಿ. ರಾಮಮೂರ್ತಿ, ಘಟಿಕೋತ್ಸವ ಭಾಷಣ: ದೇಬಬ್ರತ ದಾಸ್, ಅಧ್ಯಕ್ಷತೆ: ಎಂ. ಪಿ ಶ್ಯಾಮ್, ಆಯೋಜನೆ: ಆರ್.ವಿ. ಕಾಲೇಜ್ ಆಫ್ ಎಂಜಿನಿಯರಿಂಗ್, ಸಂಜೆ 4

‘ಫೂಲನ್ ದೇವಿ’ ನಾಟಕ ಪ್ರದರ್ಶನ: ಪ್ರಸ್ತುತಿ: ರಂಗಪಯಣ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

‘ಹೋಂ ರೂಲು’ ನಾಟಕ ಪ್ರದರ್ಶನ: ರಚನೆ: ಟಿ.ಪಿ ಕೈಲಾಸಂ, ನಿರ್ದೇಶನ: ವೈ.ವಿ ಗುಂಡೂರಾವ್, ಆಯೋಜನೆ: ಅಂತರಂಗ, ಸ್ಥಳ: ಪ್ರಭಾತ್ ಕೆ.ಎಚ್ ಕಲಾಸೌಧ, ರಾಮಾಂಜನೇಯ ಗುಡ್ಡದ ಆವರಣ, ಹನುಮಂತನಗರ, ಸಂಜೆ 7

ರಾಜ್ಯ ಮಟ್ಟದ ಅಂತರ ಕಾಲೇಜು ಹಬ್ಬ: ಅತಿಥಿಗಳು: ಶೀತಲ್.ಎಂ ಹಿರೇಮಠ, ಅಧ್ಯಕ್ಷತೆ: ಬಿ.ಎಸ್ ಅರುಣ್ ಕುಮಾರ್, ಆಯೋಜನೆ: ವಿ.ವಿ.ಎನ್ ಡಿಗ್ರಿ ಕಾಲೇಜ್, ಸ್ಥಳ: ಮಾರುತಿ ಸಭಾಂಗಣ, ವಿಶ್ವೇಶ್ವರಪುರ, ಸಂಜೆ 4.30

ಸಂಗೀತ ಕಾರ್ಯಕ್ರಮ: ಗಾಯನ: ಸಾಯಿ ತೇಜಸ್ ಚಂದ್ರಶೇಖರ್, ಪಿಟೀಲು: ಎಂ.ಡಿ ಅರ್ಜುನ್, ಮೃದಂಗ: ಅದಮ್ಯ, ಘಟ: ಸುಮನಾ ಚಂದ್ರಶೇಖರ್, ಆಯೋಜನೆ: ಮಲ್ಲೇಶ್ವರ ಸಂಗೀತ ಸಭಾ ಟ್ರಸ್ಟ್, ಸ್ಥಳ: ಮಲ್ಲೇಶ್ವರ ಶ್ರೀರಾಮ ಮಂದಿರ, ಸಂಜೆ 6.15

ಶ್ರೀಧರ್ ಡಿ.ಎಸ್. ರಚಿತ ಭೃಗು ಶಾಪ ಯಕ್ಷಗಾನ ಪ್ರದರ್ಶನ: ದೇವೇಂದ್ರ: ಪೆರ್ಮುದೆ ಜಯಪ್ರಕಾಶ್ ಶೆಟ್ಟಿ, ಖ್ಯಾತಿ: ಶಶಿಕಾಂತ್ ಶೆಟ್ಟಿ ಕಾರ್ಕಳ, ತಮಾಸುರ: ಪ್ರಸನ್ನ ಶೆಟ್ಟಿ ಮಂದಾರ್ತಿ, ವಿಷ್ಣು: ರಂಗಭಟ್, ಭೃಗು: ಗಣೇಶ್ ಶೆಟ್ಟಿ ಕನ್ನಡಿಕಟ್ಟೆ, ದೇವದೂತ: ಮಹಾಬಲೇಶ್ವರ ಭಟ್ ಕ್ಯಾದಗಿ, ಆಯೋಜನೆ: ಗುರುಪ್ರಸಾದಿತ ಯಕ್ಷಗಾನ ಮಂಡಳಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ರಾತ್ರಿ.

ಪ್ರಯುಕ್ತಿ–2022 ವಾರ್ಷಿಕ ಸಮಾರಂಭ: ಅತಿಥಿಗಳು: ಬಾಲರಾಜ್ ತಂತ್ರಿ, ಶ್ರೀನಿವಾಸ್ ಕುಪ್ಪ, ಕರಿಷ್ಮಾ ಅಹುಜಾ, ಆಯೋಜನೆ: ಪ್ರಣವಾಂಜಲಿ, ಸ್ಥಳ: ಪರಂಪರಾ ಸಭಾಂಗಣ, ಕತ್ರಿಗುಪ್ಪೆ, ಬನಶಂಕರಿ ಮೂರನೇ ಹಂತ, ಸಂಜೆ 5.30

ರಾಜಧಾನಿಯಲ್ಲಿ ಜೋರು ಮಳೆ

ಪ್ರಜಾವಾಣಿ ವಾರ್ತೆ

ಸ್ಯಾಂಕಿ ರಸ್ತೆಯಲ್ಲಿ ಮಳೆಯ ವೇಳೆ ಕಂಡುಬಂದ ದೃಶ್ಯ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಗುರುವಾರ ತಡರಾತ್ರಿ ಹಾಗೂ ಶುಕ್ರವಾರ ಧಾರಾಕಾರ ಮಳೆ ಸುರಿದಿದ್ದು, ವಾತಾವರಣ ಮತ್ತಷ್ಟು ತಂಪಾಯಿತು. ತಡರಾತ್ರಿ ಆರಂಭವಾದ ಮಳೆಯು ಮುಂಜಾನೆ ತನಕ ನಿರಂತರವಾಗಿ ಸುರಿಯಿತು.

ಪೀಣ್ಯ, ಪೀಣ್ಯ ಕೈಗಾರಿಕಾ ವಲಯ, ಜಾಲಹಳ್ಳಿ, ಯಲಹಂಕ, ಕೆಂಗೇರಿ, ಕೆಂಗೇರಿ ಉಪನಗರ, ರಾಜಾಜಿನಗರ, ಹೆಬ್ಬಾಳ, ಮಲ್ಲೇಶ್ವರ, ಬ್ಯಾಟರಾಯನಪುರ, ಸದಾಶಿವನಗರ, ವಿಜಯನಗರ, ರಾಜರಾಜೇಶ್ವರಿ ನಗರ, ಟಿ.ದಾಸರಹಳ್ಳಿ, ಸುಂಕದಕಟ್ಟೆ, ಯಶವಂತಪುರ, ಹೆಗ್ಗನಹಳ್ಳಿ ಭಾಗದಲ್ಲಿ ಜೋರು ಮಳೆಯಾಗಿದೆ.

ಮುಂಜಾನೆ ತನಕ ಸುರಿದ ಮಳೆಯಿಂದ ಚರಂಡಿಗಳಲ್ಲಿ ಅಪಾರ ಪ್ರಮಾಣದ ನೀರು ಹರಿಯಿತು. ಕೆಳಸೇತುವೆಗಳಲ್ಲಿ ಎರಡು ಅಡಿಯಷ್ಟು ಮಳೆ ನೀರು ನಿಂತಿತ್ತು.

ಶುಕ್ರವಾರ ಮಧ್ಯಾಹ್ನ ಸಹ ಅಲ್ಲಲ್ಲಿ ಜೋರು ಮಳೆ ಸುರಿದಿದ್ದರ ಪರಿಣಾಮ ಜನರ ಓಡಾಟಕ್ಕೆ ಅಡಚಣೆ ಉಂಟಾಯಿತು. ಮಳೆಯಲ್ಲೇ ದ್ವಿಚಕ್ರ ವಾಹನ ಸವಾರರು ಸಾಗಿದರು. ಶಾಲಾ ವಿದ್ಯಾರ್ಥಿಗಳು ಮನೆಗೆ ತೆರಳಲು ಪರದಾಡಿದರು.

ತಾಯಿ ಮಡಿಲು ಸೇರಿದ ನಾಪತ್ತೆಯಾಗಿದ್ದ ಮಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸ್ಸಿನಲ್ಲಿ ನಾಪತ್ತೆಯಾಗಿದ್ದ 12 ವರ್ಷದ ಬಾಲಕಿಯನ್ನು ತ್ವರಿತ ಕಾರ್ಯಾಚರಣೆ ಮೂಲಕ ಪತ್ತೆ ಮಾಡಿರುವ ನಗರದ ಪೊಲೀಸರು, ಬಾಲಕಿಯನ್ನು ಸುರಕ್ಷಿತವಾಗಿ ತಾಯಿ ಮಡಿಲು ಸೇರಿಸಿದ್ದಾರೆ.

ಯಶವಂತಪುರ ಠಾಣೆ ಪೊಲೀಸರು ಮಾಡಿರುವ ಕೆಲಸಕ್ಕೆ ಸಾರ್ವಜನಿಕರು ಹಾಗೂ ಹಿರಿಯ ಅಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ಲಗ್ಗೆರೆಯಲ್ಲಿ ವಾಸವಿರುವ ಮಹಿಳೆಯೊಬ್ಬರು ತಮ್ಮ 12 ವರ್ಷದ ಮಗಳ ಜೊತೆಯಲ್ಲಿ ಆಗಸ್ಟ್ 24ರಂದು ತುಮಕೂರಿಗೆ ಹೊರಟಿದ್ದರು. ಮನೆ ಇರುವ ಸ್ಥಳದಿಂದ ಬಿಎಂಟಿಸಿ ಬಸ್ಸಿನಲ್ಲಿ ರಾಷ್ಟ್ರೀಯ ಹೆದ್ದಾರಿಯ ಗೊರಗುಂಟೆಪಾಳ್ಯದ ಸಿಎಂಟಿಐ ಜಂಕ್ಷನ್‌ಗೆ ಬಂದಿದ್ದರು. ಮಹಿಳೆಯೇ ಮೊದಲಿಗೆ ಬಸ್ಸಿನಿಂದ ಇಳಿದು ತಮ್ಮ ಲಗೇಜನ್ನು ರಸ್ತೆ ಪಕ್ಕದಲ್ಲಿರಿಸಲು ಹೋಗಿದ್ದರು. ಅದೇ ಸಂದರ್ಭದಲ್ಲೇ ಬಸ್ ಮುಂದಕ್ಕೆ ಹೋಗಿತ್ತು. ಬಾಲಕಿ ಸಹ ಬಸ್ಸಿನಲ್ಲೇ ಉಳಿದುಕೊಂಡಿದ್ದರು. ಬಸ್ ಹೋಗುವುದನ್ನು ಕಂಡ ಮಹಿಳೆ, ಅದರ ಹಿಂದೆಯೇ ಓಡಿದ್ದರು. ಮಹಿಳೆಯನ್ನು ಚಾಲಕ ಗಮನಿಸಿರಲಿಲ್ಲ. ಬಸ್ ಸಹ ನಿಲ್ಲದೇ ಸ್ಥಳದಿಂದ ಹೊರಟುಹೋಗಿತ್ತು. ಅನಕ್ಷರಸ್ಥರಾದ ಮಹಿಳೆಗೆ ಬಸ್ಸಿನ ನೋಂದಣಿ ಸಂಖ್ಯೆ ಸಹ ಗೊತ್ತಿರಲಿಲ್ಲ' ಎಂದು ಪೊಲೀಸರು ಹೇಳಿದರು.

ತಾಯಿ ಮನವಿಗೆ ಸ್ಪಂದಿಸಿದ ಪೊಲೀಸರು: ಮಗಳು ನಾಪತ್ತೆಯಾಗುತ್ತಿದ್ದಂತೆ ಮಹಿಳೆ ರಸ್ತೆಯಲ್ಲೇ ಕುಳಿತು ಅಳಲಾರಂಭಿಸಿದ್ದರು. ಸಿಎಂಟಿಐ ಜಂಕ್ಷನ್‌ನಲ್ಲಿ ಕರ್ತವ್ಯದಲ್ಲಿದ್ದ ಯಶವಂತಪುರ ಸಂಚಾರ ಪೊಲೀಸರು ಮಹಿಳೆ ಕಂಡು ವಿಚಾರಿಸಿದ್ದರು. ಬಾಲಕಿ ನಾಪತ್ತೆ ಬಗ್ಗೆ ತಿಳಿಯುತ್ತಿದ್ದಂತೆ ತಾಯಿ ಮನವಿಗೆ ಸ್ಪಂದಿಸಿ ಕಾರ್ಯಾಚರಣೆ ಆರಂಭಿಸಿದ್ದರು.

'ವೈರ್‌ಲೆಸ್‌ನಲ್ಲಿ ಸಂದೇಶ ರವಾನಿಸಿದ್ದ ಸಿಬ್ಬಂದಿ, ಬಿಎಂಟಿಸಿ ಬಸ್ ಪರಿಶೀಲನೆ ನಡೆಸುವಂತೆ ಹೇಳಿದ್ದರು. ಪ್ರಮುಖ ರಸ್ತೆಗಳಲ್ಲಿ ಕರ್ತವ್ಯದಲ್ಲಿದ್ದ ಸಿಬ್ಬಂದಿ, ಬಾಲಕಿಗಾಗಿ ಎಲ್ಲ ಬಸ್‌ಗಳಲ್ಲಿ ಹುಡುಕಾಡಿದರು. ಹಲವು ಗಂಟೆಗಳ ಬಳಿಕ ಬಾಲಕಿ ಪತ್ತೆಯಾಗಿದ್ದಳು. ನಂತರವೇ ಆಕೆಯನ್ನು ತಾಯಿ ಸುಪರ್ದಿಗೆ ಒಪ್ಪಿಸಿದ್ದಾರೆ' ಎಂದು ಪೊಲೀಸರು ಹೇಳಿದರು.

ಮುಖ್ಯಮಂತ್ರಿ ಬೊಮ್ಮಾಯಿ ಭರವಸೆ • ಕನ್ನಡ ಸಾಹಿತ್ಯ ಪರಿಷತ್ತಿನ ನವೀಕೃತ ಕಟ್ಟಡ ಉದ್ಘಾಟನೆ

'ಕನ್ನಡ ಶಾಲೆ ಮುಚ್ಚಲು ಬಿಡುವುದಿಲ್ಲ'

ಪ್ರಜಾವಾಣಿ ವಾರ್ತೆ

ಭುವನೇಶ್ವರಿಯ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಬಸವರಾಜ ಬೊಮ್ಮಾಯಿ ಅವರು ನವೀಕೃತ ಕಟ್ಟಡ ಉದ್ಘಾಟಿಸಿದರು. ದೊಡ್ಡರಂಗೇಗೌಡ, ಕಮಲಾ ಹಂಪನಾ, ಮಹೇಶ ಜೋಶಿ, ಆರ್. ಅಶೋಕ ಹಾಗೂ ಚಂದ್ರಶೇಖರ ಕಂಬಾರ ಇದ್ದಾರೆ – ಪ್ರಜಾವಾಣಿ ಚಿತ್ರ

ಬೆಂಗಳೂರು: 'ಕನ್ನಡ ಮಾಧ್ಯಮ ಶಾಲೆಗಳನ್ನು ಮುಚ್ಚುವುದಿಲ್ಲ. 5–10 ವಿದ್ಯಾರ್ಥಿಗಳಿರುವ ಶಾಲೆಗಳನ್ನು ಮುನ್ನಡೆಸುವ ಬಗ್ಗೆ ಸಾಹಿತ್ಯ ವಲಯ ನೀಡುವ ಸಲಹೆಗಳನ್ನು ಸ್ವೀಕಾರ ಮಾಡುತ್ತೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರ ಹಾಗೂ ಆವರಣದ ನವೀಕೃತ ಕಟ್ಟಡಗಳನ್ನು ಉದ್ಘಾಟಿಸಿ, ಮಾತನಾಡಿದರು. 'ಕನ್ನಡ ಭಾಷೆಗೆ ಇರುವ ಇತಿಹಾಸ ಭಾರತದ ಬೇರೆ ಯಾವ ಭಾಷೆಗೂ ಇಲ್ಲ. ನಮ್ಮಲ್ಲಿ ಅತ್ಯಂತ ಶ್ರೀಮಂತ ಸಾಹಿತ್ಯವಿದೆ. ಕನ್ನಡದ ಶ್ರೀಮಂತ ಪರಂಪರೆಯನ್ನು ಪರಿಷತ್ತು ಭವಿಷ್ಯಕ್ಕೆ ಕರೆದುಕೊಂಡು ಹೋಗುವ ಕೆಲಸ ಮಾಡಬೇಕು. ಕನ್ನಡ ಎನ್ನುವುದು ಅಭಿಮಾನ ಪ್ರದರ್ಶನದ ವಸ್ತುವಲ್ಲ. ಕನ್ನಡವು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸೀಮಿತವಾಗದೆ, ನಿತ್ಯ ನಿರಂತರವಾಗಬೇಕು' ಎಂದರು.

'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆಯು ವಿಧಾನಮಂಡಲದಲ್ಲಿ ಚರ್ಚೆಯಾಗುವ ಮುನ್ನ ಸಾರ್ವಜನಿಕವಾಗಿ ಚರ್ಚೆಯಾಗಬೇಕು. ಗೋವಾ, ಸೊಲ್ಲಾಪುರ, ಕಾಸರಗೋಡಿನಲ್ಲಿ ಕನ್ನಡ ಭವನವನ್ನು ವರ್ಷದಲ್ಲಿ ನಿರ್ಮಿಸಲಾಗುತ್ತದೆ' ಎಂದು ಹೇಳಿದರು.

ಕಂದಾಯ ಸಚಿವ ಆರ್. ಅಶೋಕ, 'ಕನ್ನಡದ ಹೋರಾಟಗಳಲ್ಲಿ ಪರಿಷತ್ತು ಮುಂಚೂಣಿಯಲ್ಲಿ ನಿಲ್ಲಬೇಕು. ಚಾಮರಾಜಪೇಟೆಯ ಈದ್ಗಾ ಮೈದಾನವು ಕಂದಾಯ ಇಲಾಖೆಯ ಆಸ್ತಿ ಎಂದು ನ್ಯಾಯಾಲಯ ತೀರ್ಪು ನೀಡಿದೆ. ಈ ಬಾರಿ ಚಾಮರಾಜಪೇಟೆ ಮೈದಾನದಲ್ಲಿಯೇ ಕನ್ನಡ ರಾಜ್ಯೋತ್ಸವ ಆಚರಿಸಲು ಸರ್ಕಾರ ಬದ್ಧವಾಗಿದೆ' ಎಂದು ಹೇಳಿದರು.

> **ಕನ್ನಡ ನುಡಿ ನಿತ್ಯ ಬೆಳವಣಿಗೆ ಹೊಂದುವ ಹಾಗೆ ನೋಡಿಕೊಳ್ಳುವ ತಾಕತ್ತು ಕನ್ನಡ ಸಾಹಿತ್ಯ ಪರಿಷತ್ತಿಗೆ ಇದೆ. ಇಡೀ ದೇಶದಲ್ಲಿ ಇಂತಹ ಸಂಸ್ಥೆಯಿಲ್ಲ**
> **ಚಂದ್ರಶೇಖರ ಕಂಬಾರ**
> ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ

> **ಅನೇಕ ಕನ್ನಡಿಗರು ತಮಗೂ ಕನ್ನಡ ಸಾಹಿತ್ಯ ಪರಿಷತ್ತಿಗೂ ಯಾವುದೇ ಸಂಬಂಧ ಇಲ್ಲ ಎನ್ನುವಂತೆ ವರ್ತಿಸುತ್ತಾರೆ. ಹಾಗೆ ಮಾಡಿದರೆ ಕನ್ನಡ ಭಾಷೆಗೆ ನಾವು ಮಾಡುವ ಅನ್ಯಾಯ**
> **ದೊಡ್ಡರಂಗೇಗೌಡ,** ಸಾಹಿತಿ

₹10 ಕೋಟಿ ಧನಸಹಾಯ: ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, 'ಕನ್ನಡ, ಕನ್ನಡಿಗ ಮತ್ತು ಕರ್ನಾಟಕದ ಹಿತದೃಷ್ಟಿಯಿಂದ ನ್ಯಾ.ಎಸ್. ಆರ್. ಬನ್ನೂರಮಠ ನೇತೃತ್ವದಲ್ಲಿ ತಯಾರಿಸಿರುವ 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆ'ಗೆ ಕಾನೂನು ರೂಪ ನೀಡಬೇಕು. ಚಾಮರಾಜಪೇಟೆಯ ಮಿಂಟೊ ವೃತ್ತದಿಂದ ಮಕ್ಕಳ ಕೂಟದವರೆಗಿನ ರಸ್ತೆಯನ್ನು 'ಕನ್ನಡ ಸಾಹಿತ್ಯ ಪರಿಷತ್ತಿ'ನ ರಸ್ತೆ ಎಂದು ಮರುನಾಮಕರಣ ಮಾಡಿ, ಸಾಹಿತ್ಯಿಕ ವಾತಾವರಣ ನಿರ್ಮಿಸಲು ಅನುವು ಮಾಡಿಕೊಡಬೇಕು. ಈ ರಸ್ತೆಯಲ್ಲಿ ವಾಹನ ಸಂಚಾರ ನಿಷೇಧಿಸಬೇಕು. ಪರಿಷತ್ತಿನ ಕಟ್ಟಡಗಳ ನವೀಕರಣ ಸೇರಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸರ್ಕಾರವು ₹10 ಕೋಟಿ ಧನಸಹಾಯ ನೀಡಬೇಕು' ಎಂದು ಮನವಿ ಮಾಡಿಕೊಂಡರು.

'ಶ್ರೀ ಕೃಷ್ಣರಾಜ ಪರಿಷನ್ಮಂದಿರ ಎಂಬ ಸಂಸ್ಕೃತ ಪದವನ್ನು 'ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರ' ಎಂದು ಬದಲಾಯಿಸಲಾಗಿದೆ. ಐದು ವರ್ಷಗಳಲ್ಲಿ ಒಂದು ಕೋಟಿ ಸದಸ್ಯತ್ವದ ಗುರಿ ಹಾಕಿಕೊಳ್ಳಲಾಗಿದೆ. ಇಷ್ಟು ಸದಸ್ಯತ್ವದಿಂದ ₹ 250 ಕೋಟಿ ಹಣ ಸಂಗ್ರಹವಾಗುತ್ತದೆ. ಇದನ್ನು ನಿಶ್ಚಿತ ಠೇವಣಿ ಇರಿಸಿದರೆ ಸರ್ಕಾರದ ಮೇಲಿನ ಅವಲಂಬನೆ ತಪ್ಪಲಿದೆ' ಎಂದರು.

'ನಾಡಗೀತೆ: ಅನಂತಸ್ವಾಮಿ ಧಾಟಿ ಅಂತಿಮಗೊಳಿಸಿ'

'ನಾಡಗೀತೆಯ ಧಾಟಿಗೆ ಸಂಬಂಧಿಸಿದ ಗೊಂದಲವನ್ನು ಸರ್ಕಾರ ನಿವಾರಿಸಬೇಕು. ಮೈಸೂರು ಅನಂತಸ್ವಾಮಿ ಅವರು ಸಂಯೋಜಿಸಿದ ರಾಗವನ್ನು ಉಳಿಸಿಕೊಳ್ಳಬೇಕು. ಶ್ರೀಲಂಕಾದ ರಾಷ್ಟ್ರಗೀತೆ ಹೊರತುಪಡಿಸಿದರೆ, ಉಳಿದ ಎಲ್ಲ ರಾಷ್ಟ್ರಗೀತೆಗಳು ಒಂದು ನಿಮಿಷದಲ್ಲಿ ಮುಗಿಯುತ್ತವೆ. ನಮ್ಮ ನಾಡಗೀತೆಯ ವಿಚಾರವಾಗಿ ಮೊದಲ ಚರಣ ಮತ್ತು 'ಸರ್ವಜನಾಂಗದ ಶಾಂತಿಯ ತೋಟ' ಚರಣವನ್ನು ಇಟ್ಟುಕೊಂಡು ಹಾಡಬೇಕು. ಅನಂತಸ್ವಾಮಿ ಅವರ ಸ್ವರ ಸಂಯೋಜನೆ ಉಳಿಸಿಕೊಳ್ಳಬೇಕು' ಎಂದು ಸಾಹಿತಿ ಕಮಲಾ ಹಂಪನಾ ಆಗ್ರಹಿಸಿದರು.

'ಚಿಕ್ಕಪೇಟೆಯಲ್ಲಿರುವ ಸರ್ಕಾರಿ ಶಾಲೆಯನ್ನು ಸರ್ಕಾರ ನವೀಕರಣ ಮಾಡಬೇಕು' ಎಂದು ಒತ್ತಾಯಿಸಿದರು.

ನ.11ರಿಂದ ಸಾಹಿತ್ಯ ಸಮ್ಮೇಳನ

'86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಹಾವೇರಿಯಲ್ಲಿ ನ.11, 12 ಹಾಗೂ 13 ರಂದು ನಡೆಯಲಿದೆ. ಸಮ್ಮೇಳನ ನಡೆಯುವ ಮೂರು ದಿನವೂ ಬೇರೆ ಬೇರೆ ಕಾರಣದಿಂದ ಸರ್ಕಾರಿ ರಜೆ ಇದ್ದು, ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು' ಎಂದು ಬಸವರಾಜ ಬೊಮ್ಮಾಯಿ ಮನವಿ ಮಾಡಿಕೊಂಡರು.

ಎರಡು ತಿಂಗಳು ತನಿಖೆ • ಹೆಲ್ಮೆಟ್, ಟೀಶರ್ಟ್ ನೀಡಿದ ಸುಳಿವು • ಚಿನ್ನಾಭರಣ, ಕಾರು ವಶ

51 ಚಿನ್ನದ ಸರ ಕದ್ದಿದ್ದ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಪುಟ್ಟೇನಹಳ್ಳಿ ಪೊಲೀಸರು ಆರೋಪಿಯಿಂದ ಜಪ್ತಿ ಮಾಡಿರುವ ಚಿನ್ನಾಭರಣ

ಅಪರಾಧ ಸುದ್ದಿ

ಬೆಂಗಳೂರು: ನಗರದ 32 ಠಾಣೆಗಳ ವ್ಯಾಪ್ತಿಯಲ್ಲಿ 51 ಮಹಿಳೆಯರ ಚಿನ್ನದ ಸರ ಕಳವು ಮಾಡಿದ್ದ ಆರೋಪಿ ಸಂತೋಷ್ ಎಂಬುವರನ್ನು ಪುಟ್ಟೇನಹಳ್ಳಿ ಪೊಲೀಸರು ಬಂಧಿಸಿದ್ದಾರೆ.

'ತಮಿಳುನಾಡಿನ ಸಂತೋಷ್, ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ. ಕೆಲ ವರ್ಷಗಳ ಹಿಂದೆ ಬೆಂಗಳೂರಿಗೆ ಬಂದು ಜೆ.ಪಿ.ನಗರದಲ್ಲಿ ವಾಸವಿದ್ದ. ಈತನನ್ನು ಬಂಧಿಸಿ ₹ 1.50 ಕೋಟಿ ಮೌಲ್ಯದ 2 ಕೆ.ಜಿ. 510 ಗ್ರಾಂ ಚಿನ್ನಾಭರಣ, ಎರಡು ದ್ವಿಚಕ್ರ ವಾಹನ ಹಾಗೂ 2 ಕಾರು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ತಿಳಿಸಿದರು.

'ಆರೋಪಿ ಸಂತೋಷ್ ಜೊತೆ ಕೃತ್ಯಕ್ಕೆ ಸಹಕರಿಸುತ್ತಿದ್ದ ಹಾಗೂ ಚಿನ್ನಾಭರಣ ಮಾರಲು ಸಹಾಯ ಮಾಡುತ್ತಿದ್ದ ಇನ್ನೊಬ್ಬ ಆರೋಪಿ ರವಿ ಎಂಬಾತನನ್ನೂ ಬಂಧಿಸಲಾಗಿದೆ' ಎಂದು ಹೇಳಿದರು.

'ಸರಗಳವು ಮಾಡಲೆಂದೇ ಆರೋಪಿ ದ್ವಿಚಕ್ರ ವಾಹನ ಕದಿಯುತ್ತಿದ್ದ. ಅವುಗಳ ಬಣ್ಣ ಹಾಗೂ ನೋಂದಣಿ ಫಲಕವನ್ನು ಬದಲಾಯಿಸುತ್ತಿದ್ದ. ನಗರದ ಸುತ್ತಾಡಿ, ರಸ್ತೆಯಲ್ಲಿ ಒಂಟಿಯಾಗಿ ನಡೆದುಕೊಂಡು ಹೋಗುವ ಮಹಿಳೆಯರ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗುತ್ತಿದ್ದ' ಎಂದೂ ತಿಳಿಸಿದರು.

ಹೆಲ್ಮೆಟ್, ಟೀಶರ್ಟ್ ಸುಳಿವು: 'ಮನೆಯಿಂದ ಹೊರಡುವಾಗಲೇ ಆರೋಪಿ ಹೆಲ್ಮೆಟ್ ಧರಿಸುತ್ತಿದ್ದ. ಮಾರ್ಗಮಧ್ಯೆ ಎಲ್ಲಿಯೂ ಹೆಲ್ಮೆಟ್ ತೆಗೆಯುತ್ತಿರಲಿಲ್ಲ. ಚಿನ್ನದ ಸರ ಕಳ್ಳತನ ಮಾಡಿಕೊಂಡು ಮನೆಗೆ ವಾಪಸು ಬಂದ ನಂತರವೇ ಹೆಲ್ಮೆಟ್ ತೆಗೆಯುತ್ತಿದ್ದ. ಹೀಗಾಗಿ, ಈತನ ಬಗ್ಗೆ ಸುಳಿವು ಸಿಕ್ಕಿರಲಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮೈಕೊ ಲೇಔಟ್‌ನಲ್ಲಿ ಮಹಿಳೆಯೊಬ್ಬರ 40 ಗ್ರಾಂ ಚಿನ್ನದ ಸರವನ್ನು ಆರೋಪಿ ಕಿತ್ತೊಯ್ದಿದ್ದ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಎರಡು ತಿಂಗಳಿನಿಂದ ನಿರಂತರವಾಗಿ ತನಿಖೆ ನಡೆಸುತ್ತಿದ್ದರು. ಹೆಲ್ಮೆಟ್ ಹಾಗೂ ಟೀಶರ್ಟ್ ಸುಳಿವು ಆಧರಿಸಿ ಕೊತ್ತನೂರು ದಿಣ್ಣೆ ಬಳಿ ಆರೋಪಿಯನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ' ಎಂದೂ ತಿಳಿಸಿವೆ.

100ಕ್ಕೂ ಹೆಚ್ಚು ಕ್ಯಾಮೆರಾ ಪರಿಶೀಲನೆ: 'ಆರೋಪಿ ಕೃತ್ಯ ಎಸಗಿದ್ದ ಸ್ಥಳ ಹಾಗೂ ಅಕ್ಕ–ಪಕ್ಕದ ರಸ್ತೆಗಳಲ್ಲಿದ್ದ 100ಕ್ಕೂ ಹೆಚ್ಚು ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಿ ಆರೋಪಿ ಸುಳಿವು ಪತ್ತೆ ಮಾಡಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬ್ಯಾಡರಹಳ್ಳಿ, ಮಹಾಲಕ್ಷ್ಮಿ ಲೇಔಟ್, ವೈಯಾಲಿಕಾವಲ್, ಸಂಪಂಗಿರಾಮನಗರ, ವಿಜಯನಗರ, ಮಲ್ಲೇಶ್ವರ, ಮಾರತ್ತಹಳ್ಳಿ, ಹನುಮಂತನಗರ, ಸುಬ್ರಮಣ್ಯಪುರ, ದೇವನಹಳ್ಳಿ, ವಿದ್ಯಾರಣ್ಯಪುರ, ಮೈಕೊ ಲೇಔಟ್, ಹೆಣ್ಣೂರು, ಕೊತ್ತನೂರು, ಸಂಪಿಗೆಹಳ್ಳಿ, ಹುಳಿಮಾವು, ಯಲಹಂಕ ನ್ಯೂ ಟೌನ್, ಜ್ಞಾನಭಾರತಿ, ಹಲಸೂರು, ಕೆ.ಆರ್. ಪುರ, ಬಾಗಲಗುಂಟೆ ಸೇರಿದಂತೆ 32 ಠಾಣೆಗಳ ವ್ಯಾಪ್ತಿಯಲ್ಲಿ 51 ಚಿನ್ನದ ಸರಗಳನ್ನು ಆರೋಪಿ ಕದ್ದಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ತಿಳಿಸಿವೆ.

ಪಾರಿವಾಳ ಪತ್ರಿಕೆ ಸಂಪಾದಕ ಜೈಲಿಗೆ

ಬೆಂಗಳೂರು: ಐಎಎಸ್ ಅಧಿಕಾರಿ ಹರೀಶ್ ಗೌಡ ಬಗ್ಗೆ ಅವಹೇಳನಕಾರಿ ವರದಿ ಪ್ರಕಟಿಸಿದ್ದ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿದ್ದ 'ಪಾರಿವಾಳ' ಪಾಕ್ಷಿಕ ಪತ್ರಿಕೆಯ ಸಂಪಾದಕ ಅತ್ತಿಗುಪ್ಪೆ ರವಿಕುಮಾರ್ ಅವರನ್ನು ಉಪ್ಪಾರಪೇಟೆ ಪೊಲೀಸರು ಬಂಧಿಸಿ, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಿದ್ದಾರೆ.

'ಪಿಯು ಪರೀಕ್ಷಾ ಮಂಡಳಿ ಅಧಿಕಾರಿಯಾಗಿದ್ದ ಹರೀಶ್ ಅವರ ಬಗ್ಗೆ ಪತ್ರಿಕೆಯಲ್ಲಿ 2000ರಲ್ಲಿ ವರದಿ ಪ್ರಕಟಿಸಲಾಗಿತ್ತು. ಅದನ್ನು ಪ್ರಶ್ನಿಸಿ ಹರೀಶ್ ನ್ಯಾಯಾಲಯದಲ್ಲಿ ಖಾಸಗಿ ಮೊಕದ್ದಮೆ ಹೂಡಿದ್ದರು. 2002ರಲ್ಲಿ ತೀರ್ಪು ಪ್ರಕಟಿಸಿದ್ದ ನ್ಯಾಯಾಲಯ, ರವಿಕುಮಾರ್ ಅವರಿಗೆ 1 ವರ್ಷ 2 ತಿಂಗಳು ಜೈಲು ಶಿಕ್ಷೆ ವಿಧಿಸಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ತೀರ್ಪು ಮರುಪರಿಶೀಲಿಸುವಂತೆ ಕೋರಿ ರವಿಕುಮಾರ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ಹೈಕೋರ್ಟ್, ಸಿಎಂಎಂ ನ್ಯಾಯಾಲಯದಲ್ಲೇ ಮೇಲ್ಮನವಿ ಸಲ್ಲಿಸುವಂತೆ ಸೂಚಿಸಿತ್ತು. ಮರು ವಿಚಾರಣೆ ನಡೆಸಿದ್ದ ನ್ಯಾಯಾಲಯ, 6 ತಿಂಗಳು ಶಿಕ್ಷೆ ವಿಧಿಸಿ 2017ರಲ್ಲಿ ಪುನಃ ಶಿಕ್ಷೆ ವಿಧಿಸಿತ್ತು' ಎಂದು ತಿಳಿಸಿವೆ.

'ಇದನ್ನು ಪ್ರಶ್ನಿಸಿದ್ದ ದೂರುದಾರ ಹರೀಶ್, ಶಿಕ್ಷೆ ಪ್ರಮಾಣ ಹೆಚ್ಚಿಸುವಂತೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಇದರ ವಿಚಾರಣೆ ಮುಗಿದಿದ್ದು, 6 ತಿಂಗಳ ಶಿಕ್ಷೆಯನ್ನೇ ನ್ಯಾಯಾಲಯ ಕಾಯಂಗೊಳಿಸಿದೆ. ಇದೇ ಕಾರಣಕ್ಕೆ ರವಿಕುಮಾರ್ ಅವರನ್ನು ಬಂಧಿಸಿರುವ ಉಪ್ಪಾರಪೇಟೆ ಪೊಲೀಸರು, ಶಿಕ್ಷೆ ಅನುಭವಿಸಲೆಂದು ಕಾರಾಗೃಹಕ್ಕೆ ಬಿಟ್ಟು ಬಂದಿದ್ದಾರೆ' ಎಂದೂ ಮೂಲಗಳು ಹೇಳಿವೆ.

ಬಿಡಿಸಿಸಿ ಬ್ಯಾಂಕ್ ₹7.74 ಕೋಟಿ ಲಾಭ

ಬೆಂಗಳೂರು: ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ಬಿಡಿಸಿಸಿ ಬ್ಯಾಂಕ್) ಈ ಸಾಲಿನಲ್ಲಿ ₹7.74 ಕೋಟಿ ಲಾಭ ಗಳಿಸಿದೆ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ಬಿಡಿಸಿಸಿ ಬ್ಯಾಂಕ್‌ನ ಪ್ರಗತಿ ಪರಿಶೀಲನೆ ನಡೆಸಿ ಮಾತನಾಡಿದ ಅವರು, 'ಸರ್ಕಾರ ನಿಗದಿ ಮಾಡಿರುವ ಸಾಲದ ಗುರಿಯನ್ನು ತಲುಪಬೇಕು. ಸಾಲದ ವಿತರಣೆಯಲ್ಲಿ ಯಾವುದೇ ತಾರತಮ್ಯ ಮಾಡಬಾರದು. ಅರ್ಹ ರೈತರಿಗೆ ಶೂನ್ಯ ಬಡ್ಡಿದರದಲ್ಲೇ ಸಾಲ ನೀಡಬೇಕು' ಎಂದು ಸಲಹೆ ನೀಡಿದರು.

ಸಭೆಯಲ್ಲಿ ಬ್ಯಾಂಕ್ ಅಧ್ಯಕ್ಷರಾದ ಡಿ.ಹನುಮಂತಯ್ಯ, ಉಪಾಧ್ಯಕ್ಷರಾದ ಎಂ.ಸಿ.ಪಟ್ಟಾಭಿರಾಮಯ್ಯ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪುಂಡಲೀಕ ಎಲ್. ಸಾಧುರೆ ಸೇರಿ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರು ಇದ್ದರು.

ರಸ್ತೆ ಗುಂಡಿಯಿಂದಾಗಿ ಉರುಳಿಬಿದ್ದ ದ್ವಿಚಕ್ರ ವಾಹನ: ಯುವತಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಸ್ತೂರಿನಗರದ ಮೇಲ್ಸೇತುವೆಯಲ್ಲಿ ಗುಂಡಿಯಿಂದಾಗಿ ದ್ವಿಚಕ್ರ ವಾಹನವೊಂದು ಉರುಳಿಬಿದ್ದು ಯುವತಿ ಗಾಯಗೊಂಡಿದ್ದು, ಅಪಘಾತದ ದೃಶ್ಯ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ನಗರದ ಬಹುತೇಕ ರಸ್ತೆಗಳಲ್ಲಿ ಗುಂಡಿಗಳು ಹೆಚ್ಚಾಗಿದ್ದು, ಇದರಿಂದಾಗಿ ಮೇಲಿಂದ ಮೇಲೆ ಅಪಘಾತಗಳು ಸಂಭವಿಸುತ್ತಿವೆ. ಗುಂಡಿ ಮುಚ್ಚಲು ಕ್ರಮ ಕೈಗೊಳ್ಳಬೇಕಾದ ಬಿಬಿಎಂಪಿ ಸಹ ಮೌನವಾಗಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

'ಯುವತಿಯೊಬ್ಬರು ದ್ವಿಚಕ್ರ ವಾಹನ ಚಲಾಯಿಸಿಕೊಂಡು ಕಸ್ತೂರಿನಗರದ ಮೇಲ್ಸೇತುವೆಯಲ್ಲಿ ಹೊರಟಿದ್ದರು. ಮಾರ್ಗಮಧ್ಯೆ ದೊಡ್ಡ ಗುಂಡಿ ಬಿದ್ದಿದೆ. ಅದನ್ನು ಯುವತಿ ಗಮನಿಸಿರಲಿಲ್ಲ. ಕಾರಿನ ಹಿಂದೆ ಹೊರಟಿದ್ದ ಯುವತಿಯ ದ್ವಿಚಕ್ರ ವಾಹನ, ಗುಂಡಿಯಲ್ಲಿ ಇಳಿದು ಉರುಳಿಬಿದ್ದಿತ್ತು' ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

'ದ್ವಿಚಕ್ರ ವಾಹನ ಸಮೇತ ಯುವತಿ ಉರುಳಿಬಿದ್ದ ದೃಶ್ಯ, ರಸ್ತೆಯಲ್ಲಿ ಹೊರಟಿದ್ದ ಕಾರಿನ ಡ್ಯಾಶ್‌ಬೋರ್ಡ್ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಇದೇ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಡಲಾಗಿದೆ' ಎಂದು ತಿಳಿಸಿದರು.

'ಯುವತಿಗೆ ಸಣ್ಣಪುಟ್ಟ ಗಾಯವಾಗಿದೆ. ರಸ್ತೆಯಲ್ಲಿ ಹೊರಟಿದ್ದ ಸಾರ್ವಜನಿಕರೇ, ಯುವತಿಯನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿ ಮನೆಗೆ ಕಳುಹಿಸಿದ್ದಾರೆ. ಯುವತಿಯ ಹೆಸರು ಗೊತ್ತಾಗಿಲ್ಲ' ಎಂದು ಹೇಳಿದರು.

ಇತ್ತೀಚೆಗಷ್ಟೇ ಸುಂಕದಕಟ್ಟೆ ಬಳಿ ರಸ್ತೆಗುಂಡಿಯಿಂದ ಅಪಘಾತ ಸಂಭವಿಸಿ ಬೈಕ್ ಸವಾರ ಸುಪ್ರೀತ್‌ರಾಜ್ (39) ಮೃತಪಟ್ಟಿದ್ದರು. ಇವರ ಸಾವಿಗೆ ಬಿಬಿಎಂಪಿ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣವೆಂದು ಸಹೋದರ ಪೊಲೀಸರಿಗೆ ದೂರು ನೀಡಿದ್ದರು.

ನಭಕ್ಕೆ ನೆಗೆಯಲಿದೆ 'ಪುನೀತ್' ಉಪಗ್ರಹ

ಬೆಂಗಳೂರು: ಸ್ವಾತಂತ್ರ್ಯಅಮೃತ ಮಹೋತ್ಸವದ ನೆನಪಿಗಾಗಿ ಸರ್ಕಾರಿ ಶಾಲಾ ವಿದ್ಯಾರ್ಥಿಗಳೇ ನಿರ್ಮಿಸಿದ 'ಪುನೀತ್' ಉಪಗ್ರಹವನ್ನು ನ.15ರಿಂದ ಡಿ.31ರ ಮಧ್ಯೆ ಆಂಧ್ರಪ್ರದೇಶದ ಶ್ರೀಹರಿಕೋಟಾದಿಂದ ಉಡಾವಣೆ ಮಾಡಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಹೇಳಿದರು.

ವಿದ್ಯಾರ್ಥಿ ನಿರ್ಮಿತ ಉಪಗ್ರಹ ಯೋಜನೆ ಕುರಿತು ವಿಕಾಸಸೌಧದಲ್ಲಿ ಗುರುವಾರ ನಡೆಸಿದ ಸಭೆಯಲ್ಲಿ ಅವರು ಮಾತನಾಡಿದರು.

ಶಾಲಾ ಮಕ್ಕಳಲ್ಲಿ ವೈಜ್ಞಾನಿಕ ಕುತೂಹಲ, ಆಸಕ್ತಿ ಬೆಳೆಸಲು ಪ್ರೌಢಶಾಲಾ ಮತ್ತು ಪದವಿಪೂರ್ವ ವಿದ್ಯಾರ್ಥಿಗಳಿಗೆ ಜಿಲ್ಲೆ, ವಿಭಾಗೀಯ, ರಾಜ್ಯ ಮಟ್ಟದ ಸ್ಪರ್ಧೆಗಳನ್ನು ನಡೆಸಲಾಗುತ್ತಿದೆ. ಅಂತಿಮವಾಗಿ 1 ಸಾವಿರ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಉಪಗ್ರಹ ಉಡಾವಣೆ ಕಾರ್ಯಕ್ರಮಕ್ಕೆ ಕರೆದುಕೊಂಡು ಹೋಗಲಾಗುವುದು ಎಂದು ಮಾಹಿತಿ ನೀಡಿದರು.

ಬೆಂಗಳೂರು ವಲಯದ ಶಾಲೆಗಳ ವಿದ್ಯಾರ್ಥಿಗಳು 'ಕೆಜಿಎಸ್ 3 ಸ್ಯಾಟ್' ಉಪಗ್ರಹವನ್ನು ₹1.90 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸುತ್ತಿದ್ದಾರೆ. ಮಲ್ಲೇಶ್ವರ ಸರ್ಕಾರಿ ಪ್ರೌಢಶಾಲೆಯಲ್ಲಿ ಸೂಕ್ತ ವ್ಯವಸ್ಥೆ ಮಾಡಲಾಗಿದೆ ಎಂದರು.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ವ್ಯವಸ್ಥಾಪಕ ನಿರ್ದೇಶಕ ಬಸವರಾಜ ಇದ್ದರು.

ಸ್ಪರ್ಧೆಗೆ ನೋಂದಣಿ: ಸೆ. 10 ಕೊನೆಯ ದಿನ

ಸ್ಪರ್ಧೆಯ ಭಾಗವಾಗಿ ಪ್ರೌಢಶಾಲಾ ಮಕ್ಕಳಿಗೆ ಆನ್‌ಲೈನ್ ರಸಪ್ರಶ್ನೆ, ಸ್ಥಳದಲ್ಲೇ ಚಿತ್ರ ಬಿಡಿಸುವ ಸ್ಪರ್ಧೆ, ಪಿಯು ವಿದ್ಯಾರ್ಥಿಗಳಿಗೆ ಪ್ರಬಂಧ ರಚನೆ, ಖಗೋಳ ವಿಜ್ಞಾನಕ್ಕೆ ಪೋಸ್ಟರ್ ರಚನೆ ಇರುತ್ತದೆ. ನೋಂದಣಿಗೆ ಸೆ.10 ಕೊನೆಯ ದಿನ ಎಂದು ಸಚಿವ ಅಶ್ವತ್ಥ ನಾರಾಯಣ ಹೇಳಿದರು.

ಸೆ.19ರಿಂದ 23ರವರೆಗೆ ಜಿಲ್ಲಾ ಮಟ್ಟದ ಕ್ವಿಜ್, ಸೆ.26ರಿಂದ 30ರವರೆಗೆ ವಿಜ್ಞಾನ ಚಿತ್ರ ಕಲೆ ಸ್ಪರ್ಧೆ, ಅ.3ರಿಂದ 7ರವರೆಗೆ ವಿಭಾಗ ಮಟ್ಟದ ಪೋಸ್ಟರ್ ಸ್ಪರ್ಧೆ, ಅ.17ರಿಂದ 19ರವರೆಗೆ ರಾಜ್ಯ ಮಟ್ಟದ ಕ್ವಿಜ್, ಅಕ್ಟೋಬರ್ ಕೊನೆಯ ವಾರ ಫಲಿತಾಂಶ ಪ್ರಕಟಣೆ ಎಂದು ತಿಳಿಸಿದರು.

ಆರ್‌ಎಸ್‌ಎಸ್ ಬೈಠಕ್ ಆರಂಭ

ಪುತ್ತೂರು: ಇಲ್ಲಿನ ವಿವೇಕಾನಂದ ಪದವಿ ಕಾಲೇಜಿನಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಕರ್ನಾಟಕ ದಕ್ಷಿಣ ಪ್ರಾಂತದ ಬೈಠಕ್ ಶುಕ್ರವಾರದಿಂದ ಆರಂಭವಾಗಿದ್ದು, ಆ.28ರವರೆಗೆ ನಡೆಯಲಿದೆ.

ಆರ್‌ಎಸ್‌ಎಸ್ ಸಹ ಸರಕಾರ್ಯವಾಹ ಮುಕುಂದ್ ನೇತೃತ್ವದಲ್ಲಿ ಬೈಠಕ್ ನಡೆಯುತ್ತಿದ್ದು, ಚುನಾವಣೆ ಸಮೀಪಿಸುತ್ತಿರುವಾಗ ನಡೆಯುವ ಈ ಬೈಠಕ್ ಮಹತ್ವ ಪಡೆದುಕೊಂಡಿದೆ. ಆರ್‌ಎಸ್‌ಎಸ್ ಕ್ಷೇತ್ರೀಯ ಸಂಘ ಚಾಲಕ ವಿ.ನಾಗರಾಜ್, ಕ್ಷೇತ್ರೀಯ ಪ್ರಚಾರಕ ಸುಧೀರ್, ಕ್ಷೇತ್ರೀಯ ಕಾರ್ಯವಾಹ ತಿಪ್ಪೇಸ್ವಾಮಿ ಮೊದಲಾದವರು ಭಾಗಿಯಾಗಿದ್ದಾರೆ. ಅಖಿಲ ಭಾರತ ಪ್ರತಿನಿಧಿ ಸಭಾದ ಪ್ರಮುಖರು ಸೇರಿ 800 ಮಂದಿ ಅಪೇಕ್ಷಿತರು ಬಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ರವಿಕುಮಾರ್ ಅವರಿಗೆ ವಿಶೇಷ ಆಹ್ವಾನ ನೀಡಲಾಗಿದೆ.

₹100 ಕೋಟಿ ಮೌಲ್ಯದ ಹೆರಾಯಿನ್ ಜಪ್ತಿ

ಪ್ರಜಾವಾಣಿ ವಾರ್ತೆ

ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಜಪ್ತಿ ಮಾಡಲಾದ ಹೆರಾಯಿನ್ ಡ್ರಗ್ಸ್ ಪೊಟ್ಟಣ

ಬೆಂಗಳೂರು: ವಿಮಾನದ ಮೂಲಕ ಡ್ರಗ್ಸ್ ಸಾಗಣೆ ಮಾಡುತ್ತಿದ್ದ ಅಂತರರಾಷ್ಟ್ರೀಯ ಜಾಲ ಭೇದಿಸಿರುವ ಕೇಂದ್ರ ಕಂದಾಯ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು, ₹ 100 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

'ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದೆಹಲಿಗೆ ಡ್ರಗ್ಸ್ ಸಾಗಣೆ ಮಾಡಲಾಗುತ್ತಿತ್ತು. ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿ 14 ಕೆ.ಜಿ ಪರಿಶುದ್ಧ ಹೆರಾಯಿನ್ ಜಪ್ತಿ ಮಾಡಲಾಗಿದೆ' ಎಂದು ಡಿಆರ್‌ಐ ಮೂಲಗಳು ಹೇಳಿವೆ.

'ಡ್ರಗ್ಸ್ ಸಾಗಿಸುತ್ತಿದ್ದ ಆರೋಪದಡಿ ತೆಲಂಗಾಣದ 45 ವರ್ಷದ ವ್ಯಕ್ತಿಯೊಬ್ಬನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಈ ಕೃತ್ಯದ ಹಿಂದೆ ಅಂತರರಾಷ್ಟ್ರೀಯ ಜಾಲದ ಕೈವಾಡವಿರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ' ಎಂದೂ ತಿಳಿಸಿವೆ.

'ಪರಿಶುದ್ಧ ಹೆರಾಯಿನ್ ಮಾದಕ ವಸ್ತುವನ್ನು ಇತರೆ ಡ್ರಗ್ಸ್‌ಗಳ ಜೊತೆ ಸೇರಿಸಿ ಮಾರಾಟ ಮಾಡಲಾಗುತ್ತದೆ. ಇದಕ್ಕೆ ಸಾವಿರದಿಂದ ಲಕ್ಷದವರೆಗೆ ಬೆಲೆ ಇದೆ. ಕಪ್ಪು ಬಣ್ಣದ ಪ್ಲಾಸ್ಟಿಕ್ ಒಳಗೆ ಹೆರಾಯಿನ್ ಬಚ್ಚಿಟ್ಟು, ಕಂದು ಬಣ್ಣದ ರಟ್ಟಿನ ಹೊದಿಕೆ ಹಾಕಲಾಗಿತ್ತು. ಈ ಪೊಟ್ಟಣವನ್ನು ಸೂಕ್ಷ್ಮ ವಸ್ತುವೆಂದು ಹೇಳಿಕೊಂಡು ವಿಮಾನ ಮೂಲಕ ಸಾಗಣೆ ಮಾಡಲು ಆರೋಪಿ ಹೊಂಚು ಹಾಕಿದ್ದ. ಡ್ರಗ್ಸ್ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿದಾಗ ಆರೋಪಿ ಸಿಕ್ಕಿಬಿದ್ದ. ಎರಡು ಪೊಟ್ಟಣಗಳಲ್ಲಿ ಡ್ರಗ್ಸ್ ಇತ್ತು' ಎಂದು ಮೂಲಗಳು ಹೇಳಿವೆ.

ಪುಣೆ ರೇಸ್

ಸಿಯೆರಾ ಡೆಲಾ ಪ್ಲಾಟಾ ಗೆಲ್ಲುವ ನಿರೀಕ್ಷೆ

ಬಿ. ಕೆ. ಲಗಡ್ ಟ್ರೋಫಿ ಶನಿವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸಿಯೆರಾ ಡೆಲಾ ಪ್ಲಾಟಾ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ 8 ರೇಸ್‌ಗಳಿಗೆ ನಮ್ಮ ಆಯ್ಕೆ ಕೆಳಕಂಡಂತಿದೆ:

1ನೇ ರೇಸ್: ವಿಲ್ಲಿ ವೋಂಕ್ಕ 2, ಆಮ್ಡೆಡ್ 1, ಪವರ್ ಆಫ್ ಥೋರ್ 4
2ನೇ ರೇಸ್: ಎನ್‌ಲೈಟೆನ್ಡ್ 1, ಸ್ವಾರ್ನ್ ಫಾರ್ ಯು 3, ರೆಡ್ ಕಾರ್ನೇಷನ್ 2
3ನೇ ರೇಸ್: ಬೊಟೆರೊ 1, ಓನ್ ಲೆಗಾಸಿ 4, ಕರಣ್‌ವೀರ್ 3
4ನೇ ರೇಸ್: ಎನ್‌ಡೀವರ್ 2, ಮಾರ್ಕೆಟ್ ಕಿಂಗ್ 6, ಸ್ಕೈ ಫಾಲ್ 7
5ನೇ ರೇಸ್: ಸಿಯೆರಾ ಡೆಲಾ ಪ್ಲಾಟಾ 9, ಪ್ರಿನಿಯ 8, ಮೆರಿಡಿಯಾ 7
6ನೇ ರೇಸ್: ಸಾವೆರಿನ್ ಮಾಸ್ಟರ್ 2, ಗಸ್ಟಿ ಗರ್ಲ್ 1, ನಾರ್ದರನ್ ಸಿಂಗರ್ 6
7ನೇ ರೇಸ್: ಕಾಗ್ಲೋಸ್ಟ್ರೋ 2, ಅನೌಷ್ಕ 5, ಬಾಕು 7
8ನೇ ರೇಸ್: ಡ್ರಾಗೊನೆಸ್ 2, ಫುಲ್ ಆಫ್ ಗ್ರೇಸ್ 5, ಟೈರೋನ್ ಬ್ಲ್ಯಾಕ್ 3

ಉತ್ತಮ ಬೆಟ್: ಎನ್‌ಲೈಟೆನ್ಡ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	5,6,7	6,7,8

'ಆವಿಷ್ಕಾರಕ್ಕೆ ಯುವಕರು ಮುಂದಾಗಲಿ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ನಮ್ಮ ದೇಶದಲ್ಲಿ ಸಾಕಷ್ಟು ಯುವ ಪ್ರತಿಭೆಗಳು ಇವೆ. ಸೀಮಿತ ಸಂಪನ್ಮೂಲಗಳನ್ನು ಬಳಸಿಕೊಂಡು ಸಮಾಜದಲ್ಲಿರುವ ಜ್ವಲಂತ ಸಮಸ್ಯೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಹೊಸ ಆವಿಷ್ಕಾರಕ್ಕೆ ಯುವಕರು ಮುಂದಾಗಬೇಕು' ಎಂದು ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ.ಅಶೋಕ ಶೆಟ್ಟರ್ ಹೇಳಿದರು.

ಕೇಂದ್ರ ಶಿಕ್ಷಣ ಸಚಿವಾಲಯದ ಆವಿಷ್ಕಾರ ಕೋಶ ಮತ್ತು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ವತಿಯಿಂದ ನಗರದ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಗುರುವಾರ ಏರ್ಪಡಿಸಿದ್ದ 'ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್–2022' ಅಂತಿಮ ಸುತ್ತಿನ ಸ್ಪರ್ಧೆಯಲ್ಲಿ ಅವರು ಮಾತನಾಡಿದರು.

'ಯುವ ಶಕ್ತಿ ನಮ್ಮ ದೇಶದ ಆಸ್ತಿ. ದೇಶವು ಯುವ ಶಕ್ತಿಯ ಕಡೆಗೆ ಆಶಾಭಾವದಿಂದ ನೋಡುತ್ತಿದೆ. ಕೇಂದ್ರ ಸರ್ಕಾರವು ಇಡೀ ದೇಶದಲ್ಲೇ ಅತಿ ದೊಡ್ಡ ಸ್ಪರ್ಧೆ ಆಯೋಜಿಸುವ ಮೂಲಕ ಯುವಕರಿಗೆ ಉತ್ತಮ ಅವಕಾಶ ಕಲ್ಪಿಸಿದೆ' ಎಂದರು.

'ಶಾಲಾ ಶಿಕ್ಷಣದಲ್ಲಿರುವ ಸಮಸ್ಯೆಗಳ ನಿವಾರಣೆ ಈ ವರ್ಷದ ಸ್ಪರ್ಧೆಯ ವಿಷಯ. ಐದು ವರ್ಷಗಳಿಂದ ಹ್ಯಾಕಥಾನ್ ಸ್ಪರ್ಧೆ ನಡೆಯುತ್ತಿದ್ದು, ಬಿವಿಬಿ ಕಾಲೇಜು ಇದಕ್ಕೆ ಆತಿಥ್ಯ ವಹಿಸುತ್ತಾ ಬಂದಿದೆ. ಈ ಬಾರಿ 15ಕ್ಕೂ ಹೆಚ್ಚು ರಾಜ್ಯಗಳ ವಿವಿಧ ಕಾಲೇಜುಗಳಿಂದ 27 ತಂಡಗಳಲ್ಲಿ 185 ಸ್ಪರ್ಧಿಗಳು ಭಾಗವಹಿಸಿದ್ದಾರೆ. 48 ಗಂಟೆ ಸ್ಪರ್ಧೆ ನಡೆಯಲಿದೆ' ಎಂದು ಹೇಳಿದರು.

'ಶಿಕ್ಷಣ, ಕೃಷಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಾಕಷ್ಟು ಸಮಸ್ಯೆಗಳು, ಸವಾಲುಗಳು ಇವೆ. ಶಾಲಾ ಶಿಕ್ಷಣ ಗ್ರಾಮೀಣ ಭಾಗದಲ್ಲಿ ಇನ್ನೂ ಸುಧಾರಿಸಬೇಕಿದೆ. ಅದಕ್ಕೆ ತಂತ್ರಜ್ಞಾನವನ್ನು ಹೇಗೆ ಬಳಸಿಕೊಳ್ಳಬಹುದು ಎಂಬ ನಿಟ್ಟಿನಲ್ಲಿ ಚಿಂತನೆ ನಡೆಸಬೇಕು' ಎಂದು ಹೇಳಿದರು.

ಎಕಸ್ ಕಂಪನಿಯ ಮುಖ್ಯ ತಾಂತ್ರಿಕ ಅಧಿಕಾರಿ (ಸಿಟಿಒ) ಡಾ.ರವಿ ಗುತ್ತಲ್ ಮಾತನಾಡಿದರು.

ವಿಕ್ರಂ ಚದುರಂಗರ ಕೃತಿ ಬಿಡುಗಡೆಯಲ್ಲಿ ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಅಭಿಮತ

ಕೃತಿಯ ಭಾವಾನುವಾದವೂ ಸೃಜನಶೀಲ ಸಾಹಿತ್ಯ

ಪ್ರಜಾವಾಣಿ ವಾರ್ತೆ

ಕ್ರೈಸ್ಟ್ ವಿಶ್ವವಿದ್ಯಾಲಯದ ಕನ್ನಡ ಸಂಘ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅನುವಾದಿತ ಕೃತಿ 'ಇಂದ್ರಜಿತ್ ಮತ್ತು ಇನ್ನಿತರ ಕಥೆಗಳು'ನ್ನು ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಬಿಡುಗಡೆ ಮಾಡಿದರು. ಕೃತಿಯ ಅನುವಾದಕ ವಿಕ್ರಂ ಚದುರಂಗ, ಕುಲಸಚಿವ ಅನಿಲ್ ಜೋಸೆಫ್ ಪಿಂಟೊ ಇದ್ದರು

ಬೆಂಗಳೂರು: ಯಾವುದೇ ಭಾಷೆಯ ಕೃತಿಯ ಅನುವಾದ ಆ ನೆಲದ ಸೊಗಡಿನ ಜತೆ ಬೆರೆತ ಭಾವಾನುವಾದವಾದರೆ ಮೂಲ ಸೃಜನಶೀಲ ಸಾಹಿತ್ಯದಂತೆ ಭಾಸವಾಗುತ್ತದೆ ಎಂದು ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಹೇಳಿದರು.

ಕ್ರೈಸ್ಟ್ ವಿಶ್ವವಿದ್ಯಾಲಯ ಕನ್ನಡ ಸಂಘ ಹಮ್ಮಿಕೊಂಡಿದ್ದ ವಿಕ್ರಂ ಚದುರಂಗ ಅವರ ಬೇರೆ ಬೇರೆ ಲೇಖಕರ ಆರು ಕಥೆಗಳ ಅನುವಾದಿತ ಕೃತಿ 'ಇಂದ್ರಜಿತ್ ಮತ್ತು ಇನ್ನಿತರ ಕಥೆಗಳು' ಬಿಡುಗಡೆ ಮಾಡಿ ಅವರು ಮಾತನಾಡಿದರು.

ಆರಂಭದ ದಿನಗಳಲ್ಲಿ ಅನುವಾದಿತ ಕೃತಿಗಳನ್ನು ಎರಡನೇ ದರ್ಜೆಯ ಸಾಹಿತ್ಯವೆಂದೇ ಭಾವಿಸಲಾಗುತ್ತಿತ್ತು. ಹಲವು ಲೇಖಕರು ಕನ್ನಡ ನೆಲದ ಸಾಹಿತ್ಯ ಕೃತಿಗಳು ಎನ್ನುವಷ್ಟರ ಮಟ್ಟಿಗೆ ಅನುವಾದ ಮಾಡಿದರು. ಅಂತಹ ಪರಂಪರೆಗೆ ಬುನಾದಿ ಹಾಕಿದವರು ಬಿ.ಎಂ.ಶ್ರೀ. ಅವರು ಭಾಷಾಂತರಿಸಿದ ಹಲವು ಇಂಗ್ಲಿಷ್ ಪದ್ಯಗಳು ಕನ್ನಡದ ಮೂಲ ಪದ್ಯಗಳಂತೆ ಭಾಸವಾಗುತ್ತವೆ. ವಿಕ್ರಂ ಚದುರಂಗ ಅವರ 'ಇಂದ್ರಜಿತ್ ಮತ್ತು ಇತರೆ ಕಥೆಗಳು' ಸಹ ಉತ್ತಮ ಭಾವಾನುವಾದ ಎಂದು ಬಣ್ಣಿಸಿದರು.

'ಸ್ವಾತಂತ್ರ್ಯ ಪೂರ್ವದಲ್ಲೇ ಕ್ರೈಸ್ತ ಮಿಷನರಿಗಳು ಕನ್ನಡ ಕಟ್ಟುವ ಕೆಲಸ ಆರಂಭಿಸಿದ್ದವು. ಕ್ರೈಸ್ಟ್ ಕಾಲೇಜು ಸಹ ಕನ್ನಡ ಸಂಘದ ಮೂಲಕ ಐದು ದಶಕಗಳು ನಿರಂತರವಾಗಿ ಕನ್ನಡದ ಕೆಲಸ ಮಾಡಿದೆ. 1972ರಲ್ಲಿ ಶ್ರೀನಿವಾಸ ರಾಜು ಅವರು ಸಂಘ ಸ್ಥಾಪಿಸಿದಾಗ ನಾವೇ ಅನುಮಾನ ವ್ಯಕ್ತಪಡಿಸಿದ್ದೆವು' ಎಂದು ಗತ ಘಟನೆಗಳನ್ನು ಮೆಲುಕು ಹಾಕಿದರು.

ಪುಸ್ತಕ ಪರಿಚಯ ಮಾಡಿಕೊಟ್ಟ ಪ್ರಾಧ್ಯಾಪಕಿ ಕೆ.ಎಸ್.ವೈಶಾಲಿ, 'ಧಾರ್ಮಿಕ ಮೂಲಭೂತವಾದಿಗಳಲ್ಲಿ ಇರುವ ಅಸಮಾಧಾನ, ಧಾರ್ಮಿಕ ಚೌಕಟ್ಟಿನ ಗೂಢಾರ್ಥಗಳು, ವಿಭಿನ್ನ ಸಾಂಸ್ಕೃತಿಕ ಲೋಕವನ್ನು ಕನ್ನಡದ ಸೊಗಡಿಗೆ ಹೊಂದಿಸುವುದು ಸವಾಲಿನ ಕೆಲಸ. ಅನುಸಂಧಾನವೇ ಸಾಧ್ಯವಿಲ್ಲ ಎನ್ನುವಂತಹ ಕೆಲಸವನ್ನು ವಿಕ್ರಂ ಅವರು ನವಿರಾಗಿ ರೂಪಿಸಿದ್ದಾರೆ' ಎಂದು ವಿಶ್ಲೇಷಿಸಿದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಅನುವಾದಕ ವಿಕ್ರಂ ಚದುರಂಗ ಉಪಸ್ಥಿತರಿದ್ದರು. ವಿಶ್ವವಿದ್ಯಾಲಯದ ಕುಲಸಚಿವ ಅನಿಲ್ ಜೋಸೆಫ್ ಪಿಂಟೊ ಅಧ್ಯಕ್ಷತೆ ವಹಿಸಿದ್ದರು.

ಪುಸ್ತಕ ಪರಿಚಯ

ಕೃತಿ:	ಇಂದ್ರಜಿತ್ ಮತ್ತು ಇನ್ನಿತರ ಕಥೆಗಳು
ಪ್ರಕಾಶಕರು:	ಕ್ರೈಸ್ಟ್ ಕಾಲೇಜು ಕನ್ನಡ ಸಂಘ
ಪುಟಗಳು:	188
ಬೆಲೆ:	₹250

ಡಿಕೆಶಿ ಆಪ್ತರಿಗೆ ಸಿಬಿಐ ನೋಟಿಸ್

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದಡಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ದಾಖಲಿಸಿರುವ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ವಿಜಯ್ ಮುಳುಗುಂದ ಸೇರಿದಂತೆ ಅವರ ಆಪ್ತರಿಗೆ ಸಿಬಿಐ ಅಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದಾರೆ.

₹ 74.93 ಕೋಟಿ ಮೊತ್ತದ ಅಕ್ರಮ ಆಸ್ತಿ ಹೊಂದಿರುವ ಆರೋಪದ ಮೇಲೆ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ 2020ರ ಅಕ್ಟೋಬರ್ 5ರಂದು ಸಿಬಿಐ ಎಫ್‌ಐಆರ್ ದಾಖಲಿಸಿತ್ತು. ಶಿವಕುಮಾರ್ ಅವರೊಂದಿಗೆ ವ್ಯಾವಹಾರಿಕ ನಂಟು ಹೊಂದಿರುವ ವ್ಯಕ್ತಿಗಳಿಗೆ ನೋಟಿಸ್ ಜಾರಿಮಾಡಿರುವ ತನಿಖಾ ತಂಡ, ಗಂಗಾನಗರದಲ್ಲಿರುವ ಸಿಬಿಐ ಕಚೇರಿಗೆ ವಿಚಾರಣೆಗೆ ಬರುವಂತೆ ಸೂಚಿಸಿದೆ.

ಕೆಪಿಸಿಸಿ ಅಧ್ಯಕ್ಷರ ಅತ್ಯಂತ ನಿಕಟವರ್ತಿಗಳಲ್ಲಿ ಒಬ್ಬರಾಗಿರುವ ವಿಜಯ್ ಮುಳುಗುಂದ ಅವರಿಗೆ ನೋಂದಾಯಿತ ಅಂಚೆ ಮೂಲಕ ನೋಟಿಸ್ ರವಾನಿಸಲಾಗಿದೆ. ಆಗಸ್ಟ್ 30ರಂದು ಸಿಬಿಐ ಕಚೇರಿಗೆ ಹಾಜರಾಗಿ ವಿಚಾರಣೆ ಎದುರಿಸುವಂತೆ ಸೂಚಿಸಲಾಗಿದೆ. ನೋಟಿಸ್ ತಲುಪಿರುವುದನ್ನು ವಿಜಯ್ ಖಚಿತಪಡಿಸಿದ್ದಾರೆ.

80ಕ್ಕೂ ಹೆಚ್ಚು ಮಂದಿಗೆ ನೋಟಿಸ್: ತಮ್ಮ ಜತೆ ವಹಿವಾಟು ನಡೆಸಿರುವವರು, ಆಪ್ತರಾಗಿರುವ 80ಕ್ಕೂ ಹೆಚ್ಚು ಜನರಿಗೆ ಸಿಬಿಐ ಅಧಿಕಾರಿಗಳು ನೋಟಿಸ್ ನೀಡಿದ್ದಾರೆ ಎಂದು ಶಿವಕುಮಾರ್ ತಿಳಿಸಿದ್ದಾರೆ.

ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ

"ಪುಣ್ಯಕೋಟಿ", ನಂ.1587, 3ನೇ ಮುಖ್ಯ ರಸ್ತೆ, ಚಂದ್ರಾ ಬಡಾವಣೆ, ಬೆಂಗಳೂರು–560040.
ದೂರವಾಣಿ: 080–23185584

ಮೇಲ್ಕಂಡ ಸಹಕಾರಿಯ 2021–22 ನೇ ಸಾಲಿನ **12ನೇ ವಾರ್ಷಿಕ ಸಾಮಾನ್ಯ ಸರ್ವ ಸದಸ್ಯರ ಸಭೆಯನ್ನು** ದಿನಾಂಕ 18–09–2022 ರಂದು ಭಾನುವಾರ ಬೆಳಗ್ಗೆ 11.00 ಗಂಟೆಗೆ ಸರಿಯಾಗಿ ಕಾಸಿಯಾ ಸಭಾಂಗಣ, ನಂ.2/106, 17ನೇ ಅಡ್ಡ ರಸ್ತೆ, ಮಾಗಡಿ ಕಾರ್ಡ್ ರೋಡ್, ವಿಜಯನಗರ, ಬೆಂಗಳೂರು–560040. ಇದರಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸಹಕಾರಿಯ ಸದಸ್ಯರೆಲ್ಲರೂ ದಯಮಾಡಿ ಸಕಾಲಕ್ಕೆ ಸಭೆಗೆ ಆಗಮಿಸಿ ಭಾಗವಹಿಸಬೇಕಾಗಿ ಈ ಮೂಲಕ ಕೋರಿದೆ

ದಿನಾಂಕ: 25.08.2022
ಬೆಂಗಳೂರು.

ಶಾರದಾ ವೈ ಬಿರಾದಾರ್
ಕಾರ್ಯದರ್ಶಿ

ಶೇ 40ರಷ್ಟು ಕಮಿಷನ್: ಸರ್ಕಾರಕ್ಕೆ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸವಾಲು

ನಮ್ಮ ಕಾಲದಲ್ಲಿ ನಡೆದಿದ್ದರೂ ತನಿಖೆ ಆಗಲಿ

ಪ್ರಜಾವಾಣಿ ವಾರ್ತೆ

ಮೈಸೂರು: 'ನಾನು ಸತ್ಯಹರಿಶ್ಚಂದ್ರ ಎಂದು ಹೇಳಿಲ್ಲ. ಸಿದ್ದರಾಮಯ್ಯ ಎಂದೇ ಹೇಳಿಕೊಂಡಿದ್ದೇನೆ. ನಮ್ಮ ಕಾಲದಲ್ಲಿ ಹಗರಣ ನಡೆದಿದ್ದರೆ ಅದನ್ನೂ ಸೇರಿಸಿ ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿ ಅವರ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ನಡೆಸಲಿ' ಎಂದು ವಿಧಾನಸಭೆಯ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಸವಾಲು ಹಾಕಿದರು.

ಜಿಲ್ಲಾ ಪತ್ರಕರ್ತರ ಸಂಘದಿಂದ ಶುಕ್ರವಾರ ಆಯೋಜಿಸಿದ್ದ ಪತ್ರಿಕಾ ಸಂವಾದದಲ್ಲಿ ಅವರು, 'ಗುತ್ತಿಗೆದಾರರ ಸಂಘದವರು ಶೇ 40 ಕಮಿಷನ್ ಆರೋಪ ಮಾಡಿದ್ದಾರೆ. ನ್ಯಾಯಾಂಗ ತನಿಖೆ ನಡೆಸಲು ಸರ್ಕಾರಕ್ಕಿರುವ ಸಮಸ್ಯೆ ಏನು' ಎಂದು ಪ್ರಶ್ನಿಸಿದರು.

'ಪ್ರಾಮಾಣಿಕರು, ಯಾವ ಸಚಿವರೂ ನಯಾಪೈಸೆ ಲಂಚ ಪಡೆದಿಲ್ಲ' ಎನ್ನುವ ಬಿಜೆಪಿಯವರು, 'ಒಂದು ರೂಪಾಯಿ ಲಂಚ ಮುಟ್ಟಲ್ಲ' ಎನ್ನುವ ಮುಖ್ಯಮಂತ್ರಿ, 'ಆರೋಪ ಸುಳ್ಳು ಎಂದು ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇನೆ' ಎಂದಿರುವ ಮುನಿರತ್ನ, 'ಲಂಚ ಎಂದರೆ ಏನೆಂದೇ ಗೊತ್ತಿಲ್ಲ' ಎನ್ನುವ ಸುಧಾಕರ್ ನ್ಯಾಯಾಂಗ ತನಿಖೆಗೆ ಒಪ್ಪುತ್ತಿಲ್ಲವೇಕೆ?' ಎಂದು ವ್ಯಂಗ್ಯವಾಗಿ ಕೇಳಿದರು.

'ಈಗ ಭ್ರಷ್ಟಾಚಾರ ಮುಗಿಲು ಮುಟ್ಟಿದೆ. ಕಮಿಷನ್ ಬೇಡಿಕೆ ಕುರಿತು ಗುತ್ತಿಗೆದಾರರ ಸಂಘದವರು 2ನೇ ಬಾರಿಗೆ ಮಾಧ್ಯಮದವರಿಗೂ ಸಮಸ್ಯೆ ಹೇಳಿಕೊಂಡಿದ್ದಾರೆ. ಪತ್ರ ಬರೆದು ವರ್ಷವೇ ಕಳೆದಿದ್ದರೂ ಪ್ರಧಾನಿ ಅಥವಾ ರಾಜ್ಯ ಸರ್ಕಾರ ಕ್ರಮ ಕೈಗೊಂಡಿಲ್ಲ' ಎಂದರು.

'ಬಿಬಿಎಂಪಿ ಕಾಮಗಾರಿಗಳಲ್ಲಿ ಕಮಿಷನ್ ಪ್ರಮಾಣ ಶೇ 40ರಿಂದ ಶೇ 50ಕ್ಕೆ ಹೆಚ್ಚಾಗಿದೆ. ಕೆಲವೆಡೆ ಶೇ 100ರಷ್ಟು ಕಮಿಷನ್ ತೆಗೆದುಕೊಳ್ಳಲಾಗುತ್ತಿದೆ. ಗುತ್ತಿಗೆದಾರರೇ ಈ ಬಗ್ಗೆ ಹೇಳಿದ ಮೇಲೂ ಮುಖ್ಯಮಂತ್ರಿ ದಾಖಲೆ ಕೇಳುತ್ತಿದ್ದಾರೆ' ಎಂದು ಟೀಕಿಸಿದರು.

'ನಾನು ಮುಖ್ಯಮಂತ್ರಿ ಆಗಿದ್ದಾಗ 5 ಪ್ರಕರಣಗಳನ್ನು ಸಿಬಿಐಗೆ ಕೊಟ್ಟಿದ್ದೆ. ಇವರೂ ಸಿಬಿಐಗೆ ಕೊಡಲಿ. ನನ್ನ ಅಧಿಕಾರದ ಅವಧಿಯಲ್ಲಿ ಎಸ್‌ಐಟಿ ಯಾರಾದರೂ ನನಗೆ ಒಂದು ಪೈಸೆ ಲಂಚ ನೀಡಿರುವ ಉದಾಹರಣೆ ಇದ್ದರೆ ತೋರಿಸಲಿ' ಎಂದು ಸವಾಲು ಹಾಕಿದರು.

ಕಿರುಕುಳ ನೀಡಿ ಕಮಿಷನ್ ವಸೂಲಿ: ಕುಮಾರಸ್ವಾಮಿ ಆರೋಪ

ಮೈಸೂರು: 'ಬಿಜೆಪಿ ಸರ್ಕಾರದಲ್ಲಿ ಗುತ್ತಿಗೆದಾರರಿಗೆ ಕಿರುಕುಳ ನೀಡಿ ಕಮಿಷನ್ ವಸೂಲಿ ಮಾಡಲಾಗುತ್ತಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಪರ್ಸಂಟೇಜ್ ವ್ಯವಸ್ಥೆ ಸ್ವಾತಂತ್ರ್ಯಪೂರ್ವದಲ್ಲೂ ಇತ್ತು. ಆದರೆ, ಒಂದು ಮಿತಿ ಇತ್ತು. 2008ರಲ್ಲಿ ಬಿಜೆಪಿ ಸರ್ಕಾರ ರಚನೆಯಾದ ಮೇಲೆ ಪ್ರಮಾಣ ಜಾಸ್ತಿಯಾಯಿತು' ಎಂದು ಆರೋಪಿಸಿದರು.

'ಈಗ ಸರ್ಕಾರದ ವಿರುದ್ಧ ದನಿ ಎತ್ತಿರುವ ಗುತ್ತಿಗೆದಾರರು 6 ತಿಂಗಳು ಸರ್ಕಾರಿ ಟೆಂಡರ್‌ನಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಬಹಿಷ್ಕರಿಸಲಿ' ಎಂದು ಸಲಹೆ ನೀಡಿದರು.

'2008ರಿಂದ ವ್ಯವಸ್ಥೆ ಕುಲಗೆಡಿಸಿದವರು ಬಿಜೆಪಿಯವರು. ಅವರಿಗೆ ಆತ್ಮಸಾಕ್ಷಿಗಿಂತ ಸಾಕ್ಷಿ ಬೇಕಾ?' ಎಂದು ಕೇಳಿದರು. 'ಹೈಕಮಾಂಡ್‌ಗೆ ಹಣ ಕಳುಹಿಸುವ ಪ್ರಕ್ರಿಯೆ ಬಿಜೆಪಿ ಹಾಗೂ ಕಾಂಗ್ರೆಸ್ ಎರಡರಲ್ಲೂ ಇದೆ. ನಾವು ಅದಕ್ಕೆಲ್ಲ ದಲ್ಲಾಳಿಗಳ ಯಾವ ಅಧಿಕಾರಿಗಳ ಬಳಿಯೂ ಹಣ ಕೇಳಿಲ್ಲ. ಹೀಗಾಗಿ, ಸರ್ಕಾರದ ಕಡತಗಳು ಬೇಗ ಸಿಗುತ್ತಿವೆ' ಎಂದರು.

ಸಿದ್ದರಾಮಯ್ಯ ಸುಳ್ಳು ಹೇಳಿಕೆ ನೀಡುವುದನ್ನು ನಿಲ್ಲಿಸಬೇಕು. ಭ್ರಷ್ಟಾಚಾರದ ಆರೋಪ ಮಾಡುವ ಕೆಂಪಣ್ಣ ಅಥವಾ ಯಾರೇ ಆದರೂ ದಾಖಲೆ ಸಹಿತ ಲೋಕಾಯುಕ್ತ, ಇ.ಡಿ, ಸಿಬಿಐಗೆ ದೂರು ಕೊಡಲಿ
ಉಮೇಶ್ ಕತ್ತಿ, ಅರಣ್ಯ ಸಚಿವ

ಶೇ 40ರಷ್ಟು ಲಂಚ ಪಡೆಯುತ್ತಿರುವ ಎಂದು ಯಾವುದೇ ದಾಖಲೆ ಇಲ್ಲದೇ ಆರೋಪಿಸುವುದನ್ನು ನೋಡಿದರೆ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರು ಮಾನಸಿಕ ಸ್ಥಿಮಿತ ಕಳೆದುಕೊಂಡಿರುವಂತಿದೆ
ಬಿ.ಸಿ.ಪಾಟೀಲ, ಕೃಷಿ ಸಚಿವ

'ಕೆಂಪಣ್ಣಗೆ ತಾಕತ್ತಿದ್ದರೆ ಲೋಕಾಯುಕ್ತಕ್ಕೆ ದೂರು ನೀಡಲಿ'

ಬೆಂಗಳೂರು: 'ಶೇ 40ರಷ್ಟು ಲಂಚ ಪಡೆಯಲಾಗುತ್ತಿದೆ ಎಂದು ಆರೋಪ ಮಾಡುತ್ತಿರುವ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ಅವರಿಗೆ ತಾಕತ್ತಿದ್ದರೆ ಲೋಕಾಯುಕ್ತಕ್ಕೆ ದಾಖಲೆ ಸಹಿತ ದೂರು ನೀಡಲಿ' ಎಂದು ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

ಪತ್ರಕರ್ತರೊಂದಿಗೆ ಅವರು, 'ಕೆಂಪಣ್ಣ ಆರೋಪಿಸುವ ಕಾಂಗ್ರೆಸ್ ಪ್ರಾಯೋಜಿತ. ಎರಡು ವರ್ಷಗಳಿಂದ ದಾಖಲೆ ಇಲ್ಲದ ಆರೋಪ ಮಾಡುತ್ತಿದ್ದಾರೆ. ಭ್ರಷ್ಟಾಚಾರದ ಆರೋಪಕ್ಕೆ ದಾಖಲೆ ಇದ್ದರೆ ಲೋಕಾಯುಕ್ತಕ್ಕೆ ದೂರು ನೀಡಲಿ ಅಥವಾ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಿ' ಎಂದರು.

'ದಾಖಲೆ ಒದಗಿಸಿದರೆ ಸರ್ಕಾರವೇ ತನಿಖೆಗೆ ಆದೇಶಿಸಲು ಸಿದ್ಧವಿದೆ. ಎಲ್ಲರ ವಿರುದ್ಧ ಆರೋಪ ಮಾಡುತ್ತಿದ್ದಾರೆ. ಅವರು ಹೊಟ್ಟೆಪಾಡಿಗೆ ಕಾಮಗಾರಿ ನಡೆಸುವ ಸಣ್ಣ ಗುತ್ತಿಗೆದಾರ, ಶುದ್ಧ ಸುಳ್ಳುಗಾರ' ಎಂದು ಟೀಕಿಸಿದರು.

'ಕಾಂಗ್ರೆಸ್ ಮತ್ತು ಹಿಂದಿನ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಬೃಹತ್ ಮೊತ್ತದ ಬಿಲ್ ಬಾಕಿ ಇದ್ದವು. ಬೊಮ್ಮಾಯಿ ನೇತೃತ್ವದ ಸರ್ಕಾರ ₹12,752 ಕೋಟಿ ಮೊತ್ತದ ಬಿಲ್ ಪಾವತಿಸಿದೆ. ಬಿಲ್ ಪಡೆದವರಲ್ಲಿ ಒಬ್ಬರೂ ಪ್ರಾಮಾಣಿಕ ಗುತ್ತಿಗೆದಾರರು ಇಲ್ಲವೇ? ಯಾರೊಬ್ಬರೂ ಏಕೆ ಮಾತನಾಡುತ್ತಿಲ್ಲ' ಎಂದು ಪ್ರಶ್ನಿಸಿದರು.

ಸಹಕರಿಸದ ಕಾರಣ ಲಂಚದ ಆರೋಪ: ಮುನಿರತ್ನ

ಕೋಲಾರ: 'ಗುತ್ತಿಗೆದಾರರಿಗೆ ಸಹಕರಿಸದ ಕಾರಣ ನನ್ನ ಮೇಲೆ ಲಂಚದ ಆರೋಪ ಮಾಡಿದ್ದಾರೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಮುನಿರತ್ನ ಹೇಳಿದ್ದು, ಈ ಬಗ್ಗೆ ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿದ್ದಾರೆ.

'ಕೋಲಾರ ಜಿಲ್ಲೆಯಲ್ಲಿ ಈಚೆಗೆ ಡಾಂಬರೀಕರಣ ಆಗಿರುವ ರಸ್ತೆಗಳ ಗುಣಮಟ್ಟ ಪರಿಶೀಲನೆ ಮಾಡಲು ತಿಳಿಸಿದ್ದೆ, ಆಗ ಕೆಲ ಗುತ್ತಿಗೆದಾರರು, 'ಸ್ಥಳ ಪರಿಶೀಲನೆ ಮಾಡುವ ಸಂದರ್ಭದಲ್ಲಿ ಕೆಲ ಲೋಪಗಳು ಕಂಡು ಬರುತ್ತವೆ. ಸಚಿವರು ಸಹಕರಿಸಬೇಕು' ಎಂಬುದಾಗಿ ನನ್ನನ್ನು ಕೋರಿದ್ದರು' ಎಂದು ಸಮಜಾಯಿಷಿ ನೀಡಿದ್ದಾರೆ.

'ಕಳಪೆ ಕಾಮಗಾರಿ ಕುರಿತು ತನಿಖೆಗೆ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ ನೇತೃತ್ವದಲ್ಲಿ ಸಮಿತಿ ರಚಿಸಬೇಕು. ಮೂರನೇ ವ್ಯಕ್ತಿಯಿಂದಲೂ ವರದಿ ಪಡೆಯಬೇಕು' ಎಂದು ಆಗ್ರಹಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆಗೆ ಜಿಲ್ಲಾ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೃಷ್ಣಾರೆಡ್ಡಿ ಅವರನ್ನು ಸಂಪರ್ಕಿಸಲಾಯಿತು. ಅವರು ಕರೆ ಸ್ವೀಕರಿಸಲಿಲ್ಲ.

ಸುದ್ದಿ 2 ನಿಮಿಷ

ಕಾಂಗ್ರೆಸ್‌ನಲ್ಲೇ ಮುಂದುವರಿಯುವೆ: ಕೆ.ಎಚ್. ಮುನಿಯಪ್ಪ

ಬೆಂಗಳೂರು: 'ಕಾಂಗ್ರೆಸ್ ಪಕ್ಷವನ್ನು ಬಿಡುವ ಪ್ರಶ್ನೆಯೇ ಇಲ್ಲ. ಪಕ್ಷದಲ್ಲಿ ಸಕ್ರಿಯವಾಗಿದ್ದೇನೆ, ಇಲ್ಲಿಯೇ ಮುಂದುವರಿಯುತ್ತೇನೆ' ಎಂದು ಕಾಂಗ್ರೆಸ್ ಮುಖಂಡ ಕೆ.ಎಚ್. ಮುನಿಯಪ್ಪ ಹೇಳಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಶುಕ್ರವಾರ ಭೇಟಿ ಮಾಡಿ ಚರ್ಚಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ರಾಜ್ಯ ಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್ ಒಟ್ಟಾಗಿ ಬಂದು ನನ್ನೊಂದಿಗೆ ಒಂದು ಗಂಟೆ ಚರ್ಚಿಸಿದ್ದಾರೆ. ಪಕ್ಷದ ಸಕ್ರಿಯ ಕಾರ್ಯಕ್ರಮಗಳಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ' ಎಂದರು.

'ನಾನು ಕಾಂಗ್ರೆಸ್‌ನಿಂದ ಹೊರಬರುತ್ತೇನೆ ಎಂಬುದು ಊಹಾಪೋಹ. ಕೆಲವೊಮ್ಮೆ ಅಸಮಾಧಾನ ಆದರೂ ಸಹಿಸಿಕೊಂಡು ಇರಬೇಕಾಗುತ್ತದೆ. ಪಕ್ಷದ ಹೈಕಮಾಂಡ್ ನಿರ್ಧಾರ ಕೈಗೊಳ್ಳುತ್ತದೆ. ಕಾಂಗ್ರೆಸ್ ವರಿಷ್ಠರಿಗೆ ಎಲ್ಲವೂ ಗೊತ್ತಿದೆ. ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಕೂಡ ನನ್ನೊಂದಿಗೆ ಮಾತನಾಡಿದ್ದಾರೆ' ಎಂದು ಹೇಳಿದರು.

'ಸಚಿವ ಡಾ.ಕೆ. ಸುಧಾಕರ್ ಜತೆ ತಮಗೆ ಒಡನಾಟವಿದೆ. ಅವರ ತಂದೆಯೊಂದಿಗೆ 40 ವರ್ಷಗಳ ಬಾಂಧವ್ಯವಿದೆ. ಆದರೆ, ಅದು ರಾಜಕೀಯ ವ್ಯವಹಾರವಲ್ಲ' ಎಂದು ತಿಳಿಸಿದರು.

'ಚಿಕ್ಕಬಳ್ಳಾಪುರದಲ್ಲಿರುವ ಆದಿಜಾಂಬವ ಮಠಕ್ಕೆ ಜಮೀನು ಮತ್ತು ಅನುದಾನ ಒದಗಿಸುವಂತೆ ಮನವಿ ಸಲ್ಲಿಸಲು ಸಚಿವ ಸುಧಾಕರ್ ಅವರ ಮೂಲಕ ಮುಖ್ಯಮಂತ್ರಿಯವರನ್ನು ಭೇಟಿ ಮಾಡಲಾಗಿದೆ' ಎಂದರು.

'ಅನಿತಾಕೌಲ್ ಶಿಕ್ಷಕ ಪ್ರಶಸ್ತಿ'ಗೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯು 'ಅನಿತಾಕೌಲ್ ಶಿಕ್ಷಕ ಪ್ರಶಸ್ತಿ'ಗೆ ಶಿಕ್ಷಕರಿಂದ ಅರ್ಜಿ ಆಹ್ವಾನಿಸಿದೆ.

ಖಾಸಗಿ, ಅನುದಾನಿತ ಮತ್ತು ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಶಿಕ್ಷಕರು, ಎಸ್‌ಡಿಎಂಸಿ ಅಧ್ಯಕ್ಷರು ಅರ್ಜಿ ಸಲ್ಲಿಸಬಹುದು. ಇವರ ಪರವಾಗಿ ವ್ಯಕ್ತಿಗಳು ಹಾಗೂ ಸಂಘಟನೆಗಳೂ ಪ್ರಸ್ತಾವನೆ ಸಲ್ಲಿಸಬಹುದು. ಶಿಕ್ಷಕರು ಕನಿಷ್ಠ 15 ವರ್ಷಗಳು ಸೇವೆ ಸಲ್ಲಿಸಿರಬೇಕು. ಶಿಕ್ಷಕರ ಸ್ವವಿವರದ ಜತೆಗೆ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸಿದ ಬಗ್ಗೆ ಪೂರಕ ದಾಖಲೆಗಳನ್ನು ಲಗತ್ತಿಸಬೇಕು ಎಂದು ಸಮಿತಿ ತಿಳಿಸಿದೆ.

ಅರ್ಜಿ ಸಲ್ಲಿಸಲು ಸೆ. 10 ಕಡೆಯ ದಿನಾಂಕ. ಬೆಂಗಳೂರಿನಲ್ಲಿ ನಡೆಯುವ ಅನಿತಾ ಕೌಲ್ ಸಂಸ್ಮರಣಾ ಕಾರ್ಯ ಕ್ರಮದಲ್ಲಿ ಪ್ರಶಸ್ತಿ ನೀಡಲಾಗುವುದು. ಪ್ರಸ್ತಾವನೆ ಹಾಗೂ ಅರ್ಜಿಗಳನ್ನು ಕಾರ್ಯದರ್ಶಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ನಂ.435, 3ನೇ 'ಸಿ' ಮುಖ್ಯ ರಸ್ತೆ, 1ನೇ ಹಂತ, 2ನೇ ಫೇಸ್, ಮಂಜುನಾಥ ನಗರ, ಬೆಂಗಳೂರು-560 010 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಸಮಿತಿ ತಿಳಿಸಿದೆ. **ಸಂಪರ್ಕಕ್ಕೆ:** ದೂರವಾಣಿ ಸಂಖ್ಯೆ 080-358 35292, ಮೊಬೈಲ್ ಸಂಖ್ಯೆ 94489 57666.

ಶಿಲ್ಪಕಲಾ ಅಕಾಡೆಮಿ: ಐವರು ಕಲಾವಿದರಿಗೆ ಗೌರವ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ 2021ನೇ ಸಾಲಿನ ಗೌರವ ಪ್ರಶಸ್ತಿಗೆ ಐವರು ಕಲಾವಿದರು ಹಾಗೂ ವಾರ್ಷಿಕ ಶಿಲ್ಪಕಲಾ ಪ್ರದರ್ಶನ ಬಹುಮಾನಕ್ಕೆ ನಾಲ್ಕು ಮಂದಿಯ ಶಿಲ್ಪ ಕಲಾಕೃತಿಗಳು ಆಯ್ಕೆಯಾಗಿವೆ.

ಅಕಾಡೆಮಿ ಅಧ್ಯಕ್ಷ ವೀರಣ್ಣ ಅರ್ಕಸಾಲಿ ನೇತೃತ್ವದ ಕಾರ್ಯಕಾರಿ ಸಮಿತಿ ಪ್ರಶಸ್ತಿಗೆ ಕಲಾವಿದರನ್ನು ಆಯ್ಕೆಮಾಡಿದೆ.

ಬಾಗಲಕೋಟೆಯ ನಾಗಲಿಂಗಪ್ಪ ಗಂಗಪ್ಪ ಗಂಗೂರ (ಸಂಪ್ರದಾಯ ಶಿಲ್ಪ), ಉಡುಪಿಯ ರತ್ನಾಕರ ಎಸ್. ಗುಡಿಗಾರ್ (ಸಂಪ್ರದಾಯ ಶಿಲ್ಪ), ಬಳ್ಳಾರಿಯ ಪಿ. ಮುನಿರತ್ನಾಚಾರಿ (ಸಂಪ್ರದಾಯ ಶಿಲ್ಪ), ಕಲಬುರ್ಗಿಯ ಮಾನಯ್ಯ ನಾ. ಬಡಿಗೇರ (ಎರಕ ಶಿಲ್ಪ) ಹಾಗೂ ಬೆಂಗಳೂರಿನ ಬಿ.ಸಿ. ಶಿವಕುಮಾರ್ (ಸಮಕಾಲೀನ ಶಿಲ್ಪ) ಅವರು 'ಗೌರವ ಪ್ರಶಸ್ತಿಗೆ' ಆಯ್ಕೆಯಾಗಿದ್ದಾರೆ.

'ಗೌರವ ಪ್ರಶಸ್ತಿ'ಯು ತಲಾ ₹ 50 ಸಾವಿರ, 'ವಾರ್ಷಿಕ ಶಿಲ್ಪಕಲಾ ಪ್ರದರ್ಶನ ಬಹುಮಾನ' ತಲಾ ₹ 25 ಸಾವಿರ ನಗದು ಒಳಗೊಂಡಿದೆ.

'ಮೈಸೂರಿನ ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಬಹುಮಾನ'ಕ್ಕೆ ಶಿವಮೊಗ್ಗದ ಅಜೇಯ್ ಗಜಾನನ ಅವರ ಮರದ ವಿಷ್ಣುವಿನ ಕಲಾಕೃತಿ ಭಾಜನವಾಗಿದೆ. ಇದು ಉತ್ತರ ಭಾರತದ ಶೈಲಿಯಲ್ಲಿದೆ.

ಮನೋಹರ ಕಾಳಪ್ಪ ಪತ್ತಾರ ವಿಜಯಪುರ ಇವರ ಬಹುಮಾನಕ್ಕೆ ಬೆಂಗಳೂರಿನ ವಿನಯ್ ಕುಮಾರ್ ಎಸ್. ಅವರ ಫೈಬರ್ ಕಲಾಕೃತಿ, 'ಅಜ್ಜಿಹಳ್ಳಿ ಶಿಲ್ಪಶಾಸ್ತ್ರಿ ನಾಗೇಂದ್ರಾಚಾರ್ಯ ಸ್ಮಾರಕ ಬಹುಮಾನ'ಕ್ಕೆ ವಿಜಯನಗರದ ಬಿ. ಮೌನೇಶ್ ಆಚಾರ್ ಅವರ ಮಹಿಷಾಸುರ ಮರ್ಧಿನಿ ಕಲ್ಲಿನ ಕಲಾಕೃತಿ ಆಯ್ಕೆಯಾಗಿದೆ. ಗೌರವ ಪ್ರಶಸ್ತಿ, ಹದಿನೇಳನೆ ವಾರ್ಷಿಕ ಶಿಲ್ಪಕಲಾ ಪ್ರದರ್ಶನ ಬಹುಮಾನ ವಿತರಣಾ ಸಮಾರಂಭ ಹಾಗೂ ಶಿಲ್ಪಕಲಾ ಪ್ರದರ್ಶನವನ್ನು ಸೆ.9ರ ಸಂಜೆ 5 ಗಂಟೆಗೆ ಬೆಳಗಾವಿಯ ಕುಮಾರ ಗಂಧರ್ವ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗುವುದು. ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಅಕಾಡೆಮಿ ರಿಜಿಸ್ಟ್ರಾರ್ ಆರ್. ಚಂದ್ರಶೇಖರ ತಿಳಿಸಿದ್ದಾರೆ.

ಶಿಲ್ಪಕಲಾ ಪ್ರದರ್ಶನ ಬಹುಮಾನಕ್ಕೆ ಆಯ್ಕೆಯಾದವರು

ಶಿಲ್ಪಿಗಳು	ಜಿಲ್ಲೆ	ಶೀರ್ಷಿಕೆ	ಮಾಧ್ಯಮ
ನರೇಶ್ ನಾಯ್ಕ	ಉಡುಪಿ	'pomander'	ಕಲ್ಲು
ಸುಮನ್ ಬಿ.	ಮೈಸೂರು	ಹೃದಯದ ಬಂಧ	ಕಲ್ಲು
ಬಾಬುರಾವ್ ಎಚ್.	ಕಲಬುರ್ಗಿ	ಬುದ್ಧ	ಮಿಶ್ರಮಾಧ್ಯಮ
ಎಸ್. ವೇಣುಗೋಪಾಲ್	ಮೈಸೂರು	ಶಂಕರ	ಕಲ್ಲು

ಮಾನಯ್ಯ ನಾ. ಬಡಿಗೇರ

ರತ್ನಾಕರ ಎಸ್. ಗುಡಿಗಾರ್

ಪಿ. ಮುನಿ ರತ್ನಾಚಾರಿ

ನಾಗಲಿಂಗಪ್ಪ ಗಂಗಪ್ಪ ಗಂಗೂರ

ಬಿ.ಸಿ. ಶಿವಕುಮಾರ್

ಕರ್ನಾಟಕ ಸಂಘದ ವಾರ್ಷಿಕ ಪುಸ್ತಕ ಬಹುಮಾನ ಪ್ರಕಟ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಲ್ಲಿನ ಕರ್ನಾಟಕ ಸಂಘವು ವಾರ್ಷಿಕ ಪುಸ್ತಕ ಬಹುಮಾನಗಳನ್ನು ಪ್ರಕಟಿಸಲಾಗಿದ್ದು, 12 ಲೇಖಕರ ಕೃತಿಗಳನ್ನು 2021ನೇ ಸಾಲಿಗಾಗಿ ಆಯ್ಕೆ ಮಾಡಿದೆ.

ಆವರಣದಲ್ಲಿ ನಮೂದಿಸಿರುವ ಸಾಹಿತಿಗಳ ಹೆಸರಿನಲ್ಲಿ ಬಹುಮಾನ ನೀಡಲಾಗುತ್ತಿದೆ. ಬಹುಮಾನ ತಲಾ ₹ 10,000 ನಗದು ಒಳಗೊಂಡಿದೆ ಎಂದು ಸಂಘದ ಅಧ್ಯಕ್ಷ ಎಂ.ಎನ್. ಸುಂದರರಾಜ್ ತಿಳಿಸಿದ್ದಾರೆ.

ಪ್ರಶಸ್ತಿ ಪುರಸ್ಕೃತರ ವಿವರ: ಚಿತ್ರದುರ್ಗದ ಲೋಕೇಶ ಅಗಸನಕಟ್ಟೆ ಅವರ ಕಾದಂಬರಿ 'ವೈಷ್ಣವ ಜನತೋ' (ಕುವೆಂಪು), ಹಂಪಿಯ ಡಾ.ಮೋಹನ ಕುಂಟಾರ್ ಅವರ ಅನುವಾದ ಕೃತಿ 'ಪ್ರೇಮ ಪತ್ರ' (ಎಸ್.ವಿ.ಪರಮೇಶ್ವರ ಭಟ್ಟ), ಕಾಸರಗೋಡಿನ ಸ್ನೇಹಲತಾ ದಿವಾಕರ್ ಕುಂಬ್ಳೆ ಅವರ 'ಆಮೆ' (ಎಂ.ಕೆ. ಇಂದಿರಾ), ಸಾಗರದ ಲೇಖಕ ಡಾ.ಸರ್ಫರಾಜ್ ಚಂದ್ರಗುತ್ತಿ ಅವರ 'ಭಾರತೀಯ ಧರ್ಮ' (ಪಿ.ಲಂಕೇಶ್) ಕೃತಿಗೆ ಬಹುಮಾನ ದೊರೆತಿದೆ.

ಬೆಳಗಾವಿಯ ಡಾ.ಶೋಭಾ ನಾಯಕ ಅವರ ಕವನ ಸಂಕಲನ 'ಶಯ್ಯಾಗೃಹದ ಸುದ್ದಿಗಳು' (ಜಿ.ಎಸ್. ಶಿವರುದ್ರಪ್ಪ), ಬೆಂಗಳೂರಿನ ದೀಪಾ ಫಡ್ಕೆ ಅವರ ಅಂಕಣ ಬರಹ ಕೃತಿ 'ಓದಿನ ಮನೆ' (ಹಾ.ಮಾ .ನಾಯಕ), ಮೈಸೂರಿನ ವಸುಮತಿ ಉಡುಪ ಅವರ 'ಬೊಗಸೆ ತುಂಬಾ ನಕ್ಷತ್ರಗಳು' ಕೃತಿ (ಯು.ಆರ್. ಅನಂತಮೂರ್ತಿ), ಕಲಬುರಗಿಯ ಮಹಾಂತೇಶ ನವಲಕಲ್ ಅವರ 'ಪಂಚಾವರಂ' ಕೃತಿ (ಕೆ.ವಿ. ಸುಬ್ಬಣ್ಣ), ಬೆಂಗಳೂರಿನ ಎಸ್. ಪಿ.ವಿಜಯಲಕ್ಷ್ಮಿ ಅವರ ಕೃತಿ 'ತಿರೆಯ ತೀರಗಳಲ್ಲಿ ನಾ ಕಂಡ' (ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿ), ಬೆಂಗಳೂರಿನ ಗುರುರಾಜ್ ಎಸ್.ದಾವಣಗೆರೆ ಅವರ ವಿಜ್ಞಾನ ಕೃತಿ 'ಡೇಟಾ ದೇವರು ಬಂದಾಯ್ತು' (ಹಸೂಡಿ ವೆಂಕಟಶಾಸ್ತ್ರಿ), ಬೆಂಗಳೂರಿನ ಶಾಲಿನಿ ಮೂರ್ತಿ ಅವರ ಕಥಾಸಂಕಲನ 'ತೋರಣ ಭಾಗ– 2' (ನಾ. ಡಿಸೋಜ) ಹಾಗೂ ಭದ್ರಾವತಿಯ ಡಾ.ಕೃಷ್ಣ ಎಸ್. ಭಟ್ ಅವರ 'ಮಧುಮೇಹದೊಂದಿಗೆ ಮಧುರಬಾಳ್ವೆ' ವೈದ್ಯ ಸಾಹಿತ್ಯ ಕೃತಿ (ಎಚ್.ಡಿ. ಚಂದ್ರಪ್ಪಗೌಡ) ಆಯ್ಕೆಯಾಗಿದೆ.

28ಕ್ಕೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ

ಬೆಂಗಳೂರು: 'ಭಾರತ್ ಜೋಡೋ' ಪಾದಯಾತ್ರೆಯ ಸಿದ್ಧತೆ ಕುರಿತು ಚರ್ಚಿಸಲು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಇದೇ ಭಾನುವಾರ (ಸೆ. 28) ನಡೆಯಲಿದೆ.

ಅಂದು ಮಧ್ಯಾಹ್ನ ಮೂರುಗಂಟೆಗೆ ವಿಧಾನಸೌಧದಲ್ಲಿ ನಡೆಯಲಿರುವ ಸಭೆಯ ಅಧ್ಯಕ್ಷತೆಯನ್ನು ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ವಹಿಸಲಿದ್ದಾರೆ. ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಸೇರಿದಂತೆ ಹಲವು ಮುಖಂಡರು ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಸೋಮವಾರ ಕೆಪಿಸಿಸಿ ಪದಾಧಿಕಾರಿಗಳು ಹಾಗೂ ಲೋಕಸಭೆ-ವಿಧಾನಸಭೆ ಚುನಾವಣೆಯಲ್ಲಿ ಸೋತ ಅಭ್ಯರ್ಥಿಗಳ ಸಭೆಗಳು ಪ್ರತ್ಯೇಕವಾಗಿ ನಡೆಯಲಿವೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ನಾಳೆ
ದಾದಾಪೀರ್ ಜೈಮನ್
ಕೇಂದ್ರ ಸಾಹಿತ್ಯ ಅಕಾಡೆಮಿ ಯುವ ಪ್ರಶಸ್ತಿ ಪುರಸ್ಕೃತ ಕಥೆಗಾರ
ಸೆಲೆಬ್ರಿಟಿ LIVE
ನೀಲಕುರಿಂಜಿ
ಸಂಜೆ 5 ರಿಂದ 6

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ತಾಲ್ಲೂಕು ಪಂಚಾಯತ್, ಬ್ರಹ್ಮಾವರ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಬ್ರಹ್ಮಾವರ
ಫೋನ್: 0820–2562244 ಇ–ಮೇಲ್: cdpobrm@ymail.com
ಸಂ:ಶಿಅಯೋಬ್ರ:ಕೋ.ಮೊ.ಖ/ಇಮಟೆಪ್ರ/2022–23 ದಿನಾಂಕ: 24.08.2022
ಮರು ಇ–ಟೆಂಡರ್ ಪ್ರಕಟಣೆ
ಬ್ರಹ್ಮಾವರ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯ 275 ಅಂಗನವಾಡಿ ಕೇಂದ್ರಗಳಲ್ಲಿನ 6 ತಿಂಗಳಿನಿಂದ 6 ವರ್ಷದವರೆಗಿನ ಮಕ್ಕಳಿಗೆ ಹಾಗೂ ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಕೋಳಿ ಮೊಟ್ಟೆ ಖರೀದಿಸಲು ಅರ್ಹ ನೋಂದಾಯಿತ ಸಂಸ್ಥೆಗಳಿಂದ ಭಾಗವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ–ಲಕೋಟೆ ಮರು ಇ–ಟೆಂಡರ್ ಕರೆಯಲಾಗಿದೆ. ಮರು ಟೆಂಡರ್‌ಗೆ ಸಂಬಂಧಿಸಿದಂತೆ ಆರ್ಥಿಕ ಲಕೋಟೆ ಮತ್ತು ತಾಂತ್ರಿಕ ಲಕೋಟೆಗಳನ್ನು https://eproc.karnataka.gov.in ವೆಬ್‌ಸೈಟ್‌ನಲ್ಲಿ ನಿಗದಿತ ದಿನಾಂಕದೊಳಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು. ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 08.09.2022, ಇ–ಟೆಂಡರ್ ತೆರೆಯುವ ದಿನಾಂಕ: 12.09.2022, ಸಮಯ ಪೂರ್ವಾಹ್ನ 11.00 ಗಂಟೆ.
ಹೆಚ್ಚಿನ ಮಾಹಿತಿಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಇವರಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.
ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಬ್ರಹ್ಮಾವರ
ವಾಸಾಇ/ಸನಿಉ/ಎಂಸಿಎ/359/22–23 ದಿ: 26.08.2022

ಜಿಲ್ಲಾಧಿಕಾರಿಯವರ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಜಿಲ್ಲಾ ಸಂಕೀರ್ಣ, ಬೀರಸಂದ್ರ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು–562 110, e-mail:- dudc_blr@yahoo.co.in, dudc.blrrural@gmail.com
ಸಂ: ಜಿನಕೋ/ಬೆ.ಗ್ರಾ./ಅಮೃತ.ನ–4/ಹೊ.ನ./ಸಿಆರ್/01/2022–23
ದಿನಾಂಕ: 26.08.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ_ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಯಾದ ಹೊಸಕೋಟೆ ನಗರಸಭೆಗೆ ಸಂಬಂಧಿಸಿದಂತೆ ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4ರ ಯೋಜನೆಯಡಿ, ಹೊಸಕೋಟೆ ನಗರಸಭೆಗೆ ಅನುಮೋದನೆಯಾಗಿರುವ ಕ್ರಿಯಾಯೋಜನೆಯಲ್ಲಿ ಕುಡಿಯುವ ನೀರು ಮತ್ತು ಒಳಚರಂಡಿ ಕಾಮಗಾರಿಗಳ ಘಟಕದಡಿಯಲ್ಲಿ ಕೊಳವೆ ಬಾವಿಗಳನ್ನು ಕೊರೆದು ಮೋಟಾರ್ ಪಂಪ್ ಅಳವಡಿಕೆ ಹಾಗೂ ಸಂಪರ್ಕ ಪೈಪ್–ಲೈನ್ ಕಾಮಗಾರಿ, ಪಂಪ್ ಹೌಸ್‌ಗಾಗಿ ಹೆಚ್ಚುವರಿ ಸಂಪ್ ನಿರ್ಮಾಣ, ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸುವ ಕಾಮಗಾರಿಗಳಿಗೆ ಅರ್ಹ ನೊಂದಾಯಿತ ಸಂಸ್ಥೆಗಳಿಂದ 'ಇ' ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಅರ್ಹ ನೋಂದಾಯಿತ ಸಂಸ್ಥೆ ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ (DMA/2022-23/WS/WORK_INDENT133726/CALL-2) ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರನ್ನು ಸಂಪರ್ಕಿಸಬಹುದಾಗಿದೆ.
Name of the work: Sinking of Borewells 08 nos and Installation of Pump Motor and laying of pipe line near Petannahalli lake, Construction of Additional Sump in Dodda Gattiganabbi Pump House and Construction and Installation of RO Plant Unit in Kannuralli main Road in CMC Hosakote limits of Bengaluru Rural District Under Amruth Nagarothana (Municipality) Phase-04 Project.
Schedule of Bidding Process: (1) Last dat and time for receiving queries: **02.09.2022, TIme: 5.00 pm. (2)** Venue, Date and time of Pre-Bid Meeting: **01.09.2022, Time: 11.00 am at Bengaluru Rural DC Office. (3)** Last date and time prescribed for submission of bid(s) (Bid due date): **06.09.2022, Time: 4.30 pm. (4)** Date and Time of opening of the Technical Bid(s): **08.09.2022, Time: 11.00 a.m. (5)** Date and Time of opening the Financial Bid(s) of Technically Qualified Bidder(s): **13.09.2022, Time: 11.00 am. (6)** Validity of Bids: **90 days.**
ಸಹಿ/– ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ವಾಸಾಸಂಇ/ ಉ.ನಿ.–ಸಿ.ಪಿ/1965/ ಎಂ.ಸಿ.ಎ/ 2022–23

ರಾಮನಗರ ಜಿಲ್ಲಾ ಪಂಚಾಯತ್
ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ.
ಅಲ್ಪಾವಧಿ ಟೆಂಡರ್ ಇ–ಪ್ರೊಕ್ಯೂರ್‌ಮೆಂಟ್ ಪ್ರಕಟಣೆ ಸಂಖ್ಯೆ: 09/881–890/2022–23
ದಿನಾಂಕ : 20–08–2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ್ದು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಸರ್ಕಾರ ಇಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಹಾಗೂ ಸರ್ಕಾರಿ ನೊಂದಾಯಿತ ಕಂಪನಿಯವರಿಂದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc. karnataka.gov.in ಮುಖಾಂತರ ಈ ಕಛೇರಿ ವ್ಯಾಪ್ತಿಯಲ್ಲಿ ರಾಮನಗರ ಜಿಲ್ಲೆಯ ರಾಮನಗರ, ಚನ್ನಪಟ್ಟಣ, ಕನಕಪುರ ಮತ್ತು ಮಾಗಡಿ ತಾಲ್ಲೂಕಿಗಳಲ್ಲಿ ಲೆಕ್ಕ ಶೀರ್ಷಿಕೆ ವಿವಿಧ ಯೋಜನೆಯಡಿಯಲ್ಲಿ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಗರಿಷ್ಠ ಅಂದಾಜು ಮೊತ್ತ ರೂ. 99.80 ಲಕ್ಷಗಳು, ಕನಿಷ್ಠ ಅಂದಾಜು ಮೊತ್ತ ರೂ. 13.90 ಲಕ್ಷಗಳು, ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ : 03–09–2022 ರ ಸಂಜೆ 4.00 ಗಂಟೆಯವರೆಗೆ. ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 05–09–2022 ರ ಸಂಜೆ 4.30 ಗಂಟೆಯವರೆಗೆ (ಕೆ.ಡಬ್ಲ್ಯೂ–3) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : 07–09–2022 ರ ಸಂಜೆ 4.30 ಗಂಟೆಯವರೆಗೆ. (ಕೆ.ಡಬ್ಲ್ಯೂ–3) ಇತರೆ ಮಾಹಿತಿಗಳನ್ನು ಈ ಕಛೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಂಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ.
ಡಿಐಪಿಆರ್/ರಾಮನಗರ/198/ಮಣಿಪಾಲ್/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಚೇರಿ, ರಸ್ತೆ ಮೂಲಭೂತ ಸೌಕರ್ಯ –ದಕ್ಷಿಣ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು – 560 002.
ಸಂಖ್ಯೆ: ಕಾಪಾಅ/ರಮೂ–ದಕ್ಷಿಣ/ಟೆಂಡರ್/01/2022–23 ದಿನಾಂಕ: 26.08.2022
ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ) 2ನೇ ಕರೆ
ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ–ದಕ್ಷಿಣ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರ ಪರವಾಗಿ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಸ್ಟ್ಯಾಂಡರ್ಡ್ ಬಿಡ್ ದಾಖಲೆ – ಕೆಡಬ್ಲ್ಯೂ–4.

ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (₹. ಲಕ್ಷಗಳಲ್ಲಿ)	ಇಎಂಡಿ (₹. ಲಕ್ಷಗಳಲ್ಲಿ)
ಪದ್ಮನಾಭನಗರ ವಿಧಾನಸಭಾ ಕ್ಷೇತ್ರದಲ್ಲಿ ಪ್ರಧಾನ ಮತ್ತು ಉಪ ಪ್ರಧಾನ ಹಾಗೂ ಇತರೆ ಸಂಪರ್ಕಿತ ರಸ್ತೆಗಳಿಗೆ ಡಾಂಬರೀಕರಣ ಮತ್ತು ಸುಧಾರಣೆಗಳನ್ನು ಮಾಡುವುದು. ಸರ್ಕಾರಿ. ಆದೇಶ ಕ್ರ.ಸಂ.81, 82, 83, 84, 85, 86, 87, 88, 89 & 90 (ಪ್ಯಾಕೇಜ್ ಸಂ.2022–23–ಎಸ್3) (2ನೇ ಕರೆ)	1583.11	15.85 (1.00 ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮತ್ತು ಉಳಿದಿದು ಬ್ಯಾಂಕ ಗ್ಯಾರಂಟಿ ಮೂಲಕ)

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ದಿನಾಂಕ: 29.08.2022ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 08.09.2022ರ ಸಂಜೆ 5:30 ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 05.09.2022ರ ಮಧ್ಯಾಹ್ನ 3:00 ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ (ರಸ್ತೆ ಮೂಲಭೂತಸೌಕರ್ಯ) ಇಲ್ಲಿ ನಡೆಸಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 12.09.2022ರ ಸಂಜೆ 4:00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಚೇರಿ–ದಕ್ಷಿಣ ವಿಭಾಗ ಇಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತಸೌಕರ್ಯ–ದಕ್ಷಿಣ ವಿಭಾಗ
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ GOVERNMENT OF KARNATAKA
ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ
VIJAYANAGAR INSTITUTE OF MEDICAL SCIENCES, CANTONMENT BALLARI-583104
Telephones: Director No.8147796529, & PA No.8147796539
e-mail :directorvimsbelllary@gmail.com
website: https://vims.karnataka.gov.in
No.VIMS/SUP/TEND/07/2022-23 DATE: 25/08/2022.
ಇ–ಟೆಂಡರ್ ಅಧಿಸೂಚನೆ
ವಿಮ್ಸ್ ಸಂಸ್ಥೆ, ಬಳ್ಳಾರಿಯ ಸಂಯೋಜಿತ ಆಸ್ಪತ್ರೆಗಳಿಗೆ ಬಯೋಕೆಮಿಸ್ಟ್ರಿ, ಪೆಥಾಲಾಜಿ & ಮೈಕ್ರೋಬಯಾಲಾಜಿ ಲ್ಯಾಬ್ ಟೆಸ್ಟ್‌ಗಳನ್ನು ವರದಿಮಾಡಬಹುದಾದ ಪ್ರತಿ ಪರೀಕ್ಷೆಗಳ ವೆಚ್ಚ [*Cost Per Reportable Test Basis (CPRT)*] *ಆಧಾರದ ಮೇಲೆ ಉಪಕರಣಗಳು, ಮಾನವ ಸಂಪನ್ಮೂಲ, ರೀಯೆಜೆಂಟ್ಸ್ ಮತ್ತು ಇದಕ್ಕೆ ಸಂಬಂಧಿಸಿದ ಎಲ್ಲಾ ಸಾಮಾಗ್ರಿಗಳನ್ನು ಸೇರಿಸಿ 05 ವರ್ಷಗಳಿಗೆ ಮತ್ತು 01 ವರ್ಷಕ್ಕೆ ವಿಸ್ತರಿಸಬಹುದಾದ ಅವಧಿಗೆ ಸೇವೆ ಒದಗಿಸಲು* ಅರ್ಹ ಟೆಂಡರುದಾರರಿಂದ ಕೆ.ಟಿ.ಪಿ.ಪಿ ಅಧಿನಿಯಮ 1999–2000 ರಂತೆ ದ್ವಿ–ಟೆಂಡರ್ ಪದ್ದತಿಯಲ್ಲಿ ಕರ್ನಾಟಕ ಸರ್ಕಾರದ ಇ–ಪೋರ್ಟಲ್ https://eproc.karnataka.gov.in (TENDER NO. ME/2022-23/IND4697) ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಮೇಲಿನ ಪೋರ್ಟಲ್‌ನಲ್ಲಿ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ 10/10/2022 ಸಂಜೆ 5.00 ಗಂಟೆಯ ವರೆಗೆ ಇರುತ್ತದೆ. ಆಸಕ್ತ ಬಿಡ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಲು ವಿನಂತಿಸಲಾಗಿದೆ. ಟೆಂಡರಿನ ಅಂದಾಜು ಮೊತ್ತ ಪ್ರತಿ ವರ್ಷಕ್ಕೆ ರೂ.157.20 ಲಕ್ಷಗಳು ಇರುತ್ತದೆ, ಹೆಚ್ಚಿನ ವಿವರಗಳನ್ನು ಮೇಲಿನ ವೆಬ್‌ಸೈಟ್ ಮತ್ತು www.vims.karnataka.gov.in ನಲ್ಲಿ ಪಡೆಯ ಬಹುದಾಗಿದೆ.
ಸಹಿ/– ನಿರ್ದೇಶಕರು, ವಿಮ್ಸ್, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/395/ಎಂಸಿಎ/2022–23

ಸಾರ್ವಜನಿಕ ಗ್ರಂಥಾಲಯ ಇಲಾಖೆ
ಉಪನಿರ್ದೇಶಕರ ಕಛೇರಿ, ನಗರ ಕೇಂದ್ರ ಗ್ರಂಥಾಲಯ, ದಕ್ಷಿಣ ವಲಯ, ತೀನಂಶ್ರೀ ವೃತ್ತ, ಜಯನಗರ, ಬೆಂಗಳೂರು–560 011.
ದೂರವಾಣಿ: 080–26548829, ಇ–ಮೇಲ್: cclsouthzone@gmail.com
ಸಂಖ್ಯೆ:ನ.ಕೇ.ಗ್ರಂ.ದವ/ಎ2–19/ದಿ & ನಿ. ಸಾಗಾಣಿಕೆ/647/2022–23 ದಿನಾಂಕ: 23–08–2022
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ರಾಬರ್ಟ್ ಸ್ವಾನ್ ಎಂಬುವವರು ಸ್ಥಾಪಿಸಿರುವ '2041 ಫೌಂಡೇಷನ್ ಆಶ್ರಯದಲ್ಲಿ' ದೀಪ್, ಚಾರುಲತಾ ಸೋಮಲ್ ಸೇರಿದಂತೆ ವಿವಿಧ ರಾಷ್ಟ್ರಗಳ 165 ಮಂದಿ ಮಾರ್ಚ್ ನಲ್ಲಿ ಅಂಟಾರ್ಕ್ಟಿಕಾಗೆ ಹೋಗಿದ್ದರು. ರಾಜ್ಯದಿಂದ ಇವರಿಬ್ಬರಲ್ಲದೆ ಬೆಂಗಳೂರಿನ ಅವಿನಾಶ್ ಎಂಬುವವರು ಈ ತಂಡದಲ್ಲಿದ್ದರು.

ಹವಾಮಾನ ವೈಪರೀತ್ಯದ ಪರಿಣಾಮವನ್ನು ಅಧ್ಯಯನ ಮಾಡುವುದು, ಅಂಟಾರ್ಕ್ಟಿಕಾ ಖಂಡವನ್ನು ರಕ್ಷಿಸುವುದು ಹಾಗೂ ಸುಸ್ಥಿರ ಪ್ರಗತಿಯ ಅವಶ್ಯಕತೆಯನ್ನು ಜಗತ್ತಿಗೆ ಸಾರುವುದು ಈ ಅಧ್ಯಯನ ಪ್ರವಾಸದ ಉದ್ದೇಶವಾಗಿತ್ತು.

38ರ ಹರೆಯದ ದೀಪ್ ಅವರು, ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಮೊದಲ ನಿರ್ದೇಶಕಿಯಾಗಿ 10 ದಿನಗಳ ಹಿಂದೆ ಅಧಿಕಾರ ಸ್ವೀಕರಿಸಿದ್ದಾರೆ. ಗುಜರಾತ್‌ನ ಅಹಮದಾಬಾದ್‌ನವರಾದ ಅವರು 2011ರ ಬ್ಯಾಚ್‌ನ ಐಎಫ್‌ಎಸ್ ಅಧಿಕಾರಿ. ಅವರೀಗ ಕರ್ನಾಟಕದ ಸೊಸೆ. ಅವರ ಪತಿ ಡಿ.ಮಹೇಶ್ ಕುಮಾರ್ ಕೂಡ ಐಎಫ್‌ಎಸ್ ಅಧಿಕಾರಿ.

ಸಾಹಸ ಪ್ರವೃತ್ತಿ

ಬಾಲ್ಯದಿಂದಲೇ ಸಾಹಸ ಪ್ರವೃತ್ತಿ ಹೊಂದಿದ್ದ ದೀಪ್, ತಂದೆ ಹಾಗೂ ತಾಯಿಯ ಪ್ರೋತ್ಸಾಹದಿಂದ 5ನೇ ವರ್ಷಕ್ಕೆ ಈಜು, 5ನೇ ತರಗತಿಯಿಂದಲೇ ಕರಾಟೆ ಕಲಿಯಲು ಆರಂಭಿಸಿದ್ದರು. ಏಳನೇ ವಯಸ್ಸಿಗೆ ತಂದೆಯನ್ನು ಕಳೆದುಕೊಂಡವರು. ತಾಯಿಯ ಆರೈಕೆಯಲ್ಲಿ ಬೆಳೆದ ಅವರಿಗೆ ಚಾರಣ, ಪರಿಸರ, ಕಾಡು ಎಂದರೆ ಆಸಕ್ತಿ. ಪದವಿಯವರೆಗೆ ಅಹಮದಾಬಾದ್‌ನಲ್ಲಿ ಓದಿ, ನಂತರ ಡೆಹ್ರಾಡೂನ್‌ನ ಭಾರತೀಯ ವನ್ಯಜೀವಿ ಸಂಸ್ಥೆಯಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಒಂದು ವರ್ಷ ವರ್ಲ್ಡ್ ವೈಲ್ಡ್‌ಲೈಫ್ ಫಂಡ್ ಫಾರ್ ನೇಚರ್ (ಡಬ್ಲ್ಯುಡಬ್ಲ್ಯುಎಫ್) ಸ್ವಯಂ ಸೇವಾ ಸಂಸ್ಥೆಯಲ್ಲಿ ಕೆಲಸ ಮಾಡಿದ ಬಳಿಕ, ಐಎಫ್‌ಎಸ್ ಪರೀಕ್ಷೆ ಬರೆದು ಪಾಸಾಗಿ, ಅರಣ್ಯ ಸೇವೆಗೆ ಸೇರಿದರು.

'ಐಪಿಎಸ್, ಐಎಫ್‌ಎಸ್ ಕಷ್ಟದ ಕೆಲಸ. ಓಡಾಟ ಹೆಚ್ಚು, ನಮಗೆ ಸಾಧ್ಯವಿಲ್ಲ ಎಂದು ಅನೇಕ ಹೆಣ್ಣುಮಕ್ಕಳು ಪೊಲೀಸ್, ಅರಣ್ಯ ಸೇವೆಗೆ ಸೇರಲು ಸ್ವಲ್ಪ ಹಿಂಜರಿಯುತ್ತಾರೆ. ಕೆಲವು ಬಾರಿ ಅವರಿಗೆ ಇಷ್ಟ ಇದ್ದರೂ, ಪೋಷಕರ ಒತ್ತಡದಿಂದ ಐಎಎಸ್ ಆಯ್ಕೆಮಾಡಿಕೊಳ್ಳುವವರೂ ಇದ್ದಾರೆ. ಆದರೆ, ನನಗೆ ಮೊದಲಿನಿಂದಲೂ ಕಾಡು, ಪ್ರಾಣಿಗಳು ಅಚ್ಚುಮೆಚ್ಚು. ಡೆಹ್ರಾಡೂನ್‌ನಲ್ಲಿ ಓದುತ್ತಿರುವಾಗ ಭೂಮಿ, ಅರಣ್ಯ, ಪ್ರಾಣಿ ಪಕ್ಷಿಗಳ ಬಗ್ಗೆ ಹೆಚ್ಚು ತಿಳಿದು ನನ್ನ ಯೋಚನೆಯೇ ಬದಲಾಯಿತು. ಐಎಎಸ್, ಐಪಿಎಸ್ ಪರೀಕ್ಷೆ ಬರೆಯಲು ಹೋಗಲಿಲ್ಲ. ಐಎಫ್‌ಎಸ್ ಪರೀಕ್ಷೆ ಮಾತ್ರ ಎದುರಿಸಿದೆ. ಪುರುಷ ಅಧಿಕಾರಿಗಳ ಸರಿ ಸಮನಾಗಿ ಕೆಲಸ ಮಾಡುತ್ತಿದ್ದೇನೆ. ಎಲ್ಲವನ್ನೂ ನಿಭಾಯಿಸುತ್ತಿದ್ದೇನೆ' ಎಂಬುದು ಅವರ ಮಾತು.

ಅರಣ್ಯ ಇಲಾಖೆಯ ಸಾಕಾನೆಗಳೊಂದಿಗೆ ದೀಪ್

'2011ರ ಬ್ಯಾಚ್‌ನಲ್ಲಿ 85 ಮಂದಿ ಐಎಫ್‌ಎಸ್ ಅಧಿಕಾರಿಗಳ ನೇಮಕವಾಗಿತ್ತು. ಅದರಲ್ಲಿ ಮಹಿಳೆಯರು ಇದ್ದುದು 14 ಮಂದಿ ಮಾತ್ರ. ಈಗ ಚಿತ್ರಣ ಕೊಂಚ ಬದಲಾವಣೆಯಾಗಿದೆ. ಹೆಚ್ಚೆಚ್ಚು ಮಹಿಳಾ ಅಧಿಕಾರಿಗಳು ಆಯ್ಕೆಯಾಗುತ್ತಿದ್ದಾರೆ. ಈ ಸಂಖ್ಯೆ ಇನ್ನಷ್ಟು ಹೆಚ್ಚಬೇಕು' ಎಂಬುದು ದೀಪ್ ಆಶಯ.

ಹಲವು ಸವಾಲು...

ದೀಪ್ ಅವರಿಗೆ ಅಂಟಾರ್ಕ್ಟಿಕಾಗೆ ಹೋಗುವ ಯೋಚನೆ ಇರಲಿಲ್ಲ. ಇವರ ಸಾಹಸ ಪ್ರವೃತ್ತಿಯ ಬಗ್ಗೆ ಅರಿವಿದ್ದ, 2012ನೇ ಬ್ಯಾಚ್‌ನ ಐಎಎಸ್ ಅಧಿಕಾರಿ, ಚಾಮರಾಜನಗರದ ಹಾಲಿ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ಹಿಮಖಂಡಕ್ಕೆ ಹೋಗುವ ಅವಕಾಶದ ಬಗ್ಗೆ ತಿಳಿಸಿದ್ದರು. ಚಾರುಲತಾ, ಈ ಹಿಂದೆಯೂ ಒಮ್ಮೆ ಅಂಟಾರ್ಕ್ಟಿಕಾ ಹೋಗಿ ಬಂದಿದ್ದರು. ಈ ವರ್ಷದ ಮಾರ್ಚ್‌ನಲ್ಲಿ ಅಂಟಾರ್ಕ್ಟಿಕಾಗೆ ಅಧ್ಯಯನಕ್ಕೆ ತೆರಳಿದ್ದ ತಂಡದಲ್ಲಿ ದೀಪ್ ಜೊತೆ ಚಾರುಲತಾ ಅವರೂ ಇದ್ದರು.

'2021ರ ಜುಲೈನಲ್ಲಿ ಚಾರುಲತಾ ಈ ಅವಕಾಶದ ಬಗ್ಗೆ ಗಮನ ಸೆಳೆದರು. ಅದುವರೆಗೆ ನಾನು ಈ ಬಗ್ಗೆ ಚಿಂತಿಸಿರಲಿಲ್ಲ. ಯಾಕೆ ಪ್ರಯತ್ನಿಸಬಾರದು ಎಂಬ ಯೋಚನೆ ಬಂತು. ತಾಯಿ, ತಂಗಿ ಒಪ್ಪಿಗೆ ನೀಡಿದರು. ಪತಿಯ ಪ್ರೋತ್ಸಾಹವೂ ದೊರೆಯಿತು. ಹಾಗಾಗಿ, ಅರ್ಜಿ ಹಾಕಿದೆ. ಹಿಮಖಂಡದಲ್ಲಿ ಉಳಿಯುವುದು, ಓಡಾಡುವುದು ಸುಲಭವಲ್ಲ. ಅದಕ್ಕೆ ದೈಹಿಕ ಆರೋಗ್ಯ ಮುಖ್ಯ, ಮಾನಸಿಕವಾಗಿ ದೃಢವಾಗಿರಬೇಕು. ಅದಕ್ಕಾಗಿ ಸಿದ್ಧತೆ ಮಾಡಬೇಕಿತ್ತು. ವ್ಯಾಯಾಮಗಳನ್ನು ಆರಂಭಿಸಿದೆ. ಕೆಲವು ದಿನಗಳಲ್ಲಿ ಮಂಡಿ ನೋವು ಶುರುವಾಯಿತು. ಅದಕ್ಕೆ ಚಿಕಿತ್ಸೆ ಪಡೆದು ಸುಧಾರಿಸಿದ ತಕ್ಷಣ ಅಪೆಂಡಿಸೈಟಿಸ್‌ನಿಂದ ಬಳಲಿದೆ. ಶಸ್ತ್ರಚಿಕಿತ್ಸೆ ಮಾಡಿಸಿಕೊಂಡೆ. ಎರಡು ತಿಂಗಳ ವಿಶ್ರಾಂತಿಗೆ ವೈದ್ಯರು ಸಲಹೆ ನೀಡಿದ್ದರು. ಇಷ್ಟಾಗುವಾಗ ಡಿಸೆಂಬರ್ ಬಂದಿತ್ತು. ಮಾರ್ಚ್‌ನಲ್ಲಿ ಅಂಟಾರ್ಕ್ಟಿಕಾಗೆ ಹೋಗಬೇಕಿತ್ತು. ನನ್ನಿಂದ ಸಾಧ್ಯವಿಲ್ಲ ಎಂದು ಮನಸ್ಸಿಗೆ ಬಂತು. ಪತಿ ಧೈರ್ಯ ಹೇಳಿದರು. ನಂತರದ ಎರಡು ತಿಂಗಳಲ್ಲಿ ಸಿದ್ಧತೆಗಳನ್ನು ಮಾಡಿಕೊಂಡು ಮಾರ್ಚ್ 16ಕ್ಕೆ ಪ್ರಯಾಣ ಆರಂಭಿಸಿದೆ' ಎಂದು ತಾವು ಎದುರಿಸಿದ ಸವಾಲುಗಳನ್ನು ದೀಪ್ ವಿವರಿಸಿದರು.

'ಹಿಮಖಂಡದ ವಾತಾವರಣ ಸಂಪೂರ್ಣ ಭಿನ್ನ. ಪೂರ್ವಭಾವಿಯಾಗಿ ಎಷ್ಟು ಅಭ್ಯಾಸ ಮಾಡಿದರೂ ಅಲ್ಲಿನ ಪರಿಸ್ಥಿತಿ ಬೇರೆಯೇ ಇರುತ್ತದೆ. ನಾಲ್ಕೈದು ದಿರಿಸು ಧರಿಸುವುದು, ದಪ್ಪನೆಯ ಶೂ ಹಾಕಿ ಓಡಾಡುವುದು ಕಷ್ಟ. ಆದರೆ, ಭಯ ಪಡದೆ, ದಿಟ್ಟ ಹೆಜ್ಜೆ ಇಟ್ಟೆ' ಎಂದು ತಮ್ಮ ಅನುಭವಗಳನ್ನು ಬಿಚ್ಚಿಟ್ಟರು.

'ಹೆಣ್ಣು ದೈಹಿಕವಾಗಿ ದುರ್ಬಲಳು. ವಯಸ್ಸು ಜಾಸ್ತಿಯಾಗುತ್ತಿದ್ದಂತೆಯೇ ಆಕೆಗೆ ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂಬ ಮಾತುಗಳನ್ನು ಪದೇ ಪದೇ ಕೇಳುತ್ತಿರುತ್ತೇವೆ. ಇದು ನಿಜವಲ್ಲ. ಅಂತಹ ಒಂದು ವಾತಾವರಣವನ್ನು ನಮ್ಮ ಸಮಾಜದಲ್ಲಿ ಸೃಷ್ಟಿಸಲಾಗಿದೆ. ಮನಸ್ಸೊಂದಿದ್ದರೆ ಏನು ಬೇಕಾದರೂ ಮಾಡಬಹುದು. ಪೋಷಕರೂ ಅಷ್ಟೆ. ಹೆಣ್ಣುಮಕ್ಕಳ ಆಸಕ್ತಿಗೆ ನೀರೆಯಬೇಕು' ಎಂಬುದು ದೀಪ್ ಧೃಢ ಮಾತು.

ದಕ್ಷಿಣ ಧ್ರುವಕ್ಕೆ ಹೋಗಿ ಬಂದಿರುವ ಅವರು, ಈಗ ಉತ್ತರ ಧ್ರುವದತ್ತ ದೃಷ್ಟಿ ನೆಟ್ಟಿದ್ದಾರೆ! ❖

ಕಡುಬು, ಮೋದಕ ವೈವಿಧ್ಯ

ಗೌರಿ–ಗಣೇಶ ಹಬ್ಬದ ಸಂಭ್ರಮಕ್ಕೆ ಕೆಲವೇ ದಿನಗಳಿವೆ. ಗಣಪನಿಗೆ ಇಷ್ಟವಾದ ಹಲಬಗೆಯ ಕಡುಬು, ಮೋದಕ ಮಾಡುವ ಬಗೆ ಇಲ್ಲಿದೆ.

ನಳಪಾಕ

ಖುತ ರಾಘವಿ

ಮಾವಿನ ಹಣ್ಣಿನ ಮೋದಕ

ಬೇಕಾಗುವ ಸಾಮಗ್ರಿಗಳು:
ಒಂದು ಚಮಚ ತುಪ್ಪ, ಮಾವಿನಹಣ್ಣಿನ ತಿರುಳು ಅರ್ಧ ಕಪ್, ತುರಿದ ಒಣ ಕೊಬ್ಬರಿ ಅರ್ಧ ಕಪ್, ಹಾಲಿನಪುಡಿ ಕಾಲು ಕಪ್, ಏಲಕ್ಕಿ ಕಾಳು, ಮೂರು ಚಮಚ ಸಕ್ಕರೆ.

ಮಾಡುವ ವಿಧಾನ:
ಒಂದು ಪಾತ್ರೆಗೆ ತುಪ್ಪ, ಮಾವಿನಹಣ್ಣಿನ ತಿರುಳು, ತುರಿದ ಒಣ ಕೊಬ್ಬರಿ, ಹಾಲಿನ ಪುಡಿಯನ್ನು ಹಾಕಿ ಚೆನ್ನಾಗಿ ತಿರುವಿ. ಸಣ್ಣ ಉರಿಯಲ್ಲಿ ಬೇಯಲು ಬಿಡಿ. ನಂತರ ಏಲಕ್ಕಿ ಪುಡಿ, ಸಕ್ಕರೆಯನ್ನು ಸೇರಿಸಿ. ಸಣ್ಣ ಉರಿಯಿಂದ ಮಧ್ಯಮ ಉರಿಯವರೆಗೆ ತಿರುವಿ. ಹದವಾದ ಮೋದಕ ಪಾಕ ಸಿದ್ಧಗೊಳ್ಳುತ್ತದೆ. ನಂತರ ಐದು ನಿಮಿಷಗಳ ಕಾಲ ಇದನ್ನು ಫ್ರಿಜ್‌ನಲ್ಲಿ ಇಡಿ. ನಂತರ ಈ ಪಾಕವನ್ನು ಮೋದಕದ ಅಚ್ಚಿಗೆ ಹಾಕಿದರೆ ಮಾವಿನಹಣ್ಣಿನ ಮೋದಕ ಸಿದ್ಧ.

ಚಾಕೊಲೇಟ್ ಮೋದಕ

ಬೇಕಾಗುವ ಸಾಮಗ್ರಿಗಳು: ಕಾಲು ಕಪ್ ಹಾಲು, ಕಂಡೆನ್ಸ್ಡ್ ಮಿಲ್ಕ್ ಕಾಲು ಕಪ್, ಚಾಕೊಲೇಟ್ ಕಾಲು ಕಪ್, ಬಿಸ್ಕೆಟ್‌ನ ಪುಡಿ, ಚಿಕ್ಕದಾಗಿ ಕತ್ತರಿಸಿಟ್ಟುಕೊಂಡ ಬಾದಾಮಿ ಮತ್ತು ಪಿಸ್ತಾ, ಗೋಡಂಬಿ

ಮಾಡುವ ವಿಧಾನ: ಒಂದು ಪಾತ್ರೆಯಲ್ಲಿ ಸಣ್ಣ ಉರಿ ಇಟ್ಟುಕೊಂಡು ಹಾಲು, ಕಂಡೆನ್ಸ್ಡ್ ಮಿಲ್ಕ್ ಹಾಗೂ ಚಾಕೊಲೇಟ್ ಅನ್ನು ಹಾಕಿ ತಿರುವಿ.ಚಾಕೊಲೇಟ್ ಸಂಪೂರ್ಣ ಕರಗಿ ಪೇಸ್ಟ್ ಆಗುವವರೆಗೂ ತಿರುವಬೇಕು. ನಂತರ ಬಿಸ್ಕೆಟ್ ಪುಡಿ, ಪಿಸ್ತಾ, ಗೋಡಂಬಿಯನ್ನು ಸೇರಿಸಬೇಕು. ಮಿಶ್ರಣ ಗಟ್ಟಿಯಾದ ಮೇಲೆ ಪಾತ್ರೆಯನ್ನು ಇಳಿಸಿ. ಆ ಮಿಶ್ರಣವನ್ನು ತುಪ್ಪ ಸವರಿದ ಮೋದಕದ ಮೋಲ್ಡ್‌ಗೆ ಹಾಕಿ ತೆಗೆದರೆ, ಬಿಸಿ ಬಿಸಿ ಚಾಕೊಲೇಟ್ ಮೋದಕ ತಿನ್ನಲು ಸಿದ್ಧವಾಗುತ್ತದೆ.

ಉದ್ದಿನ ಕಡುಬು

ಬೇಕಾಗುವ ಸಾಮಗ್ರಿಗಳು: ಉದ್ದಿನ ಬೇಳೆ, ಹೆಸರು ಬೇಳೆ, ಕಡ್ಲೆ ಬೇಳೆ ತಲಾ ಕಾಲು ಕಪ್ಪು, ಕೊತ್ತಂಬರಿ ಬೀಜ– 1 ಟೀ ಚಮಚ, ಜೀರಿಗೆ– 1 ಟೀ ಚಮಚ, ಬೆಳ್ಳುಳ್ಳಿ– ನಾಲ್ಕೈದು ಎಸಳು, ಹಸಿ ಮೆಣಸಿನ ಕಾಯಿ– ನಾಲ್ಕೈದು, ಅಕ್ಕಿ ಹಿಟ್ಟು– 2 ಕಪ್, ಉಪ್ಪು ರುಚಿಗೆ ತಕ್ಕಷ್ಟು, ನೀರು ಹದಕ್ಕೆ ಬೇಕಾದಷ್ಟು.

ತಯಾರಿಸುವ ವಿಧಾನ: ಹಿಂದಿನ ದಿನ ರಾತ್ರಿ ಮೂರೂ ಬೇಳೆಗಳನ್ನು ಸಮ ಪ್ರಮಾಣದಲ್ಲಿ ಹಾಕಿ ನೆನೆಸಿ ಇಡಬೇಕು. (ರಾತ್ರಿ ನೆನಪಾಗದಿದ್ದರೆ ಬೆಳಿಗ್ಗೆ ಬಿಸಿನೀರಿನಲ್ಲಿ ಒಂದು ಗಂಟೆ ನೆನೆಸಿಡಬಹುದು). ಬೆಳಿಗ್ಗೆ ನೆನೆದ ಬೇಳೆಯನ್ನು ಮಿಕ್ಸಿಯಲ್ಲಿ ಹಾಕಿ ಅದಕ್ಕೆ ಕೊತ್ತಂಬರಿ, ಜೀರಿಗೆ, ಬೆಳ್ಳುಳ್ಳಿ, ಹಸಿ ಮೆಣಸು, ಉಪ್ಪು ಹಾಕಿ ನೀರು ಹಾಕದೆ ತರಿತರಿಯಾಗಿ ರುಬ್ಬಿಕೊಳ್ಳಬೇಕು. (ಅಗತ್ಯವಿದ್ದರೆ ಸ್ವಲ್ಪ ನೀರು ಬಳಸಬಹುದು).

ಇತ್ತ ಒಂದು ಪಾತ್ರೆಯಲ್ಲಿ ಮೂರು ಲೋಟ ನೀರು ಇಟ್ಟು, ಸ್ವಲ್ಪ ಉಪ್ಪು ಹಾಕಿ ಕುದಿಯಲು ಬಿಡಬೇಕು. ನೀರು ಕುದಿ ಬಂದ ಬಳಿಕ ಅಕ್ಕಿ ಹಿಟ್ಟು ಹಾಕಿ ಕೂಡಿಸಬೇಕು. ಹಿಟ್ಟು ನೀರಿನೊಂದಿಗೆ ಚೆನ್ನಾಗಿ ಬೆರೆತು ಗಟ್ಟಿಯಾದ ಬಳಿಕ 2 ನಿಮಿಷ ಬಿಟ್ಟು ಒಲೆಯಿಂದ ಕೆಳಗಿಸಬೇಕು. ಹಿಟ್ಟು ಆರಿದ ಬಳಿಕ ಚೆನ್ನಾಗಿ ರೊಟ್ಟಿ ಹಿಟ್ಟಿನ ಹದಕ್ಕೆ ನಾದಿಕೊಂಡು ಬಟ್ಟಲ ರೀತಿ ಮಾಡಿಕೊಂಡು ಅದರ ಒಳಗೆ ರುಬ್ಬಿಕೊಂಡ ಮಿಶ್ರಣ ಹಾಕಿ ಎರಡು ಬದಿಯನ್ನು ಮುಚ್ಚಬೇಕು. ಹೀಗೆ ಎಲ್ಲವನ್ನೂ ಮಾಡಿಟ್ಟುಕೊಂಡು ಬಳಿಕ ಹಬೆಯಲ್ಲಿ ಬೇಯಿಸಬೇಕು. ಒಂದು ಪಾತ್ರೆಗೆ ತಳಭಾಗದಲ್ಲಿ ನೀರು ಹಾಕಿ ತೂತು ಇರುವ ಇನ್ನೊಂದು ಪಾತ್ರೆಯನ್ನು ಮೇಲ್ಭಾಗದಲ್ಲಿ ಇಡಬೇಕು. ಆ ಪಾತ್ರೆಯಲ್ಲಿ ಮಾಡಿಟ್ಟುಕೊಂಡ ಕಡುಬುಗಳನ್ನು ಇಟ್ಟು 20 ನಿಮಿಷ ಮಧ್ಯಮ ಉರಿಯಲ್ಲಿ ಬೇಯಿಸಬೇಕು. ಕಾಯಿ ಚಟ್ನಿ ಜತೆ ಬಿಸಿ ಇರುವಾಗಲೇ ಸವಿಯಿರಿ.

ಚಾಕೊಲೇಟ್ ಕಡುಬು

ಬೇಕಾಗುವ ಸಾಮಗ್ರಿ:
ಕಣಕಕ್ಕೆ ಅಕ್ಕಿ ಹಿಟ್ಟು-ಒಂದೂವರೆ ಬಟ್ಟಲು, ಮೈದಾ ಹಿಟ್ಟು-1 ದೊಡ್ಡ ಚಮಚ, ಕೊಕೊ ಪುಡಿ-1 ದೊಡ್ಡ ಚಮಚ, ಬೆಣ್ಣೆ-1 ಚಮಚ.

ಹೂರಣಕ್ಕೆ ತುರಿದ ಚಾಕೊಲೇಟ್- ಅರ್ಧ ಬಟ್ಟಲು, ಒಣ ಕೊಬ್ಬರಿ- ಅರ್ಧ ಬಟ್ಟಲು, ಕಂಡೆನ್ಸ್‌ಡ್ ಮಿಲ್ಕ್-2 ದೊಡ್ಡ ಚಮಚ.

ತಯಾರಿಸುವ ವಿಧಾನ:
ಹೂರಣದ ಸಾಮಗ್ರಿಗಳನ್ನು ಮಿಶ್ರ ಮಾಡಿ ಹದವಾಗಿ ಕಲಸಿ. ಒಂದೂವರೆ ಬಟ್ಟಲು ನೀರು ಬಿಸಿ ಮಾಡಿ ಒಂದು ಚಿಟಿಕೆ ಉಪ್ಪು, ಮೈದಾ, ಅಕ್ಕಿ ಹಿಟ್ಟು, ಕೊಕೊ ಪುಡಿ ಮತ್ತು ಬೆಣ್ಣೆ ಸೇರಿಸಿ ಐದು ನಿಮಿಷ ಬೇಯಿಸಬೇಕು. ನಂತರ ಚೆನ್ನಾಗಿ ನಾದಿ ಉಂಡೆಗಳನ್ನು ಮಾಡಿ ಲಟ್ಟಿಸಿ ಚಾಕೊಲೇಟ್ ಮಿಶ್ರಣವನ್ನು ತುಂಬಿ ಕಡುಬಿನ ಆಕಾರ ಕೊಟ್ಟು ಹತ್ತು ನಿಮಿಷ ಹಬೆಯಲ್ಲಿ ಬೇಯಿಸಿದರೆ ಚಾಕೊಲೇಟ್ ಕಡಬು ಸವಿಯಬಹುದು.

ರಾಗಿ ಕಡುಬು

ಬೇಕಾಗುವ ಸಾಮಗ್ರಿ: ಕಣಕಕ್ಕೆ ರಾಗಿ ಹಿಟ್ಟು- ಒಂದೂವರೆ ಬಟ್ಟಲು, ನೀರು-3 ಬಟ್ಟಲು, ಉಪ್ಪು-1 ಚಿಟಿಕೆ, ಎಣ್ಣೆ-1 ಚಮಚ, ಮೈದಾ ಹಿಟ್ಟು-ಕಾಲು ಬಟ್ಟಲು, ಸಕ್ಕರೆ-2 ಚಮಚ, ಹೂರಣಕ್ಕೆ; ಕರಿ ಎಳ್ಳು-1 ಬಟ್ಟಲು, ಬೆಲ್ಲದ ಪುಡಿ- ಅರ್ಧ ಬಟ್ಟಲು, ಏಲಕ್ಕಿ ಪುಡಿ-ಸ್ವಲ್ಪ.

ತಯಾರಿಸುವ ವಿಧಾನ: ಎಳ್ಳನ್ನು ಹುರಿದು ತಣ್ಣಗಾದ ತರಿತರಿಯಾಗಿ ಪುಡಿ ಮಾಡಿಕೊಳ್ಳಬೇಕು. ಅದಕ್ಕೆ ಬೆಲ್ಲದ ಪುಡಿ ಮತ್ತು ಏಲಕ್ಕಿ ಪುಡಿ ಹಾಕಬೇಕು. ಈ ಮಿಶ್ರಣವನ್ನು ಕಡಿಮೆ ಉರಿಯಲ್ಲಿ ಐದು ನಿಮಿಷ ಬೇಯಿಸಬೇಕು.

ಕಣಕ ತಯಾರಿಸಲು ಪಾತ್ರೆಗೆ ನೀರು, ಸಕ್ಕರೆ, ಉಪ್ಪು ಮತ್ತು ಎಣ್ಣೆ ಹಾಕಿ. ಇದು ಕುದಿ ಬಂದಾಗ ಮೈದಾ ಮತ್ತು ರಾಗಿ ಹಿಟ್ಟು ಸೇರಿಸಿ ಐದು ನಿಮಿಷ ಸಣ್ಣ ಉರಿಯಲ್ಲಿ ಕುದಿಸಿ ಬಿಸಿ ಇರುವಾಗಲೇ ಚೆನ್ನಾಗಿ ನಾದಿ ಸಣ್ಣ ಉಂಡೆಗಳಾಗಿ ಮಾಡಿ. ಲಟ್ಟಿಸಿ ಎಳ್ಳು ಮಿಶ್ರಣ ತುಂಬಿಸಿ ಕಡುಬಿನ ಆಕಾರ ಕೊಟ್ಟು ಹಬೆಯಲ್ಲಿ ಹತ್ತು ನಿಮಿಷ ಬೇಯಿಸಬೇಕು. ಆಗ ರಾಗಿ ಹಿಟ್ಟಿನ ಸಿಹಿ ಕಡುಬು ಸವಿಯಲು ಸಿದ್ಧ.

ಸಹಜ ಸಂತಾನೋತ್ಪತ್ತಿ ಬಗ್ಗೆ ತಿಳಿದುಕೊಳ್ಳಿ

ಸ್ಪಂದನ

ಡಾ. ವೀಣಾ ಎಸ್. ಭಟ್

• ನನ್ನ ವಯಸ್ಸು 26. ಗೃಹಿಣಿ. ಮದುವೆಯಾಗಿ 2 ವರ್ಷ ಆಗಿದೆ. ಮಕ್ಕಳು ಪಡೆಯಲು ಸತತ ಪ್ರಯತ್ನ ನಡೆಯುತ್ತಿದೆ. ಇನ್ನೂ ಮಕ್ಕಳಾಗಿಲ್ಲ. ಎಚ್.ಎಸ್.ಜಿ ಪರೀಕ್ಷೆ ನಡೆಸಿದಾಗ ಬೈಲಾಟರಲ್ ಟ್ಯೂಬಲ್ ಬ್ಲಾಕ್ ಇದೆ ಅಂತ ರಿಪೋರ್ಟ್ ಬಂದಿದೆ. ಟಿ.ಎಸ್.ಎಚ್ 5.11 ಇದೆ ಹಾಗೂ ಅಂಡಾಣುಗಳ ಸಂಖ್ಯೆ 2ಕ್ಕೆ ಇಳಿದಿದೆ ಎಂದು ವೈದ್ಯರು ತಿಳಿಸಿದರು. ನನ್ನ ಪತಿಯಲ್ಲಿ ಯಾವುದೇ ತೊಂದರೆ ಇಲ್ಲ. ಥೈರಾಯಿಡ್‌ಗೆ 12.5 ಎಂ.ಜಿ ಮಾತ್ರೆ ಹಾಗೂ Cholecalciferol ಸಿರಪ್, ಫೋಲಿಕ್ ಆಸಿಡ್, M Torr 800 ಮಾತ್ರೆಗಳನ್ನು ತೆಗೆದುಕೊಳ್ಳುತ್ತಿದ್ದೇನೆ. ಲ್ಯಾಪ್ರೋಸ್ಕೋಪಿ ಮಾಡಿಸಿದರೂ ಪ್ರಯೋಜನ ಇಲ್ಲ. ಐ.ವಿ.ಎಫ್ ಮಾಡಿಸಿಕೊಳ್ಳಿ ಎಂದು ತಿಳಿಸಿದರು. ನಾಟಿ ಔಷಧಿಯಲ್ಲಿ ಪರಿಹಾರ ಆಗಬಹುದೇ? ನಮ್ಮ ಮುಂದಿನ ಆಯ್ಕೆ ತಿಳಿಸಿ.

ಅನಾಮಿಕ ಬೆಂಗಳೂರು.

ಸಹಜವಾಗಿ ಮಗುವಾಗುವ ಪ್ರಕ್ರಿಯೆಯಲ್ಲಿ ತಿಂಗಳಿಗೊಮ್ಮೆ ಅಂಡಾಶಯದಿಂದ ಅಂಡೋತ್ಪತ್ತಿ ಸರಿಯಾಗಿ ಆಗುತ್ತಿರಬೇಕು. ಹೀಗೆ ಬಿಡುಗಡೆಯಾದ ಅಂಡಾಣು ಗರ್ಭನಾಳದಿಂದ ಸೆಳೆಯಲ್ಪಟ್ಟು ಗರ್ಭ ನಾಳದಲ್ಲಿ ವೀರ್ಯಾಣುವಿನ ಬರುವಿಕೆಗೆ ಕಾಯುತ್ತಿರುತ್ತದೆ. ಈ ಸಮಯದಲ್ಲಿ ಗಂಡು ಹೆಣ್ಣಿನ ಸಂಪರ್ಕವಾದಗ ಹೆಣ್ಣಿನ ಯೋನಿಯೊಳಗಿಂದ ವೀರ್ಯಾಣುಗಳು ಗರ್ಭದ್ವಾರದಮೂಲಕ ಗರ್ಭಕೋಶದೊಳಗೆ ಚಲಿಸುತ್ತದೆ. ಅಲ್ಲಿಂದ ಗರ್ಭನಾಳದೊಳಗೆ ಹೋಗಿ, ಅಲ್ಲೇ ಅಂಡಾಣು ಹಾಗೂ ವೀರ್ಯಾಣುಗಳ ಮಿಲನವಾಗುತ್ತದೆ. ಹೀಗೆ ಫಲಿತವಾದ ಭ್ರೂಣವು ನಿಧಾನವಾಗಿ ಗರ್ಭನಾಳದಿಂದ ನಾಲ್ಕಾರು ದಿನದೊಳಗಾಗಿ ಗರ್ಭಕೋಶವನ್ನು ಪ್ರವೇಶಿಸುತ್ತದೆ. ಅಲ್ಲಿ ಒಂಬತ್ತು ತಿಂಗಳ ಕಾಲ ಮಗುವಾಗಿ ಮಾರ್ಪಡುತ್ತದೆ. ಹೀಗೆ ಉಂಟಾಗುವ ಸಹಜ ಸಂತಾನೋತ್ಪತ್ತಿ ಕ್ರಿಯೆಯ ಬಗ್ಗೆ ನಿಮಗೆ ತಿಳಿದಿರಬೇಕು.

ನಿಮಗೆ ಟ್ಯೂಬ್ ಟೆಸ್ಟ್‌ನಲ್ಲಿ ಎರಡು ಗರ್ಭನಾಳ ಬ್ಲಾಕ್ ಆಗಿದೆ ಎಂದು ವರದಿ ಬಂದಿರುವುದಾಗಿ ಹೇಳಿದ್ದೀರಿ. ಹಾಗಾಗಿ ಗರ್ಭನಾಳದಲ್ಲಿರುವ ಅಡೆತಡೆಯನ್ನು ಸೂಕ್ಷ್ಮಶಸ್ತ್ರಚಿಕಿತ್ಸೆಯ ಮೂಲಕ ಸರಿಪಡಿಸಿದರೂ ಫಲಿತಾಂಶವನ್ನು ಹೇಳಲು ಸಾಧ್ಯವಿಲ್ಲ. ಅದಕ್ಕಾಗಿಯೇ ನಿಮ್ಮ ತಜ್ಞವೈದ್ಯರು ಐ.ವಿ. ಎಫ್. (ಪ್ರನಾಳಶಿಶು) ಮಾಡಿಸಿಕೊಳ್ಳಲು ತಿಳಿಸಿರಬಹುದು. ನಾಟಿ ಔಷಧಿಯಲ್ಲಿ ನಿಮಗೆ ಪರಿಹಾರ ಸಿಗುತ್ತದೆಯೋ ಇಲ್ಲವೋ ಎಂಬ ಬಗ್ಗೆ ನನಗೆ ಹೇಳಲು ಸಾಧ್ಯವಿಲ್ಲ. ಯಾಕೆಂದರೆ ನಾನು ನಾಟಿ ಔಷಧಿ ಪರಿಣಿತಳಲ್ಲ. ನೀವು ಈ ಬಗ್ಗೆ ಅಂತಹ ನಾಟಿ ಔಷಧಿ ಕೊಡುತ್ತಿರುವ ತಜ್ಞರನ್ನ ಬೇಕಾದರೆ ಸಂಪರ್ಕಿಸಿ ಚಿಕಿತ್ಸೆ ಪಡೆದುಕೊಳ್ಳಿ ಮತ್ತು ಫೋಲಿಕ್ ಆಸಿಡ್ ಮಾತ್ರೆ ತೆಗೆದುಕೊಳ್ಳುತ್ತಿರುವುದನ್ನು ನಿಲ್ಲಿಸಬೇಡಿ. ಥೈರಾಯಿಡ್‌ಗೆ ತೆಗೆದುಕೊಳ್ಳುತ್ತಿರುವ ಮಾತ್ರೆಯನ್ನು ನಿಲ್ಲಿಸಬೇಡಿ. ನಿಮ್ಮ ವಯಸ್ಸು ಈಗ 26 ವರ್ಷ. ತಜ್ಞವೈದ್ಯರ ಸಲಹೆಮೇರೆಗೆ ಮಕ್ಕಳು ಪಡೆಯಲು ಪ್ರಯತ್ನಿಸಿ. ನಂತರ ಐ.ವಿ.ಎಫ್ ನ ಮೊರೆ ಹೋಗಿ. ನಿಮ್ಮ ಆರ್ಥಿಕ ಅನುಕೂಲವನ್ನು ನೋಡಿಕೊಂಡು ಚಿಕಿತ್ಸೆಯನ್ನು ಮುಂದುವರಿಸಿರಿ. ಒಳ್ಳೆಯದಾಗಲಿ.

ಇನ್ನಷ್ಟು ಪ್ರಶ್ನೋತ್ತರಕ್ಕಾಗಿ www. prajavani.net ಗೆ ಭೇಟಿ ನೀಡಿ

ಸ್ಪಂದನ: ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳಿಸಬಹುದು.



ಸುಭಾಷಿತ

ಮನಸ್ಸು ಎಲ್ಲಕ್ಕೂ ಮೂಲ. ಅದನ್ನು ಸರಿಪಡಿಸಿಕೊಳ್ಳದ ವಿನಾ ಇನ್ನಾವುದೂ ಸರಿಯಾಗದು.

-ಡಿ.ವಿ. ಗುಂಡಪ್ಪ

ಪೆಗಾಸಸ್ ಪ್ರಕರಣ: ತನಿಖೆಗೆ ಸಹಕರಿಸದೆ ಸತ್ಯ ಮುಚ್ಚಿಟ್ಟ ಕೇಂದ್ರ

ಪೆಗಾಸಸ್ ಕುತಂತ್ರಾಂಶ ಬಳಸಿ ಗೂಢಚರ್ಯೆ ನಡೆಸಿದ ಆರೋಪದ ಪ್ರಕರಣದ ಸತ್ಯಾಂಶವೇನು ಎಂದು ತಿಳಿಯುವ ಸುಪ್ರೀಂ ಕೋರ್ಟ್‌ನ ಪ್ರಯತ್ನ ಅರ್ಧ ದಾರಿಯಲ್ಲಿ ನಿಂತಿದೆ. ಆದರೆ, ಪೆಗಾಸಸ್ ಕುತಂತ್ರಾಂಶ ಬಳಸಿ ಜನರ ಮೇಲೆ ಗೂಢಚರ್ಯೆ ನಡೆಸಿದ ಪ್ರಕರಣದಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಯಾವ ತಪ್ಪನ್ನೂ ಎಸಗಿಲ್ಲ ಎಂಬುದಕ್ಕೆ ಇದುವೇ ಪುರಾವೆ ಎಂದು ಜನರನ್ನು ನಂಬಿಸಲು ಬಿಜೆಪಿ ನಡೆಸುತ್ತಿರುವ ಪ್ರಯತ್ನ ಕಪಟತನದಿಂದ ಕೂಡಿದೆ. ನ್ಯಾಯಪೀಠದ ಅಭಿಪ್ರಾಯಗಳನ್ನು ತೋರಿಸಿ ಸರ್ಕಾರವನ್ನು 'ನಿರ್ದೋಷಿ' ಎಂದು ಹೇಳಲಾಗಿದೆ ಎಂದು ಬಿಂಬಿಸಲಾಗುತ್ತಿದೆ. ಇಸ್ರೇಲ್‌ನಲ್ಲಿ ತಯಾರಾದ ಪೆಗಾಸಸ್ ಕುತಂತ್ರಾಂಶವನ್ನು ರಾಜಕಾರಣಿಗಳು, ನ್ಯಾಯಮೂರ್ತಿಗಳು, ಸರ್ಕಾರದ ಟೀಕಾಕಾರರು, ಸಾಮಾಜಿಕ ಹೋರಾಟಗಾರರು, ಪತ್ರಕರ್ತರು ಮತ್ತು ಕೆಲವು ಸಚಿವರ ಮೊಬೈಲ್‌ಗಳಿಗೆ ಕೂಡ ಅಳವಡಿಸಿ, ಬೇಹುಗಾರಿಕೆ ನಡೆಸಲಾಗಿದೆ ಎಂಬ ಪ್ರಕರಣದ ಕುರಿತು ನಿವೃತ್ತ ನ್ಯಾಯಮೂರ್ತಿ ಆರ್.ವಿ. ರವೀಂದ್ರನ್ ನೇತೃತ್ವದ ಸಮಿತಿಯು ತನಿಖೆ ನಡೆಸಿದೆ. ಸುಪ್ರೀಂ ಕೋರ್ಟ್ ಈ ಸಮಿತಿಯನ್ನು ನೇಮಿಸಿತ್ತು. ಪರಿಶೀಲನೆಗೆ ಒಳಪಡಿಸಲಾದ 29 ಮೊಬೈಲ್‌ಗಳ ಪೈಕಿ ಐದರಲ್ಲಿ ಕುತಂತ್ರಾಂಶ ಅಳವಡಿಸಿದ್ದು ತಿಳಿದುಬಂದಿದೆ. ಆದರೆ, ಈ ಕುತಂತ್ರಾಂಶವು ಪೆಗಾಸಸ್ ಹೌದೇ ಅಲ್ಲವೇ ಎಂಬುದನ್ನು ಪತ್ತೆ ಮಾಡಲು ಸಾಧ್ಯವಾಗಿಲ್ಲ ಎಂದು ಸಮಿತಿಯ ವರದಿಯಲ್ಲಿ ಹೇಳಲಾಗಿದೆ. ಸರ್ಕಾರವು ಬೇಹುಗಾರಿಕೆ ನಡೆಸುತ್ತಿರಬಹುದು ಮತ್ತು ತಮ್ಮ ಮೊಬೈಲ್ ಅನ್ನು ಹ್ಯಾಕ್ ಮಾಡಿರಬಹುದು ಎಂಬ ಭೀತಿಯನ್ನು ವರದಿಯು ಜನರ ಮನಸ್ಸಿನಿಂದ ದೂರ ಮಾಡುವ ಸಾಧ್ಯತೆ ಇಲ್ಲ.

ಸರ್ಕಾರವು ತನಿಖೆಗೆ ಸಹಕರಿಸುವಂತೆ ಮಾಡಲು ಸುಪ್ರೀಂ ಕೋರ್ಟ್‌ಗೆ ಕೂಡ ಸಾಧ್ಯವಾಗಿಲ್ಲ ಎಂಬುದು ದುರದೃಷ್ಟಕರ

ಸರ್ಕಾರವು ತನಿಖೆಗೆ ಸಹಕರಿಸಿಲ್ಲ ಎಂದು ಸಮಿತಿಯ ವರದಿಯಲ್ಲಿ ಹೇಳಲಾಗಿದೆ. ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರು ಅದನ್ನು ನ್ಯಾಯಾಲಯದಲ್ಲಿಯೇ ಉಲ್ಲೇಖಿಸಿದ್ದಾರೆ. ನ್ಯಾಯಾಲಯದಲ್ಲಿ ಅರ್ಜಿಯ ವಿಚಾರಣೆ ನಡೆಯುತ್ತಿದ್ದಾಗ ಸರ್ಕಾರವು ಯಾವ ನಿಲುವು ತೆಗೆದುಕೊಂಡಿತ್ತೋ ಅದೇ ನಿಲುವನ್ನು ತನಿಖೆಯ ಸಂದರ್ಭದಲ್ಲಿಯೂ ಮುಂದುವರಿಸಿತು ಎಂಬುದು ವಿಷಾದಕರ ಎಂದು ಮುಖ್ಯ ನ್ಯಾಯಮೂರ್ತಿ ಹೇಳಿದ್ದಾರೆ. ಇಸ್ರೇಲ್‌ನ ಕಂಪನಿಯಿಂದ ಪೆಗಾಸಸ್ ಕುತಂತ್ರಾಂಶವನ್ನು ಖರೀದಿಸಲಾಗಿದೆಯೇ ಎಂಬ ಪ್ರಶ್ನೆಗೆ ಸರ್ಕಾರವು ಸಾರ್ವಜನಿಕವಾಗಿ, ಸಂಸತ್ತಿನಲ್ಲಿ ಅಥವಾ ನ್ಯಾಯಾಲಯದಲ್ಲಿ ಉತ್ತರಿಸಲೇ ಇಲ್ಲ. ರಾಷ್ಟ್ರೀಯ ಭದ್ರತೆಯ ಕಾರಣದಿಂದಾಗಿ ಈ ಪ್ರಶ್ನೆಗೆ ಉತ್ತರಿಸಲು ಸಾಧ್ಯವಿಲ್ಲ ಎಂದು ಸರ್ಕಾರವು ಪ್ರತಿಪಾದಿಸುತ್ತಲೇ ಬಂದಿದೆ. ಆದರೆ, ಪ್ರತಿಯೊಂದು ವಿಚಾರದಲ್ಲಿಯೂ ರಾಷ್ಟ್ರೀಯ ಭದ್ರತೆಯ ನೆಪವನ್ನು ಮುಂದಿಟ್ಟು ಉತ್ತರ ಕೊಡುವುದರಿಂದ ನುಣುಚಿಕೊಳ್ಳಲು ಸಾಧ್ಯವಿಲ್ಲ ಎಂದು ನ್ಯಾಯಾಲಯವು ವಿಚಾರಣೆ ಸಂದರ್ಭದಲ್ಲಿಯೇ ಹೇಳಿತ್ತು. ನ್ಯಾಯಾಲಯವು ನೇಮಿಸಿದ ಸಮಿತಿಯ ತನಿಖೆಗೆ ಸರ್ಕಾರವು ಸಹಕರಿಸಿದ್ದಿದ್ದರೆ ರಾಷ್ಟ್ರೀಯ ಭದ್ರತೆಗೆ ಯಾವ ಧಕ್ಕೆಯೂ ಆಗುತ್ತಿರಲಿಲ್ಲ. ಏಕೆಂದರೆ, ಸರ್ಕಾರ ನೀಡಿದ ಯಾವುದೇ ಮಾಹಿತಿಯು ಗೋಪ್ಯವಾಗಿಯೇ ಉಳಿಯುವಂತೆ ಸಮಿತಿ ನೋಡಿಕೊಳ್ಳುತ್ತಿತ್ತು.

ಹಾಗಾಗಿಯೇ, ಸಮಿತಿಯ ವರದಿಯು ಸರ್ಕಾರವನ್ನು 'ನಿರ್ದೋಷಿ' ಎಂದು ಹೇಳಿದೆ ಎಂದು ಬಿಜೆಪಿ ಬಿಂಬಿಸುತ್ತಿರುವುದು ತಪ್ಪು. ಸರ್ಕಾರವು ಪೆಗಾಸಸ್ ಕುತಂತ್ರಾಂಶವನ್ನು ಬಳಸಿರಬಹುದು ಎಂದು ಭಾವಿಸಲು ವಿಶ್ವಾಸಾರ್ಹವಾದ ಸಾಂದರ್ಭಿಕ ಅಂಶಗಳು ಇವೆ. ಅಂತಹ ಸಂದರ್ಭದಲ್ಲಿ, ಪೆಗಾಸಸ್ ಕುತಂತ್ರಾಂಶವನ್ನು ಬಳಸಿಲ್ಲ ಎಂಬುದನ್ನು ಸಾಬೀತು ಮಾಡುವುದು ಸರ್ಕಾರದ ಉತ್ತರದಾಯಿತ್ವವೇ ಆಗಿದೆ. ಪೆಗಾಸಸ್ ಕುತಂತ್ರಾಂಶ ಬಳಸಿಲ್ಲ ಎಂದು ಸರ್ಕಾರವು ದೃಢವಾಗಿ ಈವರೆಗೆ ಹೇಳಿಲ್ಲ. ಈ ಬೇಹುಗಾರಿಕೆ ಪ್ರಕರಣವನ್ನು ಅತ್ಯಂತ ಮಹತ್ವದ್ದು ಎಂದು ಸುಪ್ರೀಂ ಕೋರ್ಟ್ ಭಾವಿಸಿದೆ. ಬೇಹುಗಾರಿಕೆ ನಡೆದಿದ್ದರೆ ಅದು ಪೌರರ ಖಾಸಗಿತನದ ಹಕ್ಕೂ ಸೇರಿದಂತೆ ಮೂಲಭೂತ ಹಕ್ಕಿನ ಉಲ್ಲಂಘನೆ ಎನಿಸಿಕೊಳ್ಳುತ್ತದೆ. ಹಾಗಿದ್ದರೂ ಸರ್ಕಾರವು ತನಿಖೆಗೆ ಸಹಕರಿಸುವಂತೆ ಮಾಡಲು ಸುಪ್ರೀಂ ಕೋರ್ಟ್‌ಗೆ ಕೂಡ ಸಾಧ್ಯವಾಗಿಲ್ಲ ಎಂಬುದು ದುರದೃಷ್ಟಕರ. ತನಿಖೆಗಾಗಿ ನೇಮಿಸಿದ ಸಮಿತಿಗೆ ಪೂರ್ಣ ಸಹಕಾರ ನೀಡಬೇಕು ಮತ್ತು ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು ಎಂದು ಸರ್ಕಾರಕ್ಕೆ ಕೋರ್ಟ್ ನಿರ್ದೇಶನ ನೀಡಿತ್ತು. ಅದನ್ನು ಅನುಸರಿಸದೇ ಇರಲು ಸರ್ಕಾರವು ನಿರ್ಧರಿಸಿತು. ಸುಪ್ರೀಂ ಕೋರ್ಟ್‌ನ ಪ್ರಯತ್ನವನ್ನೇ ತಡೆಯಬಹುದು ಎಂದಾದರೆ, ಸರ್ಕಾರದ ಯಾವುದಾದರೂ ನಿರ್ಧಾರ ಅಥವಾ ಕ್ರಮದ ಕುರಿತು ತನಿಖೆ ನಡೆಸುವುದು ಸಾಧ್ಯವೇ ಎಂಬ ಪ್ರಶ್ನೆ ಮೂಡುವಂತೆ ಮಾಡಿದೆ ಈಗಿನ ಪ್ರಕರಣ.

ದಿನದ ಟ್ವೀಟ್

ಶೀಘ್ರ ಮಾತನಾಡಲಿ

ಹಿರಿಯ ನಾಯಕ ಗುಲಾಂ ನಬಿ ಆಜಾದ್ ಸರ್ ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡಿದ್ದರಿಂದ ಉಂಟಾಗಬಹುದಾದ ಪರಿಣಾಮ ಊಹಿಸಲು ಸಾಧ್ಯವಿಲ್ಲ. ಸಂವಹನದ ಕೊರತೆ ದೊಡ್ಡ ಮಟ್ಟದಲ್ಲಿದೆ. ಈ ನಾಯಕರು ಆಧಾರಸ್ತಂಭಗಳು. ದುರದೃಷ್ಟಕರ. ಅವರು ತಮ್ಮ ನಿರ್ಧಾರವನ್ನು ಪುನರ್‌ಪರಿಶೀಲಿಸುತ್ತಾರೆ ಎಂಬ ನಂಬಿಕೆ ಇದೆ ಮತ್ತು ಪಕ್ಷದ ನಾಯಕರು ಸಹ ಆದಷ್ಟು ಬೇಗ ಅವರೊಂದಿಗೆ ಮಾತನಾಡಲು ಪ್ರಯತ್ನಿಸಬೇಕು.

ಅರುನಭ್ ಹಜಾರಿಕಾ, ಸಾಮಾಜಿಕ ಕಾರ್ಯಕರ್ತ

ಕಿಡಿನುಡಿ

ಕಾಂಗ್ರೆಸ್ ಪಕ್ಷದ ಬಗ್ಗೆ ಅಸಮಾಧಾನಗೊಂಡು ರಾಜೀನಾಮೆ ನೀಡಿರುವ ಯಾರೂ ಆಜಾದ್ ಅವರು ಬಳಸಿರುವ ಕಟು ಪದಗಳ ಮೂರನೆಯ ಒಂದರಷ್ಟನ್ನೂ ಬಳಸಿಲ್ಲ. ತಾವು ಉನ್ನತ ಹುದ್ದೆಗಳಲ್ಲಿ ಇದ್ದಾಗ ಎಲ್ಲವೂ ಚೆನ್ನಾಗಿಯೇ ಇದ್ದ ಪಕ್ಷವು ಹುದ್ದೆ ಇಲ್ಲವಾದ ಕೆಲವೇ ದಿನಗಳಲ್ಲಿ ಹೇಗೆ ಅಪಥ್ಯವೆನಿಸುತ್ತದೆ? ಆಜಾದ್ ಅವರಂತಹ ಹಿರಿಯ ಹಾಗೂ ಅನುಭವಿ ನಾಯಕ ಸಂಯಮವನ್ನು ತೋರಬೇಕಿತ್ತು.

ಅಭಿಷೇಕ್ ಸಿಂಘ್ವಿ, ರಾಜ್ಯಸಭಾ ಸದಸ್ಯ, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಬುಧವಾರ, 27-8-1997

● **ಪಾಕ್ ಜತೆ ಸಂಘರ್ಷ: ಅಮೆರಿಕ ಮಧ್ಯಸ್ಥಿಕೆಗೆ ಭಾರತದ ತಿರಸ್ಕಾರ**

ಶ್ರೀನಗರ, ಆಗಸ್ಟ್ 26 (ಪಿಟಿಐ)– ಎರಡೂ ದೇಶಗಳು ಆಹ್ವಾನಿಸಿದರೆ ಭಾರತ–ಪಾಕಿಸ್ತಾನದ ನಡುವೆ ಆರಂಭವಾಗಿರುವ ಗಡಿ ಘರ್ಷಣೆಯನ್ನು ಕೊನೆಗೊಳಿಸಲು ಮಧ್ಯಸ್ಥಿಕೆ ವಹಿಸುವುದಕ್ಕೆ ಅಮೆರಿಕ ಸಿದ್ಧವಿದೆ ಎಂದು ಅಮೆರಿಕದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆದರೆ ಅಮೆರಿಕದ ಈ ಸಲಹೆಯನ್ನು ಭಾರತ ತಿರಸ್ಕರಿಸಿದೆ.

ಮೂರನೆಯವರು ಮಧ್ಯಸ್ಥಿಕೆ ವಹಿಸುವ ಪ್ರಶ್ನೆಯೇ ಇಲ್ಲ ಎಂದು ಭಾರತ ಖಡಾಖಂಡಿತವಾಗಿ ಹೇಳಿದೆ.

● **ಸಿಖ್ ಗಲಭೆ: ಮಾಜಿ ಸಚಿವ ಟೈಟ್ಲರ್ ವಿಚಾರಣೆಗೆ ಆದೇಶ**

ನವದೆಹಲಿ, ಆಗಸ್ಟ್ 26 (ಪಿಟಿಐ)– ಮಾಜಿ ಪ್ರಧಾನಿ ಇಂದಿರಾ ಗಾಂಧಿ ಹತ್ಯೆಯ ನಂತರ ದೆಹಲಿಯಲ್ಲಿ ನಡೆದ ಗಲಭೆಯಲ್ಲಿ ಅಮಾಯಕ ಸಿಖ್ ಜನರ ಹತ್ಯೆಗೆ ಪ್ರೇರೇಪಿಸಿದ ಆರೋಪ ಹೊತ್ತಿರುವ ಮಾಜಿ ಕೇಂದ್ರ ಸಚಿವ ಜಗದೀಶ್ ಟೈಟ್ಲರ್ ಬಗ್ಗೆ ಹೆಚ್ಚಿನ ತನಿಖೆ ನಡೆಸುವಂತೆ ದೆಹಲಿ ಹೈಕೋರ್ಟ್ ಇಂದು ಸಿಬಿಐಗೆ ಆದೇಶ ನೀಡಿತು.

ಉತ್ತರ ದೆಹಲಿಯ ಮಲ್ಕಾ ಗಂಜ್‌ನಲ್ಲಿ, 1984ರ ನವೆಂಬರ್ ತಿಂಗಳಲ್ಲಿ ಭುಗಿಲೆದ್ದ ಸಿಖ್ ವಿರೋಧಿ ಗಲಭೆಯಲ್ಲಿ ಟೈಟ್ಲರ್ ಅವರ ಪ್ರಮುಖ ಪಾತ್ರವಿದೆ ಎಂದು ಮೂವರು ಅರ್ಜಿದಾರರು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ಹೈಕೋರ್ಟ್ ಈ ಆದೇಶ ನೀಡಿದೆ. ಪ್ರಕರಣದಲ್ಲಿ ಶಾಮೀಲಾಗಿದ್ದಾರೆನ್ನಲಾದ ಇಬ್ಬರು ದೆಹಲಿ ಪೊಲೀಸ್ ಅಧಿಕಾರಿಗಳ ಬಗ್ಗೆ ವಿಚಾರಣೆಯನ್ನೂ ನಡೆಸುವಂತೆ ಅದು ಆದೇಶಿಸಿದೆ.

50 ವರ್ಷಗಳ ಹಿಂದೆ

ಭಾನುವಾರ, 27-8-1972

● **ಕಾಶ್ಮೀರದಲ್ಲಿ ಹಳೆಯ ಕದನವಿರಾಮ ರೇಖೆಗೇ ಪಾಕಿಸ್ತಾನದ ಮೊಂಡಾಟ**

ನವದೆಹಲಿ, ಆಗಸ್ಟ್ 26– ಸಿಮ್ಲಾ ಒಪ್ಪಂದದ ಬಳಿಕದ ಬೆಳವಣಿಗೆಗಳನ್ನು ಕುರಿತ ಎರಡನೇ ಸುತ್ತಿನ ಮಾತುಕತೆಗಳನ್ನು 'ತೃಪ್ತಿಕರವೆಂದು' ಪಾಕಿಸ್ತಾನಿ ನಿಯೋಗದ ವಕ್ತಾರರು ಕರೆದಿದ್ದಾರಾದರೂ, ಭಾರತದ ನಿಯೋಗದ ನಿಕಟವರ್ತಿ ಮೂಲಗಳ ಪ್ರಕಾರ, ಸಾಧಿಸಿರುವ ಪ್ರಗತಿ ಅಲ್ಪ.

ಮಾತುಕತೆಯ ಪ್ರಗತಿಯನ್ನು ಅಧ್ಯಕ್ಷ ಭುಟ್ಟೊರವರಿಗೆ ವಿವರಿಸಿ ಅವರಿಂದ ಸೂಚನೆಗಳನ್ನು ಪಡೆಯಲು ಪಾಕಿಸ್ತಾನಿ ನಿಯೋಗಕ್ಕೆ ಅನುಕೂಲವಾಗಲೆಂದು ಮಾತುಕತೆಯನ್ನು ಸೋಮವಾರಕ್ಕೆ ಮುಂದೂಡಲಾಗಿದೆ.

ಕಾಶ್ಮೀರದಲ್ಲಿ ಹೊಸ ಕದನ ವಿರಾಮ ರೇಖೆಯ ಅಲ್ಪಸ್ವಲ್ಪ ಬದಲಾವಣೆಗಳೊಡನೆ ಹಳೆಯ ಕದನ ವಿರಾಮ ರೇಖೆಯೇ ಆಗಬೇಕೆಂದು ಪಾಕಿಸ್ತಾನಿ ತಂಡದ ನಾಯಕ ಹಾಗೂ ಭುಟ್ಟೊರವರ ವಿಶೇಷ ಪ್ರತಿನಿಧಿ ಅಜೀಜ್ ಅಹ್ಮದ್‌ರವರು ಪಟ್ಟು ಹಿಡಿದಿದ್ದಾರೆ.

● **ಬಾಂಗ್ಲಾದೇಶಕ್ಕೆ ವಿಶ್ವಸಂಸ್ಥೆ ಸದಸ್ಯತ್ವ ನೀಡದಂತೆ ಚೀನಾದ 'ವೀಟೊ'**

ವಿಶ್ವಸಂಸ್ಥೆ, ಆಗಸ್ಟ್ 26– ಬಾಂಗ್ಲಾದೇಶವು ವಿಶ್ವಸಂಸ್ಥೆ ಸೇರುವುದರ ವಿರುದ್ಧ ಚೀನಾವು ನಿನ್ನೆ ಭದ್ರತಾ ಸಮಿತಿ ಸಭೆಯಲ್ಲಿ 'ವೀಟೊ' ಚಲಾಯಿಸಿತು.

ಪಕ್ಷಗಳ ಆಪೋಶನ ತೆಗೆದುಕೊಳ್ಳುವ ಅಭ್ಯಾಸವಿರುವ ಕಾರಣ ಬಿಜೆಪಿಗೆ ಬಿಹಾರದಲ್ಲೀಗ ಮಿತ್ರರೇ ಇಲ್ಲ

ಬಿಹಾರ: ಬಿಜೆಪಿ ನೌಕೆಯ ಮುಂದಿನ ಪಯಣ?



ವಿಶ್ಲೇಷಣೆ

ಅರುಣ್ ಸಿನ್ಹಾ

ಬಿಹಾರದಲ್ಲಿ ಜೆಡಿಯು ಅಲೆಯು ಸೃಷ್ಟಿಸಿರುವ ಪರಿಸ್ಥಿತಿಯನ್ನು ಬಿಜೆಪಿಯ ನೌಕೆಯು ಹೇಗೆ ದಾಟಿ ಬರಲಿದೆ ಎಂಬುದು ಕುತೂಹಲಕರ. ಬಿಜೆಪಿಯ ರಾಷ್ಟ್ರೀಯ ಪ್ರಮುಖರ ಸಮಿತಿಯು ಪಕ್ಷವು ಬಿಹಾರದಲ್ಲಿ 40 ಲೋಕಸಭಾ ಸ್ಥಾನಗಳ ಪೈಕಿ 35ರಲ್ಲಿ ಗೆಲ್ಲಲಿದೆ ಎಂದು ಹೇಳಿದೆಯಾದರೂ ಬಿಹಾರದಲ್ಲಿ ಬಿಜೆಪಿ ಪಾಲಿಗೆ ಏನು ಕಾದಿದೆ ಎಂಬುದನ್ನು ಹೇಳುವುದು ಕಷ್ಟ. ಬಿಜೆಪಿಯ ನೌಕೆಯನ್ನು ಈ ಬಾರಿ ನರೇಂದ್ರ ಮೋದಿ ಅವರೊಬ್ಬರೇ ಮುನ್ನಡೆಸಬೇಕಿದೆ; ಅವರಿಗೆ ಜೊತೆಗಾರರಾಗಿ ನಿತೀಶ್ ಕುಮಾರ್ ಇರುವುದಿಲ್ಲ.

2014ರಲ್ಲಿ ಮೋದಿ ಅವರು ಬಿಹಾರದಲ್ಲಿ ಕಡೆಯ ಬಾರಿ ಏಕಾಂಗಿಯಾಗಿದ್ದರು. ಆಗ ಅವರು ಪಕ್ಷಕ್ಕೆ 22 ಸ್ಥಾನ ಗೆದ್ದುಕೊಟ್ಟರು. ಮತ್ತೆ ಏಕಾಂಗಿಯಾಗಿ ಪಕ್ಷವನ್ನು ಮುನ್ನಡೆಸಿ 35 ಸ್ಥಾನಗಳನ್ನು ಮೋದಿ ಅವರು ಪಕ್ಷಕ್ಕೆ ಗೆದ್ದುಕೊಡುತ್ತಾರೆ ಎಂದು ನಿರೀಕ್ಷಿಸುವುದು ಕಷ್ಟವಾಗುತ್ತದೆ. 2014ರಲ್ಲಿ ಗೆದ್ದ 22 ಸ್ಥಾನಗಳು ಮೋದಿ ಅವರೊಬ್ಬರಿಂದಲೇ ದಕ್ಕಿದ್ದು ಎನ್ನಲಾಗದು. ಆಗ ಮೋದಿ ಅವರ ಜೊತೆ ಲೋಕ ಜನಶಕ್ತಿ ಪಕ್ಷದ ರಾಮ್ ವಿಲಾಸ್ ಪಾಸ್ವಾನ್ ಮತ್ತು ರಾಷ್ಟ್ರೀಯ ಲೋಕಸಮತಾ ಪಕ್ಷದ (ಆರ್‌ಎಲ್‌ಎಸ್‌ಪಿ) ಉಪೇಂದ್ರ ಕುಶ್ವಾಹ ಅವರು ಇದ್ದರು. ದಲಿತ ಹಾಗೂ ಕುಶ್ವಾಹ ಸಮುದಾಯದ ಮತಗಳನ್ನು ಸೆಳೆಯುವಲ್ಲಿ ಅವರ ನೆರವು ಇಲ್ಲದಿಲ್ಲ.

ಈಗ ಕುಶ್ವಾಹ ಅವರು ನಿತೀಶ್ ಜೊತೆ ಇದ್ದಾರೆ. ಅವರ ಪಕ್ಷವು ಜೆಡಿಯು ಜೊತೆ ವಿಲೀನಗೊಂಡಿದೆ. ರಾಮ್ ವಿಲಾಸ್ ಪಾಸ್ವಾನ್ ಸಾವಿನ ನಂತರ ಅವರ ಪಕ್ಷವು ಹೋಳಾಗಿದೆ. ಒಂದು ಗುಂಪನ್ನು ಅವರ ಸಹೋದರ ಪಶುಪತಿ ಪರಾಸ್, ಇನ್ನೊಂದು ಗುಂಪನ್ನು ಮಗ ಚಿರಾಗ್ ಪಾಸ್ವಾನ್ ಮುನ್ನಡೆಸುತ್ತಿದ್ದಾರೆ. 2024ರಲ್ಲಿ ಬಿಜೆಪಿಯು ಈ ಎರಡು ಗುಂಪುಗಳ ಪೈಕಿ ಯಾವುದರ ಜೊತೆ ಕೈಜೋಡಿಸಿದರೂ ಇನ್ನೊಂದು ಗುಂಪು ಬಿಜೆಪಿಯ ವಿರುದ್ಧ ಕೆಲಸ ಮಾಡಲಿದೆ. ಆಗ ರಾಮ್ ವಿಲಾಸ್ ಪಾಸ್ವಾನ್ ಕಟ್ಟಿದ ದಲಿತ ಮತಬ್ಯಾಂಕ್ ಒಡೆಯುತ್ತದೆ. ಕುಶ್ವಾಹ ಮತಗಳು ಇಲ್ಲದಿದ್ದರೆ, ದಲಿತರ ಮತಗಳು ಕಡಿಮೆ ಬಂದರೆ ಮೋದಿ ಅವರು 2024ರಲ್ಲಿ ಪಕ್ಷಕ್ಕೆ 35 ಸ್ಥಾನಗಳನ್ನು ಗೆದ್ದುಕೊಡುವುದು ಹೇಗೆ? ಬಿಜೆಪಿ ವಿರೋಧಿಗಳು ಬಲಿಷ್ಠ ಮೈತ್ರಿಕೂಟ ರಚಿಸಿಕೊಳ್ಳಬಹುದು. ಅವರ ಒಟ್ಟು ಮತಗಳಿಕೆ ಪ್ರಮಾಣವು ಹಲವು ಲೋಕಸಭಾ ಕ್ಷೇತ್ರಗಳಲ್ಲಿ ಬಿಜೆಪಿಯ ಮತಗಳಿಕೆ ಪ್ರಮಾಣಕ್ಕಿಂತ ಜಾಸ್ತಿ ಆಗಬಹುದು.

ಈಗ ಮಹಾಘಟಬಂಧನದಲ್ಲಿ ಇರುವ ಪಕ್ಷಗಳ (ಜೆಡಿಯು, ಆರ್‌ಜೆಡಿ, ಕಾಂಗ್ರೆಸ್, ಸಿಪಿಐ, ಸಿಪಿಎಂ, ಸಿಪಿಐಎಂಎಲ್, ಹಿಂದುಸ್ತಾನಿ ಅವಾಮ್ ಮೋರ್ಚಾ–ಜಾತ್ಯತೀತ) ಒಟ್ಟು ಮತಗಳಿಕೆಯು 2014ರಲ್ಲಿ ಬಿಜೆಪಿಯ ಮತಗಳಿಕೆಗಿಂತ ಒಂದು ಲಕ್ಷಕ್ಕಿಂತ ಜಾಸ್ತಿ ಇದ್ದ ಸ್ಥಾನಗಳ ಸಂಖ್ಯೆ 17. ಐದು ಕ್ಷೇತ್ರಗಳಲ್ಲಿ ಅಂತರವು 60 ಸಾವಿರದಿಂದ 1 ಲಕ್ಷದ ನಡುವೆ ಇತ್ತು. ಆರು ಕ್ಷೇತ್ರಗಳಲ್ಲಿ ಅಂತರವು 30 ಸಾವಿರದಿಂದ 60 ಸಾವಿರದ ನಡುವೆ ಇತ್ತು. 2014ರ ಫಲಿತಾಂಶವನ್ನು ಗಮನಿಸಿ ಹೇಳುವುದಾದರೆ, ಪೂರ್ವ ಬಿಹಾರ್‌ನಲ್ಲಿ ಬಿಜೆಪಿ ದುರ್ಬಲವಾಗಿದೆ. ಇಲ್ಲಿನ 12 ಲೋಕಸಭಾ ಕ್ಷೇತ್ರಗಳ ಪೈಕಿ 11ರಲ್ಲಿ ಬಿಜೆಪಿ ಅಥವಾ ಅದರ ಮಿತ್ರಪಕ್ಷಗಳು ಮಹಾ ಘಟಬಂಧನದ ಪಕ್ಷಗಳ ಒಟ್ಟು ಮತಗಳಿಗಿಂತ 1 ಲಕ್ಷದಷ್ಟು ಕಡಿಮೆ ಮತ ಪಡೆದಿವೆ, ಮುಂಗೇರ್ ಕ್ಷೇತ್ರದಲ್ಲಿ ಮಹಾ ಘಟಬಂಧನದ ಪಕ್ಷಗಳ ಒಟ್ಟು ಮತಗಳಿಗಿಂತ 74 ಸಾವಿರದಷ್ಟು ಮತಗಳನ್ನು ಕಡಿಮೆ ಪಡೆದಿವೆ. ಇವನ್ನು ಪರಿಗಣನೆಗೆ ತೆಗೆದುಕೊಂಡರೆ, ಪೂರ್ವ ಭಾಗದಲ್ಲಿ ಬಿಜೆಪಿಗೆ ಒಂದೂ ಸ್ಥಾನ ಇರುವುದಿಲ್ಲ.

ಉತ್ತರ ಬಿಹಾರದಲ್ಲಿ ಮಹಾಘಟಬಂಧನದ ಪಕ್ಷಗಳು ನಾಲ್ಕು ಕ್ಷೇತ್ರಗಳಲ್ಲಿ ಬಿಜೆಪಿ ಪಡೆದ ಮತಕ್ಕಿಂತ ಒಂದು ಲಕ್ಷಕ್ಕಿಂತ ಹೆಚ್ಚು ಮತಗಳನ್ನು ಪಡೆದಿವೆ. ಎರಡು ಕ್ಷೇತ್ರಗಳಲ್ಲಿ ಮತಗಳಿಕೆ ವ್ಯತ್ಯಾಸವು 60 ಸಾವಿರದಿಂದ 1 ಲಕ್ಷದ ನಡುವೆ ಇದೆ. ನಾಲ್ಕು ಕ್ಷೇತ್ರಗಳಲ್ಲಿ ವ್ಯತ್ಯಾಸವು 30 ಸಾವಿರದಿಂದ 60 ಸಾವಿರದ ನಡುವೆ ಇದೆ. ಉತ್ತರ ಬಿಹಾರದ 17 ಲೋಕಸಭಾ ಕ್ಷೇತ್ರಗಳ ಪೈಕಿ 10 ಕ್ಷೇತ್ರಗಳಲ್ಲಿ ಚಿತ್ರಣ ಹೀಗಿತ್ತು. ಇನ್ನುಳಿದ ಏಳು ಸ್ಥಾನಗಳಲ್ಲಿ ಬಿಜೆಪಿಯ ಮತಗಳಿಕೆಯು ಮಹಾಘಟಬಂಧನದ ಪಕ್ಷಗಳ ಒಟ್ಟು ಮತಗಳಿಗಿಂತ ಜಾಸ್ತಿ ಇತ್ತು. ಇಲ್ಲಿ, ಮೂರು ಕ್ಷೇತ್ರಗಳಲ್ಲಿ ಬಿಜೆಪಿಯ ಮತಗಳಿಕೆಯು ವಿರೋಧ ಪಕ್ಷಗಳ ಒಟ್ಟು ಮತಗಳಿಗಿಂತ 1 ಲಕ್ಷಕ್ಕೂ ಅಧಿಕವಾಗಿತ್ತು. ಇನ್ನೂ ಮೂರು ಕ್ಷೇತ್ರಗಳಲ್ಲಿ ಪಕ್ಷದ ಮತಗಳಿಕೆಯು ವಿರೋಧ ಪಕ್ಷಗಳ ಒಟ್ಟು ಮತಗಳಿಕೆಗಿಂತ 50 ಸಾವಿರಕ್ಕೂ ಅಧಿಕವಾಗಿತ್ತು. ಒಂದು ಸ್ಥಾನದಲ್ಲಿ ಬಿಜೆಪಿಯು ವಿರೋಧ ಪಕ್ಷಗಳ ಮತಗಳಿಗಿಂತ 23 ಸಾವಿರ ಹೆಚ್ಚು ಮತಗಳನ್ನು ಪಡೆದಿದೆ.

ದಕ್ಷಿಣ ಬಿಹಾರದಲ್ಲಿ ಬಿಜೆಪಿಯು 11 ಸ್ಥಾನಗಳ ಪೈಕಿ ಎಂಟರಲ್ಲಿ ವಿರೋಧ ಪಕ್ಷಗಳ ಒಟ್ಟು ಮತಗಳಿಗಿಂತ ಕಡಿಮೆ ಮತ ಪಡೆದಿದೆ. ಬಿಜೆಪಿ ಪಡೆದ ಮತಗಳು ಹಾಗೂ ವಿರೋಧ ಪಕ್ಷಗಳು ಪಡೆದಿರುವ ಒಟ್ಟು ಮತಗಳ ಅಂತರವು ಎರಡು ಸ್ಥಾನಗಳಲ್ಲಿ 1 ಲಕ್ಷಕ್ಕಿಂತ ಹೆಚ್ಚು, ಇನ್ನೂ ಎರಡು ಕ್ಷೇತ್ರಗಳಲ್ಲಿ ಇದು 60 ಸಾವಿರದಿಂದ 1 ಲಕ್ಷದ ನಡುವೆ ಇದೆ. ದಕ್ಷಿಣ ಬಿಹಾರದಲ್ಲಿ ಬಿಜೆಪಿ ಅಥವಾ ಅದರ ಮಿತ್ರಪಕ್ಷವು ವಿರೋಧ ಪಕ್ಷಗಳ ಒಟ್ಟು ಮತಗಳಿಗಿಂತ ಹೆಚ್ಚು ಪಡೆದಿರುವುದು ಮೂರು ಕ್ಷೇತ್ರಗಳಲ್ಲಿ. ಈ ಪೈಕಿ ಒಂದು ಕ್ಷೇತ್ರದಲ್ಲಿ ಬಿಜೆಪಿಯು ತೀರಾ ಸಣ್ಣ ಅಂತರದಿಂದ ಗೆಲುವು ಕಂಡಿದೆ.

ಪೂರ್ವ ಬಿಹಾರದಲ್ಲಿ ಯಾವ ಕ್ಷೇತ್ರದಲ್ಲಿಯೂ ಮುನ್ನಡೆ ಇಲ್ಲದೆ, ಉತ್ತರ ಬಿಹಾರದಲ್ಲಿ ಏಳು ಸ್ಥಾನಗಳಲ್ಲಿ ಹಾಗೂ ದಕ್ಷಿಣ ಬಿಹಾರದಲ್ಲಿ ಮೂರು ಸ್ಥಾನಗಳಲ್ಲಿ ಮಾತ್ರ 2014ರಲ್ಲಿ ಮುನ್ನಡೆ ಕಂಡಿದ್ದ ಬಿಜೆಪಿಯು (ಒಟ್ಟು 10 ಸ್ಥಾನಗಳು) 2024ರಲ್ಲಿ 35 ಸ್ಥಾನಗಳನ್ನು ಗೆದ್ದುಕೊಳ್ಳುವ ಆಶಾಭಾವನೆ ಹೊಂದಿರಬೇಕೇ?

ಇನ್ನೂ ಮೂರು ಅಂಶಗಳನ್ನು ನಾವು ಇಲ್ಲಿ ಪರಿಗಣಿಸಿಲ್ಲ. ಮತದಾರರು ಎರಡು ಅವಧಿಗಳ ಕೊನೆಯಲ್ಲಿ ಮೋದಿ ಅವರ ಸಾಧನೆ ಏನಿತ್ತು ಎಂಬುದನ್ನು ಪರಿಶೀಲಿಸಲಿದ್ದಾರೆ. ಹಣದುಬ್ಬರ, ನಿರುದ್ಯೋಗ ಹಾಗೂ ಕಡಿಮೆ ಆದಾಯದಂತಹ ಸಮಸ್ಯೆಗಳು ಜನರನ್ನು ಕಾಡುತ್ತಿರುವಾಗ ಎಲ್ಲವೂ ಪೂರಕವಾಗಿ ಕೆಲಸ ಮಾಡುವುದಿಲ್ಲ. ಮೋದಿ ಅವರಿಗೆ ಬೆಂಬಲ ಕಡಿಮೆ ಆಗಲೂಬಹುದು. ರಾಜ್ಯದಲ್ಲಿ ಬಡತನ ತೀವ್ರವಾಗಿದೆ. ಹಿಟ್ಟು, ಧಾನ್ಯ, ಅಡುಗೆ ಎಣ್ಣೆಯಂತಹ ಜೀವನಾವಶ್ಯಕ ವಸ್ತುಗಳ ಬೆಲೆ ಹೆಚ್ಚಳದಿಂದ ಆಗಿರುವ ಸಂಕಷ್ಟಗಳ ಬಗ್ಗೆ ಜನ ಮಾತನಾಡುತ್ತಿದ್ದಾರೆ ಎಂಬ ವರದಿಗಳು ಇವೆ. ರೈಲ್ವೆ ನೇಮಕಾತಿ ಹಗರಣ ಹಾಗೂ ಅಗ್ನಿಪಥ ವಿರುದ್ಧ ಬಿಹಾರದಲ್ಲಿ ನಡೆದ ಯುವಕರ ಪ್ರತಿಭಟನೆಯು ಇತರ ರಾಜ್ಯಗಳಲ್ಲಿ ನಡೆದ ಪ್ರತಿಭಟನೆಗಳಿಗಿಂತ ಹೆಚ್ಚು ಹಿಂಸಾತ್ಮಕವಾಗಿತ್ತು.

ಪಕ್ಷಗಳನ್ನು ಆಪೋಶನ ತೆಗೆದುಕೊಳ್ಳುವ ಅಭ್ಯಾಸ ಬೆಳೆಸಿಕೊಂಡಿರುವ ಕಾರಣ ಬಿಜೆಪಿಗೆ ಈಗ ಬಿಹಾರದಲ್ಲಿ ಮಿತ್ರರೇ ಇಲ್ಲ. ಬಿಜೆಪಿ ಅಭ್ಯರ್ಥಿಗಳಿಗೆ 2014ರಲ್ಲಿ ಸಿಕ್ಕ ಮತಕ್ಕಿಂತ 2019ರಲ್ಲಿ ಹೆಚ್ಚು ಮತಗಳನ್ನು ಗಳಿಸಿಕೊಳ್ಳಲು ನೆರವಾದ ಜೆಡಿಯು, ಈಗ ಬಿಜೆಪಿ ಜೊತೆಗಿನ ಗೆಳೆತನ ಕಡಿದುಕೊಂಡಿದೆ. ಮೂವರು ಶಾಸಕರನ್ನು ಬಿಜೆಪಿಯು ಆಪೋಶನ ತೆಗೆದುಕೊಂಡ ಕಾರಣಕ್ಕಾಗಿ ವಿಕಾಸಶೀಲ ಇನ್ಸಾನ್ ಪಕ್ಷವು ಬಿಜೆಪಿ ಜೊತೆಗಿನ ನಂಟು ಕಡಿದುಕೊಂಡಿದೆ.

ರಾಷ್ಟ್ರ ಮಟ್ಟದಲ್ಲಿ ವಿರೋಧ ಪಕ್ಷಗಳು ಬಿಜೆಪಿಯ ವಿರುದ್ಧ ಒಗ್ಗಟ್ಟಿನ ಹೋರಾಟ ನಡೆಸುವ ಬಗ್ಗೆ ಪರಿಶೀಲನೆ ನಡೆಸುತ್ತಿವೆ. ವಿರೋಧ ಪಕ್ಷಗಳ ಒಕ್ಕೂಟಕ್ಕೆ ಬಲಿಷ್ಠ, ದೂರದೃಷ್ಟಿಯುಳ್ಳ ಹಾಗೂ ವಿಶ್ವಾಸಾರ್ಹ ನಾಯಕ ದೊರೆತರೆ, ಬೇರೆ ಯಾವ ಪರ್ಯಾಯವೂ ಇಲ್ಲದೆ ಮೋದಿ ಅವರಿಗೆ ಮತ ಚಲಾಯಿಸಿದ್ದ ಬಿಹಾರಿಗಳ ಮತವು ವಿಭಜನೆ ಆಗಬಹುದು. ನಿತೀಶ್ ಕುಮಾರ್ ಅವರು ಮೋದಿ ಅವರಿಗೆ ಗಂಭೀರ ಸವಾಲು ಒಡ್ಡುವಂತೆ ಬೆಳೆಯುವ ಸಾಧ್ಯತೆಗಳು ಇವೆ. ಆದರೆ, ಈ ಸಾಧ್ಯತೆಗಳಿಗೆ ವಿರುದ್ಧವಾಗಿರುವ ಅಂಶಗಳೂ ಹಲವು ಇವೆ. ನಿತೀಶ್ ಕುಮಾರ್ ಅವರು ಒಂದು ವೇಳೆ ಆ ರೀತಿ ಬೆಳೆಯದಿದ್ದರೂ, ವಿರೋಧ ಪಕ್ಷಗಳ ಒಕ್ಕೂಟದ ಪಾಲಿಗೆ ಅವರು ಪ್ರಮುಖ ನಾಯಕ ಆಗಿರಲಿದ್ದಾರೆ. ಆಗ ಅದು ಬಿಹಾರದ ಸಾಮಾನ್ಯ ಮತದಾರರಿಗೆ ವಿರೋಧ ಪಕ್ಷಗಳ ಕಡೆ ಮುಖ ಮಾಡಲು ಒಂದು ಆಕರ್ಷಣೆ ಆಗಲಿದೆ.

ಲೇಖಕ: ಪತ್ರಕರ್ತ, 'ದಿ ಬ್ಯಾಟಲ್ ಫಾರ್ ಬಿಹಾರ್' ಕೃತಿಕಾರ



ಚುರುಮುರಿ

ಕಮಿಷನ್ ಕಂಪ್ಲೇಂಟ್

● ಸಿ.ಎನ್.ರಾಜು

'ಮೊದಲು 2-3ರಷ್ಟಿದ್ದ ಕಾಮಗಾರಿ ಕಮಿಷನ್ ಪರ್ಸೆಂಟೇಜು 5-10ರಷ್ಟಾಗಿ, 20-30ಕ್ಕೆ ಹೆಚ್ಚಾಗಿ, ಈಗ 40 ಪರ್ಸೆಂಟಿಗೆ ಏರಿಕೆಯಾಗಿದೆಯಂತೆ ಕಣ್ರೀ...' ಎಂದಳು ಅನು.

'ಇರಬಹುದು. ಕಾಲ, ಆಳುವ ಪಕ್ಷ ಬದಲಾದಂತೆ ಪದಾರ್ಥಗಳ ಬೆಲೆ ಹೆಚ್ಚಾಗುವಂತೆ ಕಾಮಗಾರಿ ಕಮಿಷನ್ ಪ್ರಮಾಣವೂ ಏರುವುದು ಪ್ರಕೃತಿ ಸಹಜವೇನೋ...' ಅಂದ ಗಿರಿ.

'ಸ್ಕೂಲ್ ಮಕ್ಕಳು 40 ಪರ್ಸೆಂಟ್ ಪಡೆದರೆ ಪಾಸಾಗ್ತಾರೆ, 40 ಪರ್ಸೆಂಟ್ ಕೊಟ್ಟರೆ ಕಾಮಗಾರಿ ಫೇಲ್ ಆಗೋದಿಲ್ವೇನ್ರೀ? ಪಾಸಾಗಲು ಕಾಮಗಾರಿಗೆ ಸಪ್ಲಿಮೆಂಟರಿಯ ಅವಕಾಶವೂ ಇಲ್ಲ'.

'ಕಾಮಗಾರಿ ಮಾತ್ರವಲ್ಲ, ಗುತ್ತಿಗೆದಾರರೂ ಫೇಲ್ ಆಗಿಬಿಡ್ತಾರಂತೆ. ಚಿಲ್ಲರೆ ಹಣದಲ್ಲಿ ಕಳಪೆ ಕಾಮಗಾರಿ ಮಾಡಿದರೆ ಗುತ್ತಿಗೆದಾರರು ಹೆಸರು ಕೆಡಿಸಿಕೊಂಡು ಬ್ಲ್ಯಾಕ್‌ಲಿಸ್ಟ್ ಸೇರುವ ಅಪಾಯವೂ ಇದೆಯಂತೆ. ಕಮಿಷನ್ ಕಾಟ ತಪ್ಪಿಸಿ ಅಂತ ಗುತ್ತಿಗೆದಾರರು ಪ್ರಧಾನಿಯಿಂದ ವಿಪಕ್ಷ ನಾಯಕರವರೆಗೂ ಕಂಪ್ಲೇಂಟ್ ಕೊಟ್ಟಿದ್ದಾರಂತೆ'.

'ಲೋಕಾಯುಕ್ತರಿಗೆ ದೂರು ಕೊಡಿ, ಇಲ್ಲವೆ ದಾಖಲೆ ಕೊಡಿ, ನಾವೇ ಕ್ರಮ ತೆಗೆದುಕೊಳ್ತೀವಿ ಅಂತ ಸಿಎಂ ಹೇಳಿದ್ದಾರೆ'.

'ದೂರು ಕೊಡಲು ಗುತ್ತಿಗೆದಾರರಿಗೆ ದಾಖಲಾತಿಗಳೇ ಸಿಗ್ತಿಲ್ಲವಂತೆ'.

'ಎಲ್ಲ ಇಲಾಖೆಗಳಲ್ಲೂ ಪರ್ಸೆಂಟೇಜ್ ಫಿಕ್ಸ್ ಆಗಿ, ಓಪನ್ನಾಗಿ ಲಂಚ ವ್ಯವಹಾರ ನಡೆಯುತ್ತಿದೆ ಅಂತ ವಿರೋಧ ಪಕ್ಷದವರೇ ಹೇಳಿದ್ದಾರಲ್ಲಾ...'

'ಹೋಟೆಲ್‌ಗಳಲ್ಲಿ ತಿಂಡಿ ಲಿಸ್ಟ್ ಪ್ರಕಟಿಸಿದಂತೆ, ಯಾವ ಕಚೇರಿಯಲ್ಲೂ ಲಂಚಪಟ್ಟಿ ಹಾಕಿರುವುದಿಲ್ಲ. ಆಫ್ ದಿ ರೆಕಾರ್ಡ್ ವ್ಯವಹಾರ ಮಾಡಿ, ಆನ್ ದಿ ರೆಕಾರ್ಡ್ ಕಾಮಗಾರಿ ಮಾಡಬೇಕಂತೆ. 'ಕೊಟ್ಟ ದುಡ್ಡನ್ನು ಗೌರವಪೂರ್ವಕವಾಗಿ ಸ್ವೀಕರಿಸಿದ್ದೇವೆ' ಅಂತ ಯಾರೂ ಸೀಲ್ ಒತ್ತಿ, ಸೈನ್ ಹಾಕಿ ಕೊಡದ ಕಾರಣ ಕಮಿಷನ್ ವ್ಯವಹಾರಗಳಿಗೆ ದಾಖಲೆಗಳು ಇರೋದಿಲ್ಲ. ಇದು ಕೊಟ್ಟು-ಗಿಟ್ಟಿಸುವ ಒಳ- ಒಳಾಂಗಣದ ಆಟವಾಗಿರುವುದರಿಂದ ಇಲ್ಲಿ ರೂಲ್ಸು, ರೆಫರಿ ಇರೋದಿಲ್ಲ, ಸಾಮರ್ಥ್ಯ ಇದ್ದವರು ಆಟ ಆಡುವ ಪದ್ಧತಿ ಬೆಳೆದುಬಂದಿದೆ...' ಅಂದ ಗಿರಿ.

ಸಂಗತ

ಪ್ರಶ್ನೆ ಒಂದು: ಪ್ರಯೋಜನ ಹಲವು

ಮಕ್ಕಳು ಬೆಳೆಯುತೊಡಗಿದಂತೆ ಪ್ರಶ್ನೆ ಕೇಳುವ ಉತ್ಸಾಹ ಅವರಲ್ಲಿ ಜರ್ರನೆ ಇಳಿಯುವುದೇಕೆ?

● ಡಾ. ಮುರಳೀಧರ ಕಿರಣಕೆರೆ

ಅದು, ಪಿಯು ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ವ್ಯಕ್ತಿತ್ವ ವಿಕಸನ ಕಾರ್ಯಾಗಾರ. ಉಪನ್ಯಾಸದ ನಂತರ ಪ್ರಶ್ನೋತ್ತರ ಅವಧಿಯಲ್ಲಿ ಸಂದೇಹ, ಅನುಮಾನ, ಹೆಚ್ಚಿನ ಮಾಹಿತಿ, ವಿವರಣೆ ಬೇಕಾದಲ್ಲಿ ಪ್ರಶ್ನೆಗಳನ್ನು ಕೇಳಲು ಅವಕಾಶವಿತ್ತು. ಅಲ್ಲಿದ್ದ ಸುಮಾರು ನೂರು ವಿದ್ಯಾರ್ಥಿಗಳಲ್ಲಿ ಒಬ್ಬರೂ ಬಾಯಿ ಬಿಡಲಿಲ್ಲ. ಕೆಲವರನ್ನು ಉಪನ್ಯಾಸಕರೇ ಹೆಸರಿಸಿ, ಏನನ್ನಾದರೂ ಕೇಳುವಂತೆ ಪುನಃ ಪುನಃ ಒತ್ತಾಯಿಸಿದರೂ ಮೌನವೇ ಪ್ರಶ್ನೆಯಾಗಿತ್ತು! ಸಂವಾದದ ರೂಪದಲ್ಲಿ ವಿಷಯವನ್ನು ಮನದಟ್ಟು ಮಾಡಿಸುವ ಪ್ರಯತ್ನ ವಿಫಲವಾಗಿತ್ತು.

ಕಾರ್ಯಕ್ರಮ ಮುಗಿಸಿ ಹೊರ ದಾಟುತ್ತಿದ್ದಂತೆಯೇ ವಿದ್ಯಾರ್ಥಿನಿಯರು ಉಪನ್ಯಾಸಕರನ್ನು ಮುತ್ತಿಕೊಂಡು ವಿಧ ವಿಧವಾದ ಪ್ರಶ್ನೆ ಕೇಳತೊಡಗಿದರು. ಅವರ ಸಂದೇಹಗಳಿಗೆ ತಾಳ್ಮೆಯಿಂದ ಉತ್ತರಿಸಿ 'ಇದನ್ನೆಲ್ಲಾ ಕ್ಲಾಸ್‌ರೂಮಲ್ಲೇ ಉಪನ್ಯಾಸದ ಅವಧಿಯಲ್ಲಿ ಕೇಳಬಹುದಿತ್ತಲ್ಲ, ಆಗ ಒಬ್ಬರೂ ಬಾಯಿ ಬಿಡಲಿಲ್ಲ' ಎಂದು ಮೆಲುವಾಗಿ ಗದರಿದಾಗ, 'ಅಲ್ಲಿ ಕೇಳಕ್ಕೆ ಒಂಥರಾ ಆಗುತ್ತೆ ಸರ್. ಆಮೇಲೆ ಎಲ್ಲರೂ ಆಡ್ಕೊಳ್ಳಕ್ಕೆ ಶುರು ಮಾಡಿದ್ರೆ ಅಂತ ಭಯ' ಎಂದಾಗ ಕಾಲೇಜು ಮಕ್ಕಳ ಈ ಪರಿಯ ಮನಃಸ್ಥಿತಿ ಆತಂಕ ತಂದಿತ್ತು!

ಪ್ರಾಥಮಿಕ ಶಾಲಾ ಮಕ್ಕಳಿಗೆ ಪರಿಸರ ನೈರ್ಮಲ್ಯದ ಕುರಿತು ತಿಳಿವಳಿಕೆ ಮೂಡಿಸುವ ಕಾರ್ಯಕ್ರಮವೊಂದರಲ್ಲಿ ಕಾಣಿಸಿದ್ದು ಸಂಪೂರ್ಣ ಬೇರೆಯದ್ದೇ ಚಿತ್ರ. ಪ್ಲಾಸ್ಟಿಕ್ ಕಸ, ಸೊಳ್ಳೆಗಳು, ಓಝೋನ್ ಪದರ ಅಂತೆಲ್ಲಾ ಮಕ್ಕಳದ್ದು ತಣಿಯದ ಕುತೂಹಲ. ಪೈಪೋಟಿಗೆ ಬಿದ್ದವರಂತೆ ಒಬ್ಬರ ನಂತರ ಒಬ್ಬರು ಪ್ರಶ್ನೆ ಕೇಳುವವರೆ. ಮನಸ್ಸಲ್ಲಿ ಮೂಡಿದ್ದನ್ನು ಕೇಳಲು ಅಲ್ಲಿ ಹಿಂಜರಿಕೆಯಾಗಲಿ, ಹೆದರಿಕೆಯಾಗಲಿ ಒಂಚೂರೂ ಇರಲಿಲ್ಲ. ಆ ಚಿಣ್ಣರ ಪ್ರಶ್ನೆಗಳ ಸುರಿಮಳೆಯಲ್ಲಿ ಉಪನ್ಯಾಸಕರಿಗೆ ತರಗತಿ ಮುಗಿಸುವುದೇ ಸವಾಲಾಗಿತ್ತು.

ಹೌದು, ಪ್ರಶ್ನಿಸುವ ಮನೋಭಾವ ಚಿಕ್ಕ ಮಕ್ಕಳಲ್ಲಿ ಅತಿ ಹೆಚ್ಚು. ಅವರ ಕುತೂಹಲಕ್ಕೆ ಕೊನೆ ಮೊದಲೆಂಬುದಿಲ್ಲ. ಎಲ್ಲದರ ಮೇಲೂ ಆಸಕ್ತಿ. ಗೊತ್ತಿರದ ವಿಚಾರಗಳನ್ನು ಕೇಳಿ ತಿಳಿದುಕೊಳ್ಳುವ ತುಡಿತ. ಪ್ರಶ್ನಿಸುವಾಗ ಮುಜುಗರ, ಹಿಂಜರಿಕೆಯ ಭಾವನೆಯಿರುವುದಿಲ್ಲ. ಇತರರು ತಪ್ಪು ತಿಳಿದರೆ ಎಂಬ ಯೋಚನೆಯೇ ಬಾರದ ವಯಸ್ಸದು. ಅದು ಯಾಕೆ, ಇದು ಯಾಕೆ ಎಂದು ಪ್ರಶ್ನಿಸುವ ಮಗುವು ವಿಷಯ ತಿಳಿದುಕೊಳ್ಳುವುದಕ್ಕಷ್ಟೇ ಪ್ರಶ್ನಿಸುವುದಿಲ್ಲ, ಪ್ರಶ್ನಿಸುತ್ತಾ ಹೋಗುವುದು ಅದಕ್ಕೆ ಒಂಥರಾ ಖುಷಿಯ ವಿಚಾರ.

ಎಳೆಯರ ಮಾತುಕತೆಯಲ್ಲಿ ಶೇ 70-80ರಷ್ಟು ಪ್ರಶ್ನೆಗಳೇ ತುಂಬಿರುತ್ತವೆ ಎನ್ನುತ್ತದೆ ಅಧ್ಯಯನ. ಇನ್ನು ಶಾಲೆಯಲ್ಲಿ ಒಂದು ಮಗು ಪ್ರಶ್ನೆ ಹಾಕಿದರೆ ಮುಗಿಯಿತು, ಇದು ಇತರ ಮಕ್ಕಳಲ್ಲೂ ತಾವೂ ಕೇಳಬೇಕೆಂಬ ಪ್ರೇರಣೆ ಹುಟ್ಟುಹಾಕುತ್ತದೆ.

ಮಕ್ಕಳು ಬೆಳೆಯುತ್ತಿದ್ದಂತೆ ಕೇಳುವ ಉತ್ಸಾಹ ಜರ್ರನೆ ಇಳಿಯುತ್ತದೆ. ಹದಿಹರೆಯಕ್ಕೆ ಕಾಲಿಡುತ್ತಿದ್ದಂತೆಯೇ ತಾವೀಗ ದೊಡ್ಡವರಾಗಿದ್ದೇವೆ ಎಂಬ ಭಾವನೆಯು ಪ್ರಶ್ನೆ ಮಾಡುವ ಮನೋಭಾವಕ್ಕೆ ಬ್ರೇಕ್ ಹಾಕುತ್ತದೆ. ಅನುಮಾನ, ಗೊಂದಲ, ಅರ್ಥವಾಗದ ವಿಚಾರಗಳನ್ನು ಮುಕ್ತವಾಗಿ ಕೇಳಲು ಏನೋ ಹಿಂಜರಿಕೆ, ನಾಚಿಕೆ, ಮುಜುಗರ, ಭೀತಿ, ಕೀಳರಿಮೆ, ಸಹಪಾಠಿಗಳು ಹೀಯಾಳಿಸುವರೆಂಬ ಆತಂಕ, ಪ್ರಶ್ನೆ ಕೇಳಿದರೆ ವೃಥಾ ಶಿಕ್ಷಕರ ಕಣ್ಣಿಗೆ ಬೀಳುವ ಚಿಂತೆ, ಅವರು ಗದರಿದರೆ ಎಂಬ ಹೆದರಿಕೆ, ತನ್ನನ್ನು ಮೂರ್ಖ ಎಂದು ಬ್ರ್ಯಾಂಡ್ ಮಾಡಿದರೆ ಎಂಬ ತಲ್ಲಣ, ಕೇಳುವ ಮನಸ್ಸಿಲ್ಲದಿರುವುದು, ಎದ್ದು ಪ್ರಶ್ನೆ ಕೇಳಲು ಸೋಮಾರಿತನ, ಯಾವುದೂ ಅರ್ಥವಾಗದಿರುವಾಗ ಏನು ಕೇಳಬೇಕೆಂಬ ಗೊಂದಲ... ಇಂಥದ್ದೇ ಹತ್ತಾರು ಕಾರಣಗಳಿಂದ ಹದಿಹರೆಯದ ಮಕ್ಕಳು ಪ್ರಶ್ನೆ ಕೇಳುವುದರಿಂದ ದೂರ ಉಳಿಯುತ್ತಾರೆ.



ಪ್ರಶ್ನೆಗಳನ್ನು ಕೇಳದ ಮಕ್ಕಳು ಪರಿಣಾಮಕಾರಿ ಸಂವಹನದಲ್ಲಿ ಹಿಂದುಳಿಯಬಹುದು. ಮನದೊಳಗೆ ಗೊಂದಲಗಳು ಹಾಗೆಯೇ ಉಳಿದಾಗ ಉತ್ತಮ ಅಂಕ ಗಳಿಕೆಗೂ ಹಿನ್ನಡೆ. ಇಂತಹ ಮಕ್ಕಳು ಆತ್ಮವಿಶ್ವಾಸದ ಕೊರತೆ, ಕೀಳರಿಮೆಯಿಂದ ಬಳಲುತ್ತಾ ಮುಂದೆ ಉತ್ತಮ ಉದ್ಯೋಗ ಪಡೆಯುವಲ್ಲಿ ಸೋಲಬಹುದು.

ಹೌದು, ಪ್ರಶ್ನಿಸುವುದು ಗೊಂದಲಗಳ ಪರಿಹಾರ, ಸರಿಯಾದ ವಿಚಾರಗಳ ಕಲಿಕೆಯಲ್ಲದೆ ಹೊಸ ವಿಷಯಗಳನ್ನು ಅರಿಯಲು ಸಹಕಾರಿ. ವಿಶೇಷವಾಗಿ ಗುರುತಿಸಿಕೊಳ್ಳಲು, ಸಂಭಾಷಣೆಯನ್ನು ನಿಗದಿತ ದಿಕ್ಕಿನಲ್ಲಿ ಒಯ್ಯಲು, ಭಾವನಾತ್ಮಕ ಬುದ್ಧಿವಂತಿಕೆ ಬೆಳೆಸಿಕೊಳ್ಳಲು, ಸಂಭಾಷಣೆಯ ಕೌಶಲ ಕಲಿಯಲು, ನಾಯಕತ್ವ ಗುಣಗಳನ್ನು ಮೈಗೂಡಿಸಿಕೊಳ್ಳಲು, ಸಮಸ್ಯೆಗಳ ಪರಿಹಾರ ಮಾರ್ಗ ಕಂಡುಕೊಳ್ಳಲು, ವ್ಯಕ್ತಿಗತ ಸಂಬಂಧಗಳನ್ನು ಸುಧಾರಿಸಿಕೊಳ್ಳಲು, ಸಂದರ್ಶನಗಳನ್ನು ವ್ಯವಸ್ಥಿತವಾಗಿ ಎದುರಿಸಲು, ವೃತ್ತಿಜೀವನದಲ್ಲಿ ಹೆಚ್ಚಿನದನ್ನು ಸಾಧಿಸಲು ವಿದ್ಯಾರ್ಥಿ ಜೀವನದಲ್ಲಿ ಪ್ರಶ್ನೆ ಕೇಳುವ ಮನೋಭಾವ ರೂಢಿಸಿಕೊಳ್ಳುವುದು ಅತಿ ಮುಖ್ಯ. ಒಬ್ಬ ವಿದ್ಯಾರ್ಥಿ ತನ್ನ ಅನುಮಾನ ವ್ಯಕ್ತಪಡಿಸಿದಾಗ ಸಿಗುವ ಉತ್ತರ ಹಲವು ಮಕ್ಕಳ ಸಂದೇಹವನ್ನು ಬಗೆಹರಿಸಬಹುದು.

ಶಿಕ್ಷಕರು, ಪೋಷಕರು ಪ್ರಶ್ನೆ ಕೇಳುವುದರಿಂದ ಆಗುವ ಪ್ರಯೋಜನಗಳ ಬಗ್ಗೆ ಮಕ್ಕಳಿಗೆ ತಿಳಿಹೇಳಬೇಕು. ಪಾಠ ಮಾಡುವಾಗ ಪ್ರಶ್ನೋತ್ತರಕ್ಕಾಗಿ ಸಮಯ ಮೀಸಲಿಡಬೇಕು. ಪ್ರಶ್ನೆ ಕೇಳುವ ಮಗುವನ್ನು ಉತ್ತೇಜಿಸಿ ಇತರರೂ ಕೇಳುವಂತೆ ಪ್ರೇರಣೆ ನೀಡಬೇಕು. ಒಂದು ತರಗತಿಯಾಗಲಿ, ವಿಚಾರ ಸಂಕಿರಣವಾಗಿರಲಿ, ಉಪನ್ಯಾಸ ಕಾರ್ಯಕ್ರಮವಾಗಲಿ ಎಷ್ಟು ಯಶಸ್ವಿಯಾಗಿದೆ ಎಂಬುದಕ್ಕೆ ಅಳತೆಗೋಲೇ ಅಲ್ಲಿ ಮೂಡಿಬರುವ ಪ್ರಶ್ನೆಗಳು. ಹಾಗಾಗಿ ಸಮಗ್ರ ವ್ಯಕ್ತಿತ್ವ ವಿಕಸನದಲ್ಲಿ ಪ್ರಶ್ನೆಯ ಮಹತ್ವ ತುಂಬಾ ದೊಡ್ಡದು.

ವಾಚಕರ ವಾಣಿ

ಆಹಾರ ಪದ್ಧತಿ: ಸಾತ್ವಿಕವೋ? ಹಿಂಸಾತ್ಮಕವೋ?

ಸಸ್ಯಾಹಾರ ಮತ್ತು ಮಾಂಸಾಹಾರ ಪದ್ಧತಿಗಳಲ್ಲಿ ಯಾವುದು ಶ್ರೇಷ್ಠ ಎಂಬ ವಾದ ಅನಾದಿ ಕಾಲದಿಂದ ಚರ್ಚೆಯ ವಿಷಯವಾಗಿದೆ. ಮನುಷ್ಯನು ಮೂಲತಃ ಮಾಂಸಾಹಾರಿಯಾದರೂ ಕಾಲಕ್ರಮೇಣ ನಾಗರಿಕತೆ ಬೆಳೆದಂತೆ, ಅಹಿಂಸೆಯ ಮಾರ್ಗ ಅನುಸರಿಸುವುದು ಒಳಿತು ಎಂಬ ಸತ್ಯವನ್ನು ಅರಿತುಕೊಂಡಿದ್ದಾನೆ. ಕಾಲಕ್ರಮೇಣ ಕೆಲವು ಜಾತಿ, ಮತ, ಪಂಥಗಳು ಸಸ್ಯಾಹಾರವೇ ಉತ್ತಮ ಆಹಾರ ಪದ್ಧತಿಯೆಂದು ಆಯ್ದು ತಮ್ಮ ಪರಂಪರೆಯಾಗಿ ಸ್ವೀಕರಿಸಿವೆ. ಹಾಗಾಗಿಯೇ ನಮ್ಮಲ್ಲಿ ಅನೇಕ ಭಾರತೀಯರು ಪರಂಪರಾಗತ ಸಸ್ಯಾಹಾರಿಗಳು. ಆಹಾರ ಪ್ರಾಣಿಜನ್ಯವೋ ಅಥವಾ ಸಸ್ಯಜನ್ಯವೋ ಎನ್ನುವುದಕ್ಕಿಂತ ಅದು ಸಾತ್ವಿಕವೋ ಅಥವಾ ಹಿಂಸಾತ್ಮಕವೋ ಎನ್ನುವುದು ಮುಖ್ಯ. ಹಾಲು, ಬೆಣ್ಣೆ ಮತ್ತು ತುಪ್ಪಗಳೆಲ್ಲವೂ ಪ್ರಾಣಿಜನ್ಯ ಆಹಾರವಾಗಿದ್ದರೂ ಮುಖ್ಯವಾಗಿ ಅವನ್ನು ಅಹಿಂಸೆಯ ಮಾರ್ಗದಿಂದ ಪಡೆಯಲಾಗಿದೆ. ಪ್ರಾಣಿಗಳಿಗೆ ಯಾವುದೇ ಹಿಂಸೆ ಕೊಡದೆ ಅದರ ಉತ್ಪನ್ನವನ್ನು ಬಳಸಿದಲ್ಲಿ ಅದರಿಂದ ಯಾರಿಗೂ ನಷ್ಟವಿಲ್ಲ.

ಹಾಲು ಕರೆದು ಪ್ರಯೋಜನ ಪಡೆಯುವ ರೈತ, ಹಸುವನ್ನು ಸಾಕಿ ಸಲಹುತ್ತಾನೆ. ಮುಖ್ಯವಾಗಿ ಹಸುವಿನ ಹಾಲಿನ ಮೇಲೆ ಅದರ ಕರುವಿಗೆ ಮೊದಲ ಹಕ್ಕು ಇದ್ದು, ಹಳ್ಳಿಗಳಲ್ಲಿ ಇಂದಿಗೂ ಕರು ಹಾಲು ಕುಡಿದ ನಂತರವೇ ಹಾಲು ಕರೆಯುವುದು ವಾಡಿಕೆ. ಹಸು ತನ್ನ ಕರುವಿಗೆ ಎಷ್ಟು ಬೇಕೋ ಅಷ್ಟು ಹಾಲನ್ನು ಉಳಿಸಿ ಮಿಕ್ಕ ಹಾಲನ್ನು ಮಾತ್ರ ಕೊಡುತ್ತದೆ ಎಂಬುದು ವೈಜ್ಞಾನಿಕ ಸತ್ಯವೂ ಹೌದು. ಹಾಗಾಗಿ ಹಾಲು ಮತ್ತು ಅದರ ಉತ್ಪನ್ನಗಳನ್ನು ಪ್ರಾಣಿಜನ್ಯವಾದರೂ ಸಸ್ಯಾಹಾರದ ಜೊತೆ ಸೇರಿಸಲಾಗಿದೆ. ಸಸ್ಯಾಹಾರ ಮತ್ತು ಮಾಂಸಾಹಾರದ ಆಯ್ಕೆಯ ನಡುವೆ ಇರುವ ಮೂಲತತ್ವ ಹಿಂಸೆ ಮತ್ತು ಅಹಿಂಸೆಯ ನಡುವಿನ ಆಯ್ಕೆ ಎಂಬ ಸರಳ ಸತ್ಯ ಗಮನಕ್ಕೆ ಬರದೆ, ಆಹಾರವೆನ್ನುವುದು ಪ್ರತಿಷ್ಠೆಯ ವಿಷಯವಾಗಿರುವುದು ವಿಷಾದದ ಸಂಗತಿ.

ಸುರೇಶ ಎಸ್., ಬೆಂಗಳೂರು

ನಿರಾಸೆ ಮೂಡಿಸಿದ ಪುಸ್ತಕ ಅಭಿಯಾನ

ಕರ್ನಾಟಕ ಸಾಹಿತ್ಯ ಅಕಾಡೆಮಿಯು 'ಅಮೃತ ಭಾರತಿಗೆ ಕನ್ನಡದಾರತಿ' ಕಾರ್ಯಕ್ರಮದ ಅಂಗವಾಗಿ ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಶೇ 50ರಷ್ಟು ರಿಯಾಯಿತಿ ದರದಲ್ಲಿ ಅಮೃತ ಪುಸ್ತಕ ಮಾರಾಟ ಅಭಿಯಾನವನ್ನು ಮತ್ತು ಸಾಕ್ಷ್ಯಚಿತ್ರ ಪ್ರದರ್ಶನವನ್ನು ವ್ಯವಸ್ಥೆ ಮಾಡಿದೆ. ಅದರಂತೆ ಇತ್ತೀಚೆಗೆ ಚಿತ್ರದುರ್ಗದ ಸರ್ಕಾರಿ ಕಲಾ ಕಾಲೇಜಿನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮವನ್ನು ವೀಕ್ಷಿಸಿ, ಒಂದಷ್ಟು ಪುಸ್ತಕಗಳನ್ನು ತರಲು ಹೋದ ನಮಗೆ ನಿರಾಸೆಯಾಯಿತು. ದುರ್ಗದಂತಹ ಸಣ್ಣ ನಗರದಲ್ಲಿ ಅಕಾಡೆಮಿ ಪುಸ್ತಕಗಳನ್ನು ವೀಕ್ಷಿಸಿ ಕೊಳ್ಳುವ ಸೌಭಾಗ್ಯ ದೊರಕಿತೆಂದು ಒಂದು ದಿನ ಮುಂಚೆಯೇ ಸ್ನೇಹಿತರಿಗೂ ಹೇಳಿ ಹೊರಡಿಸಲಾಗಿತ್ತು. ಆದರೆ ಕಾರ್ಯಕ್ರಮ ಸಾಮಾನ್ಯ ಜನರಿಗೆ ದಕ್ಕಲಿಲ್ಲವೆನಿಸಿತು.

ಎಲ್ಲರೂ ಬಂದು ಹೋಗುವ ಸ್ಥಳದಲ್ಲಿ ಕಾರ್ಯಕ್ರಮ ಆಯೋಜಿಸಿರಲಿಲ್ಲ. ಪ್ರಚಾರದ ಕೊರತೆಯ ಜೊತೆಗೆ ಅಕಾಡೆಮಿಯಿಂದ ಪ್ರಕಟಿಸಲಾದ ಅರ್ಧದಷ್ಟು ಪುಸ್ತಕಗಳನ್ನೂ ಮಾರಾಟಕ್ಕೆ ಇಟ್ಟಿರಲಿಲ್ಲ. ಕಡಿಮೆ ಪುಸ್ತಕಗಳಿದ್ದವು. ಮುಂದಾದರೂ ಇದು, ಪುಸ್ತಕಗಳು ಸಾಮಾನ್ಯ ಸಾಹಿತ್ಯಾಸಕ್ತರಿಗೆ ದೊರಕುವಂತೆ ಮಾಡುವ ಉತ್ತಮ ಕಾರ್ಯಕ್ರಮವಾಗಲಿ, ಆ ಮೂಲಕ ಅಕಾಡೆಮಿಯ ಉದ್ದೇಶ ನಿಜಕ್ಕೂ ಈಡೇರಲಿ. ಇನ್ನು ಮುಂದೆ ಕಾರ್ಯಕ್ರಮ ನಡೆಯುವ ಜಿಲ್ಲಾ ಕೇಂದ್ರಗಳಲ್ಲಾದರೂ ಪುಸ್ತಕಗಳು ಪೂರ್ಣಪ್ರಮಾಣದಲ್ಲಿ ದೊರೆಯುವಂತಾಗಲಿ.

ಎನ್.ಆರ್.ತಿಪ್ಪೇಸ್ವಾಮಿ, ನಿಸರ್ಗ ಗೋವಿಂದರಾಜು, ಚಳ್ಳಕೆರೆ

ಅಮೂಲ್ಯ ಜೀವಗಳನ್ನು ರಕ್ಷಿಸಿ

ದುಡಿಮೆಗಾಗಿ ರಾಯಚೂರಿನಿಂದ ಬೆಂಗಳೂರಿಗೆ ಬರುತ್ತಿದ್ದ 24 ಮಂದಿಯಲ್ಲಿ 9 ಮಂದಿಯ ಸಾವಿಗೆ ಕಾರಣವಾಗಿರುವ ಕ್ರೂಸರ್ ನಜ್ಜುಗುಜ್ಜಾಗಿರುವುದು ಅಪಘಾತದ ಭೀಕರತೆಗೆ ಸಾಕ್ಷಿಯಾಗಿದೆ. ಸೀಟ್ ಸಾಮರ್ಥ್ಯಕ್ಕಿಂತ ಹೆಚ್ಚು ಮಂದಿಯನ್ನು ಮತ್ತು ಅಧಿಕ ಸಾಮಾನು ಸರಂಜಾಮನ್ನು ತುಂಬಿಸಿದ್ದರಿಂದ ಕ್ರೂಸರ್‌ನ ಸವೆದಿದ್ದ ಟಯರ್ ಸಿಡಿದಿರುವ ಸಾಧ್ಯತೆಯಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಅದರಂತೆ ಈ ಅಪಘಾತದ ನಂತರ, ಉತ್ತರ ಕರ್ನಾಟಕದಿಂದ ಬರುವ ವಾಹನಗಳ ಮೇಲೆ ಕಣ್ಣಿಟ್ಟಿರುವ ಪೊಲೀಸರು, ಓವರ್‌ಲೋಡ್ ಆಗಿ ಬರುವ ವಾಹನಗಳನ್ನು ಹಿಡಿಯುತ್ತಿದ್ದಾರೆ. ಆದರೆ ಅವರು ಈ ಕೆಲಸವನ್ನು ಮುಂಚೆಯೇ ಮಾಡಿದ್ದರೆ ಅಪಘಾತವನ್ನು ತಪ್ಪಿಸಬಹುದಿತ್ತು.

ಕಳಪೆ ಕಾಮಗಾರಿಯಿಂದ ಕೂಡಿದ ರಸ್ತೆಗುಂಡಿಗಳಿಂದ ಸಂಭವಿಸುವ ಅಪಘಾತಗಳಿಂದ ಸಾವಿಗೀಡಾಗುವ ಪ್ರಕರಣಗಳು ಇತ್ತೀಚೆಗೆ ಹೆಚ್ಚುತ್ತಿವೆ. ಇಂತಹ ಅವಘಡಗಳನ್ನು ತಪ್ಪಿಸಲು ಎಲ್ಲ ಅಗತ್ಯ ಕ್ರಮಗಳನ್ನೂ ಕೈಗೊಂಡು, ಅಮೂಲ್ಯ ಜೀವಗಳನ್ನು ರಕ್ಷಿಸಬೇಕು.

ಬಿ.ಎಸ್.ಚೈತ್ರ, ಜಾಲಿಕಟ್ಟೆ, ಚಿತ್ರದುರ್ಗ

ಭ್ರಷ್ಟಾಚಾರದ ತನಿಖೆ ಕಾಲಹರಣದ ಕಥೆಯೇ?

ಪತ್ರಿಕೆಯ ಶುಕ್ರವಾರದ ಸಂಚಿಕೆಯಲ್ಲಿ (ಪ್ರ.ವಾ., ಆ. 26) ಪ್ರಕಟವಾಗಿರುವ ಎರಡು ಸುದ್ದಿಗಳು ಭ್ರಷ್ಟಾಚಾರ ಪ್ರಕರಣಗಳಿಗೆ ಕನ್ನಡಿ ಹಿಡಿಯುವಂತಿವೆ. ಒಂದರಲ್ಲಿ ಶೇ 40ರ ಕಮಿಷನ್ ವಿಚಾರಕ್ಕೆ ಮುಖ್ಯಮಂತ್ರಿಯವರು ತನಿಖಾ ಸಂಸ್ಥೆಗೆ ದೂರು ಕೊಡಲಿ ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರ ಆರೋಪಕ್ಕೆ ಉತ್ತರ ನೀಡಿದ್ದಾರೆ. ಅದರ ಮುಂದಿನ ಪುಟದ ಸುದ್ದಿ, ಹೀಗೆ ತನಿಖಾ ಸಂಸ್ಥೆಗೆ ದೂರು ಕೊಟ್ಟರೆ ಏನು ಪರಿಣಾಮ ಆಗುತ್ತದೆ ಎಂಬುದನ್ನು ತಿಳಿಸುತ್ತದೆ.

14 ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿ ಲೋಕಾಯುಕ್ತ ಪೊಲೀಸರು ಸಲ್ಲಿಸಿರುವ ಪ್ರಸ್ತಾವಗಳು ಹಲವು ವರ್ಷಗಳಿಂದಲೂ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಬಳಿಯೇ ಉಳಿದಿವೆ. ಅವಕ್ಕೆ ಅನುಮತಿ ನೀಡಲು ಸರ್ಕಾರ ಮೀನಮೇಷ ಎಣಿಸುತ್ತಿರುವುದೇಕೆ? ಭ್ರಷ್ಟಾಚಾರದ ತನಿಖೆ ಸರ್ಕಾರಕ್ಕೆ ಇಷ್ಟವಿಲ್ಲವೇ? ಹಾಗಿದ್ದರೆ ತನಿಖಾ ಸಂಸ್ಥೆಗೆ ದೂರು ನೀಡಿ ಎನ್ನುವುದು ಬರೀ ಕಾಲಹರಣದ ಕಥೆಯೇ? ಮುಖ್ಯಮಂತ್ರಿಯವರೇ ಉತ್ತರಿಸಬೇಕು.

ಹೊಸಮನೆ ವೆಂಕಟೇಶ, ಟಿ.ನರಸೀಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಿನಿಮಾಗಳನ್ನು ಬಹಿಷ್ಕರಿಸಿ ಎಂಬ ಅಭಿಯಾನಗಳು ಸರಿಯಾದ ನಡೆಯೇ?

ಪ್ರಜಾವಾಣಿ ಚರ್ಚೆ

ಒಂದು ಧರ್ಮದ ಕಡೆಗಣನೆ, ಮತ್ತೊಂದರ ಶ್ರೇಷ್ಠತೆಯ ಪ್ರತಿಪಾದನೆ

ಅಮೀರ್ ಖಾನ್ ಸಿನಿಮಾದಲ್ಲಿ ಏನು ಹೇಳುತ್ತಾರೆ, ಮಾಧ್ಯಮಗಳಲ್ಲಿ ಅವರು ಕೊಡುವ ಹೇಳಿಕೆಗಳೇನು ಎನ್ನುವುದು ಇಂಥಾ ಅಭಿಯಾನಗಳಿಗೆ ಮುಖ್ಯವಲ್ಲ. ಇದು ಅಮೀರ್, ಭಾರತದಲ್ಲಿ ಬದುಕುತ್ತಿರುವ ಒಬ್ಬ ಮುಸ್ಲಿಂ ಎನ್ನುವ ಮನಸ್ಥಿತಿಯ ನವೀಕರಣಗೊಂಡ ಮುಸ್ಲಿಂ ದ್ವೇಷ ಮತ್ತು ಆ ಧರ್ಮದವರ ಕಡೆಗಣನೆ ಅಲ್ಲದೇ ಬೇರೇನಲ್ಲ

• ಕೇಸರಿ ಹರವೂ

ಸಿದ್ದರಾಮಯ್ಯನವರು 'ನೀನ್ಯಾವನಯ್ಯಾ ಕೇಳಕ್ಕೆ?' ಎಂದು ಸಾರ್ವಜನಿಕವಾಗಿ ಕೇಳಬಹುದು. ಆದರೆ ಹುಟ್ಟಿನ ಕಾರಣದಿಂದಾಗಿ ಮುಸ್ಲಿಂ ಆದವನೊಬ್ಬ ಹಾಗೆ ಕೇಳಿದ್ದರೆ ಹಿಂದುತ್ವವಾದಿಗಳ, ಹುಸಿ ರಾಷ್ಟ್ರೀಯತಾವಾದಿಗಳ ಪ್ರತಿಕ್ರಿಯೆ ಹೇಗಿದ್ದಿರಬಹುದು, ಊಹಿಸಿ. ತನ್ನ ನಿಯಂತ್ರಣದಲ್ಲಿಲ್ಲದ ಹುಟ್ಟಿನ ಕಾರಣದಿಂದಾಗಿ ಮುಸ್ಲಿಂ ಆದವನೊಬ್ಬ ತಾನು ಅಪ್ಪಟ ಭಾರತೀಯ, ಭಾರತ ದೇಶದ ಬಗ್ಗೆ ತನಗೆ ಪ್ರೀತಿಯಿದೆ ಎಂದು ಎಷ್ಟು ರೀತಿಯಲ್ಲಿ ಸಾಬೀತುಪಡಿಸಿದರೂ ಆತನನ್ನು ಅನುಮಾನದಿಂದಲೇ ನೋಡುವ ಪರಿಸ್ಥಿತಿ ಇಂದು ದೇಶದಲ್ಲಿದೆ. ಇದು ಈ ವಿಷಮ ಕಾಲದಲ್ಲಿ ಎಂತಹ ಅನಾಹುತಕಾರಿ ಮನಸ್ಥಿತಿಯನ್ನು ಸಮಾಜದಲ್ಲಿ ತಂದಿದೆಯೆಂದರೆ ಹುಟ್ಟಿನಿಂದಷ್ಟೇ ಉಚ್ಚ ಜಾತಿಯವನೊಬ್ಬ ಪ್ರಗತಿಪರತೆಯ ತಪ್ಪುನಡೆಗಳನ್ನು ಒಮ್ಮೆ ನಿಕಶಕ್ಕೊಡ್ಡಿದರೆ, ಆತ ತಾನೆಷ್ಟು ರೀತಿಯಲ್ಲಿ ಸಂವಿಧಾನಬದ್ಧ ಭಾರತೀಯನೆಂದು ಸಾಬೀತು ಪಡಿಸಿದರೂ ಆತನನ್ನೂ ಅನುಮಾನದಿಂದಲೇ ನೋಡುವ ಅತಿರೇಕದ ಪರಿಸ್ಥಿತಿ ನಿರ್ಮಾಣವಾಗಿದೆ. ವಿಪರ್ಯಾಸವೆಂದರೆ, ಹುಸಿ ರಾಷ್ಟ್ರೀಯತಾವಾದಿಗಳ ಮತ್ತು ಸಂವಿಧಾನಬದ್ಧ ಭಾರತೀಯರ ಅನುಮಾನಗಳು, ಪ್ರತಿಕ್ರಿಯೆಗಳು ಮತ್ತು ಪ್ರತಿರೋಧಗಳು ತದ್ವಿರುದ್ಧ ನೆಲೆಗಳಲ್ಲಿ ಇದ್ದರೂ ಅವೆರಡೂ ಕೊನೆಯಲ್ಲಿ ಒಂದೇ ರೀತಿಯ ಮಾನವ ವಿರೋಧೀ ಪರಿಣಾಮಗಳನ್ನು ಉಂಟುಮಾಡುತ್ತಿರುತ್ತವೆ. ಈ ಪ್ರಕ್ರಿಯೆಯಲ್ಲಿ ದೇಶವೊಂದು ಬೌದ್ಧಿಕ ಮತ್ತು ಸಾಮುದಾಯಿಕ ಅವನತಿಯತ್ತಲೇ ಚಲಿಸುತ್ತಿರುತ್ತದೆ. ಅಲ್ಲದೇ ಆ ದೇಶಕ್ಕೆ ಇದು ಎಲ್ಲ ರೀತಿಯಿಂದಲೂ ಕೇಡು ಉಂಟುಮಾಡುವಂಥದ್ದು.



ಭಾರತೀಯತೆ ಎಂದರೇನು ಹಾಗಾದರೆ? ಸಹಬಾಳ್ವೆಯ ಸಮಸಮಾಜವನ್ನು ನಿರ್ಮಿಸುವ ದಿಕ್ಕಿನಲ್ಲಿ ಸತ್ಯ ಮತ್ತು ವೈಜ್ಞಾನಿಕ ತಳಹದಿಯಲ್ಲಿ ನಮ್ಮ ಕಾಲದ, ನಮ್ಮ ಸಮಾಜದ ಎಲ್ಲ ಆಯಾಮಗಳನ್ನೂ ಪ್ರಶ್ನಿಸುವುದು ಮತ್ತು ಆ ಮೂಲಕ ನಮ್ಮನ್ನು ನಾವು ತಿದ್ದಿಕೊಳ್ಳುವುದೇ ನಿಜವಾದ ಭಾರತೀಯತೆ ಎನ್ನುವುದು ನನ್ನ ನಂಬಿಕೆ. ಜಾತಿವ್ಯವಸ್ಥೆ, ಆರ್ಥಿಕ ಮತ್ತು ಸಾಮಾಜಿಕ ಅಸಮತೋಲನ, ಲಿಂಗ, ಪರಿಸರ ಮತ್ತು ಸಂಪನ್ಮೂಲ ಅಸಮಾನತೆ, ಬಹು ಧರ್ಮ, ಬಹುಸಂಸ್ಕೃತಿ ಮತ್ತು ಒಟ್ಟಾರೆ ಬಹುತ್ವದಲ್ಲಿರುವ ಗೊಂದಲಗಳು ಮತ್ತು ಬಹುತ್ವಕ್ಕಿರುವ ಅಪಾಯಗಳು, ನಮ್ಮ ಪ್ರಜಾಪ್ರಭುತ್ವ ಅಳವಡಿಸಿಕೊಂಡಿರುವ ತ್ರಿವ್ಯವಸ್ಥೆ, ಅಷ್ಟೇಕೆ ನಮ್ಮ ಸಂವಿಧಾನದ ಓರೆಕೋರೆಗಳೂ ನಾಗರಿಕನ ಪ್ರಶ್ನಿಸುವ ಹಕ್ಕಿಗೆ ಹೊರತಲ್ಲ. ಅದನ್ನೇ ನಮ್ಮ ಸಂವಿಧಾನ ನಮಗೆ ನೀಡಿರುವುದು. ಮಾತ್ರವಲ್ಲ, ಈ ಹಕ್ಕು ಯಾವ ರೀತಿಯಿಂದ ಮೊಟಕಾದರೂ ಅದು ದೇಶದ ಪ್ರೌಢಿಮೆಗೆ ತಟ್ಟುವ ಕೇಡು. ಈ ಕೇಡಿಗೆ ಅವಕಾಶವಿದ್ದಲ್ಲಿ ಆರೋಗ್ಯವಂತ ಭಾರತ ಮತ್ತು ಆರೋಗ್ಯವಂತ ಭಾರತೀಯ ಎರಡೂ ಸಾಧ್ಯವಿಲ್ಲ.

ಪ್ರಭುತ್ವಗಳು ಕೆಲವೊಮ್ಮೆ ಸಾಹಿತ್ಯ, ಕಲೆ, ನಾಟಕ ಮತ್ತು ಸಿನಿಮಾ ಕೃತಿಗಳನ್ನು ನಿಷೇಧಿಸಿವೆ. ತುರ್ತು ಪರಿಸ್ಥಿತಿಯ ಕಾಲದಲ್ಲಿ ಪ್ರಭುತ್ವದ ಶಕ್ತಿಗಳು 'ಕಿಸ್ಸಾ ಕುರ್ಸೀ ಕಾ' ಚಿತ್ರದ ನೆಗೆಟಿವ್‌ಗಳನ್ನೇ ಸುಟ್ಟುಹಾಕಿದವು. ರಾಜೀವ್ ಗಾಂಧಿ ಸರ್ಕಾರವು ಸಲ್ಮಾನ್ ರಶ್ದಿಯವರ 'ಸಟಾನಿಕ್ ವರ್ಸಸ್' ಕಾದಂಬರಿಯನ್ನು ನಿಷೇಧಿಸಿತು. ಇತ್ತೀಚೆಗಷ್ಟೇ ಮುನವ್ವರ್ ಫಾರೂಕಿಯ ಕಾಮಿಡಿ ಶೋಗಳನ್ನು ನಿಲ್ಲಿಸಲಾಯಿತು. ಇಂಥ ನಿಷೇಧಗಳಿಗೆ ಪ್ರಭುತ್ವಗಳು ನೀಡಿದ ಕಾರಣಗಳು ಅಸಮರ್ಥನೀಯವಾಗಿಯೇ ಉಳಿದಿವೆ. ಕೆಲವೊಮ್ಮೆ ದೇಶದ ವಿವಿಧ ವರ್ಗದ ಜನರು ತಮ್ಮ ತಮ್ಮ ಮೂಲಭೂತ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದಕ್ಕಾಗಿ ಕೆಲವು ಕೃತಿಗಳ ಕುರಿತು ವಿವಾದ ಹುಟ್ಟುಹಾಕಿದ್ದಾರೆ. ಎಂ.ಎಫ್. ಹುಸೇನರ ಕೆಲವು ಅತ್ಯಮೂಲ್ಯ ಕಲಾಕೃತಿಗಳನ್ನು ವಿವಾದಿತವಾಗಿಸಿ ನಾಶಪಡಿಸಲಾಯಿತು. ಎಚ್.ಎಸ್. ಶಿವಪ್ರಕಾಶರ 'ಮಹಾಚೈತ್ರ' ನಾಟಕವನ್ನು ನಿಷೇಧಿಸಬೇಕೆಂದು ಮಾತೆ ಮಹಾದೇವಿ 1995ರಲ್ಲಿ ಸರ್ಕಾರದ ಮೇಲೆ ಒತ್ತಡ ತಂದಿದ್ದರು. ವಿವಾದವು ಕೋರ್ಟು ಮೆಟ್ಟಿಲೇರಿ ಕೊನೆಗೆ ಗುಲ್ಬರ್ಗಾ ವಿಶ್ವವಿದ್ಯಾಲಯವು ಆ ನಾಟಕವನ್ನು ತನ್ನ ಪಠ್ಯಕ್ರಮದಿಂದ ಹಿಂಪಡೆದಿತ್ತು. 2007ರಲ್ಲಿ ಬಂಜಗೆರೆ ಜಯಪ್ರಕಾಶರು ತಮ್ಮ 'ಆನುದೇವಾ ಹೊರಗಣವನು' ಕೃತಿಯು ವಿವಾದಕ್ಕೆ ಆಸ್ಪದ ನೀಡಿದ ಕಾರಣಕ್ಕೆ ಅದನ್ನು ಹಿಂಪಡೆದಿದ್ದರು. ಇಲ್ಲಿಯೂ ವಿವಾದ, ವಿರೋಧಗಳಿಗೆ ನೀಡಿದ ಕಾರಣಗಳು ಸಮರ್ಥನೀಯವಾಗಿರಲಿಲ್ಲ ಎಂದೇ ಬಹುಸಂಖ್ಯಾತ ನಾಗರಿಕರ ನಂಬಿಕೆ. ಆದರೂ ಸತ್ಯವು ಸತ್ಯವಾಗಿಯೇ ಉಳಿದಿದೆ ಮತ್ತು ಸೃಜನಶೀಲತೆಗೆ ಇರುವ ಮಹತ್ವವೂ ಕಡಿಮೆಯಾಗಲಿಲ್ಲ.

ಮೇಲಿನ ಎರಡೂ ರೀತಿಯ ವಿದ್ಯಮಾನಗಳಿಗೂ ಇತ್ತೀಚೆಗೆ ಅಮೀರ್ ಖಾನ್ ಅವರ 'ಲಾಲ್ ಸಿಂಗ್ ಚಡ್ಡಾ' ಸಿನಿಮಾವನ್ನು ಪ್ರೇಕ್ಷಕರು ಬಹಿಷ್ಕರಿಸಬೇಕೆಂದು ಒಂದು ವರ್ಗ ನಡೆಸುತ್ತಿರುವ ಅಭಿಯಾನಕ್ಕೂ ಮೂಲದಲ್ಲಿಯೇ ವ್ಯತ್ಯಾಸವಿದೆ. ಅಮೀರ್ ಖಾನ್ ತಮ್ಮ ಹಿಂದಿನ ಚಿತ್ರ 'ಪಿ.ಕೆ.'ನಲ್ಲಿ ಹಿಂದೂ ದೇವರುಗಳನ್ನು ಅವಮಾನಿಸಿದ್ದಾರೆ, ಹಾಗಾಗಿ ಅವರ 'ಚಡ್ಡಾ'ವನ್ನು ಬಹಿಷ್ಕರಿಸಿ ಎಂದು ಕರೆ ನೀಡಿತು ಒಂದು ಅಭಿಯಾನ. 'ಪಿ.ಕೆ.' ಚಿತ್ರದ ನಿರ್ಮಾಪಕರು, ನಿರ್ದೇಶಕರು ಮತ್ತು ಲೇಖಕರು ಹಿಂದೂಗಳಾಗಿದ್ದರು, ಅಮೀರ್ ಅಲ್ಲಿ ಒಬ್ಬ ಪಾತ್ರಧಾರಿಯಷ್ಟೇ ಎಂದಾಗ ಆ ಅಭಿಯಾನ ಅಮೀರ್ ಹಿಂದೆ ತೋಡಿಕೊಂಡಿದ್ದ ಆತಂಕದ ಹೇಳಿಕೆಗಳನ್ನು ಮುಂದುಮಾಡಿ, ಇಂಥ ಹೇಳಿಕೆಗಳು ಅವರಲ್ಲಿ ನಿಜಕ್ಕೂ ರಾಷ್ಟ್ರಪ್ರೇಮವಿದೆಯೇ ಎನ್ನುವ ಪ್ರಶ್ನೆಗಳನ್ನು ಹುಟ್ಟುಹಾಕುತ್ತವೆ, ಹಾಗಾಗಿ ಅವರ 'ಚಡ್ಡಾ' ಸಿನಿಮಾವನ್ನು ಬಹಿಷ್ಕರಿಸಬೇಕು ಎಂದು ಹೇಳಿತು. ಈ ಕುಂಟುನೆಪಗಳು ಸ್ಪಷ್ಟವಾಗಿ ಹೇಳುತ್ತಿರುವುದೇನೆಂದರೆ ಅಮೀರ್ ಖಾನ್ ಸಿನಿಮಾದಲ್ಲಿ ಏನು ಹೇಳುತ್ತಾರೆ, ಮಾಧ್ಯಮಗಳಲ್ಲಿ ಅವರು ಕೊಡುವ ಹೇಳಿಕೆಗಳೇನು ಎನ್ನುವುದು ಇಂಥಾ ಅಭಿಯಾನಗಳಿಗೆ ಮುಖ್ಯವಲ್ಲ. ಇದು ಅಮೀರ್, ಭಾರತದಲ್ಲಿ ಬದುಕುತ್ತಿರುವ ಒಬ್ಬ ಮುಸ್ಲಿಂ ಎನ್ನುವ ಮನಸ್ಥಿತಿಯ ನವೀಕರಣಗೊಂಡ ಮುಸ್ಲಿಂ ದ್ವೇಷ ಮತ್ತು ಆ ಧರ್ಮದವರ ಕಡೆಗಣನೆ ಅಲ್ಲದೇ ಬೇರೇನಲ್ಲ. ಈಗ ನಡೆಯುತ್ತಿರುವುದು ಒಬ್ಬ ಕಲಾವಿದನ ವಾಕ್ ಸ್ವಾತಂತ್ರ್ಯವನ್ನು ಮೊಟಕು ಮಾಡುವ ಅಭಿಯಾನವಲ್ಲ. ಆ ಧರ್ಮದ ಒಬ್ಬ ಪ್ರಮುಖ ವ್ಯಕ್ತಿಯನ್ನು ಗುರಿಯಾಗಿಸಿ ಆತನ ಧರ್ಮದವರನ್ನು ಎಲ್ಲ ಕ್ಷೇತ್ರಗಳಲ್ಲೂ ನಿಷ್ಕ್ರಿಯಗೊಳಿಸಿ ಹಿಂದುತ್ವ ಪಾರಮ್ಯವನ್ನು ಸೃಷ್ಟಿಸುವುದೇ ಆಗಿದೆ. ಇದು ಸಿನಿಮಾಕ್ಷೇತ್ರಕ್ಕೆ ಇಂದು ಸೀಮಿತವಾಗಿಲ್ಲ ಎನ್ನುವುದನ್ನೂ ಗಮನಿಸಬೇಕು.

ಇದು ಪ್ರಭುತ್ವ ಪ್ರೇರಿತವಲ್ಲದೇ ಮತ್ತೇನಲ್ಲ. ಇದೇ ರೀತಿಯ ಅಭಿಯಾನಗಳನ್ನು ಇತ್ತೀಚೆಗೆ ನಮ್ಮಲ್ಲಿ ಸಾಕಷ್ಟು ಬಾರಿ, ಸಾಕಷ್ಟು ರೀತಿಯಲ್ಲಿ ಹಮ್ಮಿಕೊಳ್ಳಲಾಗಿದೆ. 'ಕಾಶ್ಮೀರ್ ಫೈಲ್ಸ್' ಎನ್ನುವ ಹುಸಿಚರಿತ್ರೆಯ ಅಂಶಗಳನ್ನು ಬಿಂಬಿಸುವ ಸಿನಿಮಾವನ್ನು ಭಾರತೀಯರೆಲ್ಲರೂ ನೋಡುವುದೇ ದೇಶಪ್ರೇಮ, ಅದೇ ಒಂದು ಜನಾಂದೋಲನ ಎನ್ನುವಂತೆ ಮಾಡುವ ಪ್ರಯತ್ನದಲ್ಲಿ ಪ್ರಭುತ್ವದ ಪ್ರಯತ್ನ ದೊಡ್ಡದಾಗಿಯೇ ಇತ್ತು. ಹಾಗೆಯೇ, ಜಾತಿಪ್ರೇರಿತ ಸತ್ವವಿಲ್ಲದ ಕೇಸುಗಳ ಮೂಲಕ 'ಜೈ ಭೀಮ್' ಚಿತ್ರವನ್ನೂ ವಿವಾದಕ್ಕೆ ಗುರಿಯಾಗಿಸಲು ಪ್ರಯತ್ನಿಸಲಾಯಿತು. ಆನವಟ್ಟಿಯಲ್ಲಿ 'ಜತೆಗಿರುವನು ಚಂದಿರ' ನಾಟಕದ ಪ್ರದರ್ಶನವನ್ನು ನಿಲ್ಲಿಸಲಾಯಿತು. ತಾನೇ ನೇರವಾಗಿ ಸೃಜನಶೀಲ ಅಭಿವ್ಯಕ್ತಿಗಳ ಮೇಲೆ ಪ್ರಹಾರ ಮಾಡುವ, ನಿಯಂತ್ರಿಸುವ ಕೆಲಸವನ್ನು ಮಾಡಿದರೆ ಅದು 'ಅಸಾಂವಿಧಾನಿಕ' ಎನಿಸಿಕೊಳ್ಳುತ್ತದೆ ಎನ್ನುವುದು ಪ್ರಭುತ್ವದ ಆಲೋಚನೆ. ಅದನ್ನು ತಾನು 'ಜನಾಭಿಪ್ರಾಯ, ಜನಪ್ರತಿರೋಧ' ಎನ್ನುವ ಹೆಸರಿನಲ್ಲಿ ತನ್ನ ಪಡೆಗಳಿಂದ ಮಾಡಿಸುವ ದಾರಿಯನ್ನು ಕಂಡುಕೊಂಡಿದೆ. ಎಲ್ಲ ಫ್ಯಾಸಿಸ್ಟ್ ಶಕ್ತಿಗಳೂ ಇದೇ ತಂತ್ರವನ್ನು ಅನುಸರಿಸುತ್ತವೆ, ನಮ್ಮಲ್ಲಿಯೂ ಆಗುತ್ತಿದೆ.

ಇಂಡಿಯನ್ ಮುಸ್ಲಿಮ್ಸ್ ಫಾರ್ ಸೆಕ್ಯುಲರ್ ಡೆಮಾಕ್ರಸಿ (ಐ.ಎಂ.ಎಸ್.ಡಿ.) ಎನ್ನುವ ಒಂದು ಭಾರತೀಯ ಪ್ರಜಾಪ್ರಭುತ್ವವಾದಿ ಸಂಘಟನೆ ಇತ್ತೀಚೆಗೆ ಒಂದು ಹೇಳಿಕೆಯನ್ನು ಬಿಡುಗಡೆ ಮಾಡಿತು. ತೀಸ್ತಾ ಸೆಟಲ್ವಾಡ್ ಅವರ ಪತಿ, ಜಾವೇದ್ ಆನಂದ್ ಅವರೂ ಕೂಡ ಐ.ಎಂ.ಎಸ್.ಡಿ. ಸಂಘಟನೆಯ ಹಲವು ಪ್ರಾಜ್ಞ ರೂವಾರಿಗಳಲ್ಲಿ ಒಬ್ಬರು. ಆ ಹೇಳಿಕೆಯ ತಾತ್ಪರ್ಯವಿಷ್ಟೆ: 'ರಶ್ದಿಯವರ ಮೇಲಿನ ದಾಳಿಯನ್ನು ಖಂಡಿಸಿ ಬಹುತೇಕ ಭಾರತೀಯ ಮುಸ್ಲಿಂ ಸಂಘಟನೆಗಳು ಯಾವುದೇ ಹೇಳಿಕೆ ನೀಡಲಿಲ್ಲ. ಈ ಮೌನವು ಭಾರತೀಯ ಮುಸ್ಲಿಮರನ್ನು ಮುಖ್ಯವಾಹಿನಿಯಿಂದ ಇನ್ನಷ್ಟು ದೂರಕ್ಕೆ ತಳ್ಳುತ್ತದೆ. ಹಾಗೆಯೇ, ಕನ್ನಯ್ಯ ಲಾಲ್ ಅವರ ಹತ್ಯೆಯನ್ನು ಬಹಳಷ್ಟು ಭಾರತೀಯ ಮುಸ್ಲಿಂ ಸಂಘಟನೆಗಳು ಖಂಡಿಸಿದವಾದರೂ ಅವು ಆ ಕಗ್ಗೊಲೆಯನ್ನು ದ್ವೇಷಪ್ರೇರಿತ ಎಂದು ಹೇಳಿದವೇ ಹೊರತು, ಧರ್ಮಕ್ಕೆ ಮಾಡಿದ ಅಪಚಾರಕ್ಕಾಗಿ ನಡೆದ ಕೊಲೆ ಎನ್ನಲಿಲ್ಲ. ಈ ಆಷಾಢಭೂತಿತನವೂ ಭಾರತೀಯ ಮುಸ್ಲಿಮರನ್ನು ಮುಖ್ಯವಾಹಿನಿಯಿಂದ ಇನ್ನಷ್ಟು ದೂರಕ್ಕೆ ತಳ್ಳುತ್ತದೆ.'

ಈ ಹೇಳಿಕೆ ಭಾರತದ ಕೆಲವು ಅಲ್ಪಸಂಖ್ಯಾತರ ಆಷಾಢಭೂತಿತನವನ್ನಷ್ಟೇ ಹೇಳುತ್ತಿಲ್ಲ. ಇದು ಹುಸಿ ದೇಶಪ್ರೇಮದ ಹಿಂದುತ್ವವಾದಿಗಳ ಆಷಾಢಭೂತಿತನವನ್ನೂ ಹೇಳುತ್ತಿದೆ.

ಲೇಖಕ: ಸಿನಿಮಾ ನಿರ್ದೇಶಕ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 210

ವಜ್ರಾಂಗನಿಗೆ ವರ ನೀಡಿ ವ್ಯಥಿಸಿದ ಬ್ರಹ್ಮ

ಇಂದ್ರಾದಿ ದೇವತೆಗಳನ್ನು ಬಿಡುಗಡೆ ಮಾಡಿದ ನಂತರ ವಜ್ರಾಂಗ ತನ್ನ ಮುತ್ತಾತನಾದ ಬ್ರಹ್ಮನಿಗೆ 'ಓ ಪಿತಾಮಹನೇ, ಈ ಇಂದ್ರನು ಮಹಾ ದುಷ್ಟ. ಸ್ವಾರ್ಥಕ್ಕಾಗಿ ಅವನು ನನ್ನ ತಾಯಿಯನ್ನು, ಮತ್ತವರ ಪುತ್ರರನ್ನು ಹಿಂಸಿಸಿದ್ದಾನೆ. ಅವನ ದುಷ್ಟತನಕ್ಕೆ ಸರಿಯಾದ ಫಲವನ್ನ ನನ್ನಿಂದ ಅನುಭವಿಸಿದ್ದಾನೆ. ಈಗ ಅವನ ರಾಜ್ಯವನ್ನು ಅವನೇ ಅನುಭವಿಸಲಿ. ನನಗೆ ಯಾವ ರಾಜ್ಯದ ಅಭಿಲಾಷೆಯೂ ಇಲ್ಲ. ವೇದವಿದ್ವಾಂಸನಾದ ಓ ವಿಧಿಯೇ ತತ್ವಸಾರವನ್ನು ನನಗೆ ಹೇಳು. ಅದರಿಂದ ನಾನು ಶಾಂತಿಯನ್ನು ಹೊಂದಿ ನಿತ್ಯವೂ ಸುಖಿಯಾಗಿರುವೆ' ಎಂದು ಪ್ರಾರ್ಥಿಸಿದ.

ವಜ್ರಾಂಗನ ಮಾತನ್ನು ಕೇಳಿ ಬ್ರಹ್ಮನಿಗೆ ಸಂತೋಷವಾಯಿತು. 'ಸಾತ್ವಿಕವಾದ ವೃತ್ತಿಯೇ ತತ್ವಸಾರವು. ಅದನ್ನು ನೀನು ಚೆನ್ನಾಗಿ ತಿಳಿದಿದ್ದೀಯಾ. ನಿನಗೆ ಹೆಚ್ಚಿನ ಜೀವನದ ತತ್ವಸಾರದ ಅವಶ್ಯವಿಲ್ಲ' ಎಂದು ಹೇಳಿ, 'ವರಾಂಗೀ' ಎಂಬ ಓರ್ವ ಸುಂದರಿಯನ್ನು ಸೃಷ್ಟಿಸಿದ. ಅವಳನ್ನು ವಜ್ರಾಂಗನಿಗೆ ಮದುವೆಮಾಡಿಸಿ ಸತ್ಯಲೋಕಕ್ಕೆ ಹಿಂದಿರುಗಿದ.

ಇದಾದ ನಂತರ ವಜ್ರಾಂಗ ಹಿಂದಿನ ರಾಕ್ಷಸಭಾವವನ್ನು ತ್ಯಜಿಸಿದ. ದೇವತೆಗಳೊಡನೆ ವೈರವನ್ನು ಬಿಟ್ಟು ಸಾತ್ವಿಕಭಾವದಿಂದಲೇ ಇರತೊಡಗಿದ. ಆದರೆ ಅವನ ಮಡದಿಯಾದ ವರಾಂಗಿಯಲ್ಲಿ ಸಾತ್ವಿಕಭಾವ ಮಾತ್ರ ಉದಯಿಸಲಿಲ್ಲ. ಅವಳ ಮನದಲ್ಲಿ ದಿನದಿಂದ ದಿನಕ್ಕೆ ರಾಕ್ಷಸಭಾವ ಹೆಚ್ಚಾಗುತ್ತಿತ್ತು. ಇಂಥ ಸಂದರ್ಭದಲ್ಲಿ ವರಾಂಗಿ ಪುತ್ರಕಾಮನೆಯುಳ್ಳವಳಾದಳು. ಇದಕ್ಕಾಗಿ ಶ್ರದ್ಧೆಯಿಂದ ತನ್ನ ಪತಿಯಾದ ವಜ್ರಾಂಗನನ್ನು ಸೇವಿಸಿದಳು. ಅವಳ ಸೇವೆಯಿಂದ ಸಂತುಷ್ಟನಾದ ವಜ್ರಾಂಗ 'ಪ್ರಿಯೇ, ನನ್ನಿಂದ ಏನು ಅಪೇಕ್ಷಿಸುವೆ' ಎಂದು ಕೇಳಿದ.

ವರಾಂಗಿಯು 'ಪ್ರಿಯನೇ, ನನಗೊಬ್ಬ ಸುಪುತ್ರನನ್ನು ಕರುಣಿಸು. ಅವನು ಮೂರು ಲೋಕಗಳನ್ನೂ ಜಯಿಸುವಂತಹ ವೀರನಾಗಿರಬೇಕು. ಹರಿಯನ್ನೂ ಜಯಿಸುವಂತಹವನಾಗಬೇಕು' ಎಂದು ಕೋರಿದಳು. ಈ ಮಾತನ್ನು ಕೇಳಿ ವಜ್ರಾಂಗನು ತುಂಬಾ ವಿಸ್ಮಯಗೊಂಡ. ಪತ್ನಿಯ ಕೋರಿಕೆ ಈಡೇರಿಸಿದರೆ ಮುಂದೆ ಆಗುವ ಅನಾಹುತ ನೆನೆದು ಮನಸ್ಸಿನಲ್ಲೆ ವ್ಯಥಿಸಿದ.

ನನ್ನ ಪತ್ನಿ ದೇವತೆಗಳೊಡನೆ ದ್ವೇಷ ಬೆಳೆಸಲಿಚ್ಛಿಸುತ್ತಿದ್ದಾಳೆ. ಇದು ನನಗೆ ಸರಿಹೋಗುವುದಿಲ್ಲ. ನನ್ನ ಪ್ರತಿಜ್ಞೆಯು ನಾಶವಾಗದಿರಲು ಏನು ಮಾಡಬೇಕು? ಪ್ರಿಯಪತ್ನಿಯ ಇಷ್ಟಾರ್ಥ ಈಡೇರಿಸಿದರೆ ದೇವತೆಗಳಿಗೆ ಮತ್ತು ಮುನಿಗಳಿಗೆ ದುಃಖ ಉಂಟಾಗುತ್ತದೆ. ಪತ್ನಿಯ ಇಷ್ಟವನ್ನು ನೆರವೇರಿಸದಿದ್ದರೆ ನನಗೆ ನರಕ ಉಂಟಾಗುತ್ತದೆ. ನಾನು ಯಾವ ಮಾರ್ಗ ಅನುಸರಿಸಿದರೂ ಧರ್ಮಕ್ಕೆ ಹಾನಿಯಾಗುತ್ತದೆ – ಎಂದು ವಜ್ರಾಂಗ ತಳಮಳಿಸಿದ.

ಆಗ ಅವನು ಪತ್ನಿಯ ಇಷ್ಟಾರ್ಥ, ದೇವತೆಗಳ ಸುಖ ಇವೆರಡರಲ್ಲಿ ಯಾವುದು ಪ್ರಬಲವಾದುದೆಂದು ಮನದಲ್ಲೇ ಚಿಂತನೆ ಮಾಡಿದ. ಅಂತಿಮವಾಗಿ ವಜ್ರಾಂಗನಿಗೆ ಪತ್ನಿಯ ಇಷ್ಟಾರ್ಥವನ್ನು ಪೂರೈಸುವುದೇ ಉತ್ತಮವಾದುದೆಂದು ನಿರ್ಣಯಿಸಿದ. ಪತ್ನಿಯ ಇಷ್ಟಾರ್ಥವನ್ನು ಈಡೇರಿಸಲು ಬ್ರಹ್ಮನನ್ನು ಕುರಿತು ಘೋರವಾದ ತಪವನ್ನು ಬಹಳ ಕಾಲ ಆಚರಿಸಿದ. ತಪಸ್ಸು ಮೆಚ್ಚಿದ ಬ್ರಹ್ಮ 'ನಿನಗೆ ಬೇಕಾದ ವರವನ್ನು ಕೇಳು' ಎಂದ.

ಆಗ ವಜ್ರಾಂಗ 'ಪಿತಾಮಹನೇ, ನನಗೋರ್ವ ಸುಪುತ್ರನನ್ನು ಕರುಣಿಸು. ಅವನು ಮಹಾಬಲಿಷ್ಠನೂ ಶೂರನೂ ಆಗಿರಬೇಕು. ಎಲ್ಲಕ್ಕಿಂತ ಮಿಗಿಲಾಗಿ ಅವನು ತನ್ನ ತಾಯಿಯು ಅಪೇಕ್ಷಿಸುವ ಮಹಾಕಾರ್ಯವನ್ನು ಸಾಧಿಸುವವನಾಗಬೇಕು' ಎಂದು ವಿನಂತಿಸಿದ. ಹಾಗೆಯೇ ಆಗಲೆಂದು ಬ್ರಹ್ಮ ಅವನಿಗೆ ವರವನ್ನು ಕೊಟ್ಟ. ಆದರೆ ಅಲ್ಲಿಂದ ತೆರಳುವಾಗ ತನ್ನ ವರದಿಂದ ದೇವತೆಗಳಿಗೆ ಅನಿಷ್ಟವಾಗುತ್ತದೆ ಎಂದು ಯೋಚಿಸುತ್ತಾ ಖಿನ್ನನಾದ ಎಂಬಲ್ಲಿಗೆ ಪಾರ್ವತೀಖಂಡದ ಹದಿನಾಲ್ಕನೆ ಅಧ್ಯಾಯ ಮುಗಿಯುತ್ತದೆ.

ಇದು ಬಹಿಷ್ಕಾರವಲ್ಲ; ಪ್ರೇಕ್ಷಕನ ಸ್ವಾತಂತ್ರ್ಯ

ಈ ವಿಚಾರವಾಗಿ ಪ್ರೇಕ್ಷಕರು ಯಾವ ಚಿತ್ರಮಂದಿರಕ್ಕೂ ಬೆಂಕಿ ಹಚ್ಚಲಿಲ್ಲ, ಚಿತ್ರಮಂದಿರಗಳತ್ತ ತೆರಳುತ್ತಿದ್ದ ಪ್ರೇಕ್ಷಕರಿಗೆ ಕತ್ತಿ ತೋರಿಸಿ ಬೆದರಿಸಲಿಲ್ಲ. ಅತ್ಯಂತ ಪ್ರಜಾಸತ್ತಾತ್ಮಕ ರೀತಿಯಲ್ಲಿ ತಮ್ಮ ಅಭಿಪ್ರಾಯಗಳನ್ನು ಪರಸ್ಪರ ಹಂಚಿಕೊಳ್ಳುವ ಮೂಲಕ, ತಿರಸ್ಕರಿಸುವಂತೆ ಕರೆ ಕೊಡುವ ಮೂಲಕ ತಮ್ಮ ಪ್ರತಿರೋಧವನ್ನು ತೋರಿಸಿದ್ದಾರೆ

• ಪ್ರವೀಣ್ ಕುಮಾರ್ ಮಾವಿನಕಾಡು

ಅಮೀರ್ ಖಾನ್ ನಟನೆಯ ಲಾಲ್ ಸಿಂಗ್ ಚಡ್ಡಾ ಸಿನಿಮಾವನ್ನು ಬಹಿಷ್ಕರಿಸಬೇಕು ಎನ್ನುವ ಟ್ವಿಟರ್ ಟ್ರೆಂಡ್ ಇದೀಗ ಸಾಕಷ್ಟು ಚರ್ಚೆಗೆ ಕಾರಣವಾಗಿದೆ. ಈ ಹಿಂದೆಯೂ ಇದೇ ರೀತಿಯಲ್ಲಿ ಹಲವಾರು ಸಿನಿಮಾಗಳು ನೋಡುಗರಿಂದ ಬಹಿಷ್ಕಾರಕ್ಕೊಳಗಾಗಿದ್ದರೂ ಅಮೀರ್ ಖಾನ್ ಒಬ್ಬ ಅನ್ಯ ಕೋಮಿನ ನಟ ಎನ್ನುವ ಕಾರಣಕ್ಕೆ ಬಹಿಷ್ಕಾರ ಹೆಚ್ಚು ಗಮನ ಸೆಳೆದಂತಿದೆ.

'ನಾನು ನಿಮಗೆ ಇಷ್ಟ ಇಲ್ಲ ಎಂದಾದರೆ ನನ್ನ ಸಿನಿಮಾ ನೋಡಬೇಡಿ' ಎಂದು ನಟಿ ಆಲಿಯಾ ಭಟ್ ಹೇಳಿಕೆ ಕೊಟ್ಟಿದ್ದಾರೆ. ಕರೀನಾ ಕಪೂರ್ ಕೂಡ ತಮ್ಮ ಚಿತ್ರದ ಬಿಡುಗಡೆಯ ಸಮಯದಲ್ಲಿ ಇದೇ ಧಾಟಿಯಲ್ಲೇ ಮಾತನಾಡಿದ್ದಿದೆ. ಚಿತ್ರದಲ್ಲಿ ನಟಿಸಿದ ನಟ ನಟಿಯರೇ ಈ ರೀತಿಯ ಹೇಳಿಕೆ ಕೊಡುವುದು ಸರಿ, ಅದು ಅವರ ಹಕ್ಕು ಎನ್ನುವುದಾದರೆ, ದುಡ್ಡು ಕೊಟ್ಟು ನೋಡುವವರಿಗೆ 'ನಾನು ಆ ಚಿತ್ರವನ್ನು ನೋಡುವುದಿಲ್ಲ, ಮತ್ತು ಇಂತಿಂತಹ ಕಾರಣಕ್ಕಾಗಿ ನೀವೂ ನೋಡಬೇಡಿ' ಎಂದು ಇತರರಿಗೆ ಹೇಳುವ ಹಕ್ಕು ಒಂದು ಪಟ್ಟು ಹೆಚ್ಚೇ ಇರಬೇಕಲ್ಲವೇ?

ಪ್ರೇಕ್ಷಕರ ಈ ನಡೆಯನ್ನು ಉಲ್ಲೇಖಿಸಿ ದೇಶದಲ್ಲಿ ಅಸಹಿಷ್ಣುತೆ ಹೆಚ್ಚಾಗುತ್ತಿದೆ ಎನ್ನುವಂತೆ ಬಿಂಬಿಸಲಾಗುತ್ತಿದೆ. ಪ್ರೇಕ್ಷಕರಿಗಾಗಿ ನಿರ್ಮಿಸುವ ಒಂದು ಚಿತ್ರದಲ್ಲಿ ಅದೇ ಪ್ರೇಕ್ಷಕನಿಗೆ ಅಸಹನೀಯ ಎನ್ನುವ ಅಂಶಗಳನ್ನು ತುಂಬಿ ತೋರಿಸುವ ನಟ/ನಿರ್ಮಾಪಕರಿಗೆ ಇರುವ ಅಸಹಿಷ್ಣುತೆಯನ್ನು ಜನರ ಮೇಲೆ ಹೀಗೆ ಆರೋಪಿಸಬಹುದೇ? ಅಷ್ಟಕ್ಕೂ ತಮ್ಮ ಪ್ರೇಕ್ಷಕರದ್ದೇ ಆಚಾರ ವಿಚಾರಗಳನ್ನು, ಸಂಸ್ಕೃತಿಯನ್ನು, ಆಚರಣೆಗಳನ್ನು ಹೀನವಾಗಿ ಚಿತ್ರಿಸಿ ತೋರಿಸುವ ಚಿತ್ರರಂಗದವರಿಗೆ ಇರುವಷ್ಟು ಅಸಹಿಷ್ಣುತೆ ಇನ್ನೊಬ್ಬರಿಗೆ ಇರಲು ಸಾಧ್ಯವೇ?

ತಮ್ಮ ಚಿತ್ರಗಳನ್ನು ಪ್ರೇಕ್ಷಕರು ಸಾಮೂಹಿಕವಾಗಿ ಬಹಿಷ್ಕರಿಸುತ್ತಿರುವುದು ತಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಎಂದೂ ಕೆಲವು ನಟ, ನಿರ್ದೇಶಕರು ಹೇಳಿಕೊಳ್ಳುತ್ತಿದ್ದಾರೆ. ಅಭಿವ್ಯಕ್ತಿ ಸ್ವಾತಂತ್ರ್ಯ ಕೇವಲ ಸಿನಿಮಾ ನಿರ್ಮಾಪಕರು ಮತ್ತು ನಟರಿಗೆ ಮಾತ್ರವೇ ಇರುವುದೇ? ಯಾವುದನ್ನು ನೋಡಬೇಕು, ಯಾವುದನ್ನು ತಿರಸ್ಕರಿಸಬೇಕು ಎನ್ನುವ ಸ್ವಾತಂತ್ರ್ಯ ಮತ್ತು ಇಂತಿಂತಹ ಕಾರಣಕ್ಕಾಗಿ ನೀವೂ ಚಿತ್ರವನ್ನು ನೋಡಬೇಡಿ ಎಂದು ತನ್ನ ಸಹ ಪ್ರೇಕ್ಷಕನಿಗೆ ಹೇಳುವ ಸ್ವಾತಂತ್ರ್ಯ ನೋಡುಗನೊಬ್ಬನಿಗೆ ಇರಲೇಬಾರದೇ?

'ಚಲನಚಿತ್ರ ಉದ್ಯಮ ಒಂದು ಆಕರ್ಷಕ ಮತ್ತು ಬೃಹತ್ ಉದ್ಯಮ. ಪ್ರತಿ ಸಿನಿಮಾದ ಹಿಂದೆಯೂ ನೂರಾರು ಜನರ ಪರಿಶ್ರಮ, ನೂರಾರು ಕೋಟಿ ಹೂಡಿಕೆ ಇರುತ್ತದೆ. ಹಾಗಿರುವಾಗ ಪ್ರೇಕ್ಷಕರು ಸಿನಿಮಾವೊಂದನ್ನು ಹೀಗೆ ಬಹಿಷ್ಕರಿಸಿ ಅದರ ಕಾರ್ಮಿಕರನ್ನು ಮತ್ತು ನಿರ್ಮಾಪಕರನ್ನು ನಷ್ಟಕ್ಕೆ ದೂಡುವುದು ಸರಿಯೇ' ಎನ್ನುವ ಕೋನದಲ್ಲೂ ಚರ್ಚೆಗಳಾಗುತ್ತಿವೆ.

ಇತ್ತೀಚೆಗಷ್ಟೇ ಪ್ಲಾಸ್ಟಿಕ್ ಕ್ಯಾರಿಬ್ಯಾಗ್ ನಿಷೇಧಿಸಲಾಗಿದೆ. ಪ್ಲಾಸ್ಟಿಕ್ ಉದ್ಯಮದಲ್ಲೂ ಸಾವಿರಾರು ಜನ ತೊಡಗಿಕೊಂಡಿದ್ದಾರಲ್ಲವೇ? ಅದರ ಮೇಲೂ ಸಾವಿರಾರು ಕೋಟಿ ರೂಪಾಯಿ ಬಂಡವಾಳ ಹೂಡಿಕೆಯಾಗಿದೆಯಲ್ಲವೇ? ಆದರೂ ಸರ್ಕಾರವೇ ಅದನ್ನು ನಿಷೇಧಿಸುವುದು ಸರಿಯೇ? ಅದು ಕಾನೂನುಬದ್ಧ ಎನ್ನುವುದಾದರೆ, ಪ್ರೇಕ್ಷಕರೇ ತಮಗಿಷ್ಟವಿಲ್ಲದ್ದನ್ನು ಕಾರಣಸಹಿತವಾಗಿ ತಿರಸ್ಕರಿಸುವುದು ಹೇಗೆ ಚಿತ್ರೋದ್ಯಮಕ್ಕೆ ಕಣ್ಣೀರು ತರಿಸುತ್ತದೆ?

ಮುಂದಿನ ವಾರದಲ್ಲಿ ಬರುವ ಗೌರಿ ಗಣೇಶ ಹಬ್ಬ ಹಿಂದೂಗಳ ಪಾಲಿನ ಅತಿ ದೊಡ್ಡ ಹಬ್ಬ. ಹಿಂದೂಸ್ತಾನದ ಮನೆ ಮನೆಯಲ್ಲೂ, ಬೀದಿ ಬೀದಿಯಲ್ಲೂ ಮಣ್ಣಿನ ಗಣಪತಿಯ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗುತ್ತದೆ. ಆದರೆ ಇನ್ನೇನು ಹಬ್ಬ ಕೆಲವೇ ದಿನ ಇದೆ ಎನ್ನುವಾಗ ರಾಸಾಯನಿಕ ಬಣ್ಣ ಲೇಪಿಸಿದ ಆಕರ್ಷಕ ಗಣೇಶ ವಿಗ್ರಹಗಳನ್ನು ಸರ್ಕಾರ ನಿಷೇಧಿಸುತ್ತದೆ. ಪರಿಸರ ಪ್ರೇಮಿಗಳೂ ಅಂತಹ ಗಣೇಶ ವಿಗ್ರಹಗಳನ್ನು ಬಹಿಷ್ಕರಿಸುತ್ತಾರೆ. ಇತರರಿಗೂ ಅದನ್ನು ಬಹಿಷ್ಕರಿಸುವಂತೆ ಸಂದೇಶ ನೀಡುತ್ತಾರೆ. ಸಿನಿಮಾ ನಿರ್ಮಾಣದಂತೆಯೇ ಗಣೇಶ ಮೂರ್ತಿಗಳ ನಿರ್ಮಾಣದಲ್ಲೂ ಸಾವಿರಾರು ಜನರು ತೊಡಗಿಸಿಕೊಂಡಿರುತ್ತಾರೆ, ಸಾವಿರಾರು ಕೋಟಿಗಳ ಹೂಡಿಕೆಯಿರುತ್ತದೆ. ಇಷ್ಟಾಗಿಯೂ ಹಿಂದೂ ದೇವರ ಮೂರ್ತಿಗಳನ್ನು ಅದು 'ಪರಿಸರಕ್ಕೆ ಮಾರಕ' ಎನ್ನುವ ಕಾರಣಕ್ಕೆ ಲಾಭ ನಷ್ಟಗಳ ಬಗ್ಗೆ ಯೋಚಿಸದೆ ಸ್ವತಃ ಹಿಂದೂಗಳೇ ಬಹಿಷ್ಕರಿಸುತ್ತಾರೆ. ಪರಿಸರಕ್ಕೆ ಹಾನಿಯಾಗುತ್ತದೆ ಎನ್ನುವ ಕಾರಣಕ್ಕೆ ಬಣ್ಣದ ಗಣೇಶನನ್ನೇ ಬಹಿಷ್ಕರಿಸುವುದು ಸರಿ ಎನ್ನುವುದಾದರೆ, ತಮ್ಮ ನಂಬಿಕೆ/ಸಂಸ್ಕೃತಿಗೆ ಹಾನಿಯಾಗುತ್ತಿದೆ ಎನ್ನುವ ಕಾರಣಕ್ಕೆ ಒಂದು ಸಿನಿಮಾವನ್ನು ಪ್ರೇಕ್ಷಕ ಸಮೂಹ ಬಹಿಷ್ಕರಿಸಿದರೆ ಅದು ತಪ್ಪು ಹೇಗಾಗುತ್ತದೆ?

ಅಷ್ಟಕ್ಕೂ ಪ್ರೇಕ್ಷಕ ಇಡೀ ಚಿತ್ರರಂಗವನ್ನೇನೂ ಬಹಿಷ್ಕರಿಸಲಿಲ್ಲ. ಇದೇ ಬಹಿಷ್ಕಾರದ ಸಮಯದಲ್ಲೇ ವಿಕ್ರಾಂತ್ ರೋಣ, ಕಾರ್ತಿಕೇಯ-2 ಮುಂತಾದ ಚಿತ್ರಗಳು ಉತ್ತಮ ಗಳಿಕೆ ಕಂಡಿವೆ. ಪ್ರೇಕ್ಷಕ ತನಗೆ ಯಾವುದು ಬೇಕೋ ಅದನ್ನಷ್ಟೇ ಆರಿಸಿಕೊಂಡರೆ ಅದನ್ನು ತಪ್ಪು ಎಂದು ಹೇಳುವ ಹಕ್ಕು ಚಿತ್ರರಂಗಕ್ಕೇಕೆ ಇರಬೇಕು? ಕಾರಣ ಯಾವುದೇ ಇರಲಿ, ನೋಡುಗನಿಗಿಷ್ಟವಿಲ್ಲದ ನಾಯಕ/ನಾಯಕಿ/ನಿರ್ದೇಶಕರನ್ನು ಇಟ್ಟುಕೊಂಡು ಅವರಿಗಿಷ್ಟವಿಲ್ಲದ ಕಥೆ/ದೃಶ್ಯಗಳನ್ನು ಹೊಸೆದು 'ನೀವಿದನ್ನು ನೋಡಲೇಬೇಕು' ಎನ್ನುವುದು ಗ್ರಾಹಕನ ಮೇಲೆ ಎಸಗುವ ಬಲಾತ್ಕಾರವಲ್ಲವೇ?

ಪ್ರೇಕ್ಷಕರು ಇಷ್ಟಪಡದವರಿಂದ, ಪ್ರೇಕ್ಷಕರು ಇಷ್ಟಪಡದ ಅಂಶಗಳನ್ನು ಸೇರಿಸಿ ನಿರ್ಮಿಸಲ್ಪಡುವ ಸಿನಿಮಾ ಒಂದರಿಂದ ಅದಕ್ಕಾಗಿ ಕೆಲಸ ಮಾಡಿದ ನೂರಾರು ಕಾರ್ಮಿಕರು ನಷ್ಟಕ್ಕೆ ಒಳಗಾಗುತ್ತಾರೆ ಎನ್ನುವ ಮಾತು ಸಮಂಜಸವಲ್ಲ. ಆ ಕಾರ್ಮಿಕರಿಗೆ ಒಂದು ರೂಪಾಯಿ ಕೂಡ ನಷ್ಟವಾಗದಂತೆ ನೋಡಿಕೊಳ್ಳುವುದು ಸಂಪೂರ್ಣವಾಗಿ ನಿರ್ಮಾಪಕನ ಜವಾಬ್ದಾರಿಯೇ ಹೊರತು ಆ ಹೊಣೆಯನ್ನು ಪ್ರೇಕ್ಷಕನ ತಲೆಯ ಮೇಲೆ ಹೊರಿಸುವುದನ್ನು ಯಾವುದೇ ಕಾರಣಕ್ಕೂ ಒಪ್ಪಲಾಗದು.

ನಾಯಕ, ನಾಯಕಿಯ ವೈಯಕ್ತಿಕ ಜೀವನವನ್ನು, ಹೇಳಿಕೆಗಳನ್ನು ಕಾರಣ ಮಾಡಿಕೊಂಡು ಒಂದು ಸಿನಿಮಾವನ್ನು ನೋಡದೆ ಇರುವುದು, ಅದನ್ನು ನೋಡದಂತೆ ಇತರರಿಗೆ ಕರೆ ಕೊಡುವುದು ತಪ್ಪು ಎನ್ನುವುದು ಹಲವರ ಅಭಿಪ್ರಾಯ. ಒಬ್ಬ ನಟನಿಗೆ ಶರೀರ, ಮಾತು, ನಡವಳಿಕೆ ಎಲ್ಲವೂ ಮುಖ್ಯವಾಗುತ್ತದೆ. ಡಾ. ರಾಜ್‌ಕುಮಾರ್ ಅವರು ಅದಕ್ಕೊಂದು ಶ್ರೇಷ್ಠ ಉದಾಹರಣೆ. ಎಷ್ಟೋ ಬಾರಿ ಚಿತ್ರ ತಂಡದವರೇ ತಮ್ಮ ಸಿನಿಮಾ ಪ್ರಚಾರಕ್ಕಾಗಿ ನಟ ನಟಿಯರ ವೈಯುಕ್ತಿಕ ಜೀವನದ ಅಂಶಗಳನ್ನು ಪ್ರಮುಖವಾಗಿ ತೋರಿಸುವುದೂ ಉಂಟು. ಕಲಾವಿದರಿಗೆ ವೈಯಕ್ತಿಕ ಜೀವನ ಎನ್ನುವುದು ಇರುವುದಿಲ್ಲ. ಒಂದು ಸಿನಿಮಾಕ್ಕಾಗಿಯೇ ಹಗಲು ರಾತ್ರಿಯೆನ್ನದೆ ಜಿಮ್‌ಗೆ ತೆರಳಿ ಅಂಗಸೌಷ್ಠವ ಹೆಚ್ಚಿಸಿಕೊಳ್ಳುವ ನಟರು, ತಮ್ಮಿಷ್ಟದ ಆಹಾರ ತ್ಯಜಿಸಿ 'ಜೀರೋ ಫಿಗರ್' ಕಾಯ್ದುಕೊಳ್ಳುವ ನಟಿಯರು ಅದೇ ಸಿನಿಮಾಕ್ಕಾಗಿ ತಾವೇನು ಮಾತಾಡಬೇಕು, ಹೇಗೆ ವರ್ತಿಸಬೇಕು ಎನ್ನುವುದನ್ನೂ ಅರಿತುಕೊಂಡು, ಅದನ್ನು ಪಾಲಿಸಲೇಬೇಕು.

ಇಷ್ಟಾಗಿಯೂ ಈ ವಿಚಾರವಾಗಿ ಪ್ರೇಕ್ಷಕರು ಯಾವ ಚಿತ್ರಮಂದಿರಕ್ಕೂ ಬೆಂಕಿ ಹಚ್ಚಲಿಲ್ಲ, ಚಿತ್ರಮಂದಿರಗಳತ್ತ ತೆರಳುತ್ತಿದ್ದ ಪ್ರೇಕ್ಷಕರಿಗೆ ಕತ್ತಿ ತೋರಿಸಿ ಬೆದರಿಸಲಿಲ್ಲ. ಅತ್ಯಂತ ಪ್ರಜಾಸತ್ತಾತ್ಮಕ ರೀತಿಯಲ್ಲಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವ ಮೂಲಕ, ತಿರಸ್ಕರಿಸುವಂತೆ ಕರೆ ಕೊಡುವ ಮೂಲಕ ಪ್ರತಿರೋಧವನ್ನು ತೋರಿಸಿದ್ದಾರೆ. ಪ್ರೇಕ್ಷಕರ ಈ ಸನ್ನಡತೆಯನ್ನೂ ಈ ಚರ್ಚೆಯ ಸಂದರ್ಭದಲ್ಲಿ ಮೆಚ್ಚಿಕೊಳ್ಳಲೇಬೇಕು.

ಅಂತಿಮವಾಗಿ ಒಂದು ಸಿನಿಮಾವನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಎಲ್ಲ ರೀತಿಯ ಸ್ವಾತಂತ್ರ್ಯವೂ ಪ್ರೇಕ್ಷಕನಿಗಿದೆ. ಯಾವ ಕಥೆಯನ್ನು ಆರಿಸಿಕೊಳ್ಳಬೇಕು, ಯಾವ ದೃಶ್ಯಗಳನ್ನು ಸೇರಿಸಬೇಕು, ಯಾವ ಸಂಭಾಷಣೆಯನ್ನು ಹೇಳಿಸಬೇಕು ಎನ್ನುವ ಎಲ್ಲ ಸ್ವಾತಂತ್ರ್ಯ ಚಿತ್ರತಂಡಕ್ಕೂ ಇದೆ. ಆದರೆ ನಾವು ಕೊಟ್ಟಿದ್ದನ್ನು ಜನ ನೋಡಲೇಬೇಕು, ಬಹಿಷ್ಕರಿಸಬಾರದು ಎನ್ನುವ ಹಕ್ಕು ಯಾವ ನಟ, ನಿರ್ಮಾಪಕರಿಗೂ ಇಲ್ಲ. ಏಕೆಂದರೆ ಪ್ರತಿಯೊಂದು ಉದ್ಯಮವೂ ಗ್ರಾಹಕನಿಗೆ ಬೇಕಾದದ್ದನ್ನು ಕೊಡಬೇಕೇ ಹೊರತು ತಾನು ಕೊಟ್ಟಿದ್ದನ್ನು ಗ್ರಾಹಕ ಸ್ವೀಕರಿಸಬೇಕು ಎನ್ನುವ ಧೋರಣೆ ಇಟ್ಟುಕೊಳ್ಳುವಂತಿಲ್ಲ. ಮತ್ತು ಈ ವಿಷಯದಲ್ಲಿ ಪ್ರೇಕ್ಷಕನೇ ಸಾರ್ವಭೌಮ!

ಲೇಖಕ: ನವೋದ್ಯಮಿ, ಹವ್ಯಾಸಿ ಬರಹಗಾರ

ಪದಬಂಧ 5062

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಜರಿಯದೇ ವಹಿಸಿಕೊಂಡಿರುವ ಹೊಣೆಗಾರಿಕೆ (4)
3. ಜಲ ತರುವಾಗಿನ ತೊಡಕು! (3)
4. ವೇದೋಕ್ತ ವಿಧಿಗಳನ್ನು ಮಾಡಿಸುವವನು (4)
6. ಒಲುಮೆಯಿಂದ ಮಾಡುತ್ತಿರುವ ಒತ್ತಾಯ (3)
8. ಕಾಣದಿರುವ ಉದ್ದೇಶ ಇಲ್ಲಿದೆ (3)
9. ಬೆಂದಕ್ಕಿ ಕಾಳು (3)
10. ಬೆಳ್ಳುಳ್ಳಿಯನ್ನು ಹೀಗೂ ಹೇಳುವರು (3)
12. ಸರವನ್ನು ಧರಿಸಿ ಮಾಡಿದ ವ್ಯಾಯಾಮ (4)
14. ಕರಿಯ ಮರಿ ಬಿದ್ದಿರುವ ಆಳವಾದ ಗುಂಡಿ (3)
15. ಸೂಕ್ಷ್ಮವಾದ ಎಳೆಯಿದು (4)

ಮೇಲಿಂದ ಕೆಳಕ್ಕೆ

1. ಜಟಿಲತೆಯಿಂದ ಸಂಗ್ರಹಿಸಿದ ನೀರು (2)
2. ಪುರಿಯೊಳಗಡಗಿರುವ ಶತ್ರು ಕಾಣುತ್ತಿರುವನೇ? (2)
3. ಮಹಜರು ನಡೆದಾಗ ಕಾಣಿಸಿದ ಹಡಗು (3)
5. ಈತ ತಾರುಣ್ಯವನ್ನು ಹೊಂದಿದವನು (3)
7. ಮಸ್ತಿಷ್ಕ ಇಲ್ಲಿದೆ (3)
8. ಕಾಲದಲ್ಲಿ ಕಾಣಿಸಿಕೊಂಡಿರುವ ಇನಿಯ (3)
9. ಸಡಿಲವಾದುದನ್ನು ಹೀಗೆನ್ನಿ (3)
11. ನರಿಯಲ್ಲಿ ಉತ್ತಮ ಜಾತಿಯ ಜೇನುತುಪ್ಪ ಸಿಕ್ಕೀತೆ? (3)
13. ಮೂಗಿನ ಆಭರಣವು ಉಲ್ಟಾ ಪಲ್ಟಾ ಕಾಣುತ್ತಿದೆ (2)
14. ಮುಖ್ಯ ಬೆಳೆಯ ನಡುವೆ ಬೆಳೆಯುವ ಹುಲ್ಲು (2)



5061ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕರ್ಣಧಾರ 3.ಮಹಿಷ 5.ಸುಧಾಮ 7.ಉಯಿಲು 8.ತುತ್ತು 9.ವಿರಹತಾಪ 11.ಪ್ರತಿ 12.ಸಾರಣೆ 13.ಧಿಮಾಕು 16.ನಗರ 17.ಖಡ್ಗಧಾರೆ

ಮೇಲಿಂದ ಕೆಳಕ್ಕೆ:
1.ಕಡಸು 2.ರಥ 3.ಮಡಿಲು 4.ಷರಬತ್ತು 6.ಮನವಿ 7.ಉದಾಹರಣೆ 10.ಪರಿಧಿ 11.ಪ್ರಹಸನ 12.ಸಾವಿರ 14.ಕುದುರೆ 15.ನಖ

ಸುಡೊಕು 5448

		3		6				2
	4						5	
	1			5		6		4
	8			1		4		
3		4	2		7		8	
	9		4		3			6
6		5					2	
				7		3		1
1		8	9		6		4	

5447 ಸುಡೊಕು

7	8	4	2	5	3	9	6	1
1	9	2	6	8	4	5	7	3
6	5	3	1	7	9	8	2	4
5	3	8	9	2	7	4	1	6
9	1	6	4	3	8	7	5	2
4	2	7	5	1	6	3	8	9
2	4	5	7	9	1	6	3	8
8	6	1	3	4	5	2	9	7
3	7	9	8	6	2	1	4	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಆಗಸ್ಟ್ 27, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಅಮಾವಾಸ್ಯೆ ಗಂ. 13-47 ನಕ್ಷತ್ರ: ಮಘಾ ಗಂ. 20-26 ಯೋಗ: ಶಿವ ಗಂ. 26-06
ಕರಣ: ನಾಗವಾನ್ ಗಂ. 13-47, ಸಿಂಹ ಮಾಸದ 10ನೇ ದಿನ. ರಾಹುಕಾಲ : ಬೆಳಿಗ್ಗೆ 09:00 – 10:30, ಸೂರ್ಯೋದಯ : 06-23, ಸೂರ್ಯಾಸ್ತ : 06-41
ಮುಸ್ಲಿಂ ದಿನಾಂಕ : 28 ಮೊಹರಮ್
ದಿನ ವಿಶೇಷ : ಶ್ರಾವಣ ಅಮಾವಾಸ್ಯೆ, ಕುಶೋತ್ಪತ್ತಿ, ಜೈನ್ ಹಬ್ಬ
ಅದೃಷ್ಟ ಸಂಖ್ಯೆ : 6, 10

ಮೇಷ: ನಿಮ್ಮನ್ನು ವಂಚನೆಯ ಕಡೆಗೆ ಕರೆದೊಯ್ಯುವ ಪ್ರಯತ್ನ ನಿಮ್ಮ ಸ್ನೇಹಿತರ ಬಳಗದಲ್ಲಿ ನಡೆಯಲಿದೆ. ಅವರು ಮಾಡಿದ ವಂಚನೆಗೆ ನೀವು ಹೊಣೆಗಾರಿಕೆ ಹೊರುವ ಪರಿಸ್ಥಿತಿ ಎದುರಾಗಬಹುದು.

ವೃಷಭ: ಪ್ರತಿಸ್ಪರ್ಧಿಗಳ ವಿದ್ರೋಹ ಅನುಭವಕ್ಕೆ ಬಂದೀತು. ಶನಿಯ ಚಲನೆಯಿಂದ ತಂದೆ-ತಾಯಿಯ ಆರೋಗ್ಯದಲ್ಲಿ ಏರುಪೇರಾಗಲಿದೆ. ವೃತ್ತಿರಂಗದಲ್ಲಿ ತಮ್ಮತನ ಕಾಯ್ದುಕೊಳ್ಳುವುದರಿಂದ ಅಭಿವೃದ್ಧಿಗೆ ಪೂರಕವಾಗಲಿದೆ.

ಮಿಥುನ: ಸಣ್ಣ-ಪುಟ್ಟ ವಿಚಾರಕ್ಕೂ ನೆರೆಹೊರೆಯವರ ಕಿರಿಕಿರಿ ತಪ್ಪದು. ಎಲ್ಲಾ ವಿಚಾರದಲ್ಲೂ ಸಾವಧಾನವಾಗಿ ಮುಂದುವರಿಯುವುದು ಉತ್ತಮ. ಮಹಾ ಗಣಪತಿಯನ್ನು ಆರಾಧಿಸುವುದರಿಂದ ಶುಭಫಲ ಪ್ರಾಪ್ತಿಯಾಗುತ್ತದೆ.

ಕರ್ಕಾಟಕ: ತಾಂತ್ರಿಕ ಉದ್ಯೋಗಿಗಳಿಗೆ ಈಗಿರುವ ಸಂಸ್ಥೆಯಲ್ಲಿನ ವೃತ್ತಿ ತಾತ್ಕಾಲಿಕ ಸಮಾಧಾನವನ್ನು ತಂದರೂ ಬದಲಾವಣೆಗೆ ಅವಕಾಶ ಇರುತ್ತದೆ. ಬಂದ ಅವಕಾಶವನ್ನು ಬಳಸಿಕೊಳ್ಳುವುದು ಉತ್ತಮ.

ಸಿಂಹ: ಸಮಾಧಾನದಿಂದ ವಿಚಾರ ವಿನಿಮಯ ಮಾಡಿಕೊಂಡರೆ ಹಂತ ಹಂತವಾಗಿ ವಿವಾದಗಳು ನಿವಾರಣೆಯಾಗಲಿವೆ. ಚರ್ಮಕ್ಕೆ ಸಂಬಂಧಿಸಿದ ರೋಗಗಳು ಎದುರಾಗಬಹುದು. ಉಪನ್ಯಾಸಕರಿಗೆ, ಸಂಗೀತಗಾರರಿಗೆ ಗೌರವವು ಸಿಗಲಿದೆ.

ಕನ್ಯಾ: ಸ್ನೇಹಿತರಲ್ಲಿ ಸಂಶಯ, ಅಪನಂಬಿಕೆಯು ಬಾರದಂತೆ ಮನಸ್ಥಿತಿ ಕಾಪಾಡಿಕೊಳ್ಳುವುದು ಮುಖ್ಯ. ವಿದ್ಯಾರ್ಥಿಗಳಿಗೆ ವಿದ್ಯೆಯ ಬಗ್ಗೆ ಒಲವು ಹೆಚ್ಚುವುದು. ಮನೆಯಲ್ಲಿ ನಡೆಯಬೇಕಾದ ಶುಭ ಕಾರ್ಯಗಳ ಚಿಂತನೆಗೆ ಇಂದು ಸಕಾಲ.

ತುಲಾ: ಯಾವುದೇ ರೀತಿಯ ಸೋಮಾರಿತನ ಇಲ್ಲದೇ ನಿಮ್ಮ ಕರ್ತವ್ಯದ ಕಡೆಗೆ ಅಧಿಕವಾಗಿ ಗಮನ ನೀಡಬೇಕಾಗುವುದು. ಮಕ್ಕಳ ಒತ್ತಾಯಕ್ಕೆ ಮನರಂಜನೆಗಾಗಿ ಈ ದಿನ ಹೆಚ್ಚಾಗಿ ಖರ್ಚು ಮಾಡುವ ಸಾಧ್ಯತೆ ಇದೆ.

ವೃಶ್ಚಿಕ: ಕಳೆದು ಹೋಗಿರಬಹುದೆಂದು ತಿಳಿದಿದ್ದ ವಸ್ತುಗಳು ಅಥವಾ ದಾಖಲೆ ಪತ್ರಗಳು ಪುನಃ ನಿಮ್ಮ ಕೈ ಸೇರುವುದರಿಂದ ಮನಸ್ಸಿಗೆ ಸಂತೋಷ ಆಗಲಿದೆ. ಮೇಧಾವಿಗಳೊಂದಿಗಿನ ಚರ್ಚೆಯಿಂದಾಗಿ ಅರಿವು ಹೆಚ್ಚಾಗಲಿದೆ.

ಧನು: ವಿಭಿನ್ನ ರೀತಿಯ ಕೆಲಸವೊಂದನ್ನು ನಿಮ್ಮ ವೃತ್ತಿ ಸ್ನೇಹಿತರೊಬ್ಬರು ನಿಮಗೊಪ್ಪಿಸಲಿದ್ದಾರೆ. ಒಪ್ಪಿಕೊಳ್ಳಿ ಅದು ನಿಮಗೆ ಸಾಕಷ್ಟು ಆದಾಯ ಮತ್ತು ಹೆಸರನ್ನು ತರಲಿದೆ. ಎಲೆಕ್ಟ್ರಿಕಲ್ ವಸ್ತುಗಳ ರಿಪೇರಿಯಿಂದ ಅಧಿಕ ವರಮಾನ.

ಮಕರ: ಗುತ್ತಿಗೆ ದಾರರು ಹಣ ಉಳಿಸುವ ಪ್ರಯತ್ನಕ್ಕಿಂತ ಹೆಸರು ಸಂಪಾದಿಸುವ ವಿಷಯದ ಬಗ್ಗೆ ಹೆಚ್ಚಿನ ಗಮನನೀಡಿ. ಒಡಹುಟ್ಟಿದವರ ಮಾತುಗಳು ಅಥವಾ ಅವರ ಹಾವಭಾವವು ನಿಮ್ಮ ಮನಸ್ಸನ್ನು ಹಾಳುಮಾಡಬಹುದು.

ಕುಂಭ: ಪದವೀಧರರಿಗೆ ವಿದೇಶದಲ್ಲಿ ಉದ್ಯೋಗ ದೊರೆಯುವ ಸಂಭವವಿದೆ. ಅಕ್ಕ ಪಕ್ಕದಲ್ಲಿನ ಭಿನ್ನಾಭಿಪ್ರಾಯಗಳಿಗೆ ಹೆಚ್ಚು ಪ್ರತಿಕ್ರಿಯಿಸುವುದು ಸಮಂಜಸವಲ್ಲ. ಕೇವಲ ನಿಮ್ಮ ಗುರಿ ಮುಟ್ಟುವ ಬಗ್ಗೆ ನಿಮ್ಮ ಶ್ರಮವಿರಲಿ.

ಮೀನ: ಹೊಸ ರೀತಿಯ ಚಿಂತನೆಗಳು ಫಲಕಾರಿಯಾಗಲು ಸಮಯ ಹಿಡಿದರೂ ಫಲ ನಿಶ್ಚಿತ ಎಂಬುದು ಮನದಟ್ಟಾಗಿದೆ. ತೋಟದ ಕೆಲಸ ಮಾಡ ಬೇಕಾದ ಸಂದರ್ಭದಲ್ಲಿ ವಿಷಜಂತುಗಳಿಂದ ತೊಂದರೆ ಆಗಬಹುದು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಬ್ರಿಟನ್: ಸ್ಕಾಟ್ಲೆಂಡ್ ಅರಮನೆಯಲ್ಲಿ ಪ್ರಧಾನಿ ಪದಗ್ರಹಣ?

ಲಂಡನ್ (ಪಿಟಿಐ): ಪ್ರಧಾನಿ ಸ್ಥಾನಕ್ಕೆ ಆಯ್ಕೆಯಾಗುವ ನೂತನ ನಾಯಕನ ಅಧಿಕಾರ ಸ್ವೀಕಾರ ಕಾರ್ಯಕ್ರಮವನ್ನು ಇದೇ ಮೊದಲ ಬಾರಿಗೆ ಸ್ಕಾಟ್ಲೆಂಡ್‌ನ ಬಲ್ಮೊರಲ್ ಕ್ಯಾಸಲ್‌ನಲ್ಲಿರುವ ತಮ್ಮ ಅರಮನೆಯಲ್ಲಿ ಆಯೋಜಿಸಲು ಬ್ರಿಟನ್‌ನ ರಾಣಿ 2ನೇ ಎಲಿಜಬೆತ್ ಮುಂದಾಗಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಎಲಿಜಬೆತ್ ಅವರು ವಯೋಸಹಜ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಅವರು ವಿಶ್ರಾಂತಿಗಾಗಿ ಬಲ್ಮೊರಲ್ ಕ್ಯಾಸಲ್‌ನ ಅರಮನೆಯಲ್ಲಿ ತಂಗಿದ್ದಾರೆ ಎಂದು 'ದಿ ಸನ್' ಪತ್ರಿಕೆ ವರದಿ ಮಾಡಿದೆ. ಮಾಜಿ ಸಚಿವ ರಿಷಿ ಸುನಕ್, ವಿದೇಶಾಂಗ ಕಾರ್ಯದರ್ಶಿ ಲಿಜ್ ಟ್ರಸ್ ಇವರಲ್ಲಿ ಚುನಾಯಿತರಾಗುವವರನ್ನು ಅರಮನೆಗೇ ಆಹ್ವಾನಿಸಿ, ಪ್ರತಿಜ್ಞಾವಿಧಿ ಬೋಧಿಸಲು ಯೋಜಿಸಲಾಗಿದೆ. ಅಂತಿಮ ನಿರ್ಧಾರ ಮುಂದಿನ ವಾರ ಘೋಷಣೆಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

ಜಾರ್ಖಂಡ್: ಸಿ.ಎಂ ಹೇಮಂತ್ ಸೊರೇನ್ ಭವಿಷ್ಯ ತೂಗುಯ್ಯಾಲೆಯಲ್ಲಿ

ಅನರ್ಹತೆ ನಿರ್ಧಾರ ಇಂದು?

ರಾಂಚಿ (ಪಿಟಿಐ): ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸುವ ಸಂಬಂಧ ರಾಜ್ಯಪಾಲ ರಮೇಶ್ ಬೈಸ್ ಶನಿವಾರ ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂದು ಮೂಲಗಳು ಹೇಳಿವೆ.

ಈ ಮಧ್ಯೆ ಆಡಳಿತಾರೂಢ ಯುಪಿಎ ಮೈತ್ರಿಕೂಟದ ಪಕ್ಷಗಳ ಶಾಸಕರು ಶುಕ್ರವಾರ ಎರಡು ಸಭೆಗಳನ್ನು ನಡೆಸಿದ್ದಾರೆ. ಮುಖ್ಯಮಂತ್ರಿ ಮನೆಯಲ್ಲಿ ಸಭೆ ನಡೆದಿದೆ. 40ಕ್ಕೂ ಹೆಚ್ಚು ಶಾಸಕರು ಸಭೆಯಲ್ಲಿ ಭಾಗಿಯಾಗಿದ್ದರು.

ಸಂಖ್ಯಾಬಲವನ್ನು ಉಳಿಸಿಕೊಳ್ಳುವುದಕ್ಕಾಗಿ ಶಾಸಕರನ್ನು ಬೇರೆ ರಾಜ್ಯದ ರೆಸಾರ್ಟ್‌ನಲ್ಲಿ ಇರಿಸುವ ಕುರಿತೂ ಚಿಂತನೆ ನಡೆದಿದೆ ಎನ್ನಲಾಗಿದೆ.

ಯುಪಿಎ ಮೈತ್ರಿಕೂಟದಲ್ಲಿರುವ ಶಾಸಕರನ್ನು ಖರೀದಿಸಲು ಬಿಜೆಪಿ ಯತ್ನಿಸಬಹುದು. ಹಾಗಾಗಿ, ಪಶ್ಚಿಮ ಬಂಗಾಳ ಅಥವಾ ಬಿಹಾರದಂತಹ 'ಮಿತ್ರ ರಾಜ್ಯ'ಗಳ ರೆಸಾರ್ಟ್‌ನಲ್ಲಿ ಶಾಸಕರನ್ನು ಇರಿಸುವ ಸಾಧ್ಯತೆ ಇದೆ ಎಂದು ಕಾಂಗ್ರೆಸ್‌ನ ಮುಖಂಡರು ಹೇಳಿದ್ದಾರೆ.

ಆದರೆ, ಹೇಮಂತ್ ಅವರನ್ನು ಶಾಸಕ ಸ್ಥಾನದಿಂದ ಅನರ್ಹ ಮಾಡುವಂತೆ ಚುನಾವಣಾ ಆಯೋಗವು ನೀಡಿದ ವರದಿಯ ಕುರಿತು ಸರ್ಕಾರಕ್ಕೆ ರಾಜ್ಯಪಾಲರು ಮಾಹಿತಿ ನೀಡುವವರೆಗೆ ಯಾವುದೇ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇಲ್ಲ.

ಹೇಮಂತ್ ಅವರನ್ನು ಅನರ್ಹಗೊಳಿಸಬೇಕು ಎಂಬ ಶಿಫಾರಸು ಇರುವ ವರದಿಯನ್ನು ರಾಜ್ಯಪಾಲ ರಮೇಶ್ ಬೈಸ್ ಅವರಿಗೆ ಚುನಾವಣಾ ಆಯೋಗವು ಗುರುವಾರವೇ ನೀಡಿದೆ. ತಮ್ಮ ಹೆಸರಿನಲ್ಲಿದ್ದ ಗಣಿಗಾರಿಕೆ ಗುತ್ತಿಗೆಯನ್ನು ವಿಸ್ತರಿಸಿಕೊಂಡ ಆರೋಪದ ಪ್ರಕರಣದಲ್ಲಿ ಹೇಮಂತ್ ವಿರುದ್ಧ ಆಯೋಗವು ಹೀಗೆ ಶಿಫಾರಸು ಮಾಡಿದೆ ಎನ್ನಲಾಗಿದೆ.

ಆದರೆ, ವರದಿಯಲ್ಲಿ ಏನಿದೆ ಎಂಬುದನ್ನು ರಾಜ್ಯಪಾಲರ ಕಚೇರಿಯು ದೃಢಪಡಿಸಿಲ್ಲ.

'ರಿಸಾರ್ಟ್‌ಗೆ ಹೋಗುವುದಿಲ್ಲ': ಮೈತ್ರಿಕೂಟದ ಶಾಸಕರು ರಾಂಚಿ ಬಿಟ್ಟು ಹೋಗುವುದಿಲ್ಲ. ಎಲ್ಲರೂ ಇಲ್ಲಿಯೇ ಉಳಿಯಲಿದ್ದಾರೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಆಲಂಗೀರ್ ಆಲಂ ಹೇಳಿದ್ದಾರೆ. ಆಡಳಿತಾರೂಢ ಮೈತ್ರಿಕೂಟಕ್ಕೆ ಈಗ 50 ಶಾಸಕರ ಬೆಂಬಲ ಇದೆ, ಅದು 56ಕ್ಕೆ ಏರುವ ಸಾಧ್ಯತೆ ಇದೆ ಎಂದು ಸಚಿವ ಮಿಥಿಲೇಶ್ ಠಾಕೂರ್ ಹೇಳಿದ್ದಾರೆ.

ರಿಸಾರ್ಟ್ ರಾಜಕಾರಣ ಇಲ್ಲ, ಹೇಮಂತ್ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ ಎಂದು ಜೆಎಂಎಂನ ವಿನೋದ್ ಪಾಂಡೆ ಹೇಳಿದ್ದಾರೆ.

'ಪತ್ರ ಬರೆದದ್ದು ಸುಧಾರಣೆಗಾಗಿ'

ರಾಜೀನಾಮೆಗೆ ಕಾಂಗ್ರೆಸ್ಸಿಗರ ಆಕ್ಷೇಪ: ಆಜಾದ್ ವಿರುದ್ಧ ಹರಿಹಾಯ್ದ ಮುಖಂಡರು

ನವದೆಹಲಿ (ಪಿಟಿಐ): ಗುಲಾಂ ನಬಿ ಆಜಾದ್ ಅವರ ರಾಜೀನಾಮೆ ಪತ್ರದಲ್ಲಿನ ವಿವರಗಳಿಗೆ ಪಕ್ಷದ ಹಲವು ನಾಯಕರಿಂದ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಪಕ್ಷದ ಸುಧಾರಣೆ ಕುರಿತು 2020ರಲ್ಲಿ ಸೋನಿಯಾ ಅವರಿಗೆ ಪತ್ರ ಬರೆದಿದ್ದ 23 ನಾಯಕರಲ್ಲಿ ಒಬ್ಬರಾಗಿದ್ದ ಸಂದೀಪ್ ದೀಕ್ಷಿತ್, ಆಜಾದ್ ಅವರ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಆಜಾದ್ ಅವರ ನಡೆಯನ್ನು ಈಗಾಗಲೇ ಕಾಂಗ್ರೆಸ್ ಬಿಟ್ಟಿರುವ ಹಲವರು ಸ್ವಾಗತಿಸಿದ್ದಾರೆ.

ದೆಹಲಿಯ ಮಾಜಿ ಮುಖ್ಯಮಂತ್ರಿ ಶೀಲಾ ದೀಕ್ಷಿತ್ ಅವರ ಮಗ ಸಂದೀಪ್ ದೀಕ್ಷಿತ್ ಸಹ ಜಿ-23 ಗುಂಪಿನಲ್ಲಿ ಇದ್ದರು. ಆಜಾದ್ ಅವರ ರಾಜೀನಾಮೆ ಪತ್ರ ಬಹಿರಂಗವಾದ ಬೆನ್ನಲ್ಲೇ ಸಂದೀಪ್ ಅವರು, ಆಜಾದ್‌ಗೆ ಬಹಿರಂಗ ಪತ್ರ ಬರೆದಿದ್ದಾರೆ. 23 ಜನ ಪತ್ರ ಬರೆದದ್ದು ಪಕ್ಷದ ಸುಧಾರಣೆ ಉದ್ದೇಶದಿಂದ, ಪಕ್ಷದಿಂದ ಬಂಡಾಯ ಏಳುವುದಕ್ಕಲ್ಲ ಎಂದು ಅವರು ಹರಿಹಾಯ್ದಿದ್ದಾರೆ.

'ಪಕ್ಷವನ್ನು ಪುನಶ್ಚೇತನಗೊಳಿಸಬೇಕು ಎಂದು ನೀವು ಬರೆದಿದ್ದ ಪತ್ರದಲ್ಲಿದ್ದ ಅಂಶಗಳನ್ನು ನಾವೆಲ್ಲಾ ಒಪ್ಪಿದ್ದೆವು ಮತ್ತು ಆ ಕಾರಣದಿಂದಲೇ ಸಹಿ ಮಾಡಿದ್ದೆವು. ಅದೆಲ್ಲವನ್ನೂ ನಾವು ಪಕ್ಷದ ಸುಧಾರಣೆಗಾಗಿ ಮಾಡಿದ್ದೇವೆ ಹೊರತು, ಬಂಡಾಯಕ್ಕಾಗಿ ಅಲ್ಲ. ಕಾಂಗ್ರೆಸ್ ಪುನಶ್ಚೇತನದ ನಿಜವಾದ ಗುರಿಯು, ಭಾರತೀಯತೆಯನ್ನು ಉಳಿಸಿಕೊಳ್ಳುವುದೇ ಆಗಿತ್ತು. ಹೀಗಾಗಿ ಈ ಹೋರಾಟಕ್ಕಾಗಿ ಪಕ್ಷದಲ್ಲೇ ಉಳಿಯುವುದು ಅತ್ಯಗತ್ಯವಾಗಿತ್ತು. ಪಕ್ಷಕ್ಕೆ ಹಾನಿ ಮಾಡುತ್ತಿದೆ ಎಂದು ನಂಬಲಾದ ಮತ್ತು ಪಕ್ಷಕ್ಕೆ ಹಾನಿ ಮಾಡುತ್ತಿದ್ದಾರೆ ಎಂದು ನಂಬಲಾದ ವ್ಯಕ್ತಿಯ ವಿರುದ್ಧ ಹೋರಾಡುವುದೂ ಅಷ್ಟೇ ಅತ್ಯಗತ್ಯವಾಗಿತ್ತು. ಅದು ನಮ್ಮ ಕರ್ತವ್ಯವಾಗಿತ್ತು. ಆದರೆ ಹೀಗೆ ಈ ರೀತಿಯಲ್ಲಿ ಪಕ್ಷವನ್ನು ತ್ಯಜಿಸುವುದರಿಂದ ಅದೇ ನೀತಿಗಳು ಮತ್ತು ವ್ಯಕ್ತಿಗಳನ್ನು ಬಲಗೊಳಿಸಿದಂತೆ ಆಗುತ್ತದೆ' ಎಂದು ಸಂದೀಪ್ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

'ಗುಲಾಂ ನಬಿ ಆಜಾದ್ ಇಲ್ಲದೆ ಕಾಂಗ್ರೆಸ್ ದುರ್ಬಲವಾಗುತ್ತದೆ. ಆದರೆ ಜಿ23ರ ಪತ್ರ ಬರೆದಿದ್ದ ಆಜಾದ್ ಅವರೇ ಬೇರೆ, ಈ ರಾಜೀನಾಮೆ ಪತ್ರ ಬರೆದಿರುವ ಆಜಾದ್ ಅವರೇ ಬೇರೆ' ಎಂದು ಅವರು ಹೇಳಿದ್ದಾರೆ.

'ಆಂತರಿಕ ಚುನಾವಣೆ ಎಂಬುದು ವಂಚನೆ'

ಕಾಂಗ್ರೆಸ್‌ನ ವಿವಿಧ ಹುದ್ದೆಗಳಿಗೆ ನಡೆಸಿದ ಆಂತರಿಕ ಚುನಾವಣೆ ಒಂದು ವಂಚನೆ ಎಂದು ಆಜಾದ್ ಆರೋಪಿಸಿದ್ದಾರೆ.

'ಪಕ್ಷದ ಅಧ್ಯಕ್ಷ, ಉಪಾಧ್ಯಕ್ಷ, ಮತಗಟ್ಟೆ ಮಟ್ಟದ ಘಟಕಗಳು, ತಾಲ್ಲೂಕು ಘಟಕಗಳು, ಜಿಲ್ಲಾ ಘಟಕಗಳು, ರಾಜ್ಯ ಘಟಕಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಮತ್ತಿತರ ಹುದ್ದೆಗಳಿಗೆ ಎಲ್ಲಿಯೂ ಚುನಾವಣೆ ನಡೆದೇ ಇಲ್ಲ' ಎಂದು ಅವರು ಪತ್ರದಲ್ಲಿ ಬರೆದಿದ್ದಾರೆ.

'ರಾಹುಲ್ ಗಾಂಧಿ ಮತ್ತು ಮನೋರೋಗಿಗಳ ಕೂಟವು ಎಲ್ಲಾ ಹುದ್ದೆಗಳಿಗೆ ಕಾರ್ಯಕರ್ತರನ್ನು ಆಯ್ಕೆ ಮಾಡುತ್ತದೆ. ಆ ಪಟ್ಟಿಯನ್ನು ಎಲ್ಲಿಯೂ ಬಹಿರಂಗಪಡಿಸುವುದಿಲ್ಲ' ಎಂದು ಅವರು ಆರೋಪಿಸಿದ್ದಾರೆ.

'ರಾಹುಲ್ ಗಾಂಧಿ ಅವರನ್ನು ಪಕ್ಷದ ಉಪಾಧ್ಯಕ್ಷರಾಗಿ ನೇಮಕ ಮಾಡಿದ ನಂತರ ಪಕ್ಷದೊಳಗಿನ ಸಮಾಲೋಚನಾ ವ್ಯವಸ್ಥೆಯೇ ಕುಸಿದು ಬಿತ್ತು. ಸರ್ಕಾರವು ಹೊರಡಿಸಿದ್ದ ಸುಗ್ರೀವಾಜ್ಞೆಯ ಪ್ರತಿಯನ್ನು ಮಾಧ್ಯಮಗೋಷ್ಠಿಯಲ್ಲಿ ಹರಿದುಹಾಕಿದ್ದು, ರಾಹುಲ್ ಅವರ ಅಪ್ರಬುದ್ಧ ನಡವಳಿಕೆಗೆ ಒಂದು ಸ್ಪಷ್ಟ ನಿದರ್ಶನ' ಎಂದು ಅವರು ಹೇಳಿದ್ದಾರೆ.

'ತಜ್ಞರ ಶಿಫಾರಸಿನ ಆಧಾರದಲ್ಲಿ ರಚಿಸಲಾಗಿದ್ದ ಆ ಸುಗ್ರೀವಾಜ್ಞೆಗೆ ಪ್ರಧಾನಿ ನೇತೃತ್ವದ ಕೇಂದ್ರ ಸಚಿವ ಸಂಪುಟದ ಒಪ್ಪಿಗೆ ದೊರೆತಿತ್ತು. ರಾಷ್ಟ್ರಪತಿಯ ಅಂಕಿತವೂ ಬಿದ್ದಿತ್ತು. ಅದನ್ನು ಹರಿದುಹಾಕುವಂತಹ ಬಾಲಿಶ ನಡೆಯ ಮೂಲಕ ರಾಹುಲ್ ಅವರು, ಭಾರತದ ಪ್ರಧಾನಿಯ ಅಧಿಕಾರಗಳನ್ನು ಬುಡಮೇಲು ಮಾಡಿದ್ದರು. 2014ರ ಚುನಾವಣೆಯಲ್ಲಿ ಯುಪಿಎ ಹೀನಾಯವಾಗಿ ಸೋಲಲು ಬೇರೆಲ್ಲಾ ಕಾರಣಗಳಿಗಿಂತ, ಇದೇ ಅತ್ಯಂತ ದೊಡ್ಡ ಕಾರಣ' ಎಂದು ಅವರು ಆರೋಪಿಸಿದ್ದಾರೆ.

> ಕಾಂಗ್ರೆಸ್ ಎಂತಹ ಸ್ಥಿತಿಗೆ ತಲುಪಿದೆ ಅಂದರೆ, ಕೆಲವರ ಕೈಗೊಂಬೆಯಾಗಿರುವವರು ಪಕ್ಷದ ಅಧ್ಯಕ್ಷರಾಗುವ ಸಾಧ್ಯತೆ ಇದೆ. ಈ ಪ್ರಯೋಗ ವಿಫಲವಾಗಲಿದೆ
> **ಗುಲಾಂ ನಬಿ ಆಜಾದ್,** ಕಾಂಗ್ರೆಸ್‌ನ ಮಾಜಿ ನಾಯಕ

> ಇದು ಕಾಂಗ್ರೆಸ್‌ಗೆ ಬಿದ್ದ ದೊಡ್ಡ ಹೊಡೆತ. ದೇಶದ ಅತ್ಯಂತ ಹಳೆಯ ಪಕ್ಷವು ಛಿದ್ರವಾಗುತ್ತಿರುವುದನ್ನು ನೋಡಲು ಬೇಸರವಾಗುತ್ತಿದೆ, ಭಯವೂ ಆಗುತ್ತಿದೆ
> **ಒಮರ್ ಅಬ್ದುಲ್ಲಾ,** ಎನ್‌ಸಿ ನಾಯಕ

> ನಿಮ್ಮ ರಾಜೀನಾಮೆ ಪತ್ರ ಓದಿದ ನಂತರ ನನಗೆ ದಿಗ್ಭ್ರಮೆಯಾಗಿದೆ. ಅದರ ಜತೆಯಲ್ಲೇ ನಾನು ಮೋಸಹೋದೆ ಎಂದೂ ಭಾಸವಾಗತೊಡಗಿದೆ
> **ಸಂದೀಪ್ ದೀಕ್ಷಿತ್**
> ಕಾಂಗ್ರೆಸ್ ನಾಯಕ

> ಆಜಾದ್ ಅವರ ಬಂಡಾಯವನ್ನು ಮತ್ತಷ್ಟು ಮಂದಿ ಅನುಸರಿಸಲಿದ್ದಾರೆ. ಇದರಿಂದ ಕಾಂಗ್ರೆಸ್ ದುರ್ಬಲವಾಗಲಿದೆ, ಕೊನೆಗೆ ಅಪ್ರಸ್ತುತವಾಗಲಿದೆ
> **ಅಶ್ವಿನಿ ಕುಮಾರ್**
> ಕಾಂಗ್ರೆಸ್‌ನ ಮಾಜಿ ನಾಯಕ

> ಪಕ್ಷವು ನಿಮಗೆ ಎಲ್ಲವನ್ನೂ ಮಾಡಿದೆ, ಎಲ್ಲವನ್ನೂ ನೀಡಿದೆ. ಹೀಗಿರುವಾಗ ಪಕ್ಷವನ್ನು ತೊರೆಯುವ ಹೊತ್ತಲ್ಲಿ ಹೀಗೆ ಆರೋಪ ಮಾಡುವುದು ಶೋಭೆಯಲ್ಲ
> **ರಘು ಶರ್ಮಾ,** ಗುಜರಾತ್ ಕಾಂಗ್ರೆಸ್ ಉಸ್ತುವಾರಿ

> ಭಾರತವನ್ನು ಜೋಡಿಸಿ ಯಾತ್ರೆಯನ್ನು ಕಾಂಗ್ರೆಸ್ ತಕ್ಷಣವೇ ಕೈಬಿಡಬೇಕು. ಮತ್ತು ತಕ್ಷಣವೇ ಪರಿವಾರವನ್ನು ಜೋಡಿಸಿ ಎಂಬ ಯಾತ್ರೆಯನ್ನು ಆರಂಭಿಸಬೇಕು
> **ಶೆಹಜಾದ್ ಪೂನಾವಾಲಾ**
> ಬಿಜೆಪಿ ನಾಯಕ

ಅಹಮದಾಬಾದ್‌ನ ಸಾಬರಮತಿ ನದಿಗೆ ನಿರ್ಮಿಸಿರುವ ಅಟಲ್ ಸೇತುವೆ ಉದ್ಘಾಟನೆಯ ಮುನ್ನಾದಿನ ಶುಕ್ರವಾರ ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸಿತು —ಪಿಟಿಐ ಚಿತ್ರ

'ಕೈ'ಗೆ ಆಜಾದ್ ವಿದಾಯ

ಒಂದನೇ ಪುಟದಿಂದ

ಆಜಾದ್ ಅವರು ತಮ್ಮ ಪತ್ರದುದ್ದಕ್ಕೂ ರಾಹುಲ್ ಗಾಂಧಿಯನ್ನು ಟೀಕಿಸಿದ್ದಾರೆ. ರಾಹುಲ್ ಗಾಂಧಿ ರಾಜಕೀಯಕ್ಕೆ ಬಂದ ನಂತರವೇ ಕಾಂಗ್ರೆಸ್‌ನ ಪತನ ಆರಂಭವಾಯಿತು. ಅವರ ಬಾಲಿಶ ಮತ್ತು ಅಪ್ರಬುದ್ಧ ನಡವಳಿಕೆಗಳಿಂದ ಪಕ್ಷವು ಹೀನಾಯ ಸ್ಥಿತಿಗೆ ತಲುಪಿದೆ ಎಂದು ಆರೋಪಿಸಿದ್ದಾರೆ.

ಮನೋರೋಗಿಗಳ ಕೂಟವು ಕಾಂಗ್ರೆಸ್ ಅನ್ನು ಮುನ್ನಡೆಸುತ್ತಿದೆ ಎಂದು ಆಜಾದ್ ಆರೋಪಿಸಿದ್ದಾರೆ. 'ರಾಹುಲ್ ರಾಜಕೀಯಕ್ಕೆ ಬಂದ ನಂತರ ಪಕ್ಷದ ಹಿರಿಯ ನಾಯಕರನ್ನು ಕಡೆಗಣಿಸಲಾಗಿದೆ. ಅದೇ ಸಂದರ್ಭದಲ್ಲಿ ಮನೋರೋಗಿಗಳ ಕೂಟವು ಪಕ್ಷದ ಪ್ರಮುಖ ಮತ್ತು ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ' ಎಂದು ಆರೋಪಿಸಿದ್ದಾರೆ.

'ಪಕ್ಷದ ಸುಧಾರಣೆಗಾಗಿ ನಾವು 23 ಜನರು ಪತ್ರ ಬರೆದಾಗ ನಮ್ಮನ್ನು ಅತ್ಯಂತ ಕೆಟ್ಟದಾಗಿ, ಅವಮಾನಕಾರಿಯಾಗಿ ನಡೆಸಿಕೊಳ್ಳಲಾಯಿತು. ರಾಹುಲ್ ಆಣತಿಯಂತೆ ಮನೋರೋಗಿಗಳ ಕೂಟವು ಜಮ್ಮುವಿನಲ್ಲಿ ನನ್ನ ಅಣಕು ಶವಯಾತ್ರೆ ನಡೆಸಿತು. ಪಕ್ಷದ ಹಿರಿಯ ನಾಯಕರಾಗಿದ್ದ, ಹಲವು ಪ್ರಕರಣಗಳಲ್ಲಿ ನಿಮ್ಮ ಮತ್ತು ನಿಮ್ಮ ಮಕ್ಕಳ ಪರ ವಕಾಲತ್ತು ವಹಿಸಿದ್ದ ಕಪಿಲ್ ಸಿಬಲ್ ಅವರ ಮನೆಯ ಮೇಲೆ ಇದೇ ಮನೋರೋಗಿಗಳ ಕೂಟ ದಾಳಿ ನಡೆಸಿತು' ಎಂದು ಅವರು ಆರೋಪಿಸಿದ್ದಾರೆ.

ಸಲಹೆ ಕಡೆಗಣನೆ: ಪಕ್ಷದ ಸುಧಾರಣೆಗಾಗಿ ತಾವು ನೀಡಿದ್ದ ಸಲಹೆ ಮತ್ತು ಶಿಫಾರಸುಗಳನ್ನು ಪಕ್ಷದ ನಾಯಕತ್ವವು ಕಡೆಗಣಿಸಿದೆ ಎಂದು ಆಜಾದ್ ಆರೋಪಿಸಿದ್ದಾರೆ.

'ಪಕ್ಷದ ಸುಧಾರಣೆಗಾಗಿ 2013ರಲ್ಲೇ ಮಹತ್ವದ ಶಿಫಾರಸುಗಳಿದ್ದ ವರದಿಯನ್ನು ಸಲ್ಲಿಸಿದ್ದೆವು. 2014ರ ಲೋಕಸಭಾ ಚುನಾವಣೆಗೆ ಮುನ್ನವೇ ಅವೆಲ್ಲವೂ ಅನುಷ್ಠಾನಕ್ಕೆ ಬರಬೇಕು ಎಂದು ಹೇಳಿದ್ದೆವು. ಆದರೆ, ಆ ವರದಿಯನ್ನು ಪರಿಶೀಲಿಸುವತ್ತ ಪಕ್ಷದ ನಾಯಕತ್ವವು ಗಮನವನ್ನೇ ಹರಿಸಲಿಲ್ಲ' ಎಂದು ಅವರು ಆರೋಪಿಸಿದ್ದಾರೆ.

'ಇದನ್ನು ನಿಮ್ಮ (ಸೋನಿಯಾ ಗಾಂಧಿ) ಮತ್ತು ನಿಮ್ಮ ಮಗ ರಾಹುಲ್ ಗಾಂಧಿ ಅವರ ಗಮನಕ್ಕೆ ಹಲವು ಬಾರಿ ತಂದಿದ್ದೇವೆ. ಆದರೂ, ಆ ವರದಿ ಇನ್ನೂ ಹಾಗೇ ಇದೆ' ಎಂದು ಅವರು ಪತ್ರದಲ್ಲಿ ಬರೆದಿದ್ದಾರೆ. ಆದರೆ ಈ ಅವಧಿಯಲ್ಲಿ ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ತನ್ನ ಸ್ಥಾನವನ್ನು ಬಿಜೆಪಿಗೆ ಮತ್ತು ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳಿಗೆ ಬಿಟ್ಟುಕೊಟ್ಟಿದೆ ಎಂದು ಅವರು ಹೇಳಿದ್ದಾರೆ.

ಆಜಾದ್ ಅವರು ಹೊಸಪಕ್ಷವನ್ನು ಆರಂಭಿಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ ಕೆಲ ವಾರ ಮುಂದಕ್ಕೆ?

ನವದೆಹಲಿ (ಪಿಟಿಐ): ಸೆಪ್ಟೆಂಬರ್ 20ಕ್ಕೆ ಕೊನೆಗೊಳ್ಳಲಿದ್ದ ಕಾಂಗ್ರೆಸ್ ಅಧ್ಯಕ್ಷರ ಚುನಾವಣಾ ಪ್ರಕ್ರಿಯೆ 'ಭಾರತ್ ಜೋಡೊ ಯಾತ್ರಾ' ಸಲುವಾಗಿ ಕೆಲವು ವಾರ ಮುಂದೆ ಹೋಗುವ ಸಾಧ್ಯತೆ ಇದೆ ಎಂದು ಮೂಲಗಳು ಗುರುವಾರ ತಿಳಿಸಿವೆ.

ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ನೇತೃತ್ವದಲ್ಲಿ ಭಾನುವಾರ ವರ್ಚುವಲ್ ಮೂಲಕ ನಡೆಯಲಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆ, ಅಧ್ಯಕ್ಷರ ಚುನಾವಣೆಯ ನಿಗದಿತ ವೇಳಾಪಟ್ಟಿಯನ್ನು ಅನುಮೋದಿಸಲಿದೆ.

12 ರಾಜ್ಯಗಳನ್ನು ಆವರಿಸಿ, ಕನ್ಯಾಕುಮಾರಿಯಿಂದ ಕಾಶ್ಮೀರದವರೆಗಿನ 3,570 ಕಿ.ಮೀ ಭಾರತ್ ಜೋಡೊ ಯಾತ್ರಾ ಸಿದ್ಧತೆಯಲ್ಲಿರುವುದರಿಂದ ಪಕ್ಷದ ಕೆಲವು ರಾಜ್ಯ ಘಟಕಗಳು ಇನ್ನೂ ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸಿಲ್ಲ.

ಹೀಗಾಗಿ ಎಐಸಿಸಿ ಅಧ್ಯಕ್ಷರ ಆಯ್ಕೆ ಚುನಾವಣೆ ಕೆಲವು ವಾರ ಮುಂದಕ್ಕೆ ಹೋಗಲಿದೆ.

ಅಕ್ಟೋಬರ್ ಅಂತ್ಯದೊಳಗೆ ಪಕ್ಷವು ಪೂರ್ಣಾವಧಿ ಅಧ್ಯಕ್ಷರನ್ನು ಹೊಂದುವುದು ಖಚಿತ ಎಂದು ಮೂಲಗಳು ಹೇಳಿವೆ.

ಭಾರತೀಯ–ಅಮೆರಿಕನ್ ಮಹಿಳೆಯರ ನಿಂದನೆ: ಸೆರೆ

ವಾಷಿಂಗ್ಟನ್: ಅಮೆರಿಕದ ಟೆಕ್ಸಾಸ್‌ನ ಡಲ್ಲಾಸ್‌ನಲ್ಲಿ ಮಹಿಳೆಯೊಬ್ಬರು ನಾಲ್ವರು ಭಾರತೀಯ–ಅಮೆರಿಕನ್ ಮಹಿಳೆಯರ ವಿರುದ್ಧ ಜನಾಂಗೀಯ ನಿಂದನೆ ಮಾಡಿ, ಅವರ ಮೇಲೆ ಹಲ್ಲೆ ನಡೆಸಿದ ಘಟನೆ ನಡೆದಿದೆ.

ಪ್ರಕರಣಕ್ಕೆ ಸಂಬಂಧಿಸಿ ಎಸ್ಮರಾಲ್ಡ ಅಪ್ಟನ್ ಎಂಬ ಮೆಕ್ಸಿಕನ್–ಅಮೆರಿಕನ್ ಮಹಿಳೆಯನ್ನು ಪೊಲೀಸರು ಬಂಧಿಸಿದ್ದಾರೆ. ಮಹಿಳೆ ವಿರುದ್ಧ ಹಲ್ಲೆ ನಡೆಸಿ, ಬೆದರಿಕೆಯೊಡ್ಡಿದ ಆರೋಪಗಳನ್ನು ಹೊರಿಸಲಾಗಿದೆ.

ಪಾರ್ಕಿಂಗ್ ಪ್ರದೇಶದಲ್ಲಿ ಈ ಘಟನೆ ನಡೆದಿದೆ. ಮೆಕ್ಸಿಕನ್–ಅಮೆರಿಕನ್ ಮಹಿಳೆಯ ರಂಪಾಟದ ದೃಶ್ಯಗಳಿರುವ ವಿಡಿಯೊವನ್ನು ವ್ಯಕ್ತಿಯೊಬ್ಬರು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದು, ಈ ಘಟನೆ ಅಮೆರಿಕದಲ್ಲಿರುವ ಭಾರತೀಯರಲ್ಲಿ ಆಘಾತಕ್ಕೆ ಕಾರಣವಾಗಿದೆ.

'ಭಾರತೀಯರನ್ನು ನಾನು ದ್ವೇಷಿಸುತ್ತೇನೆ. ಉತ್ತಮ ಜೀವನ ನಡೆಸುವ ಸಲುವಾಗಿ ನೀವು ಅಮೆರಿಕಕ್ಕೆ ಬರುತ್ತೀರಿ' ಎಂದು ಅಮೆರಿಕದ ಮಹಿಳೆ ಮಾತು ಆರಂಭಿಸಿದ್ದಾರೆ. 'ನೀವು ಈ ದೇಶವನ್ನು ಹಾಳು ಮಾಡುತ್ತಿದ್ದೀರಿ. ನೀವು ಭಾರತಕ್ಕೆ ವಾಪಸ್ ಹೋಗಿ' ಎಂದು ಆಕೆ ಭಾರತೀಯ–ಅಮೆರಿಕನ್ ಮಹಿಳೆಯರಿಗೆ ಹೇಳುತ್ತಿರುವುದು ವಿಡಿಯೊದಲ್ಲಿದೆ ಎಂದು ಸಿಬಿಎಸ್ ನ್ಯೂಸ್ ವರದಿ ಮಾಡಿದೆ.

'ನಾನು ಎಲ್ಲಿಯೇ ಹೋದರೂ, ಭಾರತೀಯರು ಇರುತ್ತೀರಿ. ಭಾರತದಲ್ಲಿ ನಿಮ್ಮ ಜೀವನ ಉತ್ತಮವಾಗಿ ಇದ್ದಿದ್ದೇ ಆದಲ್ಲಿ ನೀವೇಕೆ ಇಲ್ಲಿಗೆ ಬರುತ್ತೀರಿ' ಎಂದು ಕಿರುಚಾಡಿದ ಆ ಮಹಿಳೆ, ಅವಾಚ್ಯ ಪದಗಳಿಂದ ನಾಲ್ವರನ್ನು ನಿಂದಿಸಿದ್ದಾರೆ' ಎಂದು ವಿಡಿಯೊವನ್ನು ಹಂಚಿಕೊಂಡಿರುವ ವ್ಯಕ್ತಿಯೊಬ್ಬರು ಸಾಮಾಜಿಕ ಮಾಧ್ಯಮಗಳಲ್ಲಿ ಬರೆದುಕೊಂಡಿದ್ದಾರೆ.

'ಆ ಮಹಿಳೆಯ ಬಳಿ ಗನ್ ಕೂಡ ಇತ್ತು. ಇದು ಭಯಾನಕ' ಎಂದು ರೀಮಾ ರಸೂಲ್ ಎನ್ನುವವರು ಟ್ವೀಟ್ ಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ದ್ವೇಷ ಭಾಷಣ: ಯೋಗಿ ವಿರುದ್ಧದ ಅರ್ಜಿ ವಜಾ

ನವದೆಹಲಿ: ದ್ವೇಷ ಭಾಷಣ ಮಾಡಿದ ಆರೋಪದಲ್ಲಿ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ವಿರುದ್ಧ 2007ರಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಗೆ ಅನುಮತಿ ನಿರಾಕರಿಸಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ಸಾಕ್ಷ್ಯವಿದ್ದ ಸಿ.ಡಿಯು ತಿರುಚಲ್ಪಟ್ಟದ್ದು ಎಂದು 2014ರ ಅಕ್ಟೋಬರ್ 13ರಂದು ಸಲ್ಲಿಕೆಯಾಗಿದ್ದ ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಹೇಳಿದೆ ಎಂದೂ ನ್ಯಾಯಾಲಯ ತಿಳಿಸಿದೆ.

2017 ಮೇ 6ರಂದು ಅಂತಿಮ ವರದಿ ಸಲ್ಲಿಸುವ ಮೂಲಕ ತನಿಖೆಯನ್ನು ಕೊನೆಗೊಳಿಸಲಾಗಿದೆ. ಇದನ್ನು ವಿರೋಧಿಸಿ ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಅರ್ಜಿಯು ಈಗಾಗಲೇ ಬಾಕಿ ಉಳಿದಿದೆ ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಮತ್ತು ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಮತ್ತು ಸಿ.ಟಿ. ರವಿಕುಮಾರ್ ಅವರಿದ್ದ ನ್ಯಾಯಪೀಠವು ಹೇಳಿದೆ.

ಭದ್ರತಾ ಪಡೆಗಳ ಬತ್ತಳಿಕೆಗೆ 'ಡ್ರೋನ್ ಸಮೂಹ'

ನವದೆಹಲಿ: ಕೃತಕ ಬುದ್ಧಿಮತ್ತೆ (ಎಐ) ತಂತ್ರಾಂಶವೂ ಸೇರಿದಂತೆ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಿದ 'ಡ್ರೋನ್‌ಗಳ ಸಮೂಹ' ವನ್ನು ಸಶಸ್ತ್ರ ಪಡೆಗಳಿಗೆ ಸೇರ್ಪಡೆ ಮಾಡಲಾಗುತ್ತಿದೆ.

ಗುರಿಗಳನ್ನು ನಿಖರವಾಗಿ ಗುರುತಿಸಿ, ಧ್ವಂಸ ಮಾಡಲು ಈ ಡ್ರೋನ್‌ಗಳಲ್ಲಿನ ಕೃತಕ ಬುದ್ಧಿಮತ್ತೆ ತಂತ್ರಾಂಶ ನೆರವಾಗಲಿದೆ ಎಂದು ಮೂಲಗಳು ಹೇಳಿವೆ.

ಹೆಸರೇ ಹೇಳುವಂತೆ 'ಡ್ರೋನ್‌ಗಳ ಸಮೂಹ'ವು ನಿರ್ದಿಷ್ಟ ಸಂಖ್ಯೆಯ ಡ್ರೋನ್‌ಗಳನ್ನು ಒಳಗೊಂಡಿರುತ್ತದೆ. ಈ 'ಡ್ರೋನ್ ಸಮೂಹ'ವನ್ನು ಒಂದೇ ಕೇಂದ್ರದಿಂದ ನಿಯಂತ್ರಿಸಲಾಗುತ್ತದೆ ಎಂದು ಭಾರತೀಯ ಸೇನೆಯು ಶುಕ್ರವಾರ ಟ್ವೀಟ್ ಮಾಡಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ
Travel

ಸುಸಜ್ಜಿತ ಪ್ರವಾಸಗಳು: 06.10.2022 27.10.2022 ರಿಂದ 11/5 ದಿನಗಳ ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 27.09.2022 18.10.2022 20.11.2022 ರಿಂದ 5 ದಿನಗಳ ದುಬೈ,ಅಬುಧಾಬಿ,ಶಾರ್ಜಾ 06.10.2022 18.10.2022 ರಿಂದ 8/12 ದಿನಗಳ ಶಿಮ್ಲಾ,ಮನಾಲಿ,ವೈಷ್ಣೋದೇವಿ. 06.10.2022 19.10.2022 ರಿಂದ 8/12 ದಿನಗಳ ಕಾಶಿ,ಗಯಾ,ಹರಿದ್ವಾರ್. 13.09.2022 19.10.2022 ರಿಂದ 11 ದಿನಗಳ ಕಾಶಿ,ನೇಪಾಳ 30.10.2022 18.11.2022 ರಿಂದ 11 ದಿನಗಳ ಮಧ್ಯಪ್ರದೇಶ. 11.10.2022 ರಿಂದ 15 ದಿನಗಳ ಚಾರ್‌ಧಾಮ್. 30.10.2022 11.11.2022 ರಿಂದ 11/17 ದಿನಗಳ ಗುಜರಾತ್ ರಾಜಸ್ಥಾನ್ ಪ್ರವಾಸಗಳು ಸಂಪರ್ಕಿಸಿ ಆನಂದ್ ವಿಹಾರಿ ಬೆಂಗಳೂರು-23. 8088887677 080-23385837

05.10.2022ರಿಂದ 13ದಿನಗಳು ವಿಮಾನ ಮತ್ತು ಡೀಲಕ್ಸ್ ಬಸ್ಸಿನಲ್ಲಿ ಚಾರಧಾಮ್ ಸಮೇತ ಮಸ್ಸೂರಿ, ಹರಿದ್ವಾರ,ದೆಹಲಿ.ಹಾಗೂ ಅಷ್ಟಜ್ಯೋತಿರ್ಲಿಂಗ ಸಮೇತ ಅಹಮದಾಬಾದ್,ದ್ವಾರಕ, ಸರ್ದಾರ್‌ಪಟೇಲ್ ಪ್ರತಿಮೆ 18ದಿನಗಳು. ಏಷ್ಯನ್ ಟ್ರಾವೆಲ್ ಲೈನ್ಸ್,164/3,ಆರ್.ವಿ.ರಸ್ತೆ, ಬೆಂಗಳೂರು..04. 8105657052, 26565085.

18.12.2022ರಿಂದ 16/13ದಿನಗಳು ವಿಮಾನ ಮತ್ತು ಎಸಿ ಬಸ್,ಡೀಲಕ್ಸ್ ರೂಮ್ ನೊಂದಿಗೆ ನೇಪಾಳ,ಮುಕ್ತಿನಾಥ, ಭಕ್ತಾಪುರ್,ಚಂದ್ರಗಿರಿಬೆಟ್ಟ,ಪೋಖ್ರ, ಕಾಶಿ ಇತ್ಯಾದಿ.13ದಿನಗಳು ಎಸಿ ಬಸ್,ಎಸಿ ರೂಮ್ ಪಂಚರಾಮ ಕ್ಷೇತ್ರ ಸಮೇತ ಭದ್ರಾಚಲಂ, ಅನ್ನವರಂ,ವಿಶಾಖಪಟ್ಟಣ.ಹಾಗೂ 9ದಿನಗಳ ಕನ್ಯಾಕುಮಾರಿ, ರಾಮೇಶ್ವರ,ನವಗ್ರಹ,ಮದುರೈ ಇತ್ಯಾದಿ..ಏಷ್ಯನ್ ಟ್ರಾವೆಲ್‌ಲೈನ್ಸ್ 164/3,ಆರ್.ವಿ.ರಸ್ತೆ, ಬೆಂಗಳೂರು..04. 8105657052, 26565085.

Pilgrimage Tours

ಶ್ರೀಮಹಾಲಕ್ಷ್ಮೀ ಟ್ರಾವೆಲ್ಸ್. 10.10.22 ದೆಹಲಿ- ವೈಷ್ಣೋದೇವಿ- ಅಮೃತಸರ. 01.11.22 ದೆಹಲಿ,ಆಗ್ರ, ಮಥುರಾ, ಕಾಶಿ, ಗಯ. 10.11.22 ನೇಪಾಳ, ಮುಕ್ತಿನಾಥ, ಪಶುಪತಿನಾಥ. 21.11.22 ಗುಜರಾತ್- ದ್ವಾರಕಾ- ನಾಗನಾಥ, ಸೋಮನಾಥ. 9964527782, 9591017782

ವಾಹನ
Four Wheelers Selling
Others

ಕ್ಲಾಸಿಫೈಡ್ಸ್
EDUCATION CORNER

VIVEKANANDA INSTITUTE OF TECHNOLOGY
AN INSTITUTE OF JANATHA EDUCATION SOCIETY®
Recognised by GOK, Affiliated to VTU & Approved by AICTE
CET CODE: E087 | ESTD.: 1997 | COMEDK CODE: E149
BE: Bachelor of Engineering
❖ Computer Science
❖ Information Science
❖ Artificial Intelligence & Machine Learning
❖ Electronics & Communication
❖ Mechanical ❖ Civil
Ph.D Program
CSE | E&C | MECH
Maths | Chemistry
Physics
VKIT
College of Pharmacy
D.Pharm
B.Pharm
M.Pharm
CET B060
Institute of Management
BCA | BCA - Hons.
BBA | BBA - Hons.
MBA | M.Com
PGCET B-323
College of Law
5 Yrs : BA - LLB | B.Com - LLB
3 Yrs : LLB
Degree College
BSc | BA | BA-Journalism
B.Com | B.Com-Data Analytics
NAAC ACCREDITED
2022-23 Admissions Open
7625013738
9513953482
Admission Center: Dr.Rajkumar Road, Next to Orion Mall, Rajajinagar II Stage, Bengaluru-560055
VKIT Campus: Kumbalagodu, Kengeri, Bengaluru-560074
JES

ಬಿಲ್ಡರ್ ಎಸೆನ್ಷಿಯಲ್
Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು ಮತ್ತು ಪೇಂಟಿಂಗ್ ಕೆಲಸಕ್ಕಾಗಿ ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್
Residential/ Commercial
Hampinagar
G+1 HOUSE 'A' Khata West Facing 1335 Sft Rpc Layout 9008614614

ಭವಿಷ್ಯ
Astrology

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

★||ಶ್ರೀಗುರು ರಾಘವೇಂದ್ರಸ್ವಾಮಿ||★ ಆರಾಧನೆಯಿಂದ ಪ್ರೀತಿಪ್ರೇಮ,ವಶೀಕರಣ, ವ್ಯಾಪಾರ,ಸಂತಾನ, ಸಾಲಭಾದೆ, ಕೋರ್ಟ್‌ಕೇಸ್ ಇನ್ನೂ ಯಾವುದೇ ಗುಪ್ತ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 8317227470

ಉದ್ಯೋಗಾವಕಾಶ
Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18,000-20,000 ಪ್ರತಿ ತಿಂಗಳು+ ಕುಟುಂಬಕ್ಕೆ ಖಾಸಗಿ ವಿಮೆ +ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC,PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

PART TIME- FULL TIME JOB ಗಾಗಿ ಸಂಪರ್ಕಿಸಿ: 9036046536, 9591873324, 7795228716

Marketing & Sales

GRT JEWELLERS
ಸೇಲ್ಸ್ ಸಿಬ್ಬಂದಿ ಬೇಕಾಗಿದ್ದಾರೆ ಬೆಂಗಳೂರು ಶೋರೂಮ್‌ಗಳಿಗೆ
1964 ರಿಂದಲೂ ಅತ್ಯಂತ ವಿಶ್ವಾಸಾರ್ಹ ಜ್ಯುವೆಲ್ಲರಿ ಸಂಸ್ಥೆಯಾದ ಜಿ ಆರ್ ಟಿ ಜ್ಯುವೆಲ್ಲರ್ಸ್ ನ ಬೆಂಗಳೂರಿನ ಶೋರೂಮ್‌ಗಳಿಗೆ ಸೇಲ್ಸ್ ಸಿಬ್ಬಂದಿ ಬೇಕಾಗಿದ್ದಾರೆ. ಫ್ರೆಶರ್ ಮತ್ತುಅನುಭವಿ ಅಭ್ಯರ್ಥಿಗಳು ತಮ್ಮ ಸ್ವವಿವರ ಮತ್ತು ಶೈಕ್ಷಣಿಕ ಪ್ರಮಾಣಪತ್ರಗಳೊಂದಿಗೆ ವಾಕ್ ಇನ್ ಸಂದರ್ಶನಕ್ಕೆ ಹಾಜರಾಗಬಹುದು.ಅಭ್ಯರ್ಥಿಗಳು ಕನ್ನಡ ಮಾತನಾಡುವವರಾಗಿರಬೇಕು
ಸೇಲ್ಸ್ ಸಿಬ್ಬಂದಿ ಬೇಕಾಗಿದ್ದಾರೆ
ಸೇಲ್ಸ್‌ಮನ್ / ಸೇಲ್ಸ್‌ಗರ್ಲ್ಸ್
ಕನಿಷ್ಠ ಅರ್ಹತೆ
10ನೇ ತರಗತಿ, ಪಿಯುಸಿ ಅಥವಾ ಪದವಿ
ವಯೋಮಿತಿ : 18 ರಿಂದ 27
ಸೇಲ್ಸ್ ಸಿಬ್ಬಂದಿ ಬೇಕಾಗಿದ್ದಾರೆ
ಸೇಲ್ಸ್ ಅಸಿಸ್ಟೆಂಟ್ಸ್
ಕನಿಷ್ಠ ಅರ್ಹತೆ
10ನೇ ತರಗತಿ, ಅಥವಾ ಪಿಯುಸಿ (ಉತ್ತೀರ್ಣ ಅಥವಾ ಫೇಲ್)
ವಯೋಮಿತಿ : 18 ರಿಂದ 22
ದಿನಾಂಕ ಮತ್ತು ಸಮಯ:
28 ಆಗಸ್ಟ್ 2022 (ಭಾನುವಾರ)
(ಬೆಳಗ್ಗೆ 10 ರಿಂದ ಸಂಜೆ 5)
ಸಂದರ್ಶನ ಸ್ಥಳ:
ಎಸ್.ಜಿ.ಎಸ್. ಸಂಕೀರ್ಣ
ಸಮೃದ್ಧಿ ಗ್ರ್ಯಾಂಡ್ ಹೋಟೆಲ್ 1 ನೇ ಮಹಡಿ, ಬಸವ ಭವನದ ಹತ್ತಿರ, ಡೈರಿ ಸರ್ಕಲ್, ದೊಡ್ಡಬಳ್ಳಾಪುರ, ಕರ್ನಾಟಕ - 561203
ಸಂಪರ್ಕ ಸಂಖ್ಯೆಗಳು: 9686905786, 9686799888, 9686702520
ಇಮೇಲ್: recruitment@grtjewels.com

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಸುವರ್ಣ ಅವಕಾಶ: ಫಾರಂನಲ್ಲಿ ಅಂಕಿಗಳು ತುಂಬುವ ಮತ್ತು ಬುಕ್ ಬರೆಯುವ ಮೂಲಕ ಗಳಿಸಿ,5 ದಿನಕ್ಕೆ 8,000-9,000/- ಕೊರಿಯರ್ ಸೌಲಭ್ಯವಿದೆ. 9108059956, 9901929956.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Book Your Classifieds Ads
Online Log in to
dhclassifieds.com
DH DECCAN HERALD ಪ್ರಜಾವಾಣಿ
Contact :
Jerry Louis : 9731810277
Vishal GM : 9845114560
Ravichandra : 9901641752
Tanveer : 9886213331

ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆದ ಗುಲ್ಬರ್ಗ ಮಿಸ್ಟಿಕ್ಸ್ ತಂಡದ ಆಟಗಾರರು ಸಂಭ್ರಮಿಸಿದರು

ಗುಲ್ಬರ್ಗ ಮಿಸ್ಟಿಕ್ಸ್‌ಗೆ ಮಹಾರಾಜ ಟ್ರೋಫಿ

ಟಿ20 ಕ್ರಿಕೆಟ್: ಮನೋಜ್ ಬಾಂಢಗೆ ಮಿಂಚು; ದೇವದತ್ತ–ಮನೀಷ್ ಅಬ್ಬರ; ಮನಗೆದ್ದ ಚೇತನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ವಿಕೆಟ್ ಗಳಿಸಿದ ಮನೋಜ್ ಬಾಂಢಗೆ ಕೈಚಳಕದಿಂದಾಗಿ ಗುಲ್ಬರ್ಗ ಮಿಸ್ಟಿಕ್ಸ್ ತಂಡವು ಮಹಾರಾಜ ಟ್ರೋಫಿಯನ್ನು ಮುಡಿಗೇರಿಸಿಕೊಂಡಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ರಾತ್ರಿ ನಡೆದ ರೋಚಕ ಫೈನಲ್‌ನಲ್ಲಿ ಗುಲ್ಬರ್ಗ್ ತಂಡವು 11 ರನ್‌ಗಳಿಂದ ಜಯಿಸಿತು. 221 ರನ್‌ಗಳ ಗುರಿ ಬೆನ್ನಟ್ಟಿದ್ದ ಬೆಂಗಳೂರು ಬ್ಲಾಸ್ಟರ್ಸ್ ತಂಡದ ಚೇತನ್ (91; 40ಎ) ಹಾಗೂ ಕ್ರಾಂತಿಕುಮಾರ್ (47;21ಎ) ಹೋರಾಟ ವ್ಯರ್ಥವಾಯಿತು.

ಬೆಂಗಳೂರು ತಂಡವು 63 ರನ್‌ಗಳಿಗೆ ಐದು ವಿಕೆಟ್‌ಗಳನ್ನು ಕಳೆದುಕೊಂಡಿದ್ದ ಸಂದರ್ಭದಲ್ಲಿ ಜೊತೆಗೂಡಿದ ಚೇತನ್ ಹಾಗೂ ಕ್ರಾಂತಿಕುಮಾರ್ ಆರನೇ ವಿಕೆಟ್ ಜೊತೆಯಾಟದಲ್ಲಿ 98 ರನ್‌ಗಳನ್ನು ಸೇರಿಸಿ ಗೆಲುವಿನ ಭರವಸೆ ಮೂಡಿಸಿದರು.

ಆದರೆ ಇನಿಂಗ್ಸ್‌ನ 15ನೇ ಓವರ್ ಬೌಲಿಂಗ್ ಮಾಡಲು ಕೈಗೆ ಚೆಂಡು ತೆಗೆದುಕೊಂಡ ಮನೋಜ್ ಬಾಂಢಗೆ ಪಂದ್ಯಕ್ಕೆ ತಿರುವು ನೀಡಿದರು. ಶತಕದತ್ತ ಸಾಗುತ್ತಿದ್ದ ಚೇತನ್ ವಿಕೆಟ್ ಎಗರಿಸಿದ ಮನೋಜ್ ಸಂಭ್ರಮಿಸಿದರು.

17ನೇ ಓವರ್‌ನಲ್ಲಿಯೂ ಮನೋಜ್ ಕೈಚಳಕಕ್ಕೆ ಕ್ರಾಂತಿಕುಮಾರ್ ವಿಕೆಟ್ ಪತನವಾಯಿತು. ಅದೇ ಓವರ್‌ನಲ್ಲಿ ಟಿ. ಪ್ರದೀಪ್ ಔಟಾದರು. ರೋನಿತ್ ಮೋರೆ ಹಾಗೂ ರಿಷಿ ಬೋಪಣ್ಣ ಕೊನೆಯ ಓವರ್‌ನವರೆಗೂ ಹೋರಾಟ ಮಾಡಿದರೂ ಗೆಲುವಿನ ಫಲ ಸಿಗಲಿಲ್ಲ.

ದೇವದತ್ತ–ಪಾಂಡೆ ಆಟ: ಟಾಸ್ ಗೆದ್ದ ಬೆಂಗಳೂರು ತಂಡದ ನಾಯಕ ಮಯಂಕ್ ಅಗರವಾಲ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ದೇವದತ್ತ (ಔಟಾಗದೆ 56; 42ಎ) ಹಾಗೂ ಮನೀಷ್ (ಔಟಾಗದೆ 41; 17ಎ) ಬಲದಿಂದ ಗುಲ್ಬರ್ಗ ತಂಡವು 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 220 ರನ್ ಗಳಿಸಿತು.

ಜಸ್ವಂತ್ ಆಚಾರ್ಯ (39; 17ಎ) ಹಾಗೂ ರೋಹನ್ ಪಾಟೀಲ (38; 21ಎ) ಮೊದಲ ವಿಕೆಟ್‌ಗೆ 60 ರನ್ ಸೇರಿಸಿ ಉತ್ತಮ ಅಡಿಪಾಯ ಹಾಕಿದರು. ಈ ಜೊತೆಯಾಟ ಮುರಿದುಬಿದ್ದ ನಂತರ ಪಡಿಕ್ಕಲ್ ಹಾಗೂ ಶ್ರೀಜಿತ್ (38; 25ಎ) ಮೂರನೇ ವಿಕೆಟ್ ಜೊತೆಯಾಟದಲ್ಲಿ 76 ರನ್‌ಗಳ ಸೇರಿಸಿದರು. ಆದರೆ 16ನೇ ಓವರ್‌ನಲ್ಲಿ ಶ್ರೀಜಿತ್ ವಿಕೆಟ್ ಗಳಿಸಿದ ಅನಿರುದ್ಧ ಜೊತೆಯಾಟ ಮುರಿದರು. ಕ್ರೀಸ್‌ಗೆ ಬಂದ ಮನೀಷ್ ಪಾಂಡೆ ಬೌಲರ್‌ಗಳಿಗೆ ಬಿಸಿ ಮುಟ್ಟಿಸಿದರು. ಮೋರೆ ಹಾಕಿದ 19ನೇ ಓವರ್‌ನಲ್ಲಿ ಪಾಂಡೆ ಸಿಕ್ಸರ್ ಹ್ಯಾಟ್ರಿಕ್ ಸಿಡಿಸಿದರು.

ಅಭಿಮಾನಿಯ ತಲೆಗಪ್ಪಳಿಸಿದ ಚೆಂಡು

ಮನೀಷ್ ಪಾಂಡೆ ಸಿಕ್ಸರ್ ಎತ್ತಿದ ಚೆಂಡು ಪ್ರೇಕ್ಷಕರೊಬ್ಬರ ತಲೆಗಪ್ಪಳಿಸಿ ಗಾಯಗೊಂಡರು.

ರೋನಿತ್ ಎಸೆತವನ್ನು ಮನೀಷ್ ಸಿಕ್ಸರ್‌ಗೆತ್ತಿ ದ ಚೆಂಡು ಮೂರನೇ ಸ್ಟ್ಯಾಂಡ್‌ನಲ್ಲಿದ್ದ ದಿಲಾವರ್ ಹುಸೇನ್ ಅವರ ತಲೆಗೆ ಬಡಿಯಿತು.

ಅವರನ್ನು ಕೂಡಲೇ ಹಾಸ್‌ಮ್ಯಾಟ್ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ನೀಡಲಾಯಿತು. ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಕೆಎಸ್‌ಸಿಎ ಮೂಲಗಳು ಖಚಿತಪಡಿಸಿವೆ. ಫೈನಲ್ ಪಂದ್ಯ ವೀಕ್ಷಿಸಲು ಏಳು ಸಾವಿರಕ್ಕೂ ಹೆಚ್ಚು ಪ್ರೇಕ್ಷಕರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೇರಿದ್ದರು.

ತಂಡಗಳಿಗೆ ನಗದು ಬಹುಮಾನ

ಸ್ಥಾನ	ತಂಡ	ಮೊತ್ತ (₹ಲಕ್ಷ)
1	ಗುಲ್ಬರ್ಗ	25
2	ಬೆಂಗಳೂರು	15
3	ಮೈಸೂರು	12.5
4	ಹುಬ್ಬಳ್ಳಿ	10
5	ಮಂಗಳೂರು	7.5
6	ಶಿವಮೊಗ್ಗ	5

ಸ್ಕೋರ್ ಕಾರ್ಡ್

ಗುಲ್ಬರ್ಗ ಮಿಸ್ಟಿಕ್ಸ್ 3ಕ್ಕೆ220 (20 ಓವರ್)
ಆಚಾರ್ಯ ಸಿ ಅನಿರುದ್ಧ ಬಿ ರಿಷಿ 39 (17ಎ, 4X3, 6X3), ರೋಹನ್ ಸಿ ಕ್ರಾಂತಿಕುಮಾರ್ ಬಿ ಪ್ರದೀಪ್ 38 (21ಎ, 4X6, 6X1), ಪಡಿಕ್ಕಲ್ ಔಟಾಗದೆ 56 (42ಎ, 4X5, 6X1), ಶ್ರೀಜಿತ್ ಸಿ ಖುಶ್ ಬಿ ಅನಿರುದ್ಧ 38(25ಎ, 4X2, 6X2), ಮನೀಷ್ ಔಟಾಗದೆ 41 (17ಎ, 4X2, 6X4)
ಇತರೆ 8 (ಲೆಗ್‌ಬೈ 1, ವೈಡ್ 5, ನೋಬಾಲ್ 2)
ವಿಕೆಟ್ ಪತನ: 1–60 (ರೋಹನ್ ಪಾಟೀಲ; 5.2), 2–82 (ಜಸ್ವಂತ್ ಆಚಾರ್ಯ; 6.4), 3–158 (ಕೃಷ್ಣನ್ ಶ್ರೀಜಿತ್; 15.3)
ಬೌಲಿಂಗ್: ರೋನಿತ್ ಮೋರೆ 4–0–61–0, ಸಂತೋಕ್ ಸಿಂಗ್ 2–0–26–0, ಜೆ. ಸುಚಿತ್ 4–0–31–0, ಟಿ. ಪ್ರದೀಪ್ 4–0–51–1, ರಿಷಿ ಬೋಪಣ್ಣ 3–0–35–1, ಅನಿರುದ್ಧ ಜೋಶಿ 3–0–15–1

ಬೆಂಗಳೂರು ಬ್ಲಾಸ್ಟರ್ಸ್ 9ಕ್ಕೆ 209 (20 ಓವರ್)
ಚೇತನ್ ಬಿ ಮನೋಜ್ 91 (40ಎ, 4X6, 6X8), ಮಯಂಕ್ ಸಿ ಮನೀಷ್ ಬಿ ರಿತೇಶ್ 16 (10ಎ,4X1,6X1), ಖುಷ್ 1 (3ಎ), ರಕ್ಷಿತ್ 0 (2ಎ), ಅನಿರುದ್ಧ ಬಿ ಪ್ರಣವ್ 7 (7ಎ, 6X1), ಸುಚಿತ್ ಸಿ ಮನೋಜ್ ಬಿ ಶೆಟ್ಟಿ 5 (10ಎ), ಕ್ರಾಂತಿಕುಮಾರ್ ಸಿ ಕುಶಾಲ್ ಬಿ ಮನೋಜ್ 47 (21ಎ, 4X3, 6X3), ರಿಷಿ ರನ್‌ಔಟ್ (ಮನೀಷ್/ಅಭಿಲಾಶ್) 13 (10ಎ, 4X2), ಪ್ರದೀಪ್ ಸಿ ಜಸ್ವಂತ್ ಬಿ ಮನೋಜ್ 3 (3ಎ), ರೋನಿತ್ ಔಟಾಗದೆ 22 (14ಎ, 4X3), ಸಂತೋಕ್ ಔಟಾಗದೆ 0
ಇತರೆ 4 (ಲೆಗ್‌ಬೈ 1, ವೈಡ್ 3)
ವಿಕೆಟ್ ಪತನ: 1–20 (ಮಯಂಕ್; 2.1), 2–22 (ಖುಷ್ ಮರಾಠೆ; 2.5), 3–23 (ರಕ್ಷಿತ್; 3.2), 4–45 (ಅನಿರುದ್ಧ;5.4), 5–63 (ಸುಚಿತ್;7.6), 6–161 (ಚೇತನ್; 14.6), 7–173 (ಕ್ರಾಂತಿಕುಮಾರ್; 16.1), 8–177 (ಪ್ರದೀಪ್;16.5), 9–207 (ರಿಷಿ ಬೋಪಣ್ಣ; 19.3)
ಬೌಲಿಂಗ್: ರಿತೇಶ್ ಭಟ್ಕಳ 3–0–20–2, ಪ್ರಣವ್ ಭಾಟಿಯಾ 4–0–39–2, ವಿದ್ವತ್ ಕಾವೇರಪ್ಪ 3–0–34–0, ಅಭಿಲಾಷ್ ಶೆಟ್ಟಿ 4–0–27–1, ಕುಶಾಲ್ ವಾದ್ವಾನಿ 2–0–41–0, ಮನೀಷ್ ಪಾಂಡೆ 1–0–15–0, ಮನೋಜ್ ಬಾಂಡಗೆ 3–0–32–3

ಫಲಿತಾಂಶ: ಗುಲ್ಬರ್ಗ ಮಿಸ್ಟಿಕ್ಸ್‌ಗೆ 11 ರನ್‌ಗಳ ಜಯ

ಹಾಕಿ ಆಟಗಾರ್ತಿ ಎಲ್ವಿರಾ ಹೆಸರಿನಲ್ಲಿ ಪೋಸ್ಟಲ್ ಕವರ್

ಮಂಗಳೂರು: ಅರವತ್ತರ ದಶಕದ ಮಹಿಳಾ ಹಾಕಿಯ ಚಾಂಪಿಯನ್ ಆಟಗಾರ್ತಿ ಮತ್ತು ಆಡಳಿತಗಾರ್ತಿ ಎಲ್ವಿರಾ ಬ್ರಿಟ್ಟೊ ಅವರಿಗೆ ಭಾರತೀಯ ಅಂಚೆ ಇಲಾಖೆ ಗೌರವ ಸಲ್ಲಿಸಿದೆ. ಅವರ ಹೆಸರಿನಲ್ಲಿ ಸಿದ್ಧಗೊಂಡಿರುವ ವಿಶೇಷ ಪೋಸ್ಟಲ್ ಕವರ್ ಇದೇ 29ರಂದು, ಕ್ರೀಡಾ ದಿನಾಚರಣೆಯಲ್ಲಿ ಬಿಡುಗಡೆಯಾಗಲಿದೆ.

ಬೆಂಗಳೂರು ಜಿಪಿಒದ ಮೇಘದೂತ ಸಭಾಂಗಣದಲ್ಲಿ ಅಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿರುವ ಕಾರ್ಯಕ್ರಮದಲ್ಲಿ ಭಾರತ ಹಾಕಿ ತಂಡದ ಮಾಜಿ ನಾಯಕ ಎಂ.ಪಿ.ಗಣೇಶ್ ಅವರು ಕವರ್ ಬಿಡುಗಡೆ ಮಾಡುವರು. ಎಲ್ವಿರಾ ಅವರ ಸಹೋದರಿಯರೂ ಭಾರತ ಮಹಿಳಾ ತಂಡದ ಮಾಜಿ ಆಟಗಾರ್ತಿಯರೂ ಆದ ಮೇ ಬ್ರಿಟ್ಟೊ ಮತ್ತು ರೀಟಾ ಬ್ರಿಟ್ಟೊ ಅವರು ಪಾಲ್ಗೊಳ್ಳುವರು.

ಭಾರತ ತಂಡದಲ್ಲಿ ಆಡಿದ್ದ ಎಲ್ವಿರಾ, ಮೇ ಮತ್ತು ರೀಟಾ 'ಬ್ರಿಟ್ಟೊ ಸಹೋದರಿಯರು' ಎಂದೇ ಹಾಕಿ ಲೋಕದಲ್ಲಿ ಚಿರಪರಿಚಿತರಾಗಿದ್ದರು.

ಎಲ್ವಿರಾ ಬ್ರಿಟ್ಟೊ

ಎಐಎಫ್‌ಎಫ್ ನಿರಾಳ: ಮಹಿಳಾ ವಿಶ್ವಕಪ್‌ಗೆ ಭಾರತ ಆತಿಥ್ಯ

ಅಮಾನತು ಹಿಂಪಡೆದ ಫಿಫಾ

ಜೂರಿಚ್ (ಪಿಟಿಐ): ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಮೇಲೆ ಹೇರಿದ್ದ ಅಮಾನತನ್ನು ವಿಶ್ವ ಫುಟ್‌ಬಾಲ್ ಆಡಳಿತ ಮಂಡಳಿ (ಫಿಫಾ) ಶುಕ್ರವಾರ ಹಿಂಪಡೆದಿದೆ.

ಎಐಎಫ್‌ಎಫ್ ಆಡಳಿತಗಾರರ ಸಮಿತಿಯನ್ನು (ಸಿಒಎ) ರದ್ದುಗೊಳಿಸುವ ತೀರ್ಮಾನವನ್ನು ಸುಪ್ರೀಂಕೋರ್ಟ್ ಕೈಗೊಂಡ ಬಳಿಕ ಫಿಫಾ ಈ ನಿರ್ಧಾರ ತೆಗೆದುಕೊಂಡಿದೆ. ಇದರಿಂದಾಗಿ ನಿಗದಿಯಂತೆ ಫಿಫಾ 17 ವರ್ಷದೊಳಗಿನ ಮಹಿಳಾ ವಿಶ್ವಕಪ್ ಭಾರತದಲ್ಲಿ ನಡೆಯಲಿದೆ.

'ಮೂರನೇ ವ್ಯಕ್ತಿಗಳ ಅನಗತ್ಯ ಹಸ್ತಕ್ಷೇಪ'ದ ಕಾರಣ ನೀಡಿ ಫಿಫಾ ಆ. 15 ರಂದು ಎಐಎಫ್‌ಎಫ್‌ಅನ್ನು ಅಮಾನತು ಮಾಡಿತ್ತು. 'ವಿಶ್ವಕಪ್ ಟೂರ್ನಿಯನ್ನು ನಿಗದಿಯಂತೆ ಭಾರತದಲ್ಲಿ ನಡೆಸಲು ಸಾಧ್ಯವಿಲ್ಲ' ಎಂದೂ ಹೇಳಿತ್ತು. ಆದರೆ ಎಐಎಫ್‌ಎಫ್ ಮೇಲಿನ ಅಮಾನತು 11 ದಿನಗಳಲ್ಲೇ ತೆರವಾಗಿದೆ.

'ಎಐಎಫ್‌ಎಫ್ ಮೇಲೆ ವಿಧಿಸಿದ್ದ ಅಮಾನತನ್ನು ವಾಪಸ್ ಪಡೆಯಲು ಬ್ಯೂರೊ ಆಫ್ ಫಿಫಾ ಕೌನ್ಸಿಲ್ ನಿರ್ಧರಿಸಿದೆ. 17 ವರ್ಷದೊಳಗಿನ ಮಹಿಳೆಯರ ವಿಶ್ವಕಪ್ ನಿಗದಿಯಂತೆ ಅಕ್ಟೋಬರ್ 11ರಿಂದ 30ರವರೆಗೆ ಭಾರತದಲ್ಲೇ ನಡೆಯಲಿದೆ' ಎಂದು ಫಿಫಾ ಹೇಳಿಕೆಯಲ್ಲಿ ತಿಳಿಸಿದೆ.

'ಎಐಎಫ್‌ಎಫ್‌ನ ಆಗುಹೋಗುಗಳ ಮೇಲೆ ಫಿಫಾ ಮತ್ತು ಎಎಫ್‌ಸಿ ನಿಗಾ ಇರಿಸಲಿದೆ. ಚುನಾವಣೆ ನಿಗದಿಯಂತೆ ನಡೆಯಲು ಎಲ್ಲ ನೆರವು ನೀಡಲಾಗುವುದು' ಎಂದು ಪ್ರಕಟಣೆ ಹೇಳಿದೆ.

ಎಐಎಫ್‌ಎಫ್ ಹಂಗಾಮಿ ಕಾರ್ಯದರ್ಶಿ ಸುನಂದೊ ಧಾರ್ ಅವರು ಫಿಫಾ ತೀರ್ಮಾನವನ್ನು ಸ್ವಾಗತಿಸಿದ್ದಾರೆ.

ರಾಜ್ಯ ಅಥ್ಲೆಟಿಕ್ಸ್: ವೈಭವ್, ಕರಿಷ್ಮಾ ಅರ್ಪಿತಾ ಮಿಂಚು

ರಾಹುಲ್ ಕೂಟ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ಜಿಲ್ಲೆಯ ರಾಹುಲ್ ಕಶ್ಯಪ್ ಎಸ್. ಹಾಗೂ ಮೂಡಬಿದಿರೆಯ ಆಳ್ವಾಸ್ ಕಾಲೇಜಿನ ಮಿಲನ್. ಎಂ.ಸಿ. ಅವರು ರಾಜ್ಯ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ 23 ವರ್ಷದೊಳಗಿನ ಪುರುಷರ ಶಾಟ್‌ಪಟ್ ಮತ್ತು 800 ಮೀಟರ್ಸ್ ಓಟದಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನದ ಪದಕ ಗೆದ್ದರು.

ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ರಾಹುಲ್ 16.68 ಮೀ. ದೂರ ಸಾಧನೆ ಮಾಡಿದರು. ಮಿಲನ್ 1 ನಿ. 53.4 ಸೆಕೆಂಡುಗಳಲ್ಲಿ ಗುರಿ ತಲುಪಿದರು.

ವೈಭವ್ ಪಾಟೀಲ್ (10,000 ಮೀ.), ಕರಿಷ್ಮಾ ಸನಿಲ್ (ಜಾವೆಲಿನ್ ಥ್ರೊ), ಅರ್ಪಿತಾ ಇ.ಬಿ (800 ಮೀ.) ಕೂಡ ಕೂಟ ದಾಖಲೆ ನಿರ್ಮಿಸಿದರು.

ಫಲಿತಾಂಶಗಳು: 23 ವರ್ಷದೊಳಗಿನವರು: ಪುರುಷರು: ಶಾಟ್‌ಪಟ್: ರಾಹುಲ್ ಕಶ್ಯಪ್ ಎಸ್. ಆರ್ (ಮೈಸೂರು)–1, ದೂರ: 16.68 ಮೀ. (ಕೂಟ ದಾಖಲೆ), ಮಾನುಷ್ ಬಿ. (ಮೈಸೂರು)–2, ಕಾರ್ತಿಕ್ ಬಿ. (ಡಿವೈಇಎಸ್)–3. 10,000 ಮೀ. ಓಟ: ವೈಭವ್ ಪಾಟೀಲ್ (ಡಿವೈಇಎಸ್), ಕಾಲ: 32 ನಿ.39 ಸೆ. (ಕೂಟ ದಾಖಲೆ), ಪ್ರಮೋದ್ ಬಿ. (ಹಾವೇರಿ)–2, ಮೊಹಮ್ಮದ್ ಅನ್ನಿಗೇರಿ (ರಾಯಲ್ ಸ್ಪೋರ್ಟ್ಸ್, ಜಿಆರ್‌ಪಿ)–3. 800 ಮೀ.: ಮಿಲನ್ ಎಂ.ಸಿ. (ಆಳ್ವಾಸ್)–1, ಕಾಲ: 1 ನಿ.53.4 ಸೆ. (ಕೂಟ ದಾಖಲೆ), ಯಶವಂತ್ ಬಿ.ಜಿ. (ಫ್ಯೂಷನ್)–2, ಸೂರ್ಯ ಕೆ. (ಡಿವೈಇಎಸ್)–3. ಜಾವೆಲಿನ್ ಥ್ರೊ: ಕೀರ್ತಿರಾಜ್ ಕೆ.ಎಸ್. (ದಕ್ಷಿಣ ಕನ್ನಡ)–1, ದೂರ: 55.30 ಮೀ., ಸುನಿಲ್ ಕುಮಾರ್ (ಡಿವೈಇಎಸ್)–2, ಶರತ್ ಟಿ.ಎಂ. (ಮೈಸೂರು)–3. ಟ್ರಿಪಲ್ ಜಂಪ್: ಮಹಾಂತ್ ಬಿ. (ಬಾಲದಳ ಸ್ಪೋರ್ಟ್ಸ್)–1, ದೂರ: 14.63 ಮೀ.

ಮಹಿಳೆಯರು: 10,000 ಮೀ. ಓಟ: ಧನುಷಾ ಶೆಟ್ಟಿ (ಆಳ್ವಾಸ್)–1, ಕಾಲ: 45 ನಿ. 37 ಸೆ., ನಾಗಶ್ರೀ ಎಚ್. ಎನ್. (ಶಿವಮೊಗ್ಗ)–2, ವಿಜಯಲಕ್ಷ್ಮಿ ಎಸ್. ಗರ್ಗ್ (ಉತ್ತರ ಕನ್ನಡ)–3. ಹೈಜಂಪ್: ಫ್ಲವಿಶಾ ವೆಲಿಶಾ (ದ.ಕ)–1, ಎತ್ತರ: 1.65 ಮೀ., ಎಸ್.ಬಿ. ಸುಪ್ರಿಯಾ (ಆಳ್ವಾಸ್)–2. 800 ಮೀ. ಓಟ: ಅರ್ಪಿತಾ ಇ.ಬಿ. (ಫ್ಯೂಷನ್)–1, ಕಾಲ: 2 ನಿ.10.4 (ಕೂಟ ದಾಖಲೆ), ಉಷಾ ಆರ್.(ಮೈಸೂರು)–2, ಜ್ಯೋತಿ ಕೆ. (ಧಾರವಾಡ)–3. ಜಾವೆಲಿನ್ ಥ್ರೊ: ಕರಿಷ್ಮಾ ಸನಿಲ್ (ಉಡುಪಿ)–1, ದೂರ: 49.35 ಮೀ. (ಕೂಟ ದಾಖಲೆ), ಮೋನಿಷಾ ಎಸ್. (ಕ್ಯಾಪ್ಟನ್ ಟಿ.ಎಫ್)–2. 100 ಮೀ.: ಕಾವೇರಿ ಎಲ್. ಪಾಟೀಲ್ (ಸಾಯ್)–1, ಕಾಲ: 12.1 ಸೆ. (ಕೂಟ ದಾಖಲೆ) ಹರ್ಷಿಣಿ ಆರ್. (ಮೈಸೂರು)–2, ಸುಪ್ರಿತಾ ಎಚ್.ವೈ. (ಮೈಸೂರು)–3. ಶಾಟ್‌ಪಟ್: ಅಂಬಿಕಾ ವಿ. (ಮೈಸೂರು)–1, ದೂರ: 12.97 ಮೀ., ಶಿಲ್ಪಾ ಎಸ್. (ಮೈಸೂರು)–2, ದಿವ್ಯಾ ಎನ್.ಪಿ (ಎಸ್‌ಡಿಎಂ)–3.

ಟೆನಿಸ್: ವಿಜಯ್, ಶ್ರೀನಿತಿಗೆ ಪ್ರಶಸ್ತಿ

ಬೆಂಗಳೂರು: ವಿಜಯ್ ಸುಮುಖ್ ಮತ್ತು ಶ್ರೀನಿತಿ ಚೌಧರಿ ಅವರು ಶುಕ್ರವಾರ ಇಲ್ಲಿ ಕೊನೆಗೊಂಡ ಎಐಟಿಎ ಸಿಎಸ್7 14 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು.

ಇಲ್ಲಿಯ ಟಾಪ್‌ಸ್ಪಿನ್ ಅಕಾಡೆಮಿಯಲ್ಲಿ ನಡೆದ ಟೂರ್ನಿಯ ಬಾಲಕರ ವಿಭಾಗದ ಫೈನಲ್‌ನಲ್ಲಿ ವಿಜಯ್ 6-3, 6-4ರಿಂದ ಮೂರನೇ ಶ್ರೇಯಾಂಕದ ಲಿಖಿತ್ ಎಸ್. ಗೌಡ ಎದುರು ಗೆದ್ದರು.

ಬಾಲಕಿಯರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ಸುತ್ತಿನಲ್ಲಿ ಶ್ರೀನಿತಿ 6-3, 6-4ರಿಂದ ಅಹಿದಾ ಸಿಂಗ್ ಅವರನ್ನು ಪರಾಭವಗೊಳಿಸಿದರು.

ಬಾಲಕರ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ರುನ್‌ಮಾನ್ ಮಹೇಶ್–ರಣವೀರ್ ಸಿಂಗ್ 3-6, 6-3, 10-7ರಿಂದ ಆಯಾನ್–ಮೋಹಿತ್ ರೆಡ್ಡಿ ಎದುರು ಗೆದ್ದು ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಪ್ರಶಸ್ತಿಯೊಂದಿಗೆ ವಿಜಯ್ ಸುಮುಖ್ ಮತ್ತು ಶ್ರೀನಿತಿ

ಎನ್‌ಡಿಟಿವಿ ವಾದ ತಳ್ಳಿಹಾಕಿದ ಅದಾನಿ

ನವದೆಹಲಿ (ಪಿಟಿಐ): ಆರ್‌ಆರ್‌ಪಿಆರ್ ಹೋಲ್ಡಿಂಗ್ ಪ್ರೈವೇಟ್ ಲಿಮಿಟೆಡ್‌ನ ಷೇರುಗಳ ಸ್ವಾಧೀನಕ್ಕೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಅನುಮೋದನೆ ಅಗತ್ಯವಿದೆ ಎಂಬ ಎನ್‌ಡಿಟಿವಿ ವಾದವನ್ನು ಅದಾನಿ ಸಮೂಹವು ಶುಕ್ರವಾರ ತಳ್ಳಿಹಾಕಿದೆ.

ರಾಧಿಕಾ ರಾಯ್ ಮತ್ತು ಪ್ರಣಯ್ ರಾಯ್ ಅವರಿಗೆ ಸೆಬಿ ನೀಡಿರುವ ಆದೇಶವು ಪ್ರವರ್ತಕರ ಕಂಪನಿಗೆ ಅನ್ವಯವಾಗುವುದಿಲ್ಲ ಎಂದು ಅದಾನಿ ಸಮೂಹವು ವಾದಿಸಿದೆ.

ಆರ್‌ಆರ್‌ಪಿಆರ್ ಎತ್ತಿರುವ ಪ್ರಶ್ನೆಗಳು ಆಧಾರರಹಿತ ಎಂದು ಹೇಳಿರುವ ಅದಾನಿ ಸಮೂಹಕ್ಕೆ ಸೇರಿರುವ ವಿಶ್ವಪ್ರಧಾನ್ ಕಮರ್ಷಿಯಲ್ ಪ್ರೈವೇಟ್ ಲಿಮಿಟೆಡ್ (ವಿಸಿಪಿಎಲ್), ಪ್ರವರ್ತಕರ ಕಂಪನಿಯು ತಕ್ಷಣದಲ್ಲಿಯೇ ಈಕ್ವಿಟಿ ಷೇರುಗಳನ್ನು ವರ್ಗಾವಣೆ ಮಾಡಬೇಕು ಎಂದು ಹೇಳಿದೆ.

ಸೆಬಿಯು 2020ರ ನವೆಂಬರ್ 27ರಂದು ನೀಡಿದ ಆದೇಶದಲ್ಲಿ ಆರ್‌ಆರ್‌ಪಿಆರ್ ವಾದಿ ಅಥವಾ ಪ್ರತಿವಾದಿ ಆಗಿರಲೇ ಇಲ್ಲ. ಹೀಗಾಗಿ, ರಾಧಿಕಾ ರಾಯ್ ಮತ್ತು ಪ್ರಣಯ್ ರಾಯ್ ಅವರು ಎರಡು ವರ್ಷಗಳ ಅವಧಿಗೆ ಷೇರು ವಹಿವಾಟಿನಲ್ಲಿ ತೊಡಗುವಂತಿಲ್ಲ ಎಂದು ಸೆಬಿ ನೀಡಿರುವ ಆದೇಶವು ಪ್ರವರ್ತಕರ ಕಂಪನಿಗೆ ಅನ್ವಯವಾಗದು ಎಂದು ವಿಸಿಪಿಎಲ್ ಹೇಳಿದೆ.

ಅದಾನಿ ಸಮೂಹವು ಎನ್‌ಡಿಟಿವಿಯ ಶೇ 26ರಷ್ಟು ಷೇರು ಖರೀದಿಗೆ ಓಪನ್ ಆಫರ್ ನೀಡಿದೆ.

ಷೇರುಪೇಟೆ ವಹಿವಾಟು 59



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,522
ಇಂದಿನ ಅಂತ್ಯ	17,558
▲	36
ದಿನದ ಗರಿಷ್ಠ	17,685

ವಿನಿಮಯ ದರ

$ ಡಾಲರ್	79.84
£ ಪೌಂಡ್	94.53
€ ಯುರೊ	79.91
¥ ಯೆನ್ (100ಕ್ಕೆ)	58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹445
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹447

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹355-680
ದ್ವಿತಳಿ (ಬಿ.ವಿ) ₹277-808

ಮೆಟಾವರ್ಸ್‌ನಲ್ಲಿ ಹುಂಡೈ ವೆನ್ಯು ಎನ್ ಲೈನ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಂಡೈ ಮೋಟರ್ ಇಂಡಿಯಾ ಕಂಪನಿಯು ತನ್ನ ಹೊಸ ಎಸ್‌ಯುವಿ ಹುಂಡೈ ವೆನ್ಯು ಎನ್–ಲೈನ್ ಅನ್ನು ಮೆಟಾವರ್ಸ್‌ನಲ್ಲಿ ಬಿಡುಗಡೆ ಮಾಡುವುದಾಗಿ ಹೇಳಿದೆ.

ಮೊಬೈಲ್ ಫೋನ್ ಅಥವಾ ಲ್ಯಾಪ್‌ಟಾಪ್‌ಗೆ ಪ್ಲೇಸ್ಟೋರ್ ಮೂಲಕ ರೊಬ್ಲಾಕ್ಸ್ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ವೆನ್ಯು ಎನ್ ಲೈನ್ ಬಿಡುಗಡೆಯನ್ನು ತಡೆರಹಿತವಾಗಿ ವೀಕ್ಷಿಸಬಹುದು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ವರ್ಚುವಲ್ ಮತ್ತು ಭೌತಿಕ ಜಗತ್ತನ್ನು ಒಗ್ಗೂಡಿಸುವ ಮೂಲಕ ತಾಂತ್ರಿಕವಾಗಿ ಸಬಲಗೊಂಡಿರುವ ಇಂದಿನ ಯುವಪೀಳಿಗೆಯೊಂದಿಗೆ ಬಲಿಷ್ಠ ಮತ್ತು ದೀರ್ಘಾವಧಿಯ ಬಾಂಧವ್ಯ ಹೊಂದುವ ವಿಶ್ವಾಸ ಇದೆ ಎಂದು ಕಂಪನಿಯ ಮಾರಾಟ ವಿಭಾಗದ ನಿರ್ದೇಶಕ ತರುಣ್ ಗರ್ಗ್ ಹೇಳಿದರು.

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹157
ಆರ್‌ಎಸ್‌ಎಸ್-5 ₹148
ಗುಡ್ ಲಾಟ್ ₹140
(ಪ್ರತಿ ಕೆ.ಜಿಗೆ)

ಮುಂಬೈ ಧಾರಣೆ

ಶೇಂಗಾ

26–8-2022

ಜಾವಾ 70/80(ಹೊಸ)	11400-11450
ಜಾವಾ 80/90(ಹೊಸ)	10800-10850
ದಪ್ಪ ಮಧ್ಯಪ್ರದೇಶ(ಹೊಸ)	10100-10150
ದಪ್ಪ ಗುಜರಾತ್(ಹೊಸ)	10800-10850

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1730 (1730)
ಒಂದು ವಾರದ ಡೆಲಿವರಿ	1725 (1725)
ಸೋಯಾ ಕಚ್ಚಾ	1215 (1230)
ಪಾಮ್ ವಾರದ ಡೆಲಿವರಿ	1068 (1075)
ಸೂರ್ಯಕಾಂತಿ ಎಣ್ಣೆ ಕಚ್ಚಾ	1460 (1460)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,550 (51,850)
ಬೆಳ್ಳಿ ಕೆ.ಜಿ 55,650 (55,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕೊಡಗಿನಲ್ಲಿ ನಿರಂತರವಾಗಿ ಸುರಿಯುತ್ತಲೇ ಇರುವ ಮಳೆ

ಮಣ್ಣು ಸೇರುತ್ತಿರುವ ಕಾಳು ಮೆಣಸು

● ಡಿ.ಪಿ.ಲೋಕೇಶ್

ಸೋಮವಾರಪೇಟೆ (ಕೊಡಗು ಜಿಲ್ಲೆ): ಹವಾಮಾನ ವೈಪರೀತ್ಯದಿಂದಾಗಿ ಜಿಲ್ಲೆಯಲ್ಲಿ ಕಾಳುಮೆಣಸಿನ ಫಸಲು ಮೂರು ವರ್ಷಗಳಿಂದ ಉದುರಿ ಮಣ್ಣು ಸೇರುತ್ತಿದೆ. ನಿರಂತರ ಮಳೆಯಿಂದಾಗಿ ಈ ವರ್ಷವೂ ಬೆಳೆಗಾರರು ನಷ್ಟದ ಸುಳಿಗೆ ಸಿಲುಕಿದ್ದಾರೆ.

ಈ ಬಾರಿ ಸಕಾಲಕ್ಕೆ ಮಳೆ ಸುರಿದು ಗಿಡಗಳಲ್ಲಿ ಕಾಳು ಕಟ್ಟಿತ್ತು. ಆದರೆ ನಿರಂತರ ಮಳೆ, ಶೀತ ಹೆಚ್ಚಾಗಿ ಕಾಫಿ ಹಾಗೂ ಮೆಣಸಿನ ಫಸಲು ಉದುರಿದೆ. ಮೆಣಸಿನ ಬಳ್ಳಿಗೆ ಕೊಳೆರೋಗ ಬಂದಿದ್ದು ಬಳ್ಳಿಗಳು ಒಣಗಲಾರಂಭಿಸಿವೆ.

ಹೆಚ್ಚಿನ ಬೆಳೆಗಾರರು ಮಳೆಯಾಶ್ರಿತ ಕೃಷಿ ಮಾಡುತ್ತಾರೆ. ಐದು ವರ್ಷಗಳಿಂದಲೂ ವ್ಯತಿರಿಕ್ತ ಹವಾಮಾನದಿಂದಾಗಿ ಮೆಣಸಿನ ಫಸಲು ಬಳ್ಳಿಯಲ್ಲಿ ನಿಲ್ಲುತ್ತಿಲ್ಲ. ಶೀತದ ಪ್ರಮಾಣ ಹೆಚ್ಚಾಗಿ ರೋಗಪೀಡಿತವಾಗಲಿದ್ದು, ಬಳ್ಳಿಯನ್ನೇ ಕಳೆದುಕೊಳ್ಳಬೇಕಾಗಿದೆ.

ತಾಲ್ಲೂಕಿನಲ್ಲಿ 5,500 ಹೆಕ್ಟೇರ್ ಪ್ರದೇಶದಲ್ಲಿ ಕಾಳುಮೆಣಸು ಕೃಷಿ ಇದೆ. ಇತ್ತೀಚೆಗೆ ಕಾಫಿ ಬೆಲೆ ಏರಿಳಿತ ಹಾಗೂ ಅರೇಬಿಕಾ ಕಾಫಿಗೆ ಬಿಳಿಕಾಂಡ ಕೊರಕದ ಹಾವಳಿಯಿಂದಾಗಿ ನಷ್ಟ ಆಗುತ್ತಿದೆ.

ಕಳೆದ ವರ್ಷ ತಾಲ್ಲೂಕಿನ 3,200 ಹೆಕ್ಟೇರ್‌ನಲ್ಲಿದ್ದ ಶೇ 33ಕ್ಕಿಂತಲೂ ಅಧಿಕ ಫಸಲು ನಷ್ಟವಾಗಿತ್ತು. 'ನಷ್ಟದ ಪ್ರಮಾಣ ಕೆಲವೆಡೆ ಶೇ 90 ರಷ್ಟಿದೆ' ಎಂದು ತೋಟಗಾರಿಕಾ ಇಲಾಖೆ ತಿಳಿಸಿದೆ.

ಶಾಂತಳ್ಳಿ, ಕೊಡ್ಲಿಪೇಟೆ, ಶನಿವಾರ ಸಂತೆ ಹಾಗೂ ಸೋಮವಾರಪೇಟೆ ಕಸಬಾ ಹೋಬಳಿಗಳಲ್ಲಿ ಮೆಣಸಿನ ಬೆಳೆ ನಷ್ಟವಾಗಿದೆ.

'ಕಾಳು ಮೆಣಸಿಗೆ ಕೊಳೆರೋಗ ಬಂದಿದೆ. ಈಗಲೂ ರೋಗ ಪ್ರಾರಂಭದ ಹಂತದಲ್ಲಿದೆ. ಮಳೆ ಬಿಡುವು ನೀಡಿದ ತಕ್ಷಣ ಮಿಶ್ರಣವನ್ನು ಸಿಂಪಡಿಸಿದರೆ ಹತೋಟಿಗೆ ಬರುತ್ತದೆ' ಎಂದು ಇಲಾಖೆಯ ಸಹಾಯಕ ನಿರ್ದೇಶಕ ಡಾ.ಮಂಜುನಾಥ್ ಶೆಟ್ಟಿ ಹೇಳಿದರು.

> **ಬಿರುಗಾಳಿಯೊಂದಿಗೆ ಮಳೆಯಾಗಿದ್ದರಿಂದ ಬಳ್ಳಿಗಳು ಆತುಕೊಂಡಿದ್ದ ಮರಗಳು ಉರುಳಿದವು. ಇದ್ದ ಫಸಲು ಶೀತದಿಂದಾಗಿ ಬಿದ್ದು ನಾಶವಾಗಿವೆ**
> **ಸತೀಶ್,** ಕೃಷಿಕ, ಹೆಗ್ಗುಳ ಗ್ರಾಮ

ಎಸಿಸಿ, ಅಂಬುಜಾ ಸಿಮೆಂಟ್ಸ್ ಷೇರು ಖರೀದಿಗೆ ಓಪನ್ ಆಫರ್

ನವದೆಹಲಿ (ಪಿಟಿಐ): ಎಸಿಸಿ ಲಿಮಿಟೆಡ್ ಮತ್ತು ಅಂಬುಜಾ ಸಿಮೆಂಟ್ಸ್‌ನ ಶೇಕಡ 26ರಷ್ಟು ಹೆಚ್ಚುವರಿ ಷೇರುಗಳನ್ನು ಸ್ವಿಜರ್ಲೆಂಡ್ ಮೂಲದ ಹೋಲ್ಸಿಮ್ ಕಂಪನಿಯ ಸಾರ್ವಜನಿಕ ಷೇರುದಾರರಿಂದ ಸ್ವಾಧೀನಪಡಿಸಿಕೊಳ್ಳಲು ಅದಾನಿ ಸಮೂಹ ಮುಂದಾಗಿದೆ. ಇದಕ್ಕಾಗಿ ₹ 31 ಸಾವಿರ ಕೋಟಿ ಮೊತ್ತದ ಓಪನ್ ಆಫರ್ ಅನ್ನು ಶುಕ್ರವಾರ ಬಿಡುಗಡೆ ಮಾಡಿದೆ.

ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಈ ಓಪನ್ ಆಫರ್‌ಗೆ ಕಳೆದ ವಾರ ಒಪ್ಪಿಗೆ ನೀಡಿದೆ.

ಷೇರು ಖರೀದಿಸುವ ಅವಕಾಶವು ಆಗಸ್ಟ್ 26ರಿಂದ ಸೆಪ್ಟೆಂಬರ್ 9ರವರೆಗೆ ಇರಲಿದೆ.

ಹೋಲ್ಸಿಮ್ ಕಂಪನಿ ಭಾರತದ ವಹಿವಾಟನ್ನು ₹ 83,895 ಕೋಟಿಗೆ ಸ್ವಾಧೀನ ಪಡಿಸಿಕೊಳ್ಳುವ ಒಪ್ಪಂದಕ್ಕೆ ಬಂದಿರುವುದಾಗಿ ಅದಾನಿ ಸಮೂಹವು ಮೇ ತಿಂಗಳಿನಲ್ಲಿ ಘೋಷಿಸಿತ್ತು.

ಹಬ್ಬದ ಬೇಡಿಕೆ ಈಡೇರಿಸಲು 75 ಸಾವಿರ ನೇಮಕ: ಡೆಲಿವರಿ

ಮುಂಬೈ (ಪಿಟಿಐ): ಹಬ್ಬದ ಋತುವಿನ ಬೇಡಿಕೆಯನ್ನು ಈಡೇರಿಸಲು ಮುಂದಿನ ಒಂದೂವರೆ ತಿಂಗಳಲ್ಲಿ 75 ಸಾವಿರಕ್ಕೂ ಅಧಿಕ ಜನರನ್ನು ನೇಮಿಸಿಕೊಳ್ಳುವುದಾಗಿ ಸರಕು ಸಾಗಣೆ ಕ್ಷೇತ್ರದ ಡೆಲಿವರಿ ಕಂಪನಿಯು ಶುಕ್ರವಾರ ತಿಳಿಸಿದೆ.

ಒಟ್ಟು ನೇಮಕದಲ್ಲಿ 10 ಸಾವಿರಕ್ಕೂ ಅಧಿಕ ನೌಕರರು ಡೆಲಿವರಿ ಗೇಟ್‌ವೇಯ್ಸ್, ಗೋದಾಮು ಮತ್ತು ಲಾಸ್ಟ್ ಮೈಲ್ ಡೆಲಿವರಿ ವ್ಯವಸ್ಥೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡಲಿದ್ದಾರೆ ಎಂದು ಕಂಪನಿಯು ಹೇಳಿದೆ.

ಲಾಸ್ಟ್ ಮೈಲ್ ಏಜೆಂಟ್ಸ್ ಕಾರ್ಯಕ್ರಮದ ಅಡಿಯಲ್ಲಿ 50 ಸಾವಿರ ಜನರನ್ನು ನೇಮಕ ಮಾಡಿಕೊಳ್ಳುವುದಾಗಿ ಕಂಪನಿ ತಿಳಿಸಿದೆ.

ಹಬ್ಬದ ಋತುವಿನಲ್ಲಿ ಪಾರ್ಸಲ್ ಮತ್ತು ಎಕ್ಸ್‌ಪ್ರೆಸ್ ಪಾರ್ಟ್–ಟ್ರಕ್ ಲೋಡ್ ವಹಿವಾಟಿನ ಬೇಡಿಕೆ ಹೆಚ್ಚಾಗುವ ನಿರೀಕ್ಷೆ ಇದೆ ಎಂದು ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-56000
ಕಾರ್ಕಳ	
ಹೊಸತು	40000-47500
ಹಳತು	46000-56000
ಕುಮಟ	
ಚಿಪ್ಪು	30189-33809
ಕೋಕ	19999-33899
ಹಳೆಚಾಲಿ	43569-46879
ಹೊಸಚಾಲಿ	40009-42519
ಪುತ್ತೂರು	
ಕೋಕ	11000-26000
ಹೊಸತು	34500-47500
ಸಿದ್ದಾಪುರ	
ಬಿಳಿಗೋಟು	26780-34799
ಚಾಲಿ	39599-43499
ಕೋಕ	26669-35300
ಕೆಂಪುಗೋಟು	33289-34199
ರಾಶಿ	49366-52499
ತಟ್ಟಿಬೆಟ್ಟೆ	40019-50599
ಶಿರಸಿ	
ಬೆಟ್ಟೆ	36099-50999
ಬಿಳಿಗೋಟು	17188-36369
ಚಾಲಿ	34199-44561
ರಾಶಿ	48799-53699
ಯಲ್ಲಾಪುರ	
ಬಿಳಿಗೋಟು	27318-35699
ಚಾಲಿ	38099-43960
ಕೋಕ	18699-32899
ಕೆಂಪುಗೋಟು	28611-37169
ರಾಶಿ	50060-56629
ತಟ್ಟಿಬೆಟ್ಟೆ	39509-48900

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16900	16000	16600	242.95 ಸೆಂಟ್ಸ್
ಎಸಿ	9100	8500	9250	
ಆರ್‌ಪಿ	10200	9800	9850	ಲಂಡನ್
ಆರ್‌ಸಿ	4870	4600	4775	2340 ಡಾಲರ್ಸ್

ಏರ್‌ಟೆಲ್‌ನಲ್ಲಿನ ಷೇರು ಮಾರಲಿರುವ ಸಿಂಗ್‌ಟೆಲ್

ಬೆಂಗಳೂರು (ರಾಯಿಟರ್ಸ್): ಭಾರ್ತಿ ಏರ್‌ಟೆಲ್ ಲಿಮಿಟೆಡ್‌ನಲ್ಲಿ ತಾನು ಹೊಂದಿರುವ ಶೇಕಡ 3.3ರಷ್ಟು ಷೇರುಗಳನ್ನು ಭಾರ್ತಿ ಟೆಲಿಕಾಂ ಲಿಮಿಟೆಡ್‌ಗೆ ಮಾರಾಟ ಮಾಡುತ್ತಿರುವುದಾಗಿ ಸಿಂಗಪುರ ಟೆಲಿಕಮ್ಯುನಿಕೇಷನ್ಸ್ ಲಿಮಿಟೆಡ್ ಗುರುವಾರ ತಿಳಿಸಿದೆ. ಈ ಮಾರಾಟದ ಒಟ್ಟು ಮೌಲ್ಯವು ಅಂದಾಜು ₹ 12,834 ಕೋಟಿ.

ಆಗ್ನೇಯ ಏಷ್ಯಾದ ಅತಿದೊಡ್ಡ ದೂರಸಂಪರ್ಕ ಕಂಪನಿಯಾಗಿರುವ ಸಿಂಗ್‌ಟೆಲ್, ತನ್ನ ಅಂಗಸಂಸ್ಥೆಗಳಾದ ಪಾಸ್ಟೆಲ್ ಲಿಮಿಟೆಡ್ ಮತ್ತು ವಿರಿಡಿಯನ್ ಲಿಮಿಟೆಡ್, ಭಾರ್ತಿ ಏರ್‌ಟೆಲ್ ಲಿಮಿಟೆಡ್‌ನಲ್ಲಿ ಹೊಂದಿರುವ 19.80 ಕೋಟಿ ಷೇರುಗಳನ್ನು ಮಾರಾಟ ಮಾಡಲಿವೆ ಎಂದು ತಿಳಿಸಿದೆ.

ಈ ಷೇರು ವಹಿವಾಟು ಮುಕ್ತ ಮಾರುಕಟ್ಟೆಯಲ್ಲಿ ನಡೆಯುತ್ತಿಲ್ಲವಾದ ಕಾರಣ ಮಾರುಕಟ್ಟೆಯು ಈ ಸುದ್ದಿಯನ್ನು ನಕಾರಾತ್ಮಕವಾಗಿ ಗ್ರಹಿಸಿಲ್ಲ ಎಂದು ಆ್ಯಂಬಿಟ್ ಕ್ಯಾಪಿಟಲ್‌ನ ವಿಶ್ಲೇಷಕ ವಿವೇಕಾನಂದ ಸುಬ್ಬರಾಮನ್ ಹೇಳಿದ್ದಾರೆ.

ಈ ಷೇರು ಮಾರಾಟದಿಂದ ಬರುವ ಹಣವನ್ನು ಸಾಲ ತೀರಿಸುವುದಕ್ಕೆ, 5ಜಿ ಸೇವೆಗಳಿಗೆ ಅಗತ್ಯವಿರುವ ಬಂಡವಾಳ ವೆಚ್ಚಕ್ಕೆ ಹಾಗೂ ಕಂಪನಿಯ ಬೆಳವಣಿಗೆ ಚಟುವಟಿಕೆಗಳಿಗೆ ಬಳಕೆ ಮಾಡಿಕೊಳ್ಳಬಹುದು ಎಂದು ಸಿಂಗ್‌ಟೆಲ್ ಹೇಳಿದೆ.

ಏರ್‌ಟೆಲ್ ಕಂಪನಿಯು ಕೂಡ ಮನೆಗಳಿಗೆ ಬ್ರಾಡ್‌ಬ್ಯಾಂಡ್ ಸಂಪರ್ಕ ಕಲ್ಪಿಸಲು, ದತ್ತಾಂಶ ಕೇಂದ್ರ ಆರಂಭಿಸಲು ಸೇರಿದಂತೆ ಹಲವು ಉದ್ದೇಶಗಳಿಗೆ ಹಣ ಒಗ್ಗೂಡಿಸುತ್ತಿದೆ.

ಲಂಕಾ ಪಡೆಗೆ ಅಫ್ಗನ್ ಸವಾಲು

ಮರಳುನಾಡಿನಲ್ಲಿ ಏಷ್ಯಾಕಪ್ ಟಿ20 ಕ್ರಿಕೆಟ್ ಹಣಾಹಣಿ ಇಂದಿನಿಂದ

ದುಬೈ (ಪಿಟಿಐ): ಏಷ್ಯಾ ಖಂಡದ ಕ್ರಿಕೆಟ್ ಆಡುವ ತಂಡಗಳ ಜಿದ್ದಾಜಿದ್ದಿಗೆ ಮರಳುಗಾಡಿನ ರಾಷ್ಟ್ರದಲ್ಲಿ ವೇದಿಕೆ ಸಿದ್ಧವಾಗಿದೆ.

ಶನಿವಾರದಿಂದ ಆರಂಭವಾಗಲಿರುವ ಏಷ್ಯಾ ಕಪ್ ಟಿ20 ಟೂರ್ನಿಯಲ್ಲಿ ಭಾರತ, ಪಾಕಿಸ್ತಾನ ಹಾಗೂ ಶ್ರೀಲಂಕಾದಂತಹ ಅನುಭವಿ ತಂಡಗಳಿಗೆ ಸೆಡ್ಡು ಹೊಡೆಯಲು ಅಫ್ಗಾನಿಸ್ತಾನ, ಬಾಂಗ್ಲಾದೇಶ ಹಾಗೂ ಹಾಂಗ್‌ಕಾಂಗ್ ಬಳಗಗಳು ಸಿದ್ಧವಾಗಿವೆ.

ಏಷ್ಯಾ ಕಪ್ ಯುಎಇ 2022

ಶ್ರೀಲಂಕಾದಲ್ಲಿ ರಾಜಕೀಯ ಹಾಗೂ ಆರ್ಥಿಕ ಬಿಕ್ಕಟ್ಟು ತಲೆದೋರಿದ ಕಾರಣ ಯುನೈಟೆಡ್ ಅರಬ್ ಎಮಿರೇಟ್ಸ್‌ಗೆ ಟೂರ್ನಿ ಸ್ಥಳಾಂತರಗೊಂಡಿದೆ. ಅದರಿಂದಾಗಿ ಆರು ತಂಡಗಳಿಗೂ ಇದು ತಟಸ್ಥ ತಾಣವಾಗಿದೆ.

ಬಿ ಗುಂಪಿನ ಮೊದಲ ಪಂದ್ಯದಲ್ಲಿ ಶ್ರೀಲಂಕಾ ಹಾಗೂ ಅಫ್ಗಾನಿಸ್ತಾನ ತಂಡಗಳು ಮುಖಾಮುಖಿಯಾಗಲಿವೆ. ಭಾನುವಾರ ನಡೆಯಲಿರುವ ಭಾರತ ಹಾಗೂ ಪಾಕಿಸ್ತಾನ ನಡುವಣ ಪಂದ್ಯವು ಕುತೂಹಲ ಕೆರಳಿಸಿದೆ. ಏಷ್ಯಾದ ಎರಡು ಬದ್ಧ ಎದುರಾಳಿಗಳ ನಡುವಣ ಹಣಾಹಣಿ ನಡೆಯಲಿದೆ.

ಶ್ರೀಲಂಕಾ 2014ರಲ್ಲಿ ಪ್ರಶಸ್ತಿ ಜಯಿಸಿತ್ತು. ಅದರ ನಂತರ ಗೆದ್ದಿಲ್ಲ. ಆದ್ದರಿಂದ ಈ ಬಾರಿ ಕಿರೀಟ ಧರಿಸುವ ವಿಶ್ವಾಸದಲ್ಲಿದೆ. ದಸುನ್ ಶನಾಕ ನಾಯಕತ್ವದ ತಂಡದಲ್ಲಿ ಪ್ರತಿಭಾನ್ವಿತ ಆಟಗಾರರು ಇದ್ದಾರೆ.

ಮೊಹಮ್ಮದ್ ನಬಿ ನಾಯಕತ್ವದ ಅಫ್ಗನ್ ತಂಡವು ತನ್ನ ಹೆಜ್ಜೆಗುರುತು ಮೂಡಿಸಲು ತುದಿಗಾಲಿನಲ್ಲಿ ನಿಂತಿದೆ. ತಂಡಕ್ಕೆ ಅಚ್ಚರಿಯ ಜಯ ತಂದುಕೊಡುವ ಸಮರ್ಥರು ತಂಡದಲ್ಲಿದ್ದಾರೆ.



ಮೊಹಮ್ಮದ್ ನಬಿ

ದಸುನ್ ಶನಾಕ

ತಂಡಗಳು: ಶ್ರೀಲಂಕಾ: ದಸುನ್ ಶನಾಕ (ನಾಯಕ, ಧನುಷ್ಕ ಗುಣತಿಲಕ, ಪಥುಮ್ ನಿಸಾಂಕಾ, ಕುಶಾಲ ಮೆಂಡಿಸ್, ಚರಿತಾ ಅಸಲಂಕಾ, ಭಾನುಕ ರಾಜಪಕ್ಸ, ಅಶೇನ್ ಭಂಡಾರಾ, ಧನಂಜಯ ಡಿಸಿಲ್ವಾ, ವಣಿಂದು ಹಸರಂಗಾ, ಮಹೀಷ್ ತೀಕ್ಷಣ, ಜೆಫ್ರಿ ವಾಂಡರ್ಸೆ, ಪ್ರವೀಣ್ ಜಯವಿಕ್ರಂ, ಚಾಮಿಕಾ ಕರುಣಾರತ್ನೆ, ದಿಲ್ಶಾನ್ ಮಧುಶಂಕಾ, ಮಥೀಶಾ ಪಥಿರಾಣಾ, ದಿನೇಶ್ ಚಾಂಡಿಮಲ್, ನುವಣಿಂದು ಫರ್ನಾಂಡೊ, ಅಶಿತಾ ಫರ್ನಾಂಡೊ, ಪ್ರಮೋದ್ ಮಧುಸೂದನ್, ನುವಾನ್ ತುಷಾರ. **ಅಫ್ಗಾನಿಸ್ತಾನ:** ಮೊಹಮ್ಮದ್ ನಬಿ (ನಾಯಕ), ನಜೀಬುಲ್ಲಾ ಜದ್ರಾನ್, ಅಫ್ಸರ್ ಝಜೈ, ಅಜಮತುಲ್ಲಾ ಒಮರ್‌ಝೈ, ಫರ್ಝ್ಯಕ್ ಫಾರೂಕಿ , ಹಷ್ಮತ್ ಉಲ್ಲಾ ಝುರ್ಝ್ಯ, ಇಬ್ರಾಹಿಂ ಜದ್ರಾನ್, ಕರೀಮ್ ಜನತ್, ಮುಜೀಬ್ ಉರ್ ರೆಹಮಾನ್, ನವೀನ್ ಉಲ ಹಕ್, ನೂರ್ ಅಹಮದ್, ರೆಹಮಾನುಲ್ಲಾ ಗುರ್ಬಾಜ್, ರಶೀದ್ ಖಾನ್, ಸಮಿಯುಲ್ಲಾ ಶಿನ್ವಾರಿ, ಫರೀದ್ ಅಹಮದ್ ಮಲಿಕ್, ಉಸ್ಮಾನ್ ಘಣಿ.

ಏಷ್ಯಾಕಪ್ ಟಿ20 ಕ್ರಿಕೆಟ್ ವೇಳಾಪಟ್ಟಿ

ದಿನಾಂಕ	ಪಂದ್ಯ	ಸ್ಥಳ
ಗುಂಪು ಹಂತ		
ಆ.27	ಅಫ್ಗಾನಿಸ್ತಾನ -ಶ್ರೀಲಂಕಾ	ದುಬೈ
ಆ.28	ಭಾರತ-ಪಾಕಿಸ್ತಾನ	
ಆ.30	ಅಫ್ಗಾನಿಸ್ತಾನ-ಬಾಂಗ್ಲಾದೇಶ	ಶಾರ್ಜಾ
ಆ.31	ಭಾರತ-ಹಾಂಗ್‌ಕಾಂಗ್	ದುಬೈ
ಸೆ.1	ಬಾಂಗ್ಲಾದೇಶ-ಶ್ರೀಲಂಕಾ	
ಸೆ.2	ಪಾಕಿಸ್ತಾನ-ಹಾಂಗ್‌ಕಾಂಗ್	ಶಾರ್ಜಾ
ಸೂಪರ್ 4 ಹಂತ		
ಸೆ.3	ಬಿ1-ಬಿ2	ಶಾರ್ಜಾ
ಸೆ.4	ಎ1-ಎ2	ದುಬೈ
ಸೆ.6	ಎ1-ಬಿ1	
ಸೆ.7	ಎ2-ಬಿ2	
ಸೆ.8	ಎ1-ಬಿ2	
ಸೆ.9	ಎ2-ಬಿ1	
ಸೆ.11	ಫೈನಲ್	

ಎ ಗುಂಪು	ಭಾರತ, ಪಾಕಿಸ್ತಾನ ಮತ್ತು ಹಾಂಗ್‌ಕಾಂಗ್
ಬಿ ಗುಂಪು	ಶ್ರೀಲಂಕಾ, ಬಾಂಗ್ಲಾದೇಶ ಮತ್ತು ಅಫ್ಗಾನಿಸ್ತಾನ

ತಂಡಗಳ ಪ್ರಶಸ್ತಿ ಸಾಧನೆ

ತಂಡ	ಸ್ಪರ್ಧೆ	ಪ್ರಶಸ್ತಿ	ರನ್ನರ್ಸ್ ಅಪ್
ಭಾರತ	13	7	3
ಶ್ರೀಲಂಕಾ	14	5	6
ಪಾಕಿಸ್ತಾನ	13	2	2
ಬಾಂಗ್ಲಾದೇಶ	13	0	3

ಪಂದ್ಯಗಳ ಆರಂಭ: ರಾತ್ರಿ 7.30
(ಭಾರತೀಯ ಕಾಲಮಾನ)
ಲೈವ್ ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್

ಬ್ಯಾಡ್ಮಿಂಟನ್: ಪದಕ ಖಚಿತಪಡಿಸಿದ ಭಾರತದ ಜೋಡಿ; ಪ್ರಣಯ್‌ಗೆ ಆಘಾತ

ಸೆಮಿಫೈನಲ್‌ಗೆ ಚಿರಾಗ್–ಸಾತ್ವಿಕ್

ಟೋಕಿಯೊ (ಪಿಟಿಐ): ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಅವರು ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ನಾಲ್ಕರ ಘಟ್ಟಕ್ಕೆ ಲಗ್ಗೆಯಿಟ್ಟಿದ್ದಾರೆ. ಇದರೊಂದಿಗೆ ಟೂರ್ನಿಯ ಇತಿಹಾಸದಲ್ಲಿ ಮೊದಲ ಬಾರಿಗೆ ಪುರುಷರ ಡಬಲ್ಸ್‌ನಲ್ಲಿ ಪದಕ ಖಚಿತಪಡಿಸಿದ್ದಾರೆ. ಆದರೆ ಎಚ್. ಎಸ್. ಪ್ರಣಯ್ ಅವರಿಗೆ ಆಘಾತ ಎದುರಾಯಿತು.

ವಿಶ್ವ ಕ್ರಮಾಂಕದಲ್ಲಿ ಏಳನೇ ಸ್ಥಾನದಲ್ಲಿರುವ ಚಿರಾಗ್–ಸಾತ್ವಿಕ್ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ 24-22, 15-21, 21-14ರಿಂದ ಜಪಾನ್‌ನ ತಕುರೊ ಹೊಕಿ–ಯುಗೊ ಕೊಬಾಯಶಿ ಸವಾಲು ಮೀರಿದರು. ಕಾಮನ್‌ವೆಲ್ತ್ ಗೇಮ್ಸ್ ಚಿನ್ನದ ಪದಕ ವಿಜೇತ ಜೋಡಿ ಒಂದು ತಾಸು 15 ನಿಮಿಷಗಳಲ್ಲಿ ಹಾಲಿ ಚಾಂಪಿಯನ್‌ಗಳಿಗೆ ಸೋಲಿನ ರುಚಿ ತೋರಿಸಿತು.

ಚಿರಾಗ್‌ಶೆಟ್ಟಿ– ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಸಂಭ್ರಮ– ಪಿಟಿಐ ಚಿತ್ರ

ಡಬಲ್ಸ್‌ನಲ್ಲಿ ಭಾರತಕ್ಕೆ ಇದು ಒಟ್ಟಾರೆ ಎರಡನೇ ಪದಕವಾಗಲಿದೆ. 2011ರಲ್ಲಿ ಕನ್ನಡತಿ ಅಶ್ವಿನಿ ಪೊನ್ನಪ್ಪ–ಜ್ವಾಲಾ ಗುಟ್ಟಾ ಮಹಿಳಾ ಡಬಲ್ಸ್‌ನಲ್ಲಿ ಕಂಚು ಗೆದ್ದಿದ್ದರು.

ಚಿರಾಗ್– ಸಾತ್ವಿಕ್ ಅವರಿಗೆ ಸೆಮಿಫೈನಲ್‌ನಲ್ಲಿ ಮಲೇಷ್ಯಾದ ಆ್ಯರನ್ ಚಿಯಾ– ಸೊಹ್ ವೂಯಿ ಯಿಕ್ ಸವಾಲು ಎದುರಾಗಿದೆ.

ಕ್ವಾರ್ಟರ್‌ಫೈನಲ್ ಪಂದ್ಯದ ಆರಂಭದಲ್ಲೇ ಭಾರತದ ಜೋಡಿ ಬಿರುಸಿನ ಆಟಕ್ಕೆ ಮೊರೆಹೋಯಿತು. 12–5ರಿಂದ ಮುನ್ನಡೆ ಸಾಧಿಸಿತು. ಬಳಿಕ ಸತತ ಏಳು ಪಾಯಿಂಟ್ಸ್ ಬಲದಿಂದ ಜಪಾನ್ ಆಟಗಾರರು 16–14ರ ಮೇಲುಗೈ ಸಾಧಿಸಿದರು. ತುರುಸಿನ ಪೈಪೋಟಿಯ ನಡುವೆ ಗೇಮ್ ಗೆಲ್ಲುವಲ್ಲಿ ಚಿರಾಗ್– ಸಾತ್ವಿಕ್ ಯಶಸ್ವಿಯಾದರು.

ಎರಡನೇ ಗೇಮ್‌ನಲ್ಲಿ ತಕುರೊ–ಯುಗೊ ತಿರುಗೇಟು ನೀಡಿದರು. ಒಂದು ಹಂತದಲ್ಲಿ 9–9ರಿಂದ ಸಮಬಲದಲ್ಲಿ ಸಾಗಿದ್ದ ಗೇಮ್‌ಅನ್ನು ಜಯದತ್ತ ಕೊಂಡೊಯ್ದರು.

ನಿರ್ಣಾಯಕ ಮೂರನೇ ಗೇಮ್‌ನ ವಿರಾಮದ ವೇಳೆಗೆ ಭಾರತದ ಜೋಡಿ 11–5ರಿಂದ ಮುಂದಿತ್ತು. ಬಳಿಕ ಯುಗೊ ಹೊಡೆದ ಕೆಲವು ಬಿರುಸಿನ ಸ್ಮ್ಯಾಷ್‌ಗಳು ಗೇಮ್‌ನ ದಿಕ್ಕನ್ನು ಬದಲಿಸುವಂತೆ ಕಂಡವು. ಭಾರತದ ಆಟಗಾರರು 19–13ರಿಂದ ಮುನ್ನಡೆ ಸಾಧಿಸಿದಾಗ ಹಿಂದಿರುಗಿ ನೋಡಲಿಲ್ಲ. ಗೇಮ್ ಹಾಗೂ ಪಂದ್ಯ ಗೆದ್ದ ಸಂಭ್ರಮದಲ್ಲಿ ಮಿಂದೆದ್ದರು.

ಪುರುಷರ ಸಿಂಗಲ್ಸ್‌ನಲ್ಲಿ ಪದಕದ ಭರವಸೆ ಹುಟ್ಟುಹಾಕಿದ್ದ ಪ್ರಣಯ್ ಎಂಟರಘಟ್ಟದ ಪಂದ್ಯದಲ್ಲಿ 19-21, 21-6, 21-18ರಿಂದ ಚೀನಾದ ಜಾವೊ ಜುನ್ ಪೆಂಗ್ ಎದುರು ಮುಗ್ಗರಿಸಿದರು.

ಡೈಮಂಡ್ ಲೀಗ್: ನೀರಜ್‌ಗೆ ಅಗ್ರಸ್ಥಾನ

ಲಾಸನ್ (ಪಿಟಿಐ): ಭಾರತದ ಜಾವೆಲಿನ್ ಥ್ರೋ ಸ್ಪರ್ಧಿ ನೀರಜ್ ಚೋಪ್ರಾ ಅವರು ಲಾಸನ್‌ನಲ್ಲಿ ನಡೆದ ಡೈಮಂಡ್ ಲೀಗ್‌ನಲ್ಲಿ ಅಗ್ರಸ್ಥಾನ ಪಡೆದರು. ಈ ಸಾಧನೆ ಮಾಡಿದ ಭಾರತದ ಮೊದಲ ಅಥ್ಲೀಟ್ ಎಂಬ ಗೌರವ ತಮ್ಮದಾಗಿಸಿಕೊಂಡರು.

ಶುಕ್ರವಾರ ನಡೆದ ಸ್ಪರ್ಧೆಯಲ್ಲಿ ನೀರಜ್ 89.04 ಮೀ. ಸಾಧನೆಯೊಂದಿಗೆ ಮೊದಲ ಸ್ಥಾನ ಗಿಟ್ಟಿಸಿಕೊಂಡರು. ಅವರ ಮೊದಲ ಪ್ರಯತ್ನದಲ್ಲೇ ಈ ಸಾಧನೆ ಮೂಡಿಬಂತು. ಜೇಕಬ್ ವಾಡ್ಲೆಚ್ (85.88 ಮೀ.) ಎರಡನೇ ಸ್ಥಾನ ಪಡೆದರೆ, ಅಮೆರಿಕದ ಕರ್ಟಿಸ್ ಥಾಂಪ್ಸನ್ (83.72 ಮೀ.) ಮೂರನೇ ಸ್ಥಾನ ಗಳಿಸಿದರು.

ಡಿಸ್ಕಸ್ ಥ್ರೋ ಸ್ಪರ್ಧಿ ವಿಕಾಸ್ ಗೌಡ ಅವರು ಎರಡನೇ ಸ್ಥಾನ ಪಡೆದದ್ದು, ಡೈಮಂಡ್ ಲೀಗ್‌ನಲ್ಲಿ ಭಾರತದ ಅಥ್ಲೀಟ್‌ವೊಬ್ಬರ ಇದುವರೆಗಿನ ಉತ್ತಮ ಸಾಧನೆ ಎನಿಸಿತ್ತು. ವಿಕಾಸ್ ಅವರು 2012 ರ ನ್ಯೂಯಾರ್ಕ್ ಮತ್ತು 2014ರ ದೋಹಾ ಕೂಟದಲ್ಲಿ ಎರಡನೇ ಸ್ಥಾನ ಪಡೆದುಕೊಂಡಿದ್ದರು. 2015 ರಲ್ಲಿ ಶಾಂಘೈ ಮತ್ತು ಯೂಜಿನ್ ಕೂಟಗಳಲ್ಲಿ ಮೂರನೇ ಸ್ಥಾನ ಗಳಿಸಿದ್ದರು.



ನೀರಜ್ ಚೋಪ್ರಾ

‘ನಡಾಲ್‌ಗೆ ಸವಾಲಿನ ಹಾದಿ’

ಬೆಂಗಳೂರು: ‘ಈ ಬಾರಿಯ ಯುಎಸ್ ಓಪನ್ ಗ್ರ್ಯಾನ್ ಸ್ಲಾಮ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಗೆಲ್ಲುವ ’ಫೇವರಿಟ್‘ ಯಾರೆಂಬುದು ಊಹಿಸುವುದು ಕಷ್ಟ. ಸ್ಪೇನ್‌ನ ರಫೆಲ್ ನಡಾಲ್ ಅವರಿಗೆ ಸಾಕಷ್ಟು ಸವಾಲು ಎದುರಾಗಲಿದೆ’ ಎಂದು ಹಿರಿಯ ಟೆನಿಸ್ ಆಟಗಾರ ವಿಜಯ್ ಅಮೃತ್‌ರಾಜ್ ಹೇಳಿದರು.

ವಿಜಯ್ ಅಮೃತ್‌ರಾಜ್

ಸೋನಿ ಸಿಕ್ಸ್ ಚಾನೆಲ್ ಶುಕ್ರವಾರ ಆಯೋಜಿಸಿದ್ದ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, ‘ನಡಾಲ್ ಗಾಯದಿಂದ ಚೇತರಿಸಿಕೊಂಡು ಬಂದಿದ್ದಾರೆ. ಅವರು ಶೇ 80 ರಷ್ಟು ಫಿಟ್ ಆಗಿದ್ದಾರೆ. ಇಲ್ಲಿ ಪ್ರಶಸ್ತಿ ಗೆಲ್ಲಬೇಕಾದರೆ ಕಠಿಣ ಪರಿಶ್ರಮ ನಡೆಸುವುದು ಅಗತ್ಯ’ ಎಂದು ಅಭಿಪ್ರಾಯಪಟ್ಟರು.

‘ಟೂರ್ನಿಯ ಮೊದಲ ವಾರ ನಡೆಯುವ ಪಂದ್ಯಗಳನ್ನು ಅವರು ನೇರ ಸೆಟ್‌ಗಳಿಂದ ಗೆದ್ದರೆ, ಎರಡನೇ ವಾರಕ್ಕೆ ಬೇಕಾದ ದೈಹಿಕ ಸಾಮರ್ಥ್ಯವನ್ನು ಉಳಿಸಿಕೊಳ್ಳಬಹುದು. ಆದರೆ ಆರಂಭಿಕ ಸುತ್ತುಗಳಲ್ಲೇ ಅವರಿಗೆ 4–5 ಸೆಟ್‌ಗಳನ್ನು ಆಡಬೇಕಾಗಿ ಬಂದರೆ, ಕ್ವಾರ್ಟರ್ ಫೈನಲ್ ಬಳಿಕ ಉತ್ತಮ ಲಯದಲ್ಲಿ ಆಡುವುದು ಕಷ್ಟ’ ಎಂದರು.

‘ನೊವಾಕ್ ಜೊಕೊವಿಚ್ ಅವರು ಹಿಂದೆ ಸರಿದಿರುವುದು ಅಭಿಮಾನಿಗಳಿಗೆ ನಿರಾಸೆ ಉಂಟುಮಾಡಿದೆ’ ಎಂದು ಹೇಳಿದರು.

ನೇರ ಪ್ರಸಾರ: ಯುಎಸ್ ಓಪನ್ ಟೆನಿಸ್ ಟೂರ್ನಿಯ ಪಂದ್ಯಗಳು ಸೋನಿ ಸಿಕ್ಸ್ ಮತ್ತು ಸೋನಿ ಟೆನ್ 2 ಚಾನೆಲ್‌ಗಳಲ್ಲಿ ಆ.29 ರಿಂದ ನೇರ ಪ್ರಸಾರವಾಗಲಿದೆ.

ಸಂಕ್ಷಿಪ್ತ ಸುದ್ದಿ

ಲಿಂಥೊಯಿಗೆ ಐತಿಹಾಸಿಕ ಚಿನ್ನ

ನವದೆಹಲಿ (ಪಿಟಿಐ): ಭಾರತದ ಲಿಂಥೊಯಿ ಚನಾಂಬಮ್ ಅವರು ಬೋಸ್ನಿಯಾದ ಸರ್ಜವೊದಲ್ಲಿ ನಡೆದ ವಿಶ್ವ ಕೆಡೆಟ್ ಜೂಡೊ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ. ಇದರೊಂದಿಗೆ ಟೂರ್ನಿಯ ಯಾವುದೇ ವಯೋಮಿತಿ ವಿಭಾಗದಲ್ಲಿ ಪದಕದ ಸಾಧನೆ ಮಾಡಿದ ದೇಶದ ಮೊದಲ ಜೂಡೊ ಪಟು ಎನಿಸಿಕೊಂಡಿದ್ದಾರೆ.

ಲಿಂಥೊಯಿ

ಮಹಿಳೆಯರ 57 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ, ಮಣಿಪುರದ 15 ವರ್ಷದ ಲಿಂಥೊಯಿ ಫೈನಲ್‌ನಲ್ಲಿ ಬ್ರೆಜಿಲ್‌ನ ಬಿಯಾಂಕಾ ರೀಸ್ ಸವಾಲು ಮೀರಿದರು.

ಅಕ್ಟೋಬರ್ 7ರಿಂದ ಪ್ರೊ ಕಬಡ್ಡಿ

ಮುಂಬೈ (ಪಿಟಿಐ): ಒಂಬತ್ತನೇ ಆವೃತ್ತಿಯ ಪ್ರೊ ಕಬಡ್ಡಿ ಲೀಗ್ (ಪಿಕೆಎಲ್) ಅಕ್ಟೋಬರ್ 7ರಿಂದ ನಡೆಯಲಿದೆ. ಲೀಗ್‌ನ ಆಯೋಜಕ ಮಶಾಲ್ ಸ್ಪೋರ್ಟ್ಸ್ ಶುಕ್ರವಾರ ಈ ವಿಷಯ ತಿಳಿಸಿದೆ.

ಟೂರ್ನಿಗಾಗಿ ಆಟಗಾರರ ಹರಾಜು ಪ್ರಕ್ರಿಯೆ ಆಗಸ್ಟ್ ಐದು ಮತ್ತು ಆರರಂದು ನಡೆದಿತ್ತು.

ಬೆಂಗಳೂರು, ಪುಣೆ, ಹೈದರಾಬಾದ್‌ನಲ್ಲಿ ಲೀಗ್ ಹಂತದ ಪಂದ್ಯಗಳು ಡಿಸೆಂಬರ್ ತಿಂಗಳ ಮಧ್ಯದವರೆಗೆ ನಡೆಯಲಿವೆ. ಕೋವಿಡ್‌ನಿಂದಾಗಿ ಕಳೆದ ಆವೃತ್ತಿಯ ಪಂದ್ಯಗಳಿಗೆ ಪ್ರೇಕ್ಷಕರಿಗೆ ಅವಕಾಶ ನೀಡಿರಲಿಲ್ಲ.

‘ಒಂಬತ್ತನೇ ಪ್ರೊ ಕಬಡ್ಡಿ ಲೀಗ್ ಆಯೋಜನೆಗೆ ಉತ್ಸುಕರಾಗಿದ್ದೇವೆ’ ಎಂದು ಮಶಾಲ್ ಸ್ಪೋರ್ಟ್ಸ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅನುಪಮ್ ಗೋಸ್ವಾಮಿ ತಿಳಿಸಿದ್ದಾರೆ.

ಫುಟ್‌ಬಾಲ್: ಎಮೆಕಾ ಮಿಂಚು

ಬೆಂಗಳೂರು: ಪ್ರಿನ್ಸ್ ವಿಲ್ ಎಮೆಕಾ ಗಳಿಸಿದ ಗೋಲಿನ ನೆರವಿನಿಂದ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವು ಪಡೆದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ 1–0 ಗೋಲಿನಿಂದ ಎಫ್‌ಸಿ ಡೆಕ್ಕನ್ ತಂಡವನ್ನು ಮಣಿಸಿತು.

ಪ್ರಬಲ ಪೈಪೋಟಿ ನಡೆದ ಪಂದ್ಯದ ಮೊದಲಾರ್ಧ ಗೋಲುರಹಿತವಾಗಿತ್ತು. ಎರಡನೇ ಅವಧಿಯಲ್ಲೂ ತುರುಸಿನ ಹೋರಾಟ ಕಂಡುಬಂತು. 83ನೇ ನಿಮಿಷದಲ್ಲಿ ಎಮೆಕಾ ಅವರು ಕಿಕ್‌ಸ್ಟಾರ್ಟ್ ತಂಡದ ಗೆಲುವಿನ ಗೋಲು ಗಳಿಸಿದರು.

ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ಮತ್ತು ಕೊಡಗು ಎಫ್‌ಸಿ ನಡುವಿನ ದಿನದ ಇನ್ನೊಂದು ಪಂದ್ಯ 1–1 ಗೋಲಿನ ಸಮಬಲದಲ್ಲಿ ಕೊನೆಗೊಂಡಿತು.

ಎಲ್ವಿಸ್ ನಾಂಗ್ಸು ಅವರು 16ನೇ ನಿಮಿಷದಲ್ಲಿ ಡ್ರೀಮ್ ತಂಡಕ್ಕೆ ಮುನ್ನಡೆ ಗಳಿಸಿಕೊಟ್ಟರು. ಕೊಡಗು ತಂಡದ ದೀಪಕ್ ರಾಜ್ 32ನೇ ನಿಮಿಷದಲ್ಲಿ ಸಮಬಲದ ಗೋಲು ತಂದಿತ್ತರು.

ಶನಿವಾರದ ಪಂದ್ಯಗಳಲ್ಲಿ ಬಿಎಫ್‌ಸಿ- ಯಂಗ್ ಚಾಲೆಂಜರ್ಸ್ ಎಫ್‌ಸಿ ಹಾಗೂ ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿ- ಎಫ್‌ಸಿ ಅಗ್ನಿಪುತ್ರ ತಂಡಗಳು ಪೈಪೋಟಿ ನಡೆಸಲಿವೆ.

ಯೂಕಿಗೆ ಸೋಲು

ನ್ಯೂಯಾರ್ಕ್ (ಪಿಟಿಐ): ಯುಎಸ್ ಓಪನ್ ಟೆನಿಸ್ ಟೂರ್ನಿಯ ಅರ್ಹತಾ ಹಂತದ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಭಾರತದ ಸವಾಲು ಅಂತ್ಯವಾಗಿದೆ. ಗುರುವಾರ ನಡೆದ ಎರಡನೇ ಸುತ್ತಿನ ಪಂದ್ಯದಲ್ಲಿ ಯೂಕಿ ಭಾಂಬ್ರಿ 3–6, 2–6ರಿಂದ ಬೆಲ್ಜಿಯಂನ ಜಿಜೊ ಬರ್ಗ್ಸ್ ಎದುರು ನಿರಾಸೆ ಅನುಭವಿಸಿದರು.